ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಗಾಂಧಿ ಭವನದಲ್ಲಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿದರು. ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಅನುಚೇತ್ ಮತ್ತಿತರರು ಉಪಸ್ಥಿತರಿದ್ದರು.

ಮೀಟರ್ ರೀಡರ್‌ಗಳಿಂದ ಮನೆ, ಮನೆಗೆ ಭೇಟಿ ನೀಡಿ ಪರಿಶೀಲನೆ

ನೈಜ ಫಲಾನುಭವಿಗಳ ಪತ್ತೆಗೆ ಹಲವು ದಾಖಲೆಗಳ ಅಪ್ಲೋಡ್

ಗೃಹಜ್ಯೋತಿಗೆ ಸರ್ಜರಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರದ ಮಹಾತ್ವಕಾಂಕ್ಷಿ ಯೋಜನೆಗಳಲ್ಲೊಂದಾದ ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಮನೆ-ಮನೆ ಪರಿಶೀಲನೆ ಕಾರ್ಯವನ್ನು ಎಲ್ಲಾ ಎಸ್ಕಾಂಗಳ ಸಿಬ್ಬಂದಿ ಜುಲೈ 1 ರಿಂದ ಕೈಗೊಂಡಿದೆ. ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳಲ್ಲಿರುವ ಫಲಾನುಭವಿಗಳ ಮನೆಗೆ ತೆರಳಿ ಮೀಟರ್ ರೀಡರ್ಸ್‌ಗಳು ಹಾಗೂ ಸಿಬ್ಬಂದಿ ತೆರಳಿ ಮಾಹಿತಿ ಸಂಗ್ರಹಿಸಿ, ಸೇವಾಸಿಂಧು ಮೊಬೈಲ್ ಆ್ಯಪ್ ನಲ್ಲಿ ದಾಖಲಿಸಲಾಗಿದೆ.

2023ರ ಜುಲೈ ತಿಂಗಳಲ್ಲಿ ಜಾರಿಗೆ ಬಂದಿರುವ ಗೃಹಜ್ಯೋತಿ ಯೋಜನೆಯ ಮರುಪರಿಶೀಲನಾ ಕಾರ್ಯ ನಡೆಯಲಿದ್ದು, ಎಸ್ಕಾಂಗಳ ಮೀಟರ್ ರೀಡರ್‌ಗಳು ಹಾಗೂ ಎಸ್ಕಾಂ ಸಿಬ್ಬಂದಿಗಳು ಗ್ರಾಹಕರ ಮನೆಗಳಿಗೆ ಭೇಟಿ ನೀಡಿ, ಫಲಾನುಭವಿಗಳ ದಾಖಲೆ ಪರಿಶೀಲನೆ ನಡೆಸಿ ಅವರ ಮಾಹಿತಿ ಸಂಗ್ರಹಿಸಿ, ಮೊಬೈಲ್ ಆ್ಯಪ್ ಹಾಗೂ ಘೋಷಣಾ ಪತ್ರ ಮೂಲಕ ಅರ್ಜಿ ಭರ್ತಿ ಪ್ರಕ್ರಿಯೆ ಪೂರ್ಣಗೊಳಿಸುತ್ತಿದ್ದಾರೆ. ಎಸ್ಕಾಂ ಸಿಬ್ಬಂದಿ ಮನೆ-ಮನೆ ಭೇಟಿ ಸಂದರ್ಭದಲ್ಲಿ ಈ ಕೆಳಗಿನ ದಾಖಲೆಗಳನ್ನು ಸಿಬ್ಬಂದಿಗೆ ತೋರಿಸಲು ಬೆಸ್ಕಾಂ ವಿನಂತಿಸಿದೆ.

ಆಧಾರ್ ಕಾರ್ಡ್, ಫಲಾನುಭವಿಯ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಮತದಾರರ ಗುರುತಿನ ಚೀಟಿ (ವೋಟರ್ ಐಡಿ), ಪ್ಯಾನ್ ಕಾರ್ಡ್, ಬಾಡಿಗೆ ಒಪ್ಪಂದದ ಪತ್ರ (ಅನ್ವಯಿಸುವಲ್ಲಿ ಮಾತ್ರ), ರೇಷನ್ ಕಾರ್ಡ್ ಹಾಗೂ ಜಾತಿ ಪ್ರಮಾಣ ಪತ್ರವನ್ನು ತೋರಿಸಲು ಕೋರಲಾಗಿದೆ.

ಈ ಪ್ರಕ್ರಿಯೆಗೆ ಮೀಟರ್ ರೀಡರ್ ಮೂಲಕ ಸ್ಥಳದಲ್ಲೇ ಪರಿಶೀಲನೆ ಮಾಡುವುದು ಏಕೈಕ ಮಾರ್ಗವಾಗಿದ್ದು, ಗ್ರಾಹಕರು ಮತ್ತು ಫಲಾನುಭವಿಗಳು ಮೀಟರ್ ರೀಡರ್‌ಗಳಿಗೆ ಸಂಪೂರ್ಣ ಸಹಕಾರ ನೀಡಿ, ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಳಿಸಲು ಇಂಧನ ಇಲಾಖೆ ಮನವಿ ಮಾಡಿದೆ.

ರಾಜ್ಯದ ಐದು ಎಸ್ಕಾಂಗಳಾದ ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಜೆಸ್ಕಾಂ ಹಾಗೂ ಸೆಸ್ಕ್ ಗಳ ವ್ಯಾಪ್ತಿಯಲ್ಲಿ ಪರಿಶೀಲನಾ ಕಾರ್ಯ ನಡೆಯುತ್ತಿದ್ದು, ಮಾಹಿತಿ ಸಂಗ್ರಹ ಕಾರ್ಯ ಜುಲೈ 1 ರಿಂದ ಆಗಸ್ಟ್ 31, 2026ರವರೆಗೆ ನಡೆಯಲಿದೆ.

1.67 ಕೋಟಿ ಜನರಿಗೆ ಪ್ರಯೋಜನ: ಪ್ರಸ್ತುತ 1.67 ಕೋಟಿ ಜನರು ಗೃಹ ಜ್ಯೋತಿ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ. ಇಂಧನ ಇಲಾಖೆಯ ಮಾಹಿತಿಯ ಪ್ರಕಾರ, ಸರಕಾರ 2022-23ರಲ್ಲಿ 5,830 ಕೋಟಿ ರು. 2024-25ರಲ್ಲಿ 9,158 ಕೋಟಿ ರು. 2025-26ರಲ್ಲಿ 10,260 ಕೋಟಿ ರು. ಮತ್ತು 2026-27ರಲ್ಲಿ (ಮೇ 31 ರವರೆಗೆ) 1,762 ಕೋಟಿ ರೂ. ಸಬ್ಸಿಡಿಯನ್ನು ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಿಡುಗಡೆ ಮಾಡಿದೆ. ಸರಕಾರಕ್ಕೆ ಸದ್ಯ ಗೃಹ ಜ್ಯೋತಿ ಯೋಜನೆಗಾಗಿ ವರ್ಷಕ್ಕೆ ಸರಾಸರಿ 8 ಸಾವಿರ ಕೋಟಿ ರೂ.ನಿಂದ 10 ಸಾವಿರ ಕೋಟಿ ರು. ನಷ್ಟು ಭಾರಿ ಸಬ್ಸಿಡಿ ವೆಚ್ಚವಾಗುತ್ತಿದೆ. ಈ ಮರುಪರಿಶೀಲನೆಯ ಮೂಲಕ ಕನಿಷ್ಠ 200 ಕೋಟಿ ರೂಪಾಯಿಗಳ ಸಬ್ಸಿಡಿ ಉಳಿತಾಯ ಮಾಡಲು ಸರಕಾರ ನಿರ್ಧರಿಸಿದೆ. ಈ ಉಳಿತಾಯದ ಹಣವನ್ನು ವಿದ್ಯುತ್ ಮೂಲಸೌಕರ್ಯಗಳ ಅಭಿವೃದ್ಧಿಗೆ ಬಳಸಿಕೊಳ್ಳುವುದು ಸರಕಾರದ ಯೋಜನೆಯಾಗಿದೆ ಎಂದು ಹೇಳಲಾಗಿದೆ.

ಸ್ಮಾರ್ಟ್ ಕಾರ್ಡ್ ವಿತರಣೆ?

ಸಾರಿಗೆ ಇಲಾಖೆಯ ಶಕ್ತಿ ಯೋಜನೆಯಂತೆ, ಇಂಧನ ಇಲಾಖೆಯೂ ಫಲಾನುಭವಿಗಳಿಗೆ ವಿಶೇಷ ಸ್ಮಾರ್ಟ್ ಕಾರ್ಡ್ ನೀಡಲು ಚಿಂತನೆ ನಡೆಸಿದೆ ಎನ್ನಲಾಗಿದೆ. ಈ ಕಾರ್ಡ್‌ನಲ್ಲಿ ಆಧಾರ್, ಆರ್‌ಆರ್ ಸಂಖ್ಯೆ ಮತ್ತು ಮತದಾರ ಗುರುತಿನ ಚೀಟಿ ಲಿಂಕ್ ಆಗಿರುತ್ತದೆ. ಆದರೆ, ಒಬ್ಬ ವ್ಯಕ್ತಿ ಮನೆ ಬದಲಾಯಿಸಿದರೆ ಅಥವಾ ಬಾಡಿಗೆ ಮನೆ ಬದಲಿಸಿದರೆ ಈ ಕಾರ್ಡ್‌ಗಳು ಹೇಗೆ ಕೆಲಸ ಮಾಡುತ್ತವೆ ಎಂಬ ಬಗ್ಗೆ ಇದುವರೆಗೂ ಯಾವುದೇ ಸ್ಪಷ್ಟ ಮಾರ್ಗಸೂಚಿಗಳು ಬಂದಿಲ್ಲ.

ಬಳಕೆದಾರರಲ್ಲಿ ಆತಂಕ

ಸರಕಾರದ ಹೊಸ ನಿಯಮದಿಂದ ಫಲಾನುಭವಿಗಳು ಆತಂಕಕ್ಕೀಡಾಗಿದ್ದಾರೆ. ಬೆಂಗಳೂರಿನಂತಹ ನಗರಗಳಲ್ಲಿ ಲಕ್ಷಾಂತರ ಮಂದಿ ವಲಸಿಗರಿದ್ದಾರೆ. ಉದ್ಯೋಗದ ನಿಮಿತ್ತ ಅಥವಾ ಇತರ ಕಾರಣಗಳಿಗಾಗಿ ವಲಸೆ ಬಂದವರಲ್ಲಿ ಅನೇಕರಿಗೆ ಇನ್ನೂ ತಮ್ಮ ಮತದಾರರ ಪಟ್ಟಿಯನ್ನು ಸ್ಥಳಾಂತರಿಸಿಕೊಳ್ಳಲು ಸಾಧ್ಯ ವಾಗಿಲ್ಲ. ಹಲವರ ಬಳಿ ಆಧಾರ್ ಕಾರ್ಡ್ ಇದೆ. ಆದರೆ ಮತದಾರರ ಗುರುತಿನ ಚೀಟಿ ಇಲ್ಲ. ಇಂತಹ ಸಂದರ್ಭದಲ್ಲಿ ಸೌಲಭ್ಯದ ಹಕ್ಕನ್ನು ಕಳೆದುಕೊಳ್ಳಬಹುದೇ ಎಂಬ ಪ್ರಶ್ನೆ ಮೂಡಿದೆ. ಉದ್ಯೋಗಕ್ಕಾಗಿ ಬೆಂಗಳೂರಿಗೆ ಬಂದು ದಶಕಗಳೇ ಕಳೆದಿದ್ದರೂ, ಅನೇಕರು ಮತದಾರರ ಪಟ್ಟಿಯಲ್ಲಿ ಬದಲಾವಣೆ ಮಾಡಿಸಿ ಕೊಂಡಿಲ್ಲ. ಹೊಸ ನಿಯಮದಿಂದ ಯೋಜನೆಯಿಂದ ವಂಚಿತರಾಗುವ ಭೀತಿ ಉಂಟಾಗಿದೆ.

ಹೋಟೆಲ್ ಮಾಲೀಕರಿಗೆ ರಿಲೀಫ್

ವಾಣಿಜ್ಯ ಬಳಕೆ ಎಲ್‌ಪಿಜಿ ದರ 183.50ರು. ಇಳಿಕೆ

ದೆಹಲಿ: ವಾಣಿಜ್ಯ ಬಳಕೆಯ ಎಲ್‌ಪಿಜಿ ಪೂರೈಕೆ ಮೇಲಿನ ನಿರ್ಬಂಧ ತೆರವುಗೊಳಿಸಿದ ಬೆನ್ನಲ್ಲೇ ಕೇಂದ್ರಸರಕಾರ ವಾಣಿಜ್ಯ ಬಳಕೆಯ ಎಲ್‌ಪಿಜಿ ದರವನ್ನು 183.50ರು.ಗಳಷ್ಟು ಇಳಿಕೆ ಮಾಡಿದೆ.

ಜುಲೈ ಒಂದರಿಂದ ಜಾರಿಗೆ ಬರುವಂತೆ 19 ಕೆ.ಜಿಯ ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆಯನ್ನು 183.50 ರೂ. ಇಳಿಕೆ ಮಾಡಲಾಗಿದೆ. ಈ ಮೂಲಕ 3,113.50 ರೂ. ಇದ್ದ ಸಿಲಿಂಡರ್ ಬೆಲೆ ಈಗ 2,930 ರೂ.ಗೆ ಇಳಿದಿದೆ. ಆದರೆ ತೈಲ ಕಂಪನಿಗಳು ಗೃಹ ಬಳಕೆಯ ಸಿಲಿಂಡರ್ ಬೆಲೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಹೀಗಾಗಿ 14.2 ಕೆಜಿ ತೂಕದ ಗೃಹ ಬಳಕೆಯ ಸಿಲಿಂಡರ್ ಬೆಲೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ.

ಅಮೆರಿಕ ಹಾಗೂ ಇಸ್ರೇಲ್ ದಾಳಿಗೆ ಪ್ರತಿಯಾಗಿ ಇರಾನ್ ದೇಶವು ತನ್ನ ನಿಯಂತ್ರಣದಲ್ಲಿದ್ದ ಹೊರ್ಮುಜ್ ಜಲಸಂಧಿಯನ್ನು ಬಂದ್ ಮಾಡಿ, ಕಚ್ಚಾ ತೈಲ ಮತ್ತು ಎಲ್‌ಪಿಜಿ ಸಾಗಿಸುವ ಹಡಗುಗಳ ಸಂಚಾರವನ್ನು ತಡೆಹಿಡಿದಿತ್ತು. ಈ ವ್ಯತ್ಯಯದಿಂದಾಗಿ ಪ್ರಪಂಚದಾದ್ಯಂತ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ಬೆಲೆಗಳು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದ್ದವು. ಇದೀಗ ಅಮೆರಿಕದೊಂದಿಗಿನ ಶಾಂತಿ ಮಾತುಕತೆ ಹಿನ್ನೆಲೆಯಲ್ಲಿ ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಮುಕ್ತ ಸಾಗಾಟಕ್ಕೆ ತೆರವುಗೊಳಿಸಲಾಗಿದೆ.

ಎಟಿಎಫ್ ದರವೂ ಇಳಿಕೆ: ಜಾಗತಿಕ ಕಚ್ಚಾ ತೈಲ ಬೆಲೆಗಳು ಇಳಿಮುಖವಾಗಿರುವ ಹಿನ್ನೆಲೆಯಲ್ಲಿ, ವಿಮಾನ ಟರ್ಬೈನ್ ಇಂಧನ ದರವನ್ನು ಬುಧವಾರ ಪ್ರತಿ ಲೀಟರ್‌ಗೆ ರೂ.5ರಷ್ಟು ಇಳಿಕೆ ಮಾಡಲಾಗಿದೆ. ಕಳೆದ ಕೆಲ ವಾರಗಳಿಂದ ಹೆಚ್ಚಿದ ಇಂಧನ ವೆಚ್ಚದಿಂದ ಸಂಕಷ್ಟ ಎದುರಿಸುತ್ತಿದ್ದ ದೇಶೀಯ ಹಾಗೂ ಅಂತರರಾಷ್ಟ್ರೀಯ ವಿಮಾನ ಸಂಸ್ಥೆಗಳಿಗೆ ಇದು ಬಿಗ್ ರಿಲೀಫ್ ನೀಡಿದೆ. ಹೊಸ ದರದಂತೆ, ದೆಹಲಿಯಲ್ಲಿ ವಿಮಾನ ಇಂಧನದ ಬೆಲೆ ಪ್ರತಿ ಲೀಟರ್‌ಗೆ ರೂ.110 ಆಗಿದೆ ಎಂದು ಉದ್ಯಮ ಮೂಲಗಳು ತಿಳಿಸಿವೆ.

ಏರಿದ್ದು 1,375 ರು.!

ಹೊರ್ಮುಜ್ ಜಲಸಂಧಿ ಬಂದ್‌ನಿಂದ ಇಂಧನ ಪೂರೈಕೆ ವ್ಯತ್ಯಯವಾದ ಹಿನ್ನೆಲೆಯಲ್ಲಿ ಕಳೆದ ಮಾರ್ಚ್‌ನಿಂದ ಭಾರತದಲ್ಲಿ ವಾಣಿಜ್ಯ ಎಲ್‌ಪಿಜಿ ದರವನ್ನು ಒಟ್ಟು ನಾಲ್ಕು ಹಂತಗಳಲ್ಲಿ 1374.50 ರು. ಗಳಷ್ಟು ಏರಿಸಲಾಗಿತ್ತು. ಮಾರ್ಚ್‌ನಲ್ಲಿ 144 ರು., ಏಪ್ರಿಲ್‌ನಲ್ಲಿ 195.50 ರು, ಮೇನಲ್ಲಿ 993 ರು. ಹಾಗೂ ಜೂನ್‌ನಲ್ಲಿ 42 ರು. ಏರಿಕೆ ಮಾಡಲಾಗಿತ್ತು. ಇದೇ ವೇಳೆ 14.2 ಕೆ.ಜಿ ಗೃಹಬಳಕೆಯ ಎಲ್‌ಪಿಜಿ ದರವನ್ನು ಎರಡು ಹಂತಗಳಲ್ಲಿ ಒಟ್ಟು 89 ರು. ಏರಿಸಲಾಗಿತ್ತು.

ನಯರಾದಲ್ಲೂ ಬೆಲೆ ಕಡಿತ

ದೇಶದ ಪ್ರಮುಖ ಖಾಸಗಿ ಇಂಧನ ಚಿಲ್ಲರೆ ಮಾರಾಟ ಸಂಸ್ಥೆಯಾದ ನಯಾರಾ ಎನರ್ಜಿ ಪೆಟ್ರೋಲ್ ಬೆಲೆಯನ್ನು ಪ್ರತೀ ಲೀಟರ್‌ಗೆ ಐದು ರೂಪಾಯಿ ಮತ್ತು ಡೀಸೆಲ್ ಬೆಲೆಯನ್ನು ಲೀಟರ್‌ಗೆ ಮೂರು ರೂಪಾಯಿ ಕಡಿತಗೊಳಿಸಿದೆ. ನಯಾರಾ ಕರ್ನಾಟಕ ಸೇರಿ ದೇಶಾದ್ಯಂತ ಸುಮಾರು ಏಳು ಸಾವಿರ ಪೆಟ್ರೋಲ್ ಬಂಕ್‌ಗಳನ್ನು ಹೊಂದಿದೆ. ಆದರೆ ಸರಕಾರಿ ಸ್ವಾಮ್ಯದ ತೈಲ ಕಂಪೆನಿಗಳಾದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲ್ ಬೆಲೆಯಲ್ಲಿ ಇಳಿಕೆಯಾಗಿಲ್ಲ.

ಸೊಂಪಾದ ಪುಟಗಳು

ಸಾಹಿತ್ಯ ಲೋಕದ ಪರನಿಂದಾ ಪುರಾಣವು!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6

ಮಳೆ ನಿಂತು ಹೋದ ಮೇಲೆ, ಕಣ್ಣಹನಿ ಮೂಡಿದೆ
ಕಾಡುದಾರಿ
ಹರೀಶ್ ಕೇರ 7

ದಾರಿದೀಪೋಕ್ತಿ

ಜಗತ್ತು ನಮ್ಮಷ್ಟು ವೇಗವಾಗಿ ಓಡುತ್ತಿಲ್ಲ ಎಂದು ನಾವಂದುಕೊಂಡಿರುತ್ತೇವೆ. ಆದರೆ, ಜಗತ್ತಿನ ವೇಗದ ಮುಂದೆ ನಾವೇನೂ ಅಲ್ಲ ಎಂಬುದನ್ನು ನಾವು ಅರ್ಥ ಮಾಡಿಕೊಂಡರೆ ಮಾತ್ರವೇ ಜಗತ್ತಿನ ವೇಗಕ್ಕೆ ಒಂದಷ್ಟು ಹತ್ತಿರವಾಗಬಹುದು.

ವಕ್ರತುಂಡೋಕ್ತಿ

ಗಂಡಸರು ಯಾವತ್ತೂ ರಕ್ತ ಹೀರುವುದಿಲ್ಲ. ಬೇಕಿದ್ದರೆ ಸೊಳ್ಳೆಗಳ ಬಗ್ಗೆ ತಿಳಿದುಕೊಳ್ಳಿ.

ಕಾರು ಸ್ಫೋಟ ಪ್ರಕರಣ: ನಾಡಬಾಂಬ್ ಕೊಟ್ಟಿದ್ದ ನಾಲ್ವರ ಬಂಧನ

ತುಮಕೂರು: ಶಿರಾ ತಾಲೂಕಿನ ಜೋಗಿಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಈಚೆಗೆ ನಾಡಬಾಂಬ್ ಸ್ಫೋಟಿಸಿಕೊಂಡು ಸಜೀವ ದಹನವಾದ ನಾಗೇಂದ್ರಗೆ ನಾಡ ಬಾಂಬ್ ಕೊಟ್ಟಿದ್ದ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ. ಹೊನ್ನಾವರ ತಾಲೂಕಿನ ಚಂದಾವರ ಗ್ರಾಮದ ಜಾರ್ಜ್ ನಿಕ್ಲೋವ್ ಫರ್ನಾಂಡೀಸ್, ಸಂದೀಪ್‌ಗೌಡ, ನಾರಾಯಣ ಡೊಲ್ಲುಗೌಡ ಮತ್ತು ನಾಗರಾಜು ಡೊಲ್ಲುಗೌಡ ಬಂಧಿತರು.

ರಾಮಮಂದಿರ ಟ್ರಸ್ಟ್ ಅಧ್ಯಕ್ಷ ಗೋಪಾಲ್ ದಾಸ್ ಆಸ್ಪತ್ರೆಗೆ

ಲಖನೌ: ಅಯೋಧ್ಯೆಯ ಶ್ರೀರಾಮ ಮಂದಿರ ನಿರ್ಮಾಣದ ಉಸ್ತುವಾರಿ ಹೊತ್ತಿರುವ 'ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್' ಅಧ್ಯಕ್ಷ ಮಹಂತ್ ನೃತ್ಯ ಗೋಪಾಲ್ ದಾಸ್ (89) ಅವರು ಅನಾರೋಗ್ಯದ ಕಾರಣ ಬುಧವಾರ ವೇದಾಂತ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಆಸ್ಪತ್ರೆಯು ಬುಧವಾರ ಬಿಡುಗಡೆ ಮಾಡಿರುವ ಬುಲೆಟಿನ್ ಪ್ರಕಾರ, ಜೂನ್ 29 ರಂದು ಮಧ್ಯಾಹ್ನ ಸುಮಾರು 1:30 ರ ಸುಮಾರಿಗೆ ಮಹಂತ್ ನೃತ್ಯ ಗೋಪಾಲ್ ದಾಸ್ ಅವರನ್ನು ಪ್ರಜ್ಞಾಹೀನ ಸ್ಥಿತಿಯಲ್ಲಿ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗಕ್ಕೆ ಕರೆತರಲಾಗಿತ್ತು. ಮಹಂತ ಅವರನ್ನು ಪ್ರಾಥಮಿಕ ತಪಾಸಣೆಗೆ ಒಳಪಡಿಸಿದ ವೈದ್ಯರು, ಅವರು ತೀವ್ರವಾದ ಮೂತ್ರನಾಳದ ಸೋಂಕಿನಿಂದ ಬಳಲುತ್ತಿರುವುದನ್ನು ಪತ್ತೆಹಚ್ಚಿದ್ದಾರೆ. ಐಸಿಯುನಲ್ಲಿರುವ ಅವರ ಮೇಲೆ 24 ಗಂಟೆಗಳ ಕಾಲ ವೈದ್ಯಕೀಯ ನಿಗಾ ಇರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಟ್ರಂಪ್‌ಗೆ ಹಿನ್ನಡೆ, ಅಮೆರಿಕದ ವಲಸಿಗರು ನಿರಾಳ

ಜನ್ಮಸಿದ್ಧ ಪೌರತ್ವ ರದ್ದು ಆದೇಶಕ್ಕೆ ತಡೆ

ವಾಷಿಂಗ್ಟನ್: ಅಮೆರಿಕದಲ್ಲಿ ತಾತ್ಕಾಲಿಕವಾಗಿ ಮತ್ತು ಅಕ್ರಮವಾಗಿ ವಾಸಿಸುವ ಜನರ ಮಕ್ಕಳಿಗೆ ಪೌರತ್ವ ನೀಡುವ 'ಜನ್ಮಸಿದ್ಧ ಪೌರತ್ವ'ದ ಹಕ್ಕನ್ನು ರದ್ದುಪಡಿಸಲು ಡೊನಾಲ್ಡ್ ಟ್ರಂಪ್ ಮಾಡಿದ್ದ ಪ್ರಯತ್ನಕ್ಕೆ ಹಿನ್ನಡೆಯಾಗಿದೆ. ಅಮೆರಿಕದಲ್ಲಿ ಹಲವು ವರ್ಷಗಳಿಂದ ಜಾರಿಯಲ್ಲಿರುವ ಈ ಹಕ್ಕನ್ನು ಸೀಮಿತಗೊಳಿಸುವ ಟ್ರಂಪ್ ಅವರ ಆದೇಶವನ್ನು ಅಮೆರಿಕದ ಸುಪ್ರೀಂಕೋರ್ಟ್ ತಿರಸ್ಕರಿಸಿದೆ. ಎರಡನೇ ಬಾರಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಮೊದಲ ದಿನವೇ ಟ್ರಂಪ್ ಈ ಆದೇಶಕ್ಕೆ ಸಹಿ ಹಾಕಿದ್ದರು. ವಲಸಿಗರನ್ನು ನಿಯಂತ್ರಿಸಲು ಅವರು ಕೈಗೊಂಡ ಹಲವು ಕ್ರಮಗಳಲ್ಲಿ ಇದೂ ಒಂದಾಗಿತ್ತು. → 4

ಈ ತೀರ್ಪು ನಮ್ಮ ದೇಶಕ್ಕೆ ಅತ್ಯಂತ ಮಾರಕವಾಗಿದೆ. ಕಾಂಗ್ರೆಸ್ಸಿನಲ್ಲಿ (ಸಂಸತ್) ಕಾನೂನು ತಂದು ಇದನ್ನು ಸರಿಪಡಿಸಬಹುದು. ಇದಕ್ಕೆ ದೀರ್ಘ ಮತ್ತು ಸಂಕೀರ್ಣವಾದ ಸಾಂವಿಧಾನಿಕ ತಿದ್ದುಪಡಿಯ ಅಗತ್ಯವೇ ಇಲ್ಲ. ಕಾಂಗ್ರೆಸ್ಸಿಗೆ ನನ್ನ ಸಂಪೂರ್ಣ ಬೆಂಬಲವಿದೆ.
ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

ಅಕ್ಟೋಬರ್ ವೇಳೆಗೆ ಎತ್ತಿನ ಹೊಳೆ ನೀರು

ತುಮಕೂರು: ಅಕ್ಟೋಬರ್ ವೇಳೆಗೆ ತುಮಕೂರಿಗೆ ಎತ್ತಿನಹೊಳೆ ನೀರು ಹರಿಯಲಿದೆ ಎಂದು ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು. ಎತ್ತಿನಹೊಳೆ ಯೋಜನೆ ಕಾಮಗಾರಿ ಒಟ್ಟು 252 ಕಿ.ಮೀ.ಇದ್ದು, ಈಗಾಗಲೇ 220 ಕಿ.ಮೀ. ಕಾಮಗಾರಿ ಪೂರ್ಣಗೊಂಡಿದೆ. 23 ಕಿ.ಮೀ. ಕಾಮಗಾರಿ ಪ್ರಗತಿಯಲ್ಲಿದೆ. ಬಾಕಿ 9 ಕಿ.ಮೀ. ಕಾಮಗಾರಿ ಆಗಬೇಕಿದೆ. ಈ ವ್ಯಾಪ್ತಿಯಲ್ಲಿ 6 ಕಿ.ಮೀ. ಅರಣ್ಯ ಪ್ರದೇಶ ಇದ್ದುದರಿಂದ ಕಾಮಗಾರಿ ವಿಳಂಬಕ್ಕೆ ಕಾರಣವಾಗಿದೆ. ಇದೀಗ ಕೇಂದ್ರ ಸರಕಾರ ಪ್ರಕರಣವನ್ನು ಇತ್ಯರ್ಥಗೊಳಿಸಿದ್ದು, ಕಾಮಗಾರಿ ಪೂರ್ಣಗೊಂಡು ಅಕ್ಟೋಬರ್ ವೇಳೆಗೆ ತುಮಕೂರಿನವರೆಗೆ ಎತ್ತಿನಹೊಳೆ ನೀರು ಹರಿಸುವ ಎಲ್ಲಾ ಸಾಧ್ಯತೆಗಳಿವೆ ಎಂದು ತಿಳಿಸಿದರು.

ಮಂಗಳೂರಿನಲ್ಲಿ ಧಾರಾಕಾರ ಮಳೆ | ಅವಶೇಷಗಳಡಿ ಸಿಲುಕಿದ್ದವರ ರಕ್ಷಣೆ

ಗೋಡೆ ಕುಸಿದು ಬಿದ್ದು ಮೂವರ ಸಾವು

ಮಂಗಳೂರು: ನಗರದ ನಾಗೋರಿ ಪ್ರದೇಶದಲ್ಲಿರುವ ಕಂಕನಾಡಿ ಪೊಲೀಸ್ ಠಾಣೆಯ ಹಿಂಭಾಗದ ವಸತಿ ಪ್ರದೇಶದಲ್ಲಿ ಬುಧವಾರ ಕಾಂಪೌಂಡ್ ಗೋಡೆ ಕುಸಿದು ಬಿಹಾರದ ಕೂಲಿ ಕಾರ್ಮಿಕ ಕುಟುಂಬದ ಇಬ್ಬರು ಮಕ್ಕಳು ಸೇರಿ ಮೂವರು ಸಾವನ್ನಪ್ಪಿದ್ದಾರೆ.

ಹೆಂಚಿನ ಮನೆ ಮಣ್ಣಿನಡಿ ಸಿಲುಕಿದ ಪರಿಣಾಮ ಆರು ಮಂದಿ ಅವಶೇಷಗಳ ಅಡಿ ಸಿಲುಕಿದ್ದರು. ರಕ್ಷಣಾ ತಂಡಗಳು ತಕ್ಷಣ ಸ್ಥಳಕ್ಕೆ ಧಾವಿಸಿ ಅವಶೇಷಗಳ ಅಡಿಯಲ್ಲಿ ಸಿಲುಕಿದ್ದವರಲ್ಲಿ ಮೂವರನ್ನು ರಕ್ಷಣೆ ಮಾಡಿ ಸುರಕ್ಷಿತವಾಗಿ ಹೊರತೆಗೆದು ಆಸ್ಪತ್ರೆಗೆ ದಾಖಲಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಇನ್ನುಳಿದ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದರು. ಅನಾಮಿಕ ಚೌರಾಸಿಯ(8), ಪರಿ(4) ಮತ್ತು ಶಾಂತ(46) ಮೃತ ದುರ್ದೈವಿಗಳು. ಅಲ್ಕಾ(14), ಅನುಷಾ (11) ಮತ್ತು ಬಾಲಕೃಷ್ಣ (48) ಎನ್ನುವವರು ಬದುಕಿ ಉಳಿದಿದ್ದಾರೆ.

ಬೆಳಗ್ಗೆ ಸುಮಾರು 4.45ರಿಂದ 5 ಗಂಟೆಯ ನಡುವೆ ಸಂಭವಿಸಿದ ದುರಂತದಲ್ಲಿ ಕಾಂಪೌಂಡ್ ಗೋಡೆಯ ಕೆಳಭಾಗದಲ್ಲಿದ್ದ ನಾಲ್ಕು ಬಾಡಿಗೆ ಮನೆಗಳ ಹಿಂಭಾಗದ ಗೋಡೆಗಳು ಕುಸಿದಿವೆ. ಬಿಹಾರ ಮೂಲದ ಲಾಲ್‌ಬಾಬು (37) ಇಂದು (34) ದಂಪತಿ, ಅಲ್ಕಾ (14), ಅನುಷ್ಕಾ (11), ಅನಾಮಿಕಾ (7) ಮತ್ತು ತನು (3) ಎಂಬ ನಾಲ್ವರು ಪುತ್ರಿಯರ ಜತೆ ಇಲ್ಲಿ ವಾಸವಿದ್ದರು. ಉಡುಪಿ ಮೂಲದ ಬಾಲಕೃಷ್ಣ (40) ಹಾಗೂ ಪತ್ನಿ ಶಾಂತಾ (35) ಅವರ ಕುಟುಂಬವೂ ಎಂಟು ತಿಂಗಳಿನಿಂದ ಇಲ್ಲಿ ವಾಸವಿದ್ದರು. ಬಾಲಕೃಷ್ಣ ಅವರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದ್ದು, ಶಾಂತಾ ಅವರು ಮೃತಪಟ್ಟಿದ್ದಾರೆ.

ಗೋಡೆ ಕುಸಿದು ಮನೆ ಧ್ವಂಸ

ಮಂಗಳವಾರ ರಾತ್ರಿಯಿಡೀ ಸುರಿದ ಮಳೆಗೆ ಐಷಾರಾಮಿ ಎಸ್ಟೇಟ್ ಒಂದರ ಭಾರೀ ಎತ್ತರದ ಆವರಣ ಗೋಡೆ ಕುಸಿದು ಬಿದ್ದು, ಪಕ್ಕದ ಒಂಟಿ ಮನೆಯು ಸಂಪೂರ್ಣ ನೆಲಸಮಗೊಂಡ ಘಟನೆ ತೊಕ್ಕೊಟ್ಟು ಸಮೀಪದ ಕೆರೆಬೈಲ್‌ನಲ್ಲಿ ನಡೆದಿದೆ. ಕೆರೆಬೈಲ್ ಗುಡ್ಡೆಯ ನಿವಾಸಿ ಕಿಶೋರ್ ಅವರ ಮನೆ ಸಂಪೂರ್ಣ ನೆಲಸಮಗೊಂಡಿದೆ. ಅಪಾಯವನ್ನು ನಿರೀಕ್ಷಿಸಿದ್ದ ಕುಟುಂಬದ ಐವರು ಸದಸ್ಯರು ಎರಡು ವಾರಗಳ ಹಿಂದಷ್ಟೇ ಮನೆಯಿಂದ ಸ್ಥಳಾಂತರಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಘೋರ ಅನಾಹುತವೊಂದು ತಪ್ಪಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಪಶ್ಚಿಮ ಬಂಗಾಳದಲ್ಲಿ ಮತ್ತೆ ಟಿಎಂಸಿ ನಾಯಕರ ಮೇಲೆ ಮೊಟ್ಟೆ ಎಸೆತ.
ಸುದ್ದಿ



ಬೀದಿ ಬದಿ ವ್ಯಾಪಾರಿಗಳ ತೀವ್ರ ವಿರೋಧದ ನಡುವೆ ನೂರಾರು ಅಂಗಡಿ, ತಳ್ಳುಗಾಡಿಗಳ ತೆರವು

ಪಾದಚಾರಿ ಮಾರ್ಗ ಒತ್ತುವರಿ ತೆರವಿಗೆ ಜಿಬಿಎ ಸಮರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಪಾದಚಾರಿಗಳ ಹಕ್ಕುಗಳನ್ನು ಮರುಸ್ಥಾಪಿಸಲು ಮತ್ತು ನಗರದ ರಸ್ತೆಗಳನ್ನು ಅಡೆತಡೆಯಿಲ್ಲದ ಸಂಚಾರಕ್ಕೆ ಮುಕ್ತಗೊಳಿಸಲು, ಗ್ರೇಟರ್ ಬೆಂಗಳೂರು ಪ್ರಾಧಿಕಾರವು (ಜಿಬಿಎ) ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 'ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನ'ವನ್ನು ಅಧಿಕೃತವಾಗಿ ಆರಂಭಿಸಿದ್ದು, ಇದಕ್ಕೆ ಬೀದಿ ಬದಿ ವ್ಯಾಪಾರಿಗಳಿಂ ತೀವ್ರ ವಿರೋಧ ವ್ಯಕ್ತವಾಗಿದೆ.

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ನಿರ್ದೇಶನ ಮತ್ತು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾರ್ಗದರ್ಶನದಂತೆ 5 ನಗರ ಪಾಲಿಕೆಗಳ ಪ್ರಮುಖ ರಸ್ತೆಗಳಲ್ಲಿ ಬರುವ ಪಾದಚಾರಿ ಮಾರ್ಗಗಳಲ್ಲಿದ್ದ ಅಡೆತಡೆಗಳನ್ನು ತೆರವುಗೊಳಿಸಿ, ಪಾದಚಾರಿಗಳ ಸುಗಮ ಓಡಾಟಕ್ಕೆ ಅನುವು ಮಾಡಿಕೊಡಲಾಗಿದೆ. ನಗರದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಟ್ರಾಫಿಕ್ ದಟ್ಟಣೆ ಮತ್ತು ಪಾದಚಾರಿ ಮಾರ್ಗಗಳ ಮೇಲಿನ ಅಕ್ರಮ ಒತ್ತುವರಿಯು ಪಾದಚಾರಿಗಳ ಜೀವಕ್ಕೆ ಅಪಾಯಕಾರಿಯಾಗಿ ಪರಿಣಮಿಸಿದೆ. → 4

ಬೆಂಗಳೂರಿನ ನಾಗರಿಕರಿಗೆ ಸುರಕ್ಷಿತವಾಗಿ ನಡೆಯುವ ಹಕ್ಕಿದೆ. ಪಾದಚಾರಿ ಮಾರ್ಗಗಳ ಒತ್ತುವರಿ ಎಂದರೆ ನಾಗರಿಕರ ಸುರಕ್ಷತೆ ಕಸಿದುಕೊಂಡಂತೆ. ಇದು ಕೇವಲ ಸರಕಾರದ ಕಾರ್ಯಾಚರಣೆಯಲ್ಲ. ಪಾದಚಾರಿ ಮಾರ್ಗ ತೆರವುಗೊಳಿಸಲು ಸುಪ್ರೀಂ ಕೋರ್ಟ್ ಆದೇಶವೂ ಇದೆ. ಇದು ಪ್ರತಿಯೊಬ್ಬ ನಾಗರಿಕನೂ ಪಾಲ್ಗೊಳ್ಳಬೇಕಾದ ಜನಾಂದೋಲನ ಆಗಬೇಕು.
-ಕೃಷ್ಣ ಬೈರೇಗೌಡ, ಸಚಿವ

ಈ ವಿಶೇಷ ಅಭಿಯಾನ ನಿರಂತರವಾಗಿ ಮುಂದುವರಿಯಲಿದೆ. ಸಾರ್ವಜನಿಕರಿಂದ ಬರುವ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಿ ನಗರದ ಎಲ್ಲ ಭಾಗಗಳಲ್ಲಿಯೂ ಪಾದಚಾರಿ ಮಾರ್ಗ ಅತಿಕ್ರಮಣಮುಕ್ತಗೊಳಿಸುವ ಗುರಿ ಜಿಬಿಎ ಹೊಂದಿದೆ. ನಗರದ ಮೂಲಸೌಕರ್ಯ ಪಾದಚಾರಿ ಸ್ನೇಹಿಯಾಗಿ ರೂಪಿಸುವ ನಿಟ್ಟಿನಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ.
-ಮಹೇಶ್ವರ್ ರಾವ್ ಜಿಬಿಎ ಮುಖ್ಯ ಆಯುಕ್ತ

ಆಕ್ರೋಶ, ಕಣ್ಣೀರಿನ ನಡುವೆ ಕಾರ್ಯಾಚರಣೆ

ಬೀದಿ ಬದಿ ವ್ಯಾಪಾರಿಗಳು, ಒತ್ತುವರಿದಾರರ ಆಕ್ರೋಶ, ಗದ್ದಲ, ವಿರೋಧ, ಪ್ರತಿಭಟನೆ ಬಳಿಕ ಕಣ್ಣೀರಿನ ನಡುವೆಯೂ ಮೊದಲ ದಿನದ ಒತ್ತುವರಿ ತೆರವು ಕಾರ್ಯಾಚರಣೆ ಮುಕ್ತಾಯವಾಗಿದೆ. ಕೆಲ ಪಾದಚಾರಿ ಮಾರ್ಗ ತೆರವು ಸಂದರ್ಭದಲ್ಲಿ ಜಿಬಿಎ ಅಧಿಕಾರಿಗಳ ಜತೆ ವ್ಯಾಪಾರಿಗಳು ವಾಗ್ವಾದಕ್ಕಿಳಿದರು. ಆದರೂ ಪೊಲೀಸ್ ಬಂದೋಬಸ್ತ್‌ನಲ್ಲಿ ಪಾದಚಾರಿ ಮಾರ್ಗ ತೆರವು ಕಾರ್ಯಾಚರಣೆ ನಡೆಯಿತು. ಗುರುವಾರವೂ ಒತ್ತುವರಿ ತೆರವು ಕಾರ್ಯಾಚರಣೆ ನಡೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರವಾಸಿ ಪ್ರಪಂಚ
ವಿಹಾರವೇ ವಿಶ್ವ!
ಆ ಪೇಪರ್ ಸಿಗಲಿಲ್ವಾ?
ಹಾಗಾದ್ರೆ e ಪೇಪರ್ ತಗೊಳ್ಳಿ..
ಇ- ಟಚ್ಚಲಿ ಎಲ್ಲಾ ಇದೆ
ಅಂತ ಟಚ್ ಸ್ಕ್ರೀನ್ ಮೊಬೈಲಲ್ಲಿ ಪೇಪರ್ ಓದಿ
www.epaper.pravasiprapancha.com ಗೆ ಭೇಟಿ ನೀಡಿ.

ವರ್ಷಕ್ಕೆ ಕೇವಲ ₹899
ಪ್ರತ್ಯೇಕ ಸಂಚಿಕೆಗೆ ಬರೀ ₹20
ಕಲರ್‌ಫುಲ್ ಪತ್ರಿಕೆ ಕಲರ್‌ಫುಲ್ ಆಫರ್!
ಇಂದೇ ಚಂದಾದಾರರಾಗಿ

ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ ಆಪ್ತನಿಗೆ ಚಾಕು ಇರಿತ

ಬೆಂಗಳೂರು: ಶಾಸಕ ಸಿ.ಕೆ.ರಾಮಮೂರ್ತಿ ಅವರ ಆಪ್ತ ಸೋಮಶೇಖರ್ ರೆಡ್ಡಿ ಮೇಲೆ ಐವರು ದುಷ್ಕರ್ಮಿಗಳು ಮಾರಣಾಂತಿಕವಾಗಿ ಹಲ್ಲೆ ನಡೆಸಿ ಚಾಕುವಿನಿಂದ ಇರಿದಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ಜೂನ್ 24ರಂದು ಸಂಜೆ ಜಯನಗರ 9ನೇ ಬ್ಲಾಕ್‌ನಲ್ಲಿರುವ ಕುಡಿಯುವ ನೀರಿನ ಘಟಕ (ವಾಟರ್ ಪ್ಲಾಂಟ್) ಬಳಿ ಈ ಘಟನೆ ನಡೆದಿದೆ. ವಾಟರ್ ಪ್ಲಾಂಟ್ ನಡೆಸುತ್ತಿದ್ದ ಸೋಮಶೇಖರ್ ರೆಡ್ಡಿ ಘಟಕದ ಬಳಿ ಬಂದಾಗ, ಆಟೋದಲ್ಲಿ ಮಾರಕಾಸ್ತ್ರಗಳೊಂದಿಗೆ ಬಂದಿದ್ದ ಐವರ ತಂಡ ಕಿರಿಕ್ ತೆಗೆದಿದೆ. ಮಾತಿಗೆ ಮಾತು ಬೆಳೆದು ಆರೋಪಿಗಳು ಹೊಟ್ಟೆ, ಎದೆ ಹಾಗೂ ಬೆನ್ನಿಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ. ಗಂಭೀರವಾಗಿ ಗಾಯಗೊಂಡ ಸೋಮಶೇಖರ್ ರೆಡ್ಡಿಯನ್ನು ಸ್ಥಳೀಯರು ತಕ್ಷಣ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಬಳಿಕ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಘಟನೆ ಸಂಬಂಧ ಗಾಯಾಳು ಸೋಮಶೇಖರ್ ರೆಡ್ಡಿ ತಂದೆ ಜಯನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಕೊಲೆ ಮಾಡುವ ಉದ್ದೇಶದಿಂದಲೇ ಆರೋಪಿಗಳು ದಾಳಿ ನಡೆಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ರವಿ, ಬಾಲು, ಪುಲಿ, ವಿಷ್ಣು ಹಾಗೂ ಶಂಕರ್ ಸೇರಿ ಐವರನ್ನು ಬಂಧಿಸಿ ತನಿಖೆ ನಡೆಸುತ್ತಿದ್ದಾರೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಸೋಮಶೇಖರ್ ರೆಡ್ಡಿ ಜಿಬಿಎ ಚುನಾವಣೆಯಲ್ಲಿ ಸ್ಪರ್ಧಿಸಲು ತಯಾರಿ ನಡೆಸುತ್ತಿದ್ದರು. ಈ ಹಿನ್ನೆಲೆ ರಾಜಕೀಯ ದ್ವೇಷದ ಕಾರಣಕ್ಕೆ ಹಲ್ಲೆ ನಡೆದಿದೆಯೇ ಎಂಬ ಶಂಕೆಯೂ ವ್ಯಕ್ತವಾಗಿದ್ದು, ಎಲ್ಲಾ ಆಯಾಮಗಳಲ್ಲಿ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLMAL00262639 1. ಜಯಂತಿ ಪಾಪುದೇಸಿ ಅಲಿಯಾಸ್ ಪಾಪುದೇಸಿ ಜಯಂತಿ ಸಿ/ಒ: ಝೆಡ್.ಪಿ. ಹೈ ಸ್ಕೂಲ್ 2. ವೆಂಕಟೇಶ್ವರ ಪ್ರಸಾದ್ ಅಲಿಯಾಸ್ ವಿ. ವಿ. ಪ್ರಸಾದ್ ಸಿ/ಒ : ಝೆಡ್. ಪಿ. ಹೈ ಸ್ಕೂಲ್ 3. ಮುರಳಿ ಚೆನ್ನ ಅಲಿಯಾಸ್ ಸಿ. ಮುರಳಿ (ಗ್ಯಾರೆಂಟರ್)	''ಆರ್ ಎಸ್ ಎಕ್ಸಾಟಿಕಾ'' ಎಂದು ಕರೆಯಲ್ಪಡುವ ಅಪಾರ್ಟ್‌ಮೆಂಟ್‌ನಲ್ಲಿ, 2ನೇ ಮಹಡಿಯಲ್ಲಿರುವ ಎಸ್2 ಸಂಖ್ಯೆಯ ವಸತಿ ಅಪಾರ್ಟ್‌ಮೆಂಟ್, ಒಟ್ಟು 1,060.0 ಚದರ ಅಡಿ ಸೂಪರ್ ಬಿಲ್ಟ್-ಅಪ್ ವಿಸ್ತೀರ್ಣವನ್ನು ಹೊಂದಿದ್ದು, ಒಂದು ಕಾರು ಪಾರ್ಕಿಂಗ್ ಸ್ಥಳ ಸೇರಿದಂತೆ, ಸಾಮಾನ್ಯ ಪ್ರದೇಶಗಳು ಹಾಗೂ ಸೌಲಭ್ಯಗಳಲ್ಲಿ ಅನುಪಾತದ ಪಾಲಿನೊಂದಿಗೆ, ಬಿಬಿಎಂಪಿ ಖಾತಾ ಸಂಖ್ಯೆ 1234/ ಸರ್ವೆ ಸಂಖ್ಯೆ 25/4, ಪ್ರಸ್ತುತ ಬಿಬಿಎಂಪಿ ಖಾತಾ ಸಂಖ್ಯೆ 1250/1234/2, ಸರ್ವೇ ಸಂಖ್ಯೆ 25/4, ಪರಿವರ್ತಿತ ಸರ್ವೆ ಸಂಖ್ಯೆ 25/4ರಲ್ಲಿ ರೂಪುಗೊಂಡ, 0.31 ಗುಂಟೆ ವಿಸ್ತೀರ್ಣದ, ಖಾಲಿ ನಿವೇಶನ ಸಂಖ್ಯೆ 2ರ ಮೇಲೆ ನಿರ್ಮಿಸಲ್ಪಟ್ಟಿರುವ, (ಪರಿವರ್ತನೆ ಆದೇಶ ಸಂಖ್ಯೆ B.DIS.ALN.SR(S)509/2003-04, ದಿನಾಂಕ 11.03.2024ರ ಮೂಲಕ ಪರಿವರ್ತಿತ), ಸದರಿ ಭೂಮಿಯಲ್ಲಿ 212.0 ಚದರ ಅಡಿ ಅವಿಭಜಿತ ಪಾಲು, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯೊಂದಿಗೆ, ಪುಟ್ಟೇನಹಳ್ಳಿ ಗ್ರಾಮ, ಅರಕೆರೆ ಉಪವಲಯ, ಉತ್ತರಹಳ್ಳಿ ಹೋಬಳಿ, ಬೆಂಗಳೂರು - 560078, ಕರ್ನಾಟಕದಲ್ಲಿ ಇರುವ ಆಸ್ತಿ ಹಾಗೂ ಈ ಭೂಮಿಯ ಎಲ್ಲಾ ಭಾಗಗಳು.	08.06.2026	ದಿನಾಂಕ 11.06.2026 ರಂತೆ ರೂ. 43,41,910.14/- (ರೂಪಾಯಿ ನಲವತ್ತ ಮೂರು ಲಕ್ಷ ನಲವತ್ತ ಒಂದು ಸಾವಿರದ ಒಂಬೈನೂರ ಹತ್ತು ಮತ್ತು ಪೈಸೆ ಹದಿನಾಲ್ಕು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಅಧಿಕೃತ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
ಸ್ಥಳ : ಬೆಂಗಳೂರು
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ನಮೂನೆ ಸಂ. ಐಎನ್‌ಸಿ – 26

{ನಿಯಮ 30ರ ಕಂಪನಿಗಳ (ಸಂಯೋಜನೆ) ನಿಯಮಗಳು, 2014 ಕ್ಕೆ ಸಂಬಂಧಪಟ್ಟಂತೆ}

ಕೇಂದ್ರ ಸರ್ಕಾರದ ಎದುರು, ಪ್ರಾದೇಶಿಕ ನಿರ್ದೇಶಕರು, ನೈರುತ್ಯ ವಲಯ ಡೈರೆಕ್ಟರೇಟ್, ಬೆಂಗಳೂರು

ಉಪ ಸೆಕ್ಷನ್(4) ಸೆಕ್ಷನ್ 13ರ ಕಂಪನಿಗಳ ಕಾಯಿದೆ 2013 ಮತ್ತು ಷರತ್ತು (ಎ)ಯ ಉಪ–ನಿಯಮ(5) ರ ನಿಯಮ 30 ರ ಕಂಪನಿಗಳ (ಸಂಯೋಜನೆ) ನಿಯಮಗಳು 2014 ಇವುಗಳ ವಿಷಯವಾಗಿ ಮತ್ತು

ಟೆಕ್‌ರಾಪ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್ (CIN: U29308KA2020PTC139528)

ನೋಂದಾಯಿತ ಕಚೇರಿ: **ಸರ್ವೆ ನಂ. 70/3, ಕೇಶವ ಕೈಗಾರಿಕಾ ಪ್ರದೇಶ, ಗೊಲ್ಲರಹಟ್ಟಿ, ಲಕ್ಷ್ಮಿಪುರ ಪಿಒ ದಾಸನಪುರ, ಬೆಂಗಳೂರು, ಕರ್ನಾಟಕ, ಭಾರತ–560091**

............**ಅರ್ಜಿದಾರ ಕಂಪನಿ/ಅರ್ಜಿದಾರ**

ಸಾರ್ವಜನಿಕರಿಗೆ ಈ **ಸೂಚನೆ**ಯು ಮೂಲಕ ತಿಳಿಯಪಡಿಸುವುದೇನೆಂದರೆ, ಕಂಪನಿಯು ತನ್ನ ನೋಂದಾಯಿತ ಕಚೇರಿಯನ್ನು "**ಕರ್ನಾಟಕ ರಾಜ್ಯ**" ದಿಂದ "**ತಮಿಳುನಾಡು ರಾಜ್ಯ**" ಕ್ಕೆ ಬದಲಾಯಿಸಲು ಅನುವು ಮಾಡಿಕೊಡಲು **08 ಜನವರಿ, 2026** ರಂದು ನಡೆದ ಕಂಪನಿಯ ವಿಶೇಷ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ವಿಶೇಷ ನಿರ್ಣಯದ ಪ್ರಕಾರ ಕಂಪನಿಯ ಮೆಮರಾಂಡಮ್ ಆಫ್ ಅಸೋಸಿಯೇಶನ್‌ನಂತೆ ಬದಲಾವಣೆಯ ದೃಢೀಕರಣವನ್ನು ಕೋರಿ ಕಂಪನಿ ಕಾಯ್ದೆ, 2013 ರ ಸೆಕ್ಷನ್ 13 (4) ರ ಅಡಿಯಲ್ಲಿ ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಲು ಉದ್ದೇಶಿಸಿದೆ.

ಯಾವುದೇ ವ್ಯಕ್ತಿಗೆ ಈ ಕಂಪನಿಯ ನೋಂದಾಯಿತ ಕಛೇರಿಯ ಪ್ರಸ್ತಾವಿತ ಬದಲಾವಣೆಯಿಂದ ತೊಂದರೆಯಾಗುತ್ತಿದೆ ಎಂದಾದರೆ, **ಹೂಡಿಕೆದಾರರ ಕಂಪ್ಲೈಂಟ್ ಫಾರ್ಮ್ ನ್ನು, MCA-21 ಪೋರ್ಟಲ್** (**www.mca.gov.in**) ಮೂಲಕ ಸಲ್ಲಿಸಿ, ತಮ್ಮ ಯಾವ ಹಿತಾಸಕ್ತಿಗೆ ಇದರಿಂದ ಧಕ್ಕೆಯುಂಟಾಗುತ್ತಿದೆ ಎಂಬುದನ್ನು ಅಫಿಡವಿಟ್ ಮೂಲಕ **ಪ್ರಾದೇಶಿಕ ನಿರ್ದೇಶಕರು, ನೈರುತ್ಯ ವಲಯ ಡೈರೆಕ್ಟರೇಟ್, 'ಇ' ವಿಂಗ್ 2ನೇ ಮಹಡಿ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು–560034, ಕರ್ನಾಟಕ** ಇಲ್ಲಿಗೆ ಈ ನೋಟೀಸ್ ಪ್ರಕಟವಾದ ಹದಿನಾಲ್ಕು (14) ದಿನಗಳ ಒಳಗಾಗಿ ರಿಜಿಸ್ಟರ್ಡ್ ಅಂಚೆ ಮೂಲಕ ಹಾಗೂ ಒಂದು ಪ್ರತಿಯನ್ನು ಕಂಪನಿಯ ನೋಂದಾಯಿತ ಕಛೇರಿಯ ಈ ವಿಳಾಸಕ್ಕೆ ಕಳುಹಿಸಬಹುದಾಗಿದೆ. **ಸರ್ವೆ ನಂ. 70/3, ಕೇಶವ ಕೈಗಾರಿಕಾ ಪ್ರದೇಶ, ಗೊಲ್ಲರಹಟ್ಟಿ, ಲಕ್ಷ್ಮಿಪುರ ಪಿಒ ದಾಸನಪುರ, ಬೆಂಗಳೂರು, ಕರ್ನಾಟಕ, ಭಾರತ–560091**

ಟೆಕ್‌ರಾಪ್ ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್
ಪರವಾಗಿ
ಸಹಿ/–
ಬೇತಿ ರೆಡ್ಡಿ ತೇಜ್ ನರಸ ರೆಡ್ಡಿ
(ನಿರ್ದೇಶಕ)
DIN : 07147878
ದಿನಾಂಕ : 02.07.2026
ಸ್ಥಳ : ಬೆಂಗಳೂರು

AEQUS
ecosystems of efficiency

ಎಕಸ್ ಲಿಮಿಟೆಡ್

(ಹಿಂದಿನ ಹೆಸರು ಎಕಸ್ ಪ್ರೈವೇಟ್ ಲಿಮಿಟೆಡ್)
ಸಿ.ಐ.ಎನ್ **: L80302KA2000PLC026760**
ನೋಂದಾಯಿತ ಕಛೇರಿ: ಎಕಸ್ ಟವರ್, ನಂ. 55, ವೈಟ್‌ಫೀಲ್ಡ್ ಮುಖ್ಯ ರಸ್ತೆ, ಮಹದೇವಪುರ ಅಂಚೆ, ಬೆಂಗಳೂರು – 560048
ದೂರವಾಣಿ: + 91 080 61348000, ಇ ಮೇಲ್ : investor.relations@aequs.com,

ಅಂಚೆ ಮತಪತ್ರದ ಬಗ್ಗೆ ಸೂಚನೆ

ಸದಸ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಕಾಲಕಾಲಕ್ಕೆ ತಿದ್ದುಪಡಿಯಾದಂತೆ ಕಂಪನಿಗಳ (ಆಡಳಿತ ಮಂಡಳಿ ಮತ್ತು ಆಡಳಿತ) ನಿಯಮಗಳು, 2014 ರ ನಿಯಮ 22 ಮತ್ತು 20 ಓದಿಕೊಂಡಂತೆ ಕಂಪನಿಗಳ ಕಾಯ್ದೆ, 2013ರ ಕಲಂ 110 ಮತ್ತು 108 ಮತ್ತು ಯಾವುದೇ ಇದ್ದಲ್ಲಿ ಅಂತಹ ಅನ್ವಯವಾಗುವ ಉಪಬಂಧಗಳು, ("ನಿಯಮಗಳು"), ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಇತರೆ ಸಂಬಂಧಪಟ್ಟ ಸುತ್ತೋಲೆಗಳನ್ನು ಅದರಲ್ಲೂ ಇತ್ತೀಚಿನದಾದ 03/2025 ದಿನಾಂಕ ಸೆಪ್ಟಂಬರ್ 22, 2025 ಓದಿಕೊಂಡಂತೆ ಸಾಮಾನ್ಯ ಸುತ್ತೋಲೆ ಸಂಖ್ಯೆಗಳು: 14/2020 ದಿನಾಂಕ ಏಪ್ರಿಲ್ 8, 2020, 17/2020 ದಿನಾಂಕ ಏಪ್ರಿಲ್ 13, 2020, ('ಎಂಸಿಎ ಸುತ್ತೋಲೆಗಳು') ಸೆಕ್ಯೂರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ (ಲಿಸ್ಟಿಂಗ್ ನಿಯಮಾವಳಿಗಳು) ನಿಭಂದನೆಗಳು 2015 ರ ನಿಬಂಧನೆ 44, ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಯಿಂದ ಹೊರಡಿಸಲಾಗಿರುವ ಸಾಮಾನ್ಯ ಸಭೆಗಳ ಬಗೆಗಿನ ಸೆಕ್ರೇಟೇರಿಯಲ್ ಮಾನದಂಡಗಳು, ಮತ್ತು ಯಾವುದೇ ಇತರೆ ಅನ್ವಯವಾಗುವ ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳು ಅನ್ವಯ (ಪ್ರಸ್ತುತ ಸಮಯದಲ್ಲಿ ಜಾರಿಯಲ್ಲಿರುವ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಅದರ ಮರು ಕಾಯ್ದೆ ಜಾರಿ(ಗಳು) ಸೇರಿದಂತೆ), ಕೆಳಕಂಡ ವಿಶೇಶ ವ್ಯವಹಾರಗಳಿಗೆ ರಿಮೋಟ್ ಇ–ವೋಟಿಂಗ್ ("ಇ–ವೋಟಿಂಗ್") ಪ್ರಕ್ರಿಯೆ ರೂಪದಲ್ಲಿ ಎಕಸ್ ಲಿಮಿಟೆಡ್‌ನ ("ದಿ ಕಂಪನಿ") ಸದಸ್ಯರುಗಳ ಅನುಮೋದನೆಯನ್ನು ಕೋರಲಾಗಿದೆ

ಕ್ರಮ.ಸಂಖ್ಯೆ	ನಿರ್ಣಯಗಳ ವಿವರ	ನಿರ್ಣಯದ ಸ್ವರೂಪ
1.	ಕಂಪನಿಗಳ ಕಾಯ್ದೆ, 2013 ರ ಕಲಂ 233 ಅಡಿಯಲ್ಲಿ ಎಕಸ್ ಲಿಮಿಟೆಡ್ ("ಕಂಪನಿ"/ "ವರ್ಗಾವಣೆ ಪಡೆಯುತ್ತಿರುವ ಕಂಪನಿ") ಜೊತೆಗೆ ಏರೋಸ್ಟ್ರಕ್ಚರ್ಸ್ ಮ್ಯಾನುಫ್ಯಾಕ್ಚರಿಂಗ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಎಕಸ್ ಎಂಜಿನಿಯರ್ಡ್ ಪ್ಲಾಸ್ಟಿಕ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಎಕಸ್ ಫೋರ್ಸ್ ಕನ್ಸೂಮರ್ ಪ್ರಾಡಕ್ಟ್ಸ್ ಪ್ರೈವೇಟ್ ಲಿಮಿಟೆಡ್ ("ವರ್ಗಾವಣೆ ಆಗುತ್ತಿರುವ ಕಂಪನಿಗಳು"/"ಕಂಪನಿಯ ಸಂಪೂರ್ಣ ಸ್ವಾಮ್ಯದ ಅಂಗಸಂಸ್ಥೆಗಳು") ಹಾಗೂ ಅವುಗಳ ಸಂಬಂಧಿತ ಸದಸ್ಯರು ಮತ್ತು ಸಾಲದಾರರ ನಡುವೆ ಪ್ರಸ್ತಾಪಿತ ವಿಲೀನ ಯೋಜನೆಯನ್ನು ಅನುಮೋದಿಸುವ ಕುರಿತು.	ಅಗತ್ಯ ಬಹುಮತದೊಡನೆ ವಿಶೇಷ ನಿರ್ಣಯ

ಇತರೆ ವಿಷಯಗಳು ಸೇರಿದಂತೆ ರಿಮೋಟ್ ಇ–ಮತದಾನದ ಪ್ರಕ್ರಿಯೆ ಮತ್ತು ಸ್ವರೂಪವನ್ನು ತಿಳಿಸಲ್ಪಟ್ಟಿರುವ ಸದರಿ ಅಂಚೆ ಮತ ಪತ್ರದ ನೋಟಿಸ್ ಅನ್ನು ("ನೋಟಿಸ್") ಎಂಸಿಎ ಸುತ್ತೋಲೆಗಳ ಅನುಸಾರ ಸದಸ್ಯರುಗಳ ರಿಜಿಸ್ಟರ್‌ನಲ್ಲಿ ಯಾರ ಹೆಸರುಗಳು ಇರುವುದೊ ಅಂತಹ ಸದಸ್ಯರುಗಳಿಗೆ ಡೆಪಾಜಿಟರಿ ರಿಂದ ಪಡೆದಿರುವ ಫಲಾನುಭವಿಗಳ ಪಟ್ಟಿಯಲ್ಲಿ 26ನೇ ಜೂನ್, 2026ರ ಶುಕ್ರವಾರ ("ಕಟ್ ಆಫ್ ದಿನಾಂಕ") ಹೆಸರಿಸಿರುವ ಮತ್ತು ಕಂಪನಿಯಲ್ಲಿ/ಡಿಪಾಜಿಟರಿಗಳಲ್ಲಿ ತಮ್ಮ ಇಮೇಲ್ ವಿಳಾಸ ನೊಂದಾಯಿಸಿದ ಸದಸ್ಯರುಗಳಿಗೆ ದಿನಾಂಕ 01ನೇ ಜುಲೈ, 2026 ಬುಧವಾರ ದಂದು ವಿದ್ಯುನ್ಮಾನ ವಿಧಾನದ ಮೂಲಕ ಕಳುಹಿಸಲಾಗಿದೆ. ಕಟ್ ಆಫ್ ದಿನಾಂಕದಂದು ಸದಸ್ಯರಾಗಿಲ್ಲದ ವ್ಯಕ್ತಿಯು ಸದರಿ ನೋಟಿಸ್ ಅನ್ನು ಕೇವಲ ಮಾಹಿತಿ ನೀಡುವ ಉದ್ದೇಶಗಳಿಗಾಗಿ ಕಳುಹಿಸಿರುವುದಾಗಿ ಭಾವಿಸಬೇಕು. ಎಂಸಿಎ ಸುತ್ತೋಲೆಗಳ ಮೂಲಕ ಮಂಜೂರು ಮಾಡಿರುವ ವಿನಾಯತಿ ಅನುಸಾರ ಸದರಿ ಅಂಚೆ ಮತ ಪತ್ರದ ಸಂಬಂಧ ಸದಸ್ಯರುಗಳಿಗೆ ಅಂಚೆ ಮತ ಪತ್ರದ ನೋಟಿಸ್ ಜೊತೆಗೆ ಅಂಚೆ ಮತ ಪತ್ರದ ನಮೂನೆಗಳು ಮತ್ತು ಪೂರ್ವ ಭಾವಿ ಬಿಸಿನೆಸ್ ಎನ್‌ವಲಪ್‌ಗಳ ಕಾಗದದ ಪ್ರತಿಗಳನ್ನು ಕಳುಸಿರುವುದಿಲ್ಲ. ಸದರಿ ಸದಸ್ಯರು ರಿಮೋಟ್ ಇ–ವೋಟಿಂಗ್ ವ್ಯವಸ್ಥೆ ಮೂಲಕ ಮಾತ್ರ ತಮ್ಮ ಸಮ್ಮತಿ ಅಥವಾ ಅಸಮ್ಮತಿಯನ್ನು ತಿಳಿಸಬೇಕಾಗಿರುವುದು. ಕಂಪನಿಯು ತನ್ನ ಎಲ್ಲಾ ಸದಸ್ಯರುಗಳಿಗೆ ಇ–ವೋಟಿಂಗ್ ಸೌಲಭ್ಯ ಒದಗಿಸುವ ಉದ್ದೇಶಕ್ಕಾಗಿ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ("ಕೆಫಿನ್ ಟೆಕ್") ನ ಸೇವೆಗಳನ್ನು ನಿಯೋಜನೆ ಮಾಡಿದೆ. ಇ–ವೋಟಿಂಗ್ ಸೌಲಭ್ಯವು ಈ ಕೆಳಕಂಡ ಅವಧಿಯಲ್ಲಿ ಲಭ್ಯವಿರುವುದು.

ಇ–ವೋಟಿಂಗ್ ಅವಧಿ ಪ್ರಾರಂಭದ ದಿನಾಂಕ ಸಮಯ ಮತ್ತು ದಿನ	02ನೇ ಜುಲೈ, 2026ರ ಗುರುವಾರ ಬೆಳಿಗ್ಗೆ 09:00 ಗಂಟೆಯಿಂದ (ಭಾರತೀಯ ಕಾಲಮಾನ)
ಇ–ವೋಟಿಂಗ್ ಅವಧಿ ಮುಕ್ತಾಯದ ದಿನಾಂಕ ಸಮಯ ಮತ್ತು ದಿನ	31ನೇ ಜುಲೈ, 2026ರ ಶುಕ್ರವಾರ ಸಂಜೆ 05:00 ಗಂಟೆಯವರೆಗೆ (ಭಾರತೀಯ ಕಾಲಮಾನ)

ದಿನಾಂಕ 31ನೇ ಜುಲೈ, 2026. ಶುಕ್ರವಾರ, ಸಂಜೆ 5–00ಗೆ ಇ–ವೋಟಿಂಗ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗುವುದು. ತದನಂತರ ಮತದಾನ ಮಾಡಲು ಅವಕಾಶ ನೀಡುವುದಿಲ್ಲ. ಸದಸ್ಯರು ನಿರ್ಣಯಗಳ ಬಗ್ಗೆ ಒಮ್ಮೆ ಮತವನ್ನು ಚಲಾಯಿಸಿದ ನಂತರ ಬದಲಾವಣೆ ಮಾಡಲು ಅವಕಾಶ ನೀಡುವುದಿಲ್ಲ. ಈ ಮತದಾನದ ಬಗ್ಗೆ ವಿವರವಾದ ಸೂಚನೆಗಳನ್ನು ನೋಟಿಸ್‌ನ ಭಾಗವಾಗಿ ಒದಗಿಸಲಾಗಿದೆ. ಸದಸ್ಯರು ಮತ ಚಲಾಯಿಸುವ ಮುನ್ನ ಇದನ್ನು ಜಾಗರೂಕತೆಯಿಂದ ಓದಿಕೊಳ್ಳಬೇಕಾಗಿ ಕೋರಲಾಗಿದೆ. ನೋಟಿಸ್ ಜೊತೆಗೆ ವಿವರಣಾತ್ಮಕ ಹೇಳಿಕೆಯನ್ನು ಕಂಪನಿ ವೆಬ್‌ಸೈಟ್ : https://www.aequs.com/investor/. ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ ಅಂದರೆ ಅನುಕ್ರಮವಾಗಿ ಬಿಎಸ್‌ಇ ಲಿಮಿಟೆಡ್, ("ಬಿಎಸ್‌ಇ") ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ("ಎನ್‌ಎಸ್‌ಇ") ವೆಬ್‌ಸೈಟ್ www.bseindia.com ಮತ್ತು www.nseindia.com ನಲ್ಲಿ ಮತ್ತು ಕೆಫಿನ್ ಟೆಕ್‌ನ ವೆಬ್‌ಸೈಟ್ http://evoting.kfintech.com ರಲ್ಲಿಯೂ ಸಹ ದೊರೆಯುವುದು. ಡಿಪಾಸಿಟರಿಸ್‌ನಲ್ಲಿ ಯಾವ ಸದಸ್ಯರುಗಳ ಇ–ಮೇಲ್ ಐಡಿಗಳು ನೋಂದಣಿಯಾಗಿರುವುದಿಲ್ಲವೋ ಅಂತಹವರ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಲು ಮತ್ತು ಸದರಿ ನೋಟೀಸಿನಲ್ಲಿ ತಿಳಿಸಿರುವ ಠರಾವುಗಳಿಗೆ ಇ–ಮತದಾನ ಮಾಡಲು ಇ–ಮೇಲ್ ಐಡಿಗಳ ನೋಂದಣಿ ಪ್ರಕ್ರಿಯೆಯು ಈ ಕೆಳಕಂಡಂತಿರುವುದು

1. ಡಿಮ್ಯಾಟ್ ವಿಧಾನದಲ್ಲಿ ಹೊಂದಿರುವ ಷೇರುಗಳ ಬಗ್ಗೆ ಡಿಪಿಐಡಿ – ಕ್ಲೈಂಟ್ ಐಡಿ (16 ಅಂಕಿಗಳ ಡಿಪಿಐಡಿ + ಕ್ಲೈಂಟ್ ಐಡಿ ಅಥವಾ 16 ಅಂಕಿಗಳ ಫಲಾನುಭಾವಿಗಳ ಐಡಿ), ಹೆಸರು, ಕ್ರೂಢೀಕೃತ ಲೆಕ್ಕದ ವಿವರದ ಗ್ರಾಹಕರ ಮೂಲ ಪ್ರತಿ ಅಥವಾ ಪ್ಯಾನ್ (ಸ್ವಯಂ ಧೃಢೀಕೃತ ಸ್ಕಾನ್ ಮಾಡಿದ ಪ್ಯಾನ್ ಕಾರ್ಡಿನ ಪ್ರತಿ), ಆಧಾರ್ (ಸ್ವಯಂ ಧೃಢೀಕೃತ ಸ್ಕಾನ್ ಮಾಡಿದ ಆಧಾರ್ ಕಾರ್ಡಿನ ಪ್ರತಿ), ಅನ್ನು Investor.relations@aequs.com ಇಲ್ಲಿಗೆ ಒದಗಿಸುವಂತೆ ಕೋರಲಾಗಿದೆ.
2. ಪರ್ಯಾಯವಾಗಿ, ಸದಸ್ಯರು ಮೇಲೆ ತಿಳಿಸಿರುವ ದಾಖಲೆ ಪತ್ರಗಳನ್ನು ಒದಗಿಸುವ ಮೂಲಕ ಇ–ಮತದಾನಕ್ಕಾಗಿ ಯೂಸರ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಲು ಕೋರಿಕೆಯನ್ನು einward.ris@kfintech.com ಗೆ ಕಳುಹಿಸಬಹುದು.
3. ಹೆಸರು ಸೇರ್ಪಡೆಯಾಗಿರುವ ಕಂಪನಿಗಳು ಒದಗಿಸಿರುವ ಇ–ಮತದಾನದ ಸೌಲಭ್ಯದ ಬಗ್ಗೆ ದಿನಾಂಕ 9ನೇ ಡಿಸಂಬರ್ 2020ರ ಸೆಬಿ ಸುತ್ತೋಲೆಯ ಅನ್ವಯ ಡಿಮ್ಯಾಟ್ ವಿಧಾನದಲ್ಲಿ ಸೆಕ್ಯೂರಿಟಿಗಳನ್ನು ಹೊಂದಿರುವ ಪ್ರತಿ ಷೇರುದಾರರು ಡಿಪಾಸಿಟರೀಸ್ ಮತ್ತು ಡಿಪಾಸಿಟರಿ ಪಾರ್ಟಿಸಿಪೆಂಟ್‌ಗಳಲ್ಲಿ ನಿರ್ವಹಣೆ ಮಾಡಿರುವ ತಮ್ಮ ಡಿಮ್ಯಾಟ್ ಖಾತೆ ಮೂಲಕ ಮತ ಹಾಕಲು ಅವಕಾಶವಿರುವುದು. ಷೇರುದಾರರು ಇಮತದಾನದ ಸೌಲಭ್ಯ ಪಡೆಯಲು ತಮ್ಮ ಡಿಮ್ಯಾಟ್ ಖಾತೆಯಲ್ಲಿ ಅವರ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ಐಡಿಯನ್ನು ಸರಿಯಾಗಿ ಸಕ್ರಿಯಗೊಳಿಸಬೇಕಾಗುತ್ತದೆ.

ರಿಮೋಟ್ ಇ–ವೋಟಿಂಗ್ ಸೌಲಭ್ಯದ ಬಗೆ ್ಗ ಯಾವುದೇ ವಿಚಾರಣೆಗಳು/ಕುಂದುಕೊರತೆಗಳು/ವಿಚಾರಗಳು ಇದ ್ದಲ್ಲಿ https://evoting.kfintech.com ನ "ಡೌನ್‌ಲೋಡ್ಸ್" ವಿಭಾಗದಲ್ಲಿ ದೊರೆಯುವ ಸಾಮಾನ್ಯ ಪ್ರಶ್ನೆಗಳು (Frequently Asked Questions) (ಎಫ್‌ಎಕ್ಯೂಗಳು) ಮತ್ತು ಇ–ಮತದಾನ ಬಳಕೆದಾರರ ಕೈಪಿಡಿಯನ್ನು ಸದಸ್ಯರು ನೋಡಬಹುದು ಅಥವಾ ಶ್ರೀ ಎಸ್.ಪ್ರಸಾದ್‌ರವರನ್ನು evoting@kfintech.com ನಲ್ಲಿ ಸಂಪರ್ಕಿಸಬಹುದು. ಅಥವಾ ಕೆಫೆನ್ ಟೆಕ್‌ನ ಉಚಿತ ನಂ. 1–800–209–4001 ಗೆ ಕರೆ ಮಾಡಬಹುದು. ಅಂಚೆ ಮತಪತ್ರಗಳ ಮೂಲಕ ನಡೆದ ಇ–ಮತದಾನದ ಫಲಿತಾಂಶವನ್ನು ಈ ಮತದಾನ ಮುಕ್ತಾಯವಾದ ಎರಡು ಕಾರ್ಯದಿನಗಳೊಳಗೆ ಪ್ರಕಟಿಸಲಾಗುವುದು. ಫಲಿತಾಂಶಗಳ ಜೊತೆಗೆ ಪರಿಶೀಲಕರ ವರದಿಯನ್ನು ಕಂಪನಿಯ ವೆಬ್‌ಸೈಟ್ https://www.aequs.com/investor/. ನಲ್ಲಿ ಪ್ರಕಟಿಸಲಾಗುವುದು. ಠರಾವುಗಳು ಅಗತ್ಯವಾದ ಬಹುಮತದಿಂದ ಅಂಗೀಕಾರವಾದ ಪಕ್ಷದಲ್ಲಿ ಅದನ್ನು ದಿನಾಂಕ 31ನೇ ಜುಲೈ 2026ರ ಶುಕ್ರವಾರದಂದು ಅಂಗೀಕರಿಸಿರುವುದಾಗಿ ಭಾವಿಸಲಾಗುವುದು.

ತಮ್ಮ ವಿಶ್ವಾಸಿ,
ಎಕಸ್ ಲಿಮಿಟೆಡ್ ಪರವಾಗಿ
ಸಹಿ/–
ರವಿ ಮಲ್ಲಿಕಾರ್ಜುನ ಹೂಗಾರ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂಖ್ಯೆ: ಎ20823

ದಿನಾಂಕ: 02ನೇ ಜುಲೈ 2026
ಸ್ಥಳ: ಹತ್ತರಗಿ

ಗುರುತಿನ ಚೀಟಿಗಳು, ಪಾಸ್‌ಪೋರ್ಟ್ ಸೇರಿ ಮಹತ್ವದ ದಾಖಲೆಗಳ ವಶ

ಮಾನವ ಕಳ್ಳಸಾಗಣೆ 12 ಬಾಂಗ್ಲಾ ಪ್ರಜೆಗಳ ಸೆರೆ

ಬೆಂಗಳೂರು: ಪಶ್ಚಿಮ ಬಂಗಾಳದ ಗಡಿ ಮಾರ್ಗವಾಗಿ ಭಾರತ ಪ್ರವೇಶಿಸಿ, ನಗರದ ವಿವಿಧೆಡೆ ಅಕ್ರಮವಾಗಿ ನೆಲೆಸಿದ್ದಲ್ಲದೆ, ಮಾನವ ಕಳ್ಳಸಾಗಣೆ ಹಾಗೂ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ 12 ಮಂದಿ ಬಾಂಗ್ಲಾದೇಶಿ ಪ್ರಜೆಗಳನ್ನು ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬಾಣಸವಾಡಿ ಮತ್ತು ಹೆಣ್ಣೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕೆಲವು ವಿದೇಶಿ ಪ್ರಜೆಗಳು ಅಕ್ರಮವಾಗಿ ನೆಲೆಸಿ, ಮಾನವ ಕಳ್ಳಸಾಗಣೆ ನಡೆಸುತ್ತಿದ್ದಾರೆ ಎಂಬ ಖಚಿತ ಮಾಹಿತಿ ಸಿಸಿಬಿಯ ಮಹಿಳಾ ರಕ್ಷಣಾ ವಿಭಾಗಕ್ಕೆ ಲಭ್ಯವಾಗಿತ್ತು.

ಈ ಮಾಹಿತಿ ಆಧರಿಸಿ ಸಿಸಿಬಿ ಎಸಿಪಿ ಧರ್ಮೇಂದ್ರ ಅವರ ನೇತೃತ್ವದ ವಿಶೇಷ ತಂಡವು ಸುದೀರ್ಘ ಕಣ್ಗಾವಲು ಇರಿಸಿತ್ತು. ಇವರು ಬಾಂಗ್ಲಾದೇಶದಿಂದ ಮಹಿಳೆಯರನ್ನು ಕರೆತಂದು ನಗರದಲ್ಲಿ ವೇಶ್ಯಾವಾಟಿಕೆ ದಂಧೆಯಲ್ಲಿ ತೊಡಗಿಸಿದ್ದಾರೆ ಎಂಬ ಅಂಶವು ಪ್ರಾಥಮಿಕ ತನಿಖೆಯಲ್ಲಿ ದೃಢಪಟ್ಟಿತ್ತು. ಪೊಲೀಸರು ನಡೆಸಿದ ಅನಿರೀಕ್ಷಿತ ದಾಳಿಯ ಸಂದರ್ಭದಲ್ಲಿ, ಅಕ್ರಮವಾಗಿ ನೆಲೆಸಿದ್ದ 12 ಮಂದಿಯನ್ನು ವಶಕ್ಕೆ ಪಡೆಯಲಾಗಿದೆ.

ಇವರಲ್ಲಿ ಸುಹೇಗ್ ಮೊನ್ಸೂರಲಿ (29) ಮತ್ತು ಮುಕಲ್ (32) ಎಂಬುವರನ್ನು ಬಂಧಿಸಲಾಗಿದೆ. ಉಳಿದ 10 ಮಂದಿ ಮಹಿಳೆಯರನ್ನು ರಕ್ಷಿಸಲಾಗಿದ್ದು, ಅವರನ್ನು ವಿದೇಶಿ ಪ್ರಾದೇಶಿಕ ನೋಂದಣಿ ಕಚೇರಿಯ ಅಧಿಕಾರಿಗಳ ಸುಪರ್ದಿಗೆ ಒಪ್ಪಿಸಲಾಗಿದೆ. ಆರೋಪಿಗಳ ವಶದಿಂದ ಬಾಂಗ್ಲಾದೇಶದ ಗುರುತಿನ ಚೀಟಿಗಳು, ಪಾಸ್‌ಪೋರ್ಟ್ ಹಾಗೂ ಇತರ ಮಹತ್ವದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ.

ಅಕ್ರಮ ವಲಸೆಯ ಜಾಲ ಮತ್ತು ಕಾರ್ಯವೈಖರಿ: ಪೊಲೀಸರ ವಿಚಾರಣೆಯ ವೇಳೆ ಬಂಧಿತ ಆರೋಪಿಗಳು ಕಂಗೆಡಿಸುವ ಸಂಗತಿಗಳನ್ನು ಬಹಿರಂಗಪಡಿಸಿದ್ದಾರೆ. ಸುಮಾರು ಎರಡು ತಿಂಗಳ ಹಿಂದೆ ಪಶ್ಚಿಮ ಬಂಗಾಳದ ಗಡಿಭಾಗದ ಮೂಲಕ ಇವರು ಭಾರತಕ್ಕೆ ಪ್ರವೇಶಿಸಿದ್ದಾರೆ. ಗಡಿಯಲ್ಲಿರುವ ಕೆಲವು ಮಧ್ಯವರ್ತಿಗಳಿಗೆ ಹಣವನ್ನು ನೀಡಿ, ಯಾವುದೇ ಸರಿಯಾದ ದಾಖಲೆಗಳಿಲ್ಲದೆ ಗಡಿ ದಾಟಿದ್ದಾರೆ.

ಗಡಿಪಾರು ಪ್ರಕ್ರಿಯೆ ಚುರುಕು

ವಶಪಡಿಸಿಕೊಳ್ಳಲಾದ 12 ಮಂದಿಯ ದಾಖಲೆಗಳನ್ನು ಪರಿಶೀಲಿಸಿದಾಗ, ಅವರೆಲ್ಲರೂ ಅಕ್ರಮವಾಗಿ ದೇಶವನ್ನು ಪ್ರವೇಶಿಸಿರುವುದು ಸಾಬೀತಾಗಿದೆ. ವಿದೇಶಿಯರ ಕಾಯಿದೆಯಡಿ ಇವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಸದ್ಯ ಇವರನ್ನು ಎಫ್‌ಆರ್‌ಆರ್‌ಒ ಅಧಿಕಾರಿಗಳ ಮೂಲಕ ಸ್ವದೇಶಕ್ಕೆ ಗಡಿಪಾರು ಮಾಡುವ ಪ್ರಕ್ರಿಯೆ ಚುರುಕುಗೊಳಿಸಲಾಗಿದೆ. ಅವರ ಹೇಳಿಕೆಯನ್ನು ಅಧಿಕೃತವಾಗಿ ದಾಖಲಿಸಿಕೊಳ್ಳಲಾಗಿದ್ದು, ಈ ಜಾಲಕ್ಕೆ ಬೆಂಬಲ ನೀಡುತ್ತಿರುವ ಇತರ ಮಧ್ಯವರ್ತಿಗಳ ಕುರಿತು ತನಿಖೆ ಮುಂದುವರಿದಿದೆ. ಬೆಂಗಳೂರು ನಗರದಲ್ಲಿ ಇತ್ತೀಚಿನ ದಿನಗಳಲ್ಲಿ ಅಕ್ರಮ ವಲಸಿಗರ ಸಂಖ್ಯೆ ಹೆಚ್ಚಾಗುತ್ತಿದ್ದು, ಇವರು ಅಪರಾಧ ಚಟುವಟಿಕೆಗಳಲ್ಲಿ ತೊಡಗುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಮನೆ ಮಾಲೀಕರು ತಮ್ಮ ಮನೆಗಳನ್ನು ಬಾಡಿಗೆಗೆ ನೀಡುವಾಗ ಬಾಡಿಗೆದಾರರ ಮೂಲ ದಾಖಲೆಗಳನ್ನು ಕಡ್ಡಾಯವಾಗಿ ಪರಿಶೀಲಿಸಬೇಕು ಮತ್ತು ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು ಎಂದು ಸಿಸಿಬಿ ಅಧಿಕಾರಿಗಳು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಅನುಮಾನಾಸ್ಪದ ಚಟುವಟಿಕೆಗಳು ಕಂಡುಬಂದಲ್ಲಿ ಕೂಡಲೇ ಪೊಲೀಸರಿಗೆ ಮಾಹಿತಿ ನೀಡುವಂತೆ ಸೂಚಿಸಲಾಗಿದೆ.

ಕಳೆದ ಒಂದು ತಿಂಗಳಿನಿಂದ ಬೆಂಗಳೂರಿನಲ್ಲಿ ಬಾಡಿಗೆ ಮನೆಗಳಲ್ಲಿ ನೆಲೆಸಿದ್ದ ಇವರು, ಸಾಮಾಜಿಕ ಜಾಲತಾಣಗಳನ್ನು ಬಳಸಿ ತಮ್ಮ ದಂಧೆ ವಿಸ್ತರಿಸಿದ್ದರು. ತಮ್ಮ ಜಾಲದ ಮೂಲಕ ಗ್ರಾಹಕರನ್ನು ಆಕರ್ಷಿಸಲು ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಮಹಿಳೆಯರ ಫೋಟೋಗಳನ್ನು ಹಂಚಿಕೊಳ್ಳುತ್ತಿದ್ದರು. ಪರಿಚಯಸ್ಥರ ಮೂಲಕ ಮಾತ್ರ ಗ್ರಾಹಕರನ್ನು ಸಂಪರ್ಕಿಸುವ ಮೂಲಕ ಪೊಲೀಸರ ಕಣ್ಣಿಗೆ ಮಣ್ಣೆರಚಲು ಪ್ರಯತ್ನಿಸುತ್ತಿದ್ದರು ಎಂಬುದು ತನಿಖೆಯಿಂದ ತಿಳಿದುಬಂದಿದೆ.

subex
New Possibilities. Now Possible.

ಸುಬೆಕ್ಸ್ ಲಿಮಿಟೆಡ್
(ಸಿಐಎನ್: L85110KA1994PLC016663)
ನೋಂದಾಯಿತ ಕಛೇರಿ: ಪ್ರಿಟೆಕ್ ಪಾರ್ಕ್ – ಎಸ್‌ಇಝೆಡ್, ಬ್ಲಾಕ್–09, 4ನೇ ಮಹಡಿ, ಬಿ ವಿಂಗ್, ಸರ್ವೇ ನಂ. 51–64/4, ಹೊರವರ್ತುಲ ರಸ್ತೆ, ಬೆಳ್ಳಂದೂರು ವಿಲೇಜ್, ವರ್ತೂರು ಹೋಬಳಿ, ಬೆಂಗಳೂರು, ಕರ್ನಾಟಕ, ಭಾರತ–560103 ದೂರವಾಣಿ: 080 3745 1377
ಇಮೇಲ್: investorrelations@subex.com ಜಾಲತಾಣ: www.subex.com

ವಿಡಿಯೋ ಕಾನ್ಫರೆನ್ಸ್ / ಇತರೆ ದೃಶ್ಯಶ್ರಾವ್ಯ ಮಾಧ್ಯಮದ ಮೂಲಕ ನಡೆಸಲಾಗುವ 32ನೇ ವಾರ್ಷಿಕ ಮಹಾಸಭೆಯ ಸೂಚನೆ ಹಾಗೂ ರಿಮೋಟ್ ಇ–ಮತದಾನ

ಸಬೆಕ್ಸ್ ಲಿಮಿಟೆಡ್ (**'ಕಂಪನಿ'**) ಸದಸ್ಯರ **ಮೂವತ್ತೆರಡನೇ (32ನೇ) ವಾರ್ಷಿಕ ಮಹಾಸಭೆಯು** ('ಎಜಿಎಂ') **ಮಂಗಳವಾರ, ಆಗಸ್ಟ್ 04, 2026 ರಂದು ಮಧ್ಯಾಹ್ನ 2.00 ಗಂಟೆಗೆ (ಐಎಸ್‌ಟಿ)** ವಿಡಿಯೋ ಕಾನ್ಫರೆನ್ಸ್/ಇತರೆ ದೃಶ್ಯಶ್ರಾವ್ಯ ಮಾಧ್ಯಮದ ಮೂಲಕ ("ವಿಸಿ / ಒಎವಿಎಂ") ನಡೆಯಲಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ಈ ಸಭೆಯನ್ನು ದಿನಾಂಕ ಸೆಪ್ಟೆಂಬರ್ 22, 2025 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025 ಮತ್ತು ಈ ವಿಷಯದ ಕುರಿತು ಈ ಹಿಂದೆ ಹೊರಡಿಸಲಾದ ಸುತ್ತೋಲೆಗಳು ('ಎಮ್‌ಸಿಎ ಸುತ್ತೋಲೆಗಳು') ಹಾಗೂ ಸೆಬಿ ಕಾಲಕಾಲಕ್ಕೆ ಹೊರಡಿಸಿದ ಸುತ್ತೋಲೆಗಳಿಗೆ (ಇನ್ನು ಮುಂದೆ ಜಂಟಿಯಾಗಿ 'ಸುತ್ತೋಲೆಗಳು' ಎಂದು ಕರೆಯಲಾಗುತ್ತದೆ) ಅನುಗುಣವಾಗಿ, ಮತ್ತು ಕಂಪನಿಗಳ ಕಾಯ್ದೆ, 2013 ('ಕಾಯ್ದೆ') ಹಾಗೂ ಸೆಬಿ (ಆಭಾರಗಳು ಮತ್ತು ಪ್ರಕಟಪಡಿಸುವಿಕೆಯ ಅಗತ್ಯತೆಯ ಸೇರ್ಪಡೆ) ರೆಗ್ಯುಲೇಶನ್ಸ್, 2015 ಮತ್ತು ಇತರ ಅನ್ವಯವಾಗುವ ಕಾನೂನುಗಳ ನಿಬಂಧನೆಗಳ ಪ್ರಕಾರ, 32ನೇ ಎಜಿಎಂ ಕರೆಯುವ ಸೂಚನೆಯಲ್ಲಿ ತಿಳಿಸಲಾದ ವ್ಯವಹಾರಗಳನ್ನು ನಿರ್ವಹಿಸಲು ನಡೆಸಲಾಗುತ್ತಿದೆ.

ಹಣಕಾಸು ವರ್ಷ 2025–26ರ ವಾರ್ಷಿಕ ವರದಿಯೊಂದಿಗೆ 32ನೇ ಎಜಿಎಂ ಸೂಚನೆಯನ್ನು, ಮೇಲಿನ ಸುತ್ತೋಲೆಗಳಿಗೆ ಅನುಗುಣವಾಗಿ ಕಂಪನಿ/ರಿಜಿಸ್ಟ್ರಾರ್ ಮತ್ತು ಶೇರ್ ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) / ಡಿಪಾಸಿಟರಿ ಪಾರ್ಟಿಸಿಪೆಂಟ್ಸ್ (ಗಳ) ಬಳಿ ಇಮೇಲ್ ವಿಳಾಸವನ್ನು ನೋಂದಾಯಿಸಿರುವ ಎಲ್ಲಾ ಶೇರುದಾರರಿಗೆ ಸಕಾಲದಲ್ಲಿ ವಿದ್ಯುನ್ಮಾನ ಮೂಲಕ ಕಳುಹಿಸಲಾಗುವುದು. ಎಜಿಎಂ ಸೂಚನೆ ಮತ್ತು ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ https://www.subex.com/investors/shareholder-services/ ನಲ್ಲಿ ಮತ್ತು ಕಂಪನಿಯ ಶೇರುಗಳು ಪಟ್ಟಿ ಮಾಡಲ್ಪಟ್ಟಿರುವ ಸ್ಟಾಕ್ ಎಕ್ಸ್ಚೇಂಜ್‌ಗಳ ವೆಬ್‌ಸೈಟ್‌ಗಳಾದ ಬಿಎಸ್‌ಇ ಲಿಮಿಟೆಡ್ (www.bseindia.com) ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (www.nseindia.com) ಹಾಗೂ ಎನ್‌ಎಸ್‌ಡಿಎಲ್ ವೆಬ್‌ಸೈಟ್ www.evoting.nsdl.com ನಲ್ಲಿ ಲಭ್ಯವಿರುತ್ತದೆ. ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರಿಗೆ, ಸಂಪೂರ್ಣ ವಾರ್ಷಿಕ ವರದಿ ಮತ್ತು ಎಜಿಎಂ ಸೂಚನೆಯ ವಿವರಗಳನ್ನು ಹೊಂದಿರುವ ವೆಬ್‌ಲಿಂಕ್ ಅಂದರೆ https://www.subex.com/investors/shareholder-services/ ಅನ್ನು ಒಳಗೊಂಡಿರುವ ಪತ್ರವನ್ನು ಕಂಪನಿ/ಡಿಪಾಸಿಟರಿ/ಆರ್‌ಟಿಎ ದಾಖಲೆಗಳಲ್ಲಿ ನೋಂದಾಯಿಸಲಾದ ವಿಳಾಸಕ್ಕೆ ಕಳುಹಿಸಲಾಗುವುದು.

ಕಂಪನಿಯು ಎಜಿಎಂ ಸಮಯದಲ್ಲಿ ರಿಮೋಟ್ ಇ–ಮತದಾನ ಸೌಲಭ್ಯ ಹಾಗೆಯೇ ಇ–ಮತದಾನ ಸೌಲಭ್ಯವನ್ನೂ ಒದಗಿಸುತ್ತಿದೆ. ರಿಮೋಟ್ ಇ–ಮತದಾನ ಪ್ರಕ್ರಿಯೆಯು ಶುಕ್ರವಾರ, ಜುಲೈ 31, 2026 ರಂದು ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗಿ ಸೋಮವಾರ, ಆಗಸ್ಟ್ 03, 2026 ರಂದು ಸಂಜೆ 5.00 ಗಂಟೆಗೆ (ಐಎಸ್‌ಟಿ) ಮುಕ್ತಾಯಗೊಳ್ಳುತ್ತದೆ ಮತ್ತು ಅದರ ನಂತರ ರಿಮೋಟ್ ಇ–ಮತದಾನ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ಸದಸ್ಯರು ಎಜಿಎಂ ಸಮಯದಲ್ಲಿ ಇ–ಮತದಾನ ಮೂಲಕವೂ ತಮ್ಮ ಮತವನ್ನು ಚಲಾಯಿಸಬಹುದು. ರಿಮೋಟ್ ಇ–ಮತದಾನ ಮತ್ತು ಎಜಿಎಂನಲ್ಲಿ ಇ–ಮತದಾನ ಮಾಡುವ ವಿವರವಾದ ವಿಧಾನವನ್ನು ಎಜಿಎಂ ಸೂಚನೆಯಲ್ಲಿ ನೀಡಲಾಗುವುದು. ಸದಸ್ಯರೊಬ್ಬರು ರಿಮೋಟ್ ಇ–ಮತದಾನ ಮೂಲಕ ತಮ್ಮ ಮತದಾನದ ಹಕ್ಕನ್ನು ಚಲಾಯಿಸಿದ ನಂತರವೂ 32ನೇ ಎಜಿಎಂನಲ್ಲಿ ಭಾಗವಹಿಸಬಹುದು, ಆದರೆ ಸಭೆಯಲ್ಲಿ ಮತ್ತೊಮ್ಮೆ ಮತ ಚಲಾಯಿಸಲು ಅವರಿಗೆ ಅವಕಾಶವಿರುವುದಿಲ್ಲ.

ಇದಲ್ಲದೆ, ಇ–ಮತದಾನ/ಎಜಿಎಂನಲ್ಲಿ ಭಾಗವಹಿಸಲು ಅರ್ಹ ಶೇರುದಾರರನ್ನು ನಿರ್ಧರಿಸುವ ಕಟ್–ಆಫ್ ದಿನಾಂಕ ಮಂಗಳವಾರ, ಜುಲೈ 28, 2026 ಆಗಿದೆ. ಎಜಿಎಂ ಕರೆಯುವ ಸೂಚನೆಯನ್ನು ಕಳುಹಿಸಿದ ನಂತರ ಮತ್ತು ಕಟ್–ಆಫ್ ದಿನಾಂಕದವರೆಗೆ ಅಂದರೆ ಮಂಗಳವಾರ, ಜುಲೈ 28, 2026 ರೊಳಗೆ ಕಂಪನಿಯ ಶೇರುಗಳನ್ನು ಖರೀದಿಸಿ ಕಂಪನಿಯ ಶೇರುದಾರರಾಗುವ ಯಾವುದೇ ವ್ಯಕ್ತಿಯು, 32ನೇ ಎಜಿಎಂ ಸೂಚನೆಯಲ್ಲಿ ಒದಗಿಸಲಾದ ವಿಧಾನದ ಮೂಲಕ ತಮ್ಮ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಅನ್ನು ಪಡೆಯಬಹುದು.

ಸದಸ್ಯರು (ಭೌತಿಕ/ವಿದ್ಯುನ್ಮಾನ ಎರಡೂ ರೂಪದಲ್ಲಿ ಶೇರುಗಳನ್ನು ಹೊಂದಿರುವವರು) ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಲು ಪ್ರೋತ್ಸಾಹಿಸಲಾಗುತ್ತದೆ. ಇಮೇಲ್ ವಿಳಾಸ, ಬ್ಯಾಂಕ್ ಖಾತೆ ವಿವರಗಳು ಮತ್ತು/ಅಥವಾ ಇತರ ಕೆವೈಸಿ ವಿವರಗಳ ನೋಂದಣಿ ವಿಧಾನ, ಸೂಚನೆ ಮತ್ತು ವಾರ್ಷಿಕ ವರದಿಯನ್ನು ಪಡೆಯುವುದು, ರಿಮೋಟ್ ಇ–ಮತದಾನದ ಸೂಚನೆಗಳು, ಎಜಿಎಂನಲ್ಲಿ ಇ–ಮತದಾನ ಮತ್ತು/ಅಥವಾ ಇ–ಮತದಾನಕ್ಕಾಗಿ ಯೂಸರ್ ಐಡಿ/ಪಾಸ್‌ವರ್ಡ್ ಪಡೆಯುವುದು ಮತ್ತು ಪಾವತಿಸದ/ಅನ್‌ಕ್ಲೈಮ್ ಮಾಡದ ಲಾಭಾಂಶವನ್ನು ಸ್ವೀಕರಿಸಲು ಬ್ಯಾಂಕ್ ಖಾತೆ ವಿವರಗಳನ್ನು ನವೀಕರಿಸುವ ಪ್ರಕ್ರಿಯೆಯನ್ನು ಎಜಿಎಂ ಸೂಚನೆಯಲ್ಲಿ ಉಲ್ಲೇಖಿಸಲಾಗುವುದು ಎಂಬುದನ್ನು ಸದಸ್ಯರು ಗಮನಿಸಬಹುದು.

ಮೇಲಿನ ಮಾಹಿತಿಯನ್ನು ಕಂಪನಿಯ ಎಲ್ಲಾ ಸದಸ್ಯರ ಮಾಹಿತಿ ಮತ್ತು ಪ್ರಯೋಜನಕ್ಕಾಗಿ ಹಾಗೂ ಸದರಿ ಸುತ್ತೋಲೆಗಳ ಅನುಸರಣೆಗಾಗಿ ಹೊರಡಿಸಲಾಗುತ್ತಿದೆ.

ಸುಬೆಕ್ಸ್ ಲಿಮಿಟೆಡ್ ಪರವಾಗಿ
ಸಹಿ/–
ರಾಮು ಅಕ್ಕಿಲಿ
ಕಂಪನಿ ಕಾರ್ಯದರ್ಶಿ ಮತ್ತು ಕಂಪ್ಲೈನ್ಸ್ ಅಧಿಕಾರಿ
ಸ್ಥಳ : ಬೆಂಗಳೂರು
ದಿನಾಂಕ : ಜುಲೈ 1, 2026

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HLLABGM00551826 1. ಮಂಗಲ್ ಸಿಂಗ್ ಮಾಲೀಕ ಕಿಶನ್ ಸ್ವೀಟ್ಸ್ 2. ಪುಷ್ಪದೇವಿ ಮಂಗಲ್ ಸಿಂಗ್ ಅಲಿಯಾಸ್ ಎಂ ಪುಷ್ಪದೇವಿ 3. ಪವನ್ ಸಿಂಗ್ ಎಂ	''ಶ್ರೀ ತುಳಸಿ ಪ್ಯಾರಡೈಸ್'' ಎಂಬ ಹೆಸರಿನ ವಸತಿ ಸಂಕೀರ್ಣದ ಪ್ರಥಮ ಮಹಡಿಯ ದಕ್ಷಿಣ ಭಾಗದಲ್ಲಿರುವ FF-1 ಸಂಖ್ಯೆಯ ವಸತಿ ಅಪಾರ್ಟ್‌ಮೆಂಟ್, ಒಟ್ಟು 1,220 ಚದರ ಅಡಿ ಸೂಪರ್ ಬಿಲ್ಟ್-ಅಪ್ ವಿಸ್ತೀರ್ಣವನ್ನು ಹೊಂದಿದ್ದು, ಅದರೊಂದಿಗೆ ನೆಲಮಾಳಿಗೆಯಲ್ಲಿ ಒದಗಿಸಲಾದ ಒಂದು ಕಾರು ಪಾರ್ಕಿಂಗ್ ಸ್ಥಳ ಸೇರಿದಂತೆ, ಹಾಗೂ ಸದರಿ ಸಂಕೀರ್ಣದ ಆಸ್ತಿಯಲ್ಲಿ 295 ಚದರ ಅಡಿ ಅವಿಭಜಿತ ಪಾಲು, ಹಕ್ಕು, ಮಾಲೀಕತ್ವ, ಶೀರ್ಷಿಕೆ, ಹಿತಾಸಕ್ತಿ ಹಾಗೂ ಸ್ವಾಮ್ಯ ಹಕ್ಕಿನೊಂದಿಗೆ, ಮಹಾನಗರ ಪಾಲಿಕೆ ಸಂಖ್ಯೆ 374/5-2, ವಾರ್ಡ್ ಸಂಖ್ಯೆ 53, ಹಳೆಯ ಸಂಖ್ಯೆ 374/5 (ಬಿಡಿಎ ಸಂಖ್ಯೆ 374) ಹಾಗೂ ಸಂಖ್ಯೆ 11/47/5/1 ಹೊಂದಿರುವ, 9ನೇ ಅಡ್ಡರಸ್ತೆ, ಸುಂಕೇನಹಳ್ಳಿ, ಅಡ್ಜೆಸೆಂಟ್ ಸ್ಟ್ರೀಟ್, ಬೆಂಗಳೂರು, ಬಿಬಿಎಂಪಿ ವಾರ್ಡ್ ಸಂಖ್ಯೆ 53, ಪಿನ್ ಕೋಡ್ - 560019, ಕರ್ನಾಟಕದಲ್ಲಿ ಇರುವ ಆಸ್ತಿಯಲ್ಲಿ ನೆಲೆಗೊಂಡಿದೆ ಹಾಗೂ ಈ ಭೂಮಿಯ ಎಲ್ಲಾ ಭಾಗಗಳು.	03.06.2026	ದಿನಾಂಕ 11.06.2026 ರಂತೆ ರೂ. 50,37,448.67/- (ರೂಪಾಯಿ ಐವತ್ತು ಲಕ್ಷ ಮೂವತ್ತ ಏಳು ಸಾವಿರದ ನಾಲ್ಕು ನೂರ ನಲವತ್ತ ಎಂಟು ಮತ್ತು ಪೈಸೆ ಅರವತ್ತ ಏಳು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಅಧಿಕೃತ ಅಧಿಕಾರಿ
ಸಮ್ಮಾನ್ ಫಿನ್‌ಸರ್ವ್ ಲಿಮಿಟೆಡ್
ಸ್ಥಳ : ಬೆಂಗಳೂರು
(ಹಿಂದೆ ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ರೇಣುಕಾಸ್ವಾಮಿ ಕೊಲೆ: ಸಾಕ್ಷ್ಯ ತಿರುಚಲು ಯತ್ನಿಸಿದರೆ ಕ್ರಮ

ಬೆಂಗಳೂರು: ನಟ ದರ್ಶನ್ ಆರೋಪಿಯಾಗಿರುವ ಚಿತ್ರದುರ್ಗದ ರೇಣುಕಾ ಸ್ವಾಮಿ ಕೊಲೆ ಪ್ರಕರಣದ ಪ್ರಾಸಿಕ್ಯೂಷನ್ ಸಾಕ್ಷಿಯ (ತನಿಖಾಧಿಕಾರಿ ಪಟ್ಟಿ ಮಾಡಿರುವ ಸಾಕ್ಷಿ) ಮೇಲೆ ಪ್ರಭಾವ ಬೀರುವ ಮತ್ತು ಸಾಕ್ಷ್ಯ ತಿರುಚುವ ಯತ್ನ ನಡೆದಿದೆ. ಈ ವಿಚಾರವನ್ನು ಒತ್ತಡಕ್ಕೆ ಒಳಗಾದ ಸಾಕ್ಷಿಯೇ ನ್ಯಾಯಾಲಯದ ಮುಂದೆ ಬಹಿರಂಗಪಡಿಸಿದ್ದು, ಅದನ್ನು ಗಂಭೀರವಾಗಿ ಪರಿಗಣಿಸಿರುವ ನಗರದ 58ನೇ ಹೆಚ್ಚುವರಿ ಸಿಟಿ ಸಿವಿಲ್ ಹಾಗೂ ಸತ್ರ ನ್ಯಾಯಾಲಯವು ಪ್ರಕರಣಕ್ಕೆ ಸಂಬಂಧಿಸಿದ ಅಥವಾ ಸಂಬಂಧಪಡದ ವ್ಯಕ್ತಿಯಾಗಲಿ ಯಾವುದೇ ರೀತಿಯಲ್ಲಿ ಸಾಕ್ಷ್ಯ ತಿರುಚಲು ಪ್ರಯತ್ನಿಸಿದರೆಅವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದೆ. ಅಲ್ಲದೇ, ಸಾಕ್ಷಿಗೆ ಅಗತ್ಯ ರಕ್ಷಣೆ ಒದಗಿಸುವಂತೆ ಪ್ರಕರಣದ ತನಿಖಾಧಿಕಾರಿಗಳಿಗೆ ನಿರ್ದೇ ಶನ ನೀಡಿತು.

ರೇಣುಕಾಸ್ವಾಮಿ ಕೊಲೆ ಪ್ರಕರಣದ ಪ್ರಾಸಿಕ್ಯೂ ಷನ್ ಸಾಕ್ಷಿಗಳ ವಿಚಾರಣೆ ಯನ್ನು ನ್ಯಾಯಾಲಯ ಮಂಗಳವಾರವೂ ಮುಂದುವರಿಸಿತು. ಈ ವೇಳೆ ನ್ಯಾಯಾಲ ಯವು 49ನೇ ಸಾಕ್ಷಿಯಾಗಿರುವ ಚಿತ್ರದುರ್ಗದ ದುರ್ಗಾ ಬಾರ್ ರೆಸ್ಟೋರೆಂಟ್‌ನ ಕ್ಯಾಷಿಯರ್ ಸಂದೀಪ್ ಮಂಗಳವಾರ ವಿಚಾರಣೆಗೆ ಹಾಜರಾಗಿದ್ದರು. ಆತನನ್ನು ಪ್ರಾಸಿಕ್ಯೂಷನ್ ಪರ ವಿಶೇಷ ಸರಕಾರಿ ಅಭಿಯೋಜಕ ಪಿ.ಪ್ರಸನ್ನ ಕುಮಾರ್, ಮುಖ್ಯ ಪರೀಕ್ಷೆಗೆ ಸಂದೀಪ್ ಅವರನ್ನು ಗುರಿಪಡಿಸಿದರು. ಕಟಕಟೆಯಲ್ಲಿ ನಿಂತು ಸತ್ಯ ನುಡಿಯುವುದಾಗಿ ಪ್ರಮಾಣ ಮಾಡಿದ ನಂತರ, ತಾನು ಒಂದು ವಿಷಯ ುವನ್ನು ನ್ಯಾಯಾಲಯಕ್ಕೆ ಹೇಳಲು ಬಯಸಿದ್ದೇನೆ. ಅದಕ್ಕೆ ಅನುಮತಿ ನೀಡಬೇಕು ಎಂದು ಸಂದೀಪ್ ಮನವಿ ಮಾಡಿದರು. ಅದಕ್ಕೆ ನ್ಯಾಯಾಲಯವು ಅನುಮತಿ ನೀಡಿತು.

ಆಗ ಸಂದೀಪ್, ನಮಗೆ ಪರಿಚಯವಿರುವ ಆಕರ್ಷ್ ಎಂಬ ವ್ಯಕ್ತಿಯ ಮೂಲಕ ದೂರವಾಣಿ ಮೂಲಕ ಮಾತನಾಡಿದ ಕೆಲ ವ್ಯಕ್ತಿಗಳು, ಪ್ರಕರಣಕ್ಕೆ ಸಂಬಂಧಿಸಿದ ನೀಡುವ ಸಾಕ್ಷ್ಯ ಹೇಳಿಕೆಗೆ ಸಂಬಂಧಿಸಿದ ಮಾಹಿತಿ ಕೇಳಿದ್ದಾರೆ. ಹಾಗೆಯೇ, ತಾವು ಹೇಳಿದಂತೆ ಸಾಕ್ಷ್ಯ ನುಡಿಯ ಬೇಕು ಎಂಬುದಾಗಿ ನನಗೆ ಸೂಚಿಸಿದರು ಎಂದು ಹೇಳಿದರು. ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಾಧೀಶರಾದ ಸುಜಾತಾ ಅವರು, ಆಕರ್ಷ್ ಎಂಬಾತನ ಮೂಲಕ ಕೆಲ ಅಪರಿಚಿತ ವ್ಯಕ್ತಿಗಳು ಸಂದೀಪ್ ಸಾಕ್ಷಿಯ ಹೇಳಿಕೆ ತಿರುಚಲು ಪ್ರಯತ್ನಿಸಿದ್ದಾರೆ ಎಂಬುದು ತೋರುತ್ತದೆ. ತಾನು ನೀಡಿದ ಹೇಳಿಕೆ ಕುರಿತಂತೆ ಸಂದೀಪ್ ಪ್ರತ್ಯೇಕ ಪ್ರಮಾಣ ಪತ್ರ ಸಲ್ಲಿಸಬೇಕು. ಅವರು ಪ್ರಮಾಣ ಪತ್ರ ಸಲ್ಲಿಸಿದ ನಂತರ ಸಂಬಂಧಪಟ್ಟ ವ್ಯಕ್ತಿಗಳ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಆದೇಶ ಬರೆಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಡಿವೈಡರ್‌ಗೆ ಲಾರಿ ಡಿಕ್ಕಿ ಆಟೋ ಜಖಂ

ಬೆಂಗಳೂರು: ಕಬ್ಬಿಣದ ರಾಡ್‌ಗಳನ್ನು ಸಾಗಿಸುತ್ತಿದ್ದ ಲಾರಿಯೊಂದು ಬ್ರೇಕ್ ಫೇಲ್ ಆಗಿ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ ಹೊಡೆದು, ಬಳಿಕ ರಸ್ತೆ ಬದಿಯ ಅಂಗಡಿ ಹಾಗೂ ಆಟೋಗೆ ಗುದ್ದಿದ ಘಟನೆ ಮಧ್ಯರಾತ್ರಿ ಸ್ಯಾಟಲೈಟ್ ಬಸ್ ನಿಲ್ದಾಣದ ಬಳಿ ನಡೆದಿದೆ.ಕೆ. ಆರ್.ಪುರದಿಂದ ಕೆಂಗೇರಿಯತ್ತ ಕಬ್ಬಿಣದ ರಾಡ್‌ಗಳನ್ನು ಸಾಗಿಸುತ್ತಿದ್ದ ಲಾರಿ, ಸ್ಯಾಟಲೈಟ್ ಬಸ್ ನಿಲ್ದಾಣದ ಸಮೀಪ ಬರುತ್ತಿದ್ದಂತೆ ಏಕಾಏಕಿ ಬ್ರೇಕ್ ಫೇಲಾಗಿದ್ದು, ಚಾಲಕನ ನಿಯಂತ್ರಣ ತಪ್ಪಿದೆ. ಪರಿಣಾಮ ಲಾರಿ ಮೊದಲು ಡಿವೈಡರ್‌ಗೆ ಡಿಕ್ಕಿ ಹೊಡೆದು, ಬಳಿಕ ರಸ್ತೆ ಬದಿಯಲ್ಲಿದ್ದ ಅಂಗಡಿ ಹಾಗೂ ಅಲ್ಲೇ ನಿಂತಿದ್ದ ಆಟೋಗೆ ಗುದ್ದಿದೆ. ಅವಘಡದಲ್ಲಿ ಆಟೋ ಚಾಲಕನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಸ್ಥಳದಲ್ಲೇ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಬ್ಯಾಟರಾಯನಪುರ ಸಂಚಾರಿ ಪೊಲೀಸರು ಸ್ಥಳಕ್ಕೆ ಆಗಮಿಸಿ ಲಾರಿ ತೆರವು ಕಾರ್ಯಾಚರಣೆ ನಡೆಸಿದ್ದು, ಕೆಲಕಾಲ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಅವಘಡದ ಕುರಿತು ತನಿಖೆ ಮುಂದುವರಿಸಿದ್ದಾರೆ.

ವೈದ್ಯರ ದಿನಾಚರಣೆ ದಿನ ಆಸ್ಪತ್ರೆಗೆ ಚಾಲನೆ

ಬೆಂಗಳೂರು: ಆರೋಗ್ಯ ಸೇವೆಯಲ್ಲಿ ವಿಶ್ವಾಸ, ಪಾರದರ್ಶಕತೆ ಮತ್ತು ಸಹಾನುಭೂತಿ ಮರುಸ್ಥಾಪಿಸುವ ಉದ್ದೇಶದೊಂದಿಗೆ ವೈದ್ಯರ ನೇತೃತ್ವದ ಆಸ್ಪತ್ರೆಗಳ ಜಾಲವಾದ ಮ್ಯಾಗ್ನೆಟ್ ಹಾಸ್ಪಿಟಲ್ಸ್ ಅಧಿಕೃತವಾಗಿ ಕಾರ್ಯಾರಂಭ ಮಾಡಿತು.ಪ್ರತಿಷ್ಠಿತ ಆರೋಗ್ಯ ಸೇವಾ ಕ್ಷೇತ್ರದ ತಜ್ಞ ದಿನೇಶ್ ಮಾಧವನ್ ಹಾಗೂ ಆರೋಗ್ಯ ಕ್ಷೇತ್ರದ ಉದ್ಯಮಿಗಳ ಸಹಯೋಗದಲ್ಲಿ ಸ್ಥಾಪಿತವಾಗಿರುವ ಮ್ಯಾಗ್ನೆಟ್ ಹಾಸ್ಪಿಟಲ್ಸ್, ವೈದ್ಯರು ಮತ್ತು ನರ್ಸ್‌ಗಳು ಕೇವಲ ಆರೋಗ್ಯ ಸೇವೆ ಒದಗಿಸುವವರಾಗಿರದೇ, ಆಸ್ಪತ್ರೆಯ ಸಹ-ಮಾಲೀಕರಾಗಿರುವ ಹೊಸ ಮಾದರಿಯ ಆರೋಗ್ಯ ಸೇವಾ ವ್ಯವಸ್ಥೆಯನ್ನು ರೂಪಿಸುತ್ತಿದೆ.ವೈದ್ಯರ ದಿನಾಚರಣೆಯ ಅಂಗವಾಗಿ ಆರಂಭಗೊಂಡಿರುವ ಈ ಆಸ್ಪತ್ರೆಗಳ ಜಾಲವು ಬೆಂಗಳೂರಿನ ಲ್ಯಾಂಗ್‌ಫೋರ್ಡ್ ಟೌನ್, ಎಲೆಕ್ಟ್ರಾನಿಕ್ ಸಿಟಿ, ಜಯನಗರ, ಅರಕೆರೆ, ಜಿಗಣಿ, ಜಾಲಹಳ್ಳಿ, ಮಹಾಲಕ್ಷ್ಮಿ ಲೇಔಟ್ ಹಾಗೂ ನಾಗರಭಾವಿ ಪ್ರದೇಶಗಳಲ್ಲಿನ 8 ಆಸ್ಪತ್ರೆಗಳೊಂದಿಗೆ ಏಕೀಕೃತ ವೇದಿಕೆಯಡಿ ಕಾರ್ಯನಿರ್ವಹಿಸಲಿದೆ. ಮ್ಯಾಗ್ನೆಟ್ ಹಾಸ್ಪಿಟಲ್ಸ್‌ನ ವ್ಯವಸ್ಥಾಪಕ ನಿರ್ದೇಶಕ ದಿನೇಶ್ ಮಾಧವನ್, ಆರೋಗ್ಯ ಸೇವೆಯ ಮೂಲಾಧಾರವೇ ವಿಶ್ವಾಸ. ಆದರೆ ಇಂದು ರೋಗಿಗಳು ತಮಗೆ ದೊರೆಯುವ ಚಿಕಿತ್ಸೆಯಿಂದ ದೂರವಾಗಿರುವ ಭಾವನೆ ಹೊಂದಿದ್ದಾರೆ. ಮ್ಯಾಗ್ನೆಟ್ ಹಾಸ್ಪಿಟಲ್ಸ್ ವಿಶ್ವಾಸ, ಪಾರದರ್ಶಕತೆ, ಸಹಾನುಭೂತಿ ಹಾಗೂ ಅತ್ಯುತ್ತಮ ಚಿಕಿತ್ಸಾ ಫಲಿತಾಂಶ ಎಂಬ ನಾಲ್ಕು ಪ್ರಮುಖ ಮೌಲ್ಯಗಳ ಮೇಲೆ ಸ್ಥಾಪಿತವಾಗಿದೆ. ಮೊದಲ ಬಾರಿಗೆ ವೈದ್ಯರು ಮತ್ತು ನರ್ಸ್‌ಗಳು ಆಸ್ಪತ್ರೆಯ ಸಹ-ಮಾಲೀಕರಾಗುತ್ತಿರುವುದರಿಂದ ಪ್ರತಿಯೊಂದು ವೈದ್ಯಕೀಯ ನಿರ್ಧಾರವೂ ರೋಗಿಯ ಹಿತದೃಷ್ಟಿಯಿಂದಲೇ ಕೈಗೊಳ್ಳಲಾಗುತ್ತದೆ. ದೇಶೀಯವಾಗಿ ಅಭಿವೃದ್ಧಿಪಡಿಸಿರುವ ವೈದ್ಯಕೀಯ ತಂತ್ರಜ್ಞಾನಗಳು ಮತ್ತು ಔಷಧಿಗಳನ್ನು ಬಳಸುವ ಮೂಲಕ ಚಿಕಿತ್ಸಾ ವೆಚ್ಚವನ್ನು ಕಡಿಮೆಗೊಳಿಸಿ, ಅತ್ಯುನ್ನತ ವೈದ್ಯಕೀಯ ಗುಣಮಟ್ಟ ಕಾಪಾಡಲು ಬದ್ಧರಾಗಿದ್ದೇವೆ ಎಂದು ಹೇಳಿದರು.

ರಾಜೀವ್ ಗಾಂಧಿ ಕಾಲೇಜ್‌ನಿಂದ ವಾಕ್‌ಥಾನ್

ಬೆಂಗಳೂರು: ಅಂತಾರಾಷ್ಟ್ರೀಯ ಒರಲ್ ಅಂಡ್ ಮ್ಯಾಕ್ಸಿಲೋಫೇಶಿಯಲ್ ಸರ್ಜನ್ಸ್ ದಿನಾಚರಣೆಯ ಅಂಗವಾಗಿ ರಾಜೀವ್ ಗಾಂಧಿ ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ ಜಾಗೃತಿ ಮೂಡಿಸುವ ಉದ್ದೇಶದಿಂದ ವಾಕ್‌ಥಾನ್ ಕಾರ್ಯಕ್ರಮ ಆಯೋಜಿಸಲಾಯಿತು. ಈ ಸಂದರ್ಭದಲ್ಲಿ ಕೆಎಒಎಂಎಸ್‌ಐ ಕಾರ್ಯದರ್ಶಿ ಡಾ. ಗಿರೀಶ್ ಗೌಡ, ಅಂತರರಾಷ್ಟ್ರೀಯ ಒಎಂಎಫ್‌ಎಸ್ ದಿನಾಚರಣೆಯ ಅಂಗವಾಗಿ ನಡೆದ ಈ ವಾಕ್‌ಥಾನ್ ಕಾರ್ಯಕ್ರಮವು ಶಸ್ತ್ರಚಿಕಿತ್ಸಾ ತಜ್ಞರ ಸೇವಾ ಮನೋಭಾವ ಮತ್ತು ಸಮಾಜದ ಆರೋಗ್ಯದ ಮೇಲಿನ ಬದ್ಧತೆ ಪ್ರತಿಬಿಂಬಿಸಿತು. ರಾಜೀವ್ ಗಾಂಧಿ ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆಯ ಈ ಜಾಗೃತಿ ಕಾರ್ಯಕ್ರಮ ಶ್ಲಾಘಿಸಿ, ಇಂತಹ ಉಪಕ್ರಮಗಳು ಸಾರ್ವಜನಿಕರಲ್ಲಿ ಒಎಂಎಫ್‌ಎಸ್ ವಿಶೇಷತೆಯ ಬಗ್ಗೆ ಅರಿವು ಹೆಚ್ಚಿಸಲು ಸಹಕಾರಿಯಾಗುತ್ತವೆ. ಒರಲ್ ಅಂಡ್ ಮ್ಯಾಕ್ಸಿಲೋಫೇಶಿಯಲ್ ಶಸ್ತ್ರಚಿಕಿತ್ಸಾ ವಿಭಾಗ ಅಧ್ಯಕ್ಷ ಡಾ. ಅಕ್ಷಯ್ ಶೆಟ್ಟಿ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮವು ಸಾರ್ವಜನಿಕರಲ್ಲಿ ಒರಲ್ ಅಂಡ್ ಮ್ಯಾಕ್ಸಿಲೋಫೇಶಿಯಲ್ ಶಸ್ತ್ರಚಿಕಿತ್ಸಾ ತಜ್ಞರ ಸೇವೆಗಳ ಮಹತ್ವ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಅವರ ಪಾತ್ರದ ಕುರಿತು ಅರಿವು ಮೂಡಿಸಿದೆ ಎಂದರು. ಕಾರ್ಯಕ್ರಮಕ್ಕೆ ಅಸೋಸಿಯೇಷನ್ ಆಫ್ ಒರಲ್ ಅಂಡ್ ಮ್ಯಾಕ್ಸಿಲೋಫೇಶಿಯಲ್ ಸರ್ಜನ್‌ಸ್ ಆಫ್ ಇಂಡಿಯಾದ ಕಾರ್ಯಕಾರಿ ಸಮಿತಿ ಸದಸ್ಯ, ಡಾ. ನಾಗರಾಜಪ್ಪ ದಾಸ್, ಕೆಎಒಎಂಎಸ್‌ಐ ಕಾರ್ಯಕಾರಿ ಸಮಿತಿ ಸದಸ್ಯ ಡಾ. ಪ್ರಶಾಂತ್ ರಾಜಾರಾಂ ಭಾಗವಹಿಸಿದ್ದರು.

{ **ಎಂ.ಬಿ.ಪಾಟೀಲ್** } ಸಚಿವ

ರಾಜ್ಯದಲ್ಲಿ ಕಳೆದ ಬಾರಿ ನಮಗೆ 136 ಸ್ಥಾನಗಳು ಬಂದಿವೆ. ಈಗ ಎಸ್‌ಐಆರ್ ಪ್ರಕ್ರಿಯೆ ನಡುವೆಯೂ ನಾವು ಮುಂದಿನ ಚುನಾವಣೆಯಲ್ಲಿ 150 ಸ್ಥಾನಗಳೊಂದಿಗೆ ಅಧಿಕಾರಕ್ಕೆ ಬರುತ್ತೇವೆ. ಎಸ್‌ಐಆರ್ ಕಾರ್ಯ ಪಾರದರ್ಶಕವಾಗಿರಬೇಕು. ಬಾಂಗ್ಲಾದೇಶ ಸೇರಿ ಇತರೆ ವಲಸಿಗರ ಹೆಸರು ತೆಗೆದು ಹಾಕುವುದಕ್ಕೆ ನಮ್ಮ ಆಕ್ಷೇಪ ಇಲ್ಲ. ಆದರೆ, ಅರ್ಹ ಮತದಾರರ ಹೆಸರು ತೆಗೆದುಹಾಕಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಕೆಲಸವಾಗಬಾರದು. ಪ್ರತಿಯೊಬ್ಬ ನಾಗರಿಕರ ಮತ ಹಕ್ಕು ರಕ್ಷಣೆ ಆಗಬೇಕು ಎಂಬುದೇ ನಮ್ಮ ಆಶಯ.

ಸುರಕ್ಷಿತ ಪಾದಚಾರಿ ಸಂಚಾರಕ್ಕೆ ಜಿಬಿಎ ಒತ್ತು | ಸ್ವಯಂಪ್ರೇರಿತ ತೆರವಿಗೆ ವ್ಯಾಪಾರಿಗಳಿಗೆ ಮನವಿ

ಪಾದಚಾರಿ ಮಾರ್ಗ ಒತ್ತುವರಿ ತೆರವು ಆರಂಭ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದ ಪಾದಚಾರಿ ಮಾರ್ಗಗಳನ್ನು ಒತ್ತುವರಿರಹಿತಗೊಳಿಸಿ ನಾಗರಿಕರಿಗೆ ಸುರಕ್ಷಿತ ಮತ್ತು ಅಡೆತಡೆಯಿಲ್ಲದ ಸಂಚಾರ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಬುಧವಾರದಿಂದ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯಾಚರಣೆ ಆರಂಭಗೊಳಿಸಿದೆ. ಇದಕ್ಕೆ ತೀವ್ರ ಪ್ರತಿರೋಧ ವ್ಯಕ್ತವಾಗಿದೆ.

ಸುರಕ್ಷಿತ ಪಾದಚಾರಿ ಮಾರ್ಗ ಅಭಿಯಾನದ ಅಂಗವಾಗಿ ನಗರದ ಪ್ರಮುಖ ಆರ್ಟೀರಿಯಲ್ ಹಾಗೂ ಸಬ್-ಆರ್ಟೀರಿಯಲ್ ರಸ್ತೆಗಳಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದ್ದು, ಸಾರ್ವಜನಿಕರ ಓಡಾಟಕ್ಕೆ ಅಡ್ಡಿಯಾಗಿದ್ದ ವಿವಿಧ ರೀತಿಯ ಅತಿಕ್ರಮಣಗಳನ್ನು ತೆರವುಗೊಳಿಸಲಾಗಿದೆ. ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರ ನಿರ್ದೇಶನ ಹಾಗೂ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಪಾಲಿಕೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ಪೊಲೀಸರು ಭಾಗವಹಿಸಿದ್ದರು. ಜೆಸಿಬಿ, ಟ್ರ್ಯಾಕ್ಟರ್ ಸೇರಿದಂತೆ ವಿವಿಧ ವಾಹನಗಳ ಸಹಾಯದಿಂದ ಪಾದಚಾರಿ ಮಾರ್ಗಗಳ ಮೇಲೆ ಅನಧಿಕೃತವಾಗಿ ನಿರ್ಮಿಸಲಾಗಿದ್ದ ರಚನೆಗಳನ್ನು ತೆರವುಗೊಳಿಸಲಾಯಿತು.

ನಗರದ ಅನೇಕ ಪ್ರದೇಶಗಳಲ್ಲಿ ಅಂಗಡಿಗಳ ಮುಂಭಾಗ ನಿರ್ಮಿಸಲಾಗಿದ್ದ ಮೆಟ್ಟಿಲುಗಳು, ನಾಮಫಲಕಗಳು, ಕಬ್ಬಿಣದ ಶೆಡ್‌ಗಳು, ತಳ್ಳುಗಾಡಿಗಳು, ಕಟ್ಟಡ ತ್ಯಾಜ್ಯ, ಶಾಶ್ವತ ಹಾಗೂ ತಾತ್ಕಾಲಿಕ ಪೆಟ್ಟಿಗೆಗಳು, ಓಎಫ್‌ಸಿ ಕೇಬಲ್‌ಗಳ ಅಡ್ಡಿಗಳು ಸೇರಿದಂತೆ ಪಾದಚಾರಿಗಳ ಸಂಚಾರಕ್ಕೆ ತೊಂದರೆ ಉಂಟುಮಾಡುತ್ತಿದ್ದ ಎಲ್ಲ ರೀತಿಯ ಅತಿಕ್ರಮಣಗಳನ್ನು ಅಧಿಕಾರಿಗಳು ತೆರವುಗೊಳಿಸಿದರು. ಪಾದಚಾರಿ ಮಾರ್ಗಗಳು ಸಾರ್ವಜನಿಕ ಆಸ್ತಿಯಾಗಿದ್ದು, ಅವುಗಳ ಮೇಲೆ ಖಾಸಗಿ ಸ್ವಾಧೀನ ಅಥವಾ ಅನಧಿಕೃತ ಬಳಕೆ ನಾಗರಿಕರ ಹಕ್ಕಿಗೆ ಧಕ್ಕೆ ತರುತ್ತದೆ ಎಂಬುದು ಅಧಿಕಾರಿಗಳ ಅಭಿಪ್ರಾಯವಾಗಿದೆ.

ಐದು ಪಾಲಿಕೆಗಳಲ್ಲಿ ಏಕಕಾಲಕ್ಕೆ ಕಾರ್ಯಾಚರಣೆ: ಬೆಂಗಳೂರು ಪೂರ್ವ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮಾರತಹಳ್ಳಿ-ಇಬ್ಲೂರು ಜಂಕ್ಷನ್, ವರ್ತೂರು ರಸ್ತೆ, ಐಟಿಪಿಎಲ್ ಮುಖ್ಯ ರಸ್ತೆ, ಹೊರ ವರ್ತುಲ ರಸ್ತೆ, ಟಿನ್ ಫ್ಯಾಕ್ಟರಿ, ರಾಮಮೂರ್ತಿನಗರ, ಕುಂದಲಹಳ್ಳಿ ಹಾಗೂ ಹೂಡಿ ರಸ್ತೆಗಳಲ್ಲಿ ಕಾರ್ಯಾಚರಣೆ ನಡೆಸಲಾಯಿತು. ಆಯುಕ್ತ ರಮೇಶ್ ಡಿ. ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಹಲವು ಅತಿಕ್ರಮಣಗಳನ್ನು ತೆರವುಗೊಳಿಸಲಾಯಿತು.

ಬೆಂಗಳೂರು ಕೇಂದ್ರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಟ್ರಿನಿಟಿ ಜಂಕ್ಷನ್‌ನಿಂದ ಎಂಜಿ ಉದ್ಯಾನ, ಇಂದಿರಾನಗರ, ದೊಮ್ಮಲೂರು, ವಿವೇಕಾನಂದ ಮೆಟ್ರೋ ನಿಲ್ದಾಣ, ಬೆನ್ನಿಗಾನಹಳ್ಳಿ, ಜಯನಗರ, ಸೌತ್ ಎಂಡ್ ಸರ್ಕಲ್, ಓಕಳೀಪುರಂ ಹಾಗೂ ಮೆಜೆಸ್ಟಿಕ್ ಪ್ರದೇಶಗಳಲ್ಲಿ ಕಾರ್ಯಾಚರಣೆ ನಡೆಯಿತು. ನಗರದ ಅತ್ಯಂತ ಜನನಿಬಿಡ ಪ್ರದೇಶಗಳಲ್ಲೊಂದಾದ ಈ ಭಾಗಗಳಲ್ಲಿ ಪಾದಚಾರಿ ಮಾರ್ಗ ಮುಕ್ತಗೊಳಿಸುವುದರಿಂದ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಆಯುಕ್ತ ಜಗದೀಶ್.ಜಿ ತಿಳಿಸಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಉತ್ತರಹಳ್ಳಿ, ಕೊತ್ತನೂರು, ವಿಶ್ವಪ್ರಿಯ ಲೇಔಟ್, ಪದ್ಮನಾಭನಗರ, ಜಯನಗರ, ಜೆಪಿ ನಗರ, ಎಚ್‌ಎಸ್‌ಆರ್ ಲೇಔಟ್, ಕೋರಮಂಗಲ ಹಾಗೂ ಬಿಟಿಎಂ ಎರಡನೇ ಹಂತ ಸೇರಿದಂತೆ ಹಲವು ಪ್ರದೇಶಗಳಲ್ಲಿ ಬೀದಿಬದಿ ವ್ಯಾಪಾರಿಗಳು ಹಾಗೂ ಅಂಗಡಿಗಳಿಂದ ಉಂಟಾಗಿದ್ದ ಅತಿಕ್ರಮಣಗಳನ್ನು ತೆರವುಗೊಳಿಸಲಾಯಿತು.

ಬೆಂಗಳೂರು ಉತ್ತರ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಯಲಹಂಕ, ಹೆಬ್ಬಾಳ, ವಿದ್ಯಾರಣ್ಯಪುರ, ಸಹಕಾರನಗರ, ಕ್ಲಾರ್ಕ್ ರಸ್ತೆ ಹಾಗೂ ಬಾಣಸವಾಡಿ ಮುಖ್ಯ ರಸ್ತೆಯಲ್ಲಿ ಕಾರ್ಯಾಚರಣೆ ನಡೆಯಿತು. ಪಾದಚಾರಿಗಳ ಓಡಾಟಕ್ಕೆ ಅಡ್ಡಿಯಾಗಿದ್ದ ವಿವಿಧ ತಾತ್ಕಾಲಿಕ ಮತ್ತು ಶಾಶ್ವತ ರಚನೆಗಳನ್ನು ಅಧಿಕಾರಿಗಳು ತೆರವುಗೊಳಿಸಿದರು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ತುಮಕೂರು ರಸ್ತೆ, ಮೈಸೂರು ರಸ್ತೆ, ಮಾಗಡಿ ರಸ್ತೆ, ವೆಸ್ಟ್ ಆಫ್ ಕಾರ್ಡ್ ರಸ್ತೆ, ಎಂಇಐ ರಸ್ತೆ, ಎಂಕೆಕೆ ರಸ್ತೆ, ಚಂದ್ರ ಲೇಔಟ್, ಗೋವಿಂದರಾಜನಗರ, ರಾಜಾಜಿನಗರ, ಸಂಪಿಗೆ ರಸ್ತೆ, ಬುಲ್ ಟೆಂಪಲ್ ರಸ್ತೆ ಹಾಗೂ ಕತ್ರಿಗುಪ್ಪೆ ಸೇರಿದಂತೆ ಪ್ರಮುಖ ಪ್ರದೇಶಗಳಲ್ಲಿ ಕಾರ್ಯಾಚರಣೆ ಕೈಗೊಳ್ಳಲಾಯಿತು.



ನಗರದ ವಿವಿಧ ಪಾಲಿಕೆಗಳ ವ್ಯಾಪ್ತಿಯಲ್ಲಿ ತೆರವು ಕಾರ್ಯ ನಡೆಯಿತು.

ಅಭಿಯಾನ ಮುಂದುವರಿಕೆ

ಈ ವಿಶೇಷ ಅಭಿಯಾನವು ಒಂದು ದಿನದ ಕಾರ್ಯಾಚರಣೆಗೆ ಸೀಮಿತವಾಗದೆ ನಿರಂತರವಾಗಿ ಮುಂದುವರಿಯಲಿದೆ. ಸಾರ್ವಜನಿಕರಿಂದ ಬರುವ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಿ ನಗರದ ಎಲ್ಲ ಭಾಗಗಳಲ್ಲಿಯೂ ಪಾದಚಾರಿ ಮಾರ್ಗ ಅತಿಕ್ರಮಣಮುಕ್ತಗೊಳಿಸುವ ಗುರಿ ಜಿಬಿಎ ಹೊಂದಿದೆ. ನಗರದ ಮೂಲಸೌಕರ್ಯ ಪಾದಚಾರಿ ಸ್ನೇಹಿಯಾಗಿ ರೂಪಿಸುವ ನಿಟ್ಟಿನಲ್ಲಿ ಈ ಕ್ರಮ ಮಹತ್ವದ ಹೆಜ್ಜೆಯಾಗಿದೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ತಿಳಿಸಿದರು.

ಸ್ವಯಂಪ್ರೇರಿತ ತೆರವಿಗೆ ಮನವಿ

ಜಿಬಿಎ ವ್ಯಾಪ್ತಿಯ ಅಂಗಡಿ ಮಾಲೀಕರು, ವಾಣಿಜ್ಯ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು ಹಾಗೂ ಬೀದಿಬದಿ ವ್ಯಾಪಾರಿಗಳು ಸ್ವಯಂಪ್ರೇರಿತವಾಗಿ ಪಾದಚಾರಿ ಮಾರ್ಗಗಳ ಮೇಲಿನ ಒತ್ತುವರಿ ತೆರವುಗೊಳಿಸಬೇಕು ಎಂದು ಪಾಲಿಕೆಗಳು ಮನವಿ ಮಾಡಿವೆ. ಸ್ವಯಂಪ್ರೇರಿತವಾಗಿ ತೆರವುಗೊಳಿಸದಿದ್ದಲ್ಲಿ ನಿಯಮಾನುಸಾರ ಕಾರ್ಯಾಚರಣೆ ನಡೆಸಿ ಅಗತ್ಯವಿದ್ದರೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಮಡಿವಾಳ ಮಾರುಕಟ್ಟೆಯಲ್ಲಿ ಎಚ್ಚರಿಕೆ

ಮಡಿವಾಳ ಮಾರುಕಟ್ಟೆ ಪ್ರದೇಶದಲ್ಲಿ ವ್ಯಾಪಾರಿಗಳಿಗೆ ವಿಶೇಷ ಜಾಗೃತಿ ಮೂಡಿಸಲಾಯಿತು. ಪಾದಚಾರಿ ಮಾರ್ಗಗಳ ಮೇಲೆ ವಸ್ತುಗಳನ್ನು ಇಡದೇ ನಿಗದಿತ ಸ್ಥಳದಲ್ಲಿಯೇ ವ್ಯಾಪಾರ ನಡೆಸುವಂತೆ ಸೂಚನೆ ನೀಡಲಾಯಿತು. ಕಸ ಎಲ್ಲೆಂದರಲ್ಲಿ ಬಿಸಾಡದೆ ನಿಗದಿತ ವ್ಯವಸ್ಥೆಯ ಮೂಲಕ ವಿಲೇವಾರಿ ಮಾಡುವಂತೆ ತಿಳಿಸಲಾಯಿತು. ಮುಂದಿನ ಶುಕ್ರವಾರದಿಂದ ನಿಯಮ ಉಲ್ಲಂಘಿಸುವವರ ವಿರುದ್ಧ ದಂಡಾತ್ಮಕ ಕ್ರಮ ಜರುಗಿಸಲಾಗುವುದು ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ. ನಿಯಮ ಉಲ್ಲಂಘನೆ ಮುಂದುವರಿದರೆ 5,000 ರು. ದಂಡ ವಿಧಿಸುವುದರ ಜತೆಗೆ ಪಾದಚಾರಿ ಮಾರ್ಗದಲ್ಲಿ ಇರಿಸಲಾದ ವಸ್ತುಗಳನ್ನು ಜಪ್ತಿ ಮಾಡುವುದಾಗಿ ತಿಳಿಸಲಾಗಿದೆ ಎಂದು ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ಬೆಂಗಳೂರಿನ ಪ್ರತಿಯೊಬ್ಬ ನಾಗರಿಕನಿಗೂ ಸುರಕ್ಷಿತ ಪಾದಚಾರಿ ಮಾರ್ಗ ಬಳಸುವ ಹಕ್ಕಿದೆ. ಪಾದಚಾರಿ ಮಾರ್ಗ ಒತ್ತುವರಿರಹಿತವಾಗಿಡಲು ಸಾರ್ವಜನಿಕರು, ವ್ಯಾಪಾರಿಗಳು ಹಾಗೂ ವಾಣಿಜ್ಯ ಸಂಸ್ಥೆಗಳು ನಗರ ಆಡಳಿತದೊಂದಿಗೆ ಕೈಜೋಡಿಸಬೇಕು. ಇದು ಕೇವಲ ಸರಕಾರದ ಅಭಿಯಾನವಲ್ಲ, ನಾಗರಿಕರ ಸಹಭಾಗಿತ್ವದ ಜನಾಂದೋಲ. ಬೀದಿಬದಿ ವ್ಯಾಪಾರಿಗಳ ಜೀವನೋಪಾಯಕ್ಕೂ ಸರಕಾರ ಬದ್ಧವಾಗಿದ್ದು, ಪಾದಚಾರಿಗಳಿಗೆ ತೊಂದರೆಯಾಗದ ರೀತಿಯಲ್ಲಿ ವ್ಯಾಪಾರ ನಡೆಸಲು ಎಲ್ಲರೂ ಸಹಕರಿಸಬೇಕು.

- ಕೃಷ್ಣ ಬೈರೇಗೌಡ
ಬೆಂಗಳೂರು ಅಭಿವೃದ್ಧಿ ಸಚಿವ

ಚಾರ್ಜ್‌ಶೀಟ್ ಸಲ್ಲಿಕೆಯಾದ ಬಳಿಕ ನಿರೀಕ್ಷಣಾ ಜಾಮೀನು ರದ್ದಾಗುವುದಿಲ್ಲ

ರೆಗ್ಯೂಲರ್ ಬೇಲ್‌ಗೆ ಒತ್ತಾಯಿಸುವಂತಿಲ್ಲ

ಬೆಂಗಳೂರು: ಒಮ್ಮೆ ನಿರೀಕ್ಷಣಾ ಜಾಮೀನು ಪಡೆದ ಆರೋಪಿಗಳ ವಿರುದ್ಧ ಕೇವಲ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ ಮತ್ತು ಕೋರ್ಟ್ ಸಮನ್ಸ್ ಜಾರಿ ಮಾಡಿದೆ ಎಂಬ ಕಾರಣಕ್ಕೆ ಅದು ರದ್ದಾಗುವುದಿಲ್ಲ ಎಂದು ತಿಳಿಸಿರುವ ಹೈಕೋರ್ಟ್, ಕಡ್ಡಾಯವಾಗಿ ರೆಗ್ಯೂಲರ್ ಬೇಲ್ (ನಿಯಮಿತ ಜಾಮೀನು) ಪಡೆಯಬೇಕು ಎಂದು ಒತ್ತಾಯಿಸುವಂತಿಲ್ಲ ಎಂದು ತಿಳಿಸಿದೆ.



ನಿರೀಕ್ಷಣಾ ಜಾಮೀನು ಪಡೆದಿದ್ದರೂ, ಮತ್ತೆ ರೆಗ್ಯೂಲರ್ ಜಾಮೀನು ಪಡೆಯುವಂತೆ ಸೂಚನೆ ನೀಡಿದ್ದ ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಆಂಧ್ರ ಪ್ರದೇಶದ ಗುಂಟೂರು ಮೂಲದ, ಸದ್ಯ ಹಾಂಕಾಂಗ್ ಐಸ್ಲ್ಯಾಂಡ್ ನಿವಾಸಿಯಾಗಿರುವ ಬಾಲಕೀರ್ತಿ ಪುಣ್ಯಕೋಟಿ ಮತ್ತವರ ಪೋಷಕರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ಸುಶೀಲಾ ಅಗರ್‌ವಾಲ್ ವಿರುದ್ಧದ ದೆಹಲಿ ಸರಕಾರದ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ನೀಡಿರುವ ಆದೇಶ ಉಲ್ಲೇಖಿಸಿರುವ ನ್ಯಾಯಪೀಠ, ನಿರೀಕ್ಷಣಾ ಜಾಮೀನಿಗೆ ಯಾವುದೇ ನಿರ್ದಿಷ್ಟ ಕಾಲಮಿತಿ ಇರುವುದಿಲ್ಲ. ವಿಶೇಷ ಸಂದರ್ಭ ಹೊರತುಪಡಿಸಿ, ಮುಂಗಡ ಜಾಮೀನಿನ ರಕ್ಷಣೆ ಇಡೀ ವಿಚಾರಣೆ ಮುಗಿಯುವವರೆಗೂ ಮುಂದುವರೆಯುತ್ತದೆ ಎಂದು ತಿಳಿಸಿದೆ.

ಒಮ್ಮೆ ನಿರೀಕ್ಷಣಾ ಜಾಮೀನು ದೊರೆತ ಬಳಿಕ, ಆರೋಪಪಟ್ಟಿ ಸಲ್ಲಿಕೆಯಾದ ತಕ್ಷಣ ಆರೋಪಿಯ ಸ್ವಾತಂತ್ರ್ಯ ಕಸಿದುಕೊಳ್ಳಲು ಬರುವುದಿಲ್ಲ. ತನಿಖೆಗೆ ಆರೋಪಿಗಳು ಸಂಪೂರ್ಣ ಸಹಕಾರ ನೀಡಿದ್ದಾರೆ ಎಂಬುದಾಗಿ ತಿಳಿಯಲಿದೆ ಎಂದು ತಿಳಿಸಿರುವ ನ್ಯಾಯಪೀಠ, ಆರೋಪಿಗಳು ವೈಯಕ್ತಿಕ ಹಾಜರಾತಿಯಿಂದ ವಿನಾಯಿತಿ ಕೋರಿ ಸಲ್ಲಿಸಿದ್ದ ಅರ್ಜಿಗೆ ತಲಾ 100 ರು.ಗಳ ದಂಡ ವಿಧಿಸಿದ್ದ ವಿಚಾರಣಾ ನ್ಯಾಯಾಲಯದ ಕ್ರಮವನ್ನೂ ರದ್ದುಗೊಳಿಸಿದೆ. ಅಲ್ಲದೇ, ಈ ಆದೇಶದ ಪ್ರತಿ ನಿರೀಕ್ಷಣಾ ಜಾಮೀನು ಕೋರುವ ಅರ್ಜಿಗಳನ್ನು ನಿರ್ವಹಿಸುವ ರಾಜ್ಯದ ಎಲ್ಲ ನ್ಯಾಯಾಲಯಗಳಿಗೆ ಕಳುಹಿಸಬೇಕು. ಮುಂದಿನ ದಿನಗಳಲ್ಲಿ ಯಾವುದೇ ನ್ಯಾಯಾಲಯ ಈ ನಿಯಮ ಉಲ್ಲಂಘಿಸಿದರೆ ಅದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಎಚ್ಚರಿಕೆ ನೀಡಿದೆ.

ಅಲ್ಲದೇ, ಮತ್ತೆ ನಿಯಮಿತ ಜಾಮೀನು ಪಡೆಯಬೇಕು ಎಂಬುದಾಗಿ ಆದೇಶಿಸಿರುವ ವಿಚಾರಣಾ ನ್ಯಾಯಾಲಯದ ಆದೇಶಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ನ್ಯಾಯಪೀಠ, ಇದು ಕಾನೂನಿನ ಮೂಲ ತತ್ವಗಳ ಸ್ಪಷ್ಟ ಉಲ್ಲಂಘನೆ ಮತ್ತು ಆತಂಕಕಾರಿ ನಡೆಯಾಗಿದೆ. ಸುಪ್ರೀಂಕೋರ್ಟ್‌ನ ಆದೇಶಗಳಿಗೆ ವಿರುದ್ಧವಾಗಿದೆ. ಅಲ್ಲದೇ, ಇನ್ನುಂದೆ ಇಂತಹ ತಪ್ಪುಗಳು ಮರುಕಳಿಸದಂತೆ ರಾಜ್ಯದ ಎಲ್ಲಾ ಕೆಳಹಂತದ ನ್ಯಾಯಾಲಯಗಳಿಗೆ ಈ ಆದೇಶದ ಪ್ರತಿಯನ್ನು ರವಾನಿಸಬೇಕು ಎಂದು ರಿಜಿಸ್ಟ್ರಾರ್‌ಗೆ ನಿರ್ದೇಶನ ನೀಡಿ ಆದೇಶಿಸಿದೆ.

ಪ್ರಕರಣದ ಹಿನ್ನೆಲೆ

ಬಾಲಕೀರ್ತಿ ಪುಣ್ಯಕೋಟಿ ಮತ್ತು ಅವರ ಕುಟುಂಬದವರ ವಿರುದ್ಧ ಬೆಂಗಳೂರು ದಕ್ಷಿಣ ಮಹಿಳಾ ಪೊಲೀಸ್ ಠಾಣೆಯಲ್ಲಿ ವರದಕ್ಷಿಣೆ ಕಿರುಕುಳ ಸೇರಿದಂತೆ ಭಾರತೀಯ ನ್ಯಾಯ ಸಂಹಿತೆ ವಿವಿಧ ಸೆಕ್ಷನ್‌ಗಳ ಅಡಿ ದೂರು ದಾಖಲಾಗಿತ್ತು. ದೂರು ದಾಖಲಾದ ಬಳಿಕ ಅರ್ಜಿದಾರ ಬಾಲಕೀರ್ತಿ ಪುಣ್ಯಕೋಟಿ, ತಂದೆ ರಾಮಲಿಂಗಂ ಪುಣ್ಯಕೋಟಿ, ತಾಯಿ ಪದ್ಮಾವತಿ ಪುಣ್ಯಕೋಟಿ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದರು. ಈ ನಡುವೆ ಎಲ್ಲ ಆರೋಪಿಗಳು ಸಂಬಂಧಪಟ್ಟ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದರು. ತನಿಖೆ ಪೂರ್ಣಗೊಳಿಸಿದ ಪೊಲೀಸರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ತ್ರಿವಳಿ ಕೊಲೆ ಪ್ರಕರಣ: ಸಾಕ್ಷ್ಯ ಸಂಗ್ರಹಕ್ಕೆ ಘಟನೆ ಮರುಸೃಷ್ಟಿ

ಬೆಂಗಳೂರು: ಕೆ.ಆರ್.ಪುರದ ಸಿಗೇಹಳ್ಳಿಯ ಅಪಾರ್ಟ್‌ಮೆಂಟ್‌ನಲ್ಲಿ ನಡೆದಿದ್ದ ತ್ರಿವಳಿ ಕೊಲೆ ಪ್ರಕರಣದ ಪ್ರಮುಖ ಆರೋಪಿಗಳಾದ ಶ್ವೇತಾ ಮತ್ತು ಕೆನತ್‌ನನ್ನು ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳ ಮಹಜರು ನಡೆಸಿದ್ದಾರೆ. ಇದೇ ವೇಳೆ ಕೃತ್ಯವನ್ನು ಮರುಸೃಷ್ಟಿ ಮಾಡಿ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದಾರೆ.

ಪೊಲೀಸರು ಆರೋಪಿಗಳ ಮುಂದೆ ಕೃತ್ಯ ನಡೆದ ರೀತಿಯನ್ನು ಒಂದೊಂದಾಗಿ ಪರಿಶೀಲಿಸಿದ್ದಾರೆ. ಮೊದಲು ಯಾರ ಮೇಲೆ ದಾಳಿ ನಡೆಸಲಾಯಿತು? ನಂತರ ಯಾರನ್ನು ಕೊಲೆ ಮಾಡಲಾಯಿತು? ಯಾರು ಹಲ್ಲೆ ನಡೆಸಿದರು? ಇಬ್ಬರ ಪಾತ್ರ ಏನಿತ್ತು? ಕೊಲೆ ಬಳಿಕ ಏನು ಮಾಡಿದರು? ಎಂಬ ಪ್ರತಿಯೊಂದು ಪ್ರಶ್ನೆಗೆ ಆರೋಪಿಗಳಿಂದ ಉತ್ತರ ಪಡೆದು ಅದರ ವಿಡಿಯೊ ದಾಖಲಿಸಿಕೊಂಡಿದ್ದಾರೆ. ತನಿಖೆ ವೇಳೆ ಬೆಚ್ಚಿಬೀಳಿಸುವ ಮತ್ತಷ್ಟು ಮಾಹಿತಿಗಳು ಬೆಳಕಿಗೆ ಬಂದಿವೆ. ಕೊಲೆ ನಡೆದ ಬಳಿಕ ಆರೋಪಿಗಳು ಬಿಸಿ ನೀರಿನಲ್ಲಿ ಖಾರದ ಪುಡಿ ಬೆರೆಸಿ ಮನೆಯ ವಿವಿಧ ಭಾಗಗಳಲ್ಲಿ ಚೆಲ್ಲಿದ್ದರು. ಇದರಿಂದ ತನಿಖೆಯ ದಿಕ್ಕು ತಪ್ಪಿಸಲು ಅಥವಾ ಸಾಕ್ಷ್ಯ ನಾಶಪಡಿಸಲು ಯತ್ನಿಸಿದ್ದಾರೆಯೇ ಎಂಬ ಅನುಮಾನವನ್ನು ಪೊಲೀಸರು ಪರಿಶೀಲಿಸಿದ್ದಾರೆ.

ಇದರಲ್ಲೇ ಮತ್ತೊಂದು ಆಘಾತಕಾರಿ ಸಂಗತಿ ಎಂದರೆ, ಮೂವರನ್ನು ಕೊಲೆ ಮಾಡಿದ ಬಳಿಕ ಆರೋಪಿಗಳು ಆಹಾರವನ್ನು ಆನ್‌ಲೈನ್ ಮೂಲಕ ಆರ್ಡರ್ ಮಾಡಿಕೊಂಡು ಅದೇ ಮನೆಯಲ್ಲಿ ಕುಳಿತು ಊಟ ಮಾಡಿರುವುದು ತನಿಖೆಯಲ್ಲಿ ತಿಳಿದುಬಂದಿದೆ. ಬಳಿಕ ಅಲ್ಲಿಂದ ಹೊರಟ ಅವರು ಮತ್ತೊಬ್ಬರ ಕೊಲೆ ನಡೆಸಿ ಪುದುಚೇರಿಗೆ ಪರಾರಿಯಾಗಿರುವ ವಿಚಾರವೂ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಪ್ರಕರಣದ ಪ್ರತಿಯೊಂದು ಅಂಶವನ್ನು ಪೊಲೀಸರು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದು, ಕೃತ್ಯ ಮರುಸೃಷ್ಟಿಯ ವೇಳೆ ಸಂಗ್ರಹಿಸಿದ ವಿಡಿಯೊ, ಸ್ಥಳ ಮಹಜರು ಮತ್ತು ಇತರೆ ಸಾಕ್ಷ್ಯಗಳು ತನಿಖೆಗೆ ಪ್ರಮುಖ ಆಧಾರವಾಗಲಿವೆ. ಆರೋಪಿಗಳ ವಿರುದ್ಧ ಇನ್ನಷ್ಟು ಬಲವಾದ ಸಾಕ್ಷ್ಯಗಳನ್ನು ಕಲೆಹಾಕುವ ಕೆಲಸವನ್ನು ಕೆ.ಆರ್. ಪುರಂ ಪೊಲೀಸರು ಮುಂದುವರೆಸಿದ್ದಾರೆ.

ಬಿಡದಿಯಲ್ಲಿ ಮಹಿಳಾ ವಾಹನ ಚಾಲನಾ ತರಬೇತಿ ಸಂಸ್ಥೆ

ಬೆಂಗಳೂರು: ಮಹಿಳೆಯರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವ ದಿಸೆಯಲ್ಲಿ ಮತ್ತೊಂದು ಹೆಜ್ಜೆ ಇಟ್ಟಿರುವ ರಾಜ್ಯ ಸರಕಾರ ಮಹಿಳಾ ವಾಹನ ಚಾಲನಾ ತರಬೇತಿ ಸಂಸ್ಥೆ ಆರಂಭಿಸಲಿದೆ.

ಸಾರಿಗೆ ಇಲಾಖೆ ಹಿರಿಯ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಮಾತನಾಡಿದ ಸಾರಿಗೆ ಸಚಿವರಾದ ಬೈರತಿ ಸುರೇಶ್ ಈ ವಿಷಯ ತಿಳಿಸಿದ್ದಾರೆ.

ಬಿಡದಿ ಕೈಗಾರಿಕಾ ಪ್ರದೇಶದಲ್ಲಿ ಮಹಿಳೆಯರಿಗೆಂದೇ ಪ್ರತ್ಯೇಕವಾದ ವಾಹನ ಚಾಲನಾ ತರಬೇತಿ ಸಂಸ್ಥೆ, ಚಾಲನಾ ಟ್ರ್ಯಾಕ್ ಸೇರಿ ಇನ್ನಿತರೆ ಮೂಲಸೌಕರ್ಯಗಳನ್ನು ಬಿಎಂಟಿಸಿ ನಿರ್ಮಾಣ ಮಾಡಲಿದೆ. ಕೇಂದ್ರ ಹಾಗೂ ರಾಜ್ಯ ಸರಕಾರದ ಸಹಭಾಗಿತ್ವದಲ್ಲಿ ಈ ವಾಹನ ಚಾಲನಾ ತರಬೇತಿ ಸಂಸ್ಥೆ ಆರಂಭಿಸಲಾಗುತ್ತದೆ. ಮಹಿಳಾ ಸ್ವಯಂ ಸೇವಾ ಸಂಸ್ಥೆಯಾಗಿರುವ ಅವೇಕ್ ಮಹಿಳೆಯರಿಗೆ ವಾಹನ ಚಾಲನೆ ಸೇರಿದಂತೆ ಕೌಶಲ್ಯಾಧಾರಿತ ತರಬೇತಿ ನೀಡಲಿದೆ ಎಂದರು.

ಸಾರಿಗೆ ಭವನ ನಿರ್ಮಾಣ: ಪ್ರಸ್ತುತ ಸಾರಿಗೆ ಆಯುಕ್ತಾಲಯ ಬೆಂಗಳೂರಿನ ಶಾಂತಿನಗರದಲ್ಲಿರುವ ಬಿಎಂಟಿಸಿ ಕಟ್ಟಡದಲ್ಲಿ ಬಾಡಿಗೆ ಆಧಾರದಲ್ಲಿ ಕಾರ್ಯನಿರ್ವಹಣೆ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಸಾರಿಗೆ ಇಲಾಖೆಗೆ ಒಂದು ಸ್ವಂತ ಕಟ್ಟಡವನ್ನು ನಿರ್ಮಾಣ ಮಾಡುವ ಬಗ್ಗೆ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಸಲಾಯಿತು. ಶಾಂತಿನಗರದಲ್ಲಿ ಕೆಎಸ್‌ಆರ್‌ಟಿಸಿಗೆ ಸೇರಿರುವ 1 ಎಕರೆ ಪ್ರದೇಶದಲ್ಲಿ ಸಾರಿಗೆ ಭವನ ನಿರ್ಮಾಣ ಮಾಡುವ ಬಗ್ಗೆ ಸಾಧಕ ಬಾಧಕಗಳನ್ನು ಅವಲೋಕಿಸಬೇಕು. ಸರಕಾರಕ್ಕೆ ಯಾವುದೇ ಹೊರೆಯಾಗದ ರೀತಿಯಲ್ಲಿ ಇಲಾಖೆಯ ಸಂಪನ್ಮೂಲದಲ್ಲೇ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಾರಿಗೆ ಇಲಾಖೆ ಹಿರಿಯ ಅಧಿಕಾರಿಗಳೊಂದಿಗೆ ಸಾರಿಗೆ ಸಚಿವ ಬೈರತಿ ಸುರೇಶ್ ಸಭೆ ನಡೆಸಿದರು. ಸಾರಿಗೆ ಇಲಾಖೆ ಕಾರ್ಯದರ್ಶಿ ದೀಪಾ ಚೋಳನ್, ಆಯುಕ್ತ ಸೆಲ್ವಮಣಿ ಮತ್ತಿತರರು ಇದ್ದರು.

ಖಾಲಿ ಹುದ್ದೆ ನೇಮಕಕ್ಕೆ ಸೂಚನೆ

ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿ ಖಾಲಿ ಇರುವ 150ಕ್ಕೂ ಹೆಚ್ಚು ಸಾರಿಗೆ ಇನ್‌ಸ್ಪೆಕ್ಟರ್‌ಗಳನ್ನು ಮತ್ತು ಇತರೆ ಹುದ್ದೆಗಳನ್ನು ಕೂಡಲೇ ನೇಮಕ ಮಾಡಿಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಸಚಿವ ಬೈರತಿ ಸುರೇಶ್ ಸೂಚನೆ ನೀಡಿದರು.

ಶರ್ವಾಣಿ ಗ್ರೂಪ್‌ನ ಸಂಸ್ಥಾಪಕಿ ಶರ್ವಾಣಿ ಪ್ರಕಾಶ್ ಅವರಿಗೆ ಭಾವನಾ ನೇತೃತ್ವದ ಸ್ತ್ರೀ ಸಂಸ್ಥೆಯ ಮಹಿಳಾ ನಾಯಕಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಯಶವಂತಪುರದ ಆರೋಗ್ಯ ಕೇಂದ್ರದ ಪೋಲಿಯೋ ಲಸಿಕಾ ಶಿಬಿರದಲ್ಲಿ ಸಮರ್ಥ ಲೀನೆಸ್ ಕ್ಲಬ್ ವತಿಯಿಂದ ಮಕ್ಕಳಿಗೆ ಕಲರ್ ಬುಕ್ ಪೆನ್ಸಿಲ್ ನೀಡಿದರು. ಈ ವೇಳೆ ಡಾ.ಸವಿತಾ ಕೊಡಾಸೆ, ಸಮರ್ಥ ಲೀನೆಸ್ ಕ್ಲಬ್‌ನ ಅಧ್ಯಕ್ಷ ಲೀನೆಸ್ ಸವಿತಾ ನಾಗೇಶ್, ಭಾನುಮತಿ ಉಪಸ್ಥಿತರಿದ್ದರು.

ರಾಜಧನ ಪಾವತಿ ಅವ್ಯವಸ್ಥೆಯಿಂದ ಗುತ್ತಿಗೆದಾರರಿಗೆ ಸಂಕಷ್ಟ

ಬೆಂಗಳೂರು: ಗಣಿ ಮತ್ತು ಭೂವಿಜ್ಞಾನ ಇಲಾಖೆಯು ವೈಜ್ಞಾನಿಕ ಮಾನದಂಡಗಳನ್ನು ಪಾಲಿಸದೆ ಹಾಗೂ ಕ್ವಾರಿ ಮಾಲೀಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ನಡೆಸಿರುವ ಡ್ರೋನ್ ಸಮೀಕ್ಷೆಯನ್ನು ಆಧರಿಸಿ ರಾಜಧನ ಪಾವತಿ ಬಾಕಿ ಮತ್ತು ದಂಡ ವಿಧಿಸಲು ಮುಂದಾಗಿರುವ ಕ್ರಮವನ್ನು ಕರ್ನಾಟಕ ಕ್ವಾರಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಒಕ್ಕೂಟ ತೀವ್ರವಾಗಿ ವಿರೋಧಿಸಿದೆ.

ಪ್ರೆಸ್ ಕ್ಲಬ್ ಸಭಾಂಗಣದಲ್ಲಿ ಫೆಡರೇಷನ್ ಆಫ್ ಕರ್ನಾಟಕ ಕ್ವಾರಿ ಮತ್ತು ಸ್ಟೋನ್ ಕ್ರಷರ್ ಓನರ್ಸ್ ಅಸೋಸಿಯೇಷನ್ ಅಧ್ಯಕ್ಷ ರವೀಂದ್ರ ಶೆಟ್ಟಿ ಮಾತನಾಡಿ, 2023ರಲ್ಲಿ ಕಾನೂನು ಬದ್ಧವಾಗಿ ಗಣಿ ನಡೆಸಲು ಸಾಧ್ಯವಾಗುತ್ತಿಲ್ಲವೆಂದು ಬೆಳಗಾವಿ ವಿಧಾನಸಭೆಯ ಅಧಿವೇಶನ ಸಂದರ್ಭದಲ್ಲಿ ಪ್ರತಿಭಟನೆ ನಡೆಸಲಾಗಿತ್ತು. ಕಳೆದ 10 ವರ್ಷಗಳಿಂದ ವಿವಿಧ ಬೇಡಿಕೆಗಳಿಗಾಗಿ ಹೋರಾಟ ನಡೆಸಲಾಗುತ್ತಿದೆ. ಅಕ್ರಮ ಗಣಿಗಾರಿಕೆಗೆ ತಡೆ ಹಾಕಿ, ಪ್ರಾಮಾಣಿಕ ಗಣಿ ಮಾಲೀಕರಿಗೆ ಭದ್ರತೆ ಒದಗಿಸಬೇಕು. ಒಮ್ಮೆ ಮಾತ್ರದ ಇತ್ಯರ್ಥ ಯೋಜನೆಯಡಿ ರಾಜಧನ ಪಾವತಿ ಬಾಕಿಯನ್ನು ಪಾವತಿಸುವಂತೆ ಸರಕಾರ ಸೂಚಿಸಿದೆ. ಆದರೆ ವೈಜ್ಞಾನಿಕವಲ್ಲದ ಡ್ರೋನ್ ಸಮೀಕ್ಷೆ ಆಧರಿಸಿ ಕೋಟ್ಯಂತರ ರು. ದಂಡ ವಿಧಿಸಲಾಗುತ್ತಿದೆ. ಒಬ್ಬೊಬ್ಬ ಮಾಲೀಕರಿಗೆ ವಿಭಿನ್ನ ಪ್ರಮಾಣದಲ್ಲಿ ದಂಡ ನಿಗದಿಪಡಿಸಲಾಗಿದ್ದು, ಕನಿಷ್ಠ 50 ಲಕ್ಷದವರೆಗೆ ದಂಡ ವಿಧಿಸಲಾಗಿದೆ. ಇಷ್ಟೊಂದು ದೊಡ್ಡ ಮೊತ್ತ ಪಾವತಿಸುವುದು ಸಾಧ್ಯವಿಲ್ಲ ಎಂದು ಹೇಳಿದರು. ಒಕ್ಕೂಟದ ಉಪಾಧ್ಯಕ್ಷ ಕಿರಣ್ ಜೈನ್ ಮಾತನಾಡಿ, ಸಾರ್ವಜನಿಕ ಕಾಮಗಾರಿ ಇಲಾಖೆ, ವಸತಿ ಇಲಾಖೆ ಸೇರಿದಂತೆ ವಿವಿಧ ಸರಕಾರಿ ಕಾಮಗಾರಿಗಳಿಗೆ ಕಲ್ಲು ಮತ್ತು ಖನಿಜಗಳನ್ನು ಪೂರೈಸುವ ಗುತ್ತಿಗೆದಾರರ ಬಿಲ್ಗಳಿಂದಲೇ ಸಂಬಂಧಿತ ಇಲಾಖೆಗಳು ರಾಜಧನ ಪಾವತಿ ಮೊತ್ತವನ್ನು ಈಗಾಗಲೇ ಕಡಿತಗೊಳಿಸುತ್ತಿವೆ. ಹೀಗಿರುವಾಗ ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತೆ ಅದೇ ರಾಜಧನ ಪಾವತಿಯನ್ನು ಕ್ವಾರಿ ಮಾಲೀಕರಿಂದ ವಸೂಲಿ ಮಾಡುವುದು ದ್ವಿಗುಣ ವಸೂಲಿ ಆಗಿದ್ದು, ಇದು ಸಂಪೂರ್ಣ ಅನ್ಯಾಯ. ರಾಜಧನ ಪಾವತಿ ಸಂಗ್ರಹಣೆಯ ವ್ಯವಸ್ಥೆಯನ್ನು ಸರಕಾರ ಪಾರದರ್ಶಕವಾಗಿ ನಿಯಮಿತಗೊಳಿಸಬೇಕು ಹಾಗೂ ಕ್ವಾರಿ ಮತ್ತು ಸ್ಟೋನ್ ಕ್ರಷರ್ ಮಾಲೀಕರ ಮೇಲೆ ವಿಧಿಸಿರುವ ದಂಡ ಸಂಪೂರ್ಣವಾಗಿ ಹಿಂಪಡೆಯಬೇಕು. ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಯಲ್ಲಿರುವ ಸಂದರ್ಭದಲ್ಲಿ ದಂಡ ವಿಧಿಸುವುದು ಮತ್ತು ಪ್ರಸ್ತುತ ರಾಜಧನ ಪಾವತಿ ವಸೂಲಾತಿ ವಿಧಾನ ಕಾನೂನುಬಾಹಿರವಾಗಿದೆ ಎಂದು ಅವರು ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಅಧ್ಯಕ್ಷ ರವೀಂದ್ರ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ಪುರುಷೋತ್ತಮ್, ಗೌರವಾಧ್ಯಕ್ಷ ಆಶಾ ಪ್ರಸನ್ನ, ಉಪಾಧ್ಯಕ್ಷ ಕಿರಣ್ ಜೈನ್, ಪ್ರದೀಪ್, ಪ್ರಶಾಂತ್ ಉಪ್ಪರಗಿ, ಕಾರ್ಯದರ್ಶಿ ರಾಜೇಂದ್ರ ಪ್ರಸಾದ್, ಬಸವರಾಜ್, ವೆಂಕಟೇಶ್ ಇದ್ದರು.

ಪಂಚಾಯತ್ ರಾಜ್ ಇಂ.ವಿಭಾಗ ಮಡಿಕೇರಿ

ಸಂ:ಕಾ.ಇಂ/ಪಂ.ರಾ.ಇಂ.ವಿ-ಮಡಿಕೇರಿ/ಟೆಂಡರ್ ಪ್ರಕಟಣೆ ಸಂಖ್ಯೆ:/04/2026-27/585 ದಿನಾಂಕ:30-06-2026

"ಟೆಂಡರ್ ಪ್ರಕಟಣೆ"
(ಕೆ.ಪಿ.ಪಿ ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಈ ಕೆಳಗಿನ ಕಾಮಗಾರಿಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ವೇದಿಕೆ ಪದ್ಧತಿಯಲ್ಲಿ KW-2 ನಿಬಂಧನೆಗೊಳಪಟ್ಟು ಟೆಂಡರ್ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಕೋರಿದೆ.

ಕ್ರ.ಸಂ	ಕಾಮಗಾರಿಯ ವಿವರ	ಮೀಸಲಾತಿ	ಕಾಮಗಾರಿಯ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	ಕರ್ಣಂಗೇರಿ ಗ್ರಾಮದ ಸರ್ವೆ ನಂ: 542/1 ರಲ್ಲಿರುವ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಸತಿ ಗೃಹ ಕಟ್ಟಡದ ಉನ್ನತೀಕರಣ ಹಾಗೂ ಅಗತ್ಯ ಮೂಲಸೌಕರ್ಯ ಕಾಮಗಾರಿಗಳನ್ನು ನಿರ್ವಹಿಸುವುದು.	GEN	50.00
2	ಕರ್ಣಂಗೇರಿ ಗ್ರಾಮದ ಸರ್ವೆ ನಂ: 542/1 ರಲ್ಲಿರುವ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ವಸತಿ ಗೃಹ ಕಟ್ಟಡದ ಮೇಲ್ಭಾಗಕ್ಕೆ ಮಳೆಯಿಂದ ರಕ್ಷಣೆಗಾಗಿ ಸ್ಟೀಲ್ ರೂಫ್ ನಿರ್ಮಿಸಿ ಹೆಂಚುಗಳನ್ನು ಅಳವಡಿಸುವುದು, ಕಾರ್ ಪಾರ್ಕಿಂಗ್ ಶೆಡ್ ನಿರ್ಮಿಸುವುದು ಹಾಗೂ ಇತರ ಅವಶ್ಯಕ ಕಾಮಗಾರಿಗಳನ್ನು ನಿರ್ವಹಿಸುವುದು.	GEN	50.00
3	ಕೆ.ಬಾಡಗ ಗ್ರಾಮದಲ್ಲಿರುವ ಕೊಡಗು ಜಿಲ್ಲಾ ಪಂಚಾಯತ್ ಕಚೇರಿ ಕಟ್ಟಡಕ್ಕೆ ಸ್ಟೀಲ್ ರೂಫ್ ನಿರ್ಮಿಸಿ ಶೀಟ್ ಅಳವಡಿಸುವುದು, ಮುಖ್ಯ ಸಭಾಂಗಣದ ಹಿಂದಿನ ಮೂರು ಬಾಗಿಲುಗಳನ್ನು ಬದಲಾಯಿಸಿ ಹಿಂಭಾಗದ ಶೀಟ್ ವಿಸ್ತರಿಸುವುದು ಹಾಗೂ ಮೇನ್ ಗೇಟ್ ಪಕ್ಕ ರಕ್ಷಣಾತ್ಮಕ ತಡೆಗೋಡೆ ನಿರ್ಮಾಣ ಹಾಗೂ ಕಟ್ಟಡದ ಮೊದಲ ಹಾಗೂ ಎರಡನೇ ಮಹಡಿಯಲ್ಲಿ ರೈಲಿಂಗ್ ಗೆ ರಕ್ಷಣಾತ್ಮಕ ಗ್ಲಾಸ್ ಅಳವಡಿಸುವುದು,	GEN	40.00

1. ಭರ್ತಿಮಾಡಿದ ಟೆಂಡರ್‌ಗಳನ್ನು KPP ಪೋರ್ಟಲ್ ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: **20-07-2026 ಸಂಜೆ 5:00 ಗಂಟೆಯವರೆಗೆ**
2. ಟೆಂಡರ್‌ಗಳ ಬಿಡ್ ತೆರೆಯುವ ದಿನಾಂಕ: **21-07-2026 ಸಂಜೆ 5:00 ಗಂಟೆ ನಂತರ.**
3. ಮಳೆಗಾಲ ಸಮೀಪಿಸಿರುವ ಕಾರಣ ಈ ಮೇಲಿನ ಕಾಮಗಾರಿಗಳಿಗೆ ಸಮಯಾವಕಾಶದ ಕೊರತೆ ಇರುವುದರಿಂದಾಗಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.

ಟೆಂಡರ್ ಪ್ರಕಟಣೆ ಷರತ್ತು ಹಾಗೂ ಕಾಮಗಾರಿಗಳ ವಿವರಗಳನ್ನು ವಿಭಾಗ ಕಚೇರಿಯಲ್ಲಿ ಅಥವಾ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ (www.kppp.karnataka.gov.in) ನಲ್ಲಿ ಪಡೆಯಬಹುದಾಗಿದೆ.

ಕಾರ್ಯಪಾಲಕ ಇಂಜಿನಿಯರ್
ಪಂಚಾಯತ್ ರಾಜ್ ಇಂ.ವಿಭಾಗ
ಮಡಿಕೇರಿ

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ. Telephone: 08392 -276250
e-mail: dhobellari@gmail.com

No.DHOB/ALS/MPF/02/2025-26/Call-3 Date: 29-6-2026

ಕರೆ–3 ಇ–ಟೆಂಡರ್ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬಳ್ಳಾರಿ ವತಿಯಿಂದ ಜಿಲ್ಲಾ ಆಸ್ಪತ್ರೆ ಬಳ್ಳಾರಿ ಇಲ್ಲಿಗೆ 02 ಎಎಲ್‌ಎಸ್ ಆಂಬುಲೆನ್ಸ್ ವಾಹನವನ್ನು ಮಾನ್ಯ ಲೋಕಸಭಾ ಸದಸ್ಯರ ಅನುದಾನದ ಅಡಿಯಲ್ಲಿ ಖರೀದಿಸಲು ಕರೆ–3 ಇ–ಟೆಂಡರ್ ಆಹ್ವಾನಿಸಲಾಗಿದೆ, ಸದರಿ ಇ–ಟೆಂಡರ್‌ನ್ನು **https://kppp.karnataka.gov.in/#/portal/portal-home**ನಲ್ಲಿ ವೀಕ್ಷಣೆ ಹಾಗೂ ಡೌನ್‌ಲೋಡ್‌ಗೆ ಲಭ್ಯ ವಿರುತ್ತದೆ ಇ–ಟೆಂಡರ್ ಮೊತ್ತ ಹಾಗೂ ಕೊನೆಯ ದಿನಾಂಕ & ಟೆಂಡರ್ ಇಂಡೆಂಟ್ ಸಂಖ್ಯೆ ಈ ಕೆಳಕಂಡಂತೆ ಇರುತ್ತದೆ.

1.ಇ–ಟೆಂಡರ್ ಮೊತ್ತ ರೂ.80.00 ಲಕ್ಷಗಳು ಇರುತ್ತದೆ. ಕೊನೆಯ ದಿನಾಂಕ 09.07.2026 @ 17:00 ಗಂಟೆಗೆ

**ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ,
ಬಳ್ಳಾರಿ ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.**

ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/289

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂಖ್ಯೆ: ಬಿಡಿಎ/ಕಾನಿಅ/ಹೆಚ್‌ಪಿಡಿ–1/ಟೆಂಡರ್/ಟಿ–105/2026–27 ದಿನಾಂಕ: 01.07.2026

ಟೆಂಡರ್ ಆಹ್ವಾನ ಪ್ರಕಟಣೆ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ)

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಸತಿ ಯೋಜನೆ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದೆ. (ಇಂಡೆಂಟ್ ಸಂಖ್ಯೆ:ಬಿಡಿಎ/2026–27/ಬಿಡಿ/ವರ್ಕ್–ಇಂಡೆಂಟ್257)

ಟೆಂಡರ್ ವೇಳಾಪಟ್ಟಿ: (1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳು ಲಭ್ಯವಿರುವ ದಿನಾಂಕ: **01.07.2026.** (2) ಟೆಂಡರ್ ಪ್ರೀ–ಬಿಡ್ ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **03.07.2026, ಬೆಳಿಗ್ಗೆ 11.00 ಗಂಟೆ.** (3) ಟೆಂಡರ್ ಪ್ರೀ–ಬಿಡ್ ಸಭೆ ದಿನಾಂಕ ಮತ್ತು ಸಮಯ: **04.07.2026, ಮಧ್ಯಾಹ್ನ 3.00 ಗಂಟೆ.** (4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **30.07.2026, ಸಂಜೆ 4.00 ಗಂಟೆ.** (5) ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **31.07.2026, ಸಂಜೆ 4.30 ಗಂಟೆಯ ನಂತರ.**

ಆಸಕ್ತಿಯುಳ್ಳ ಗುತ್ತಿಗೆದಾರರು ಹೆಚ್ಚಿನ ವಿವರಗಳನ್ನು **https://kppp.karnataka.gov.in** ಮೂಲಕ ನೋಡಬಹುದು ಅಥವಾ ಹೆಚ್ಚಿನ ವಿವರಗಳಿಗಾಗಿ ಬಿಡಿಎಯ ವಸತಿ ಯೋಜನೆ ವಿಭಾಗ–1ಅನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.
ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ವಯೋವಿ–1, ಬೆಂಅಪ್ರಾ, ಬೆಂಗಳೂರು.

ಕಾವೇರಿ ವನ್ಯಜೀವಿ ಧಾಮದಲ್ಲಿ ಬೋರ್‌ವೆಲ್ ಸಮೀಕ್ಷೆಗೆ ಸಿಎಂ ಡಿ.ಕೆ.ಶಿವಕುಮಾರ್ ಗ್ರೀನ್ ಸಿಗ್ನಲ್

ಮೇಕೆದಾಟು ಯೋಜನೆಗೆ ಬಿಗ್ ಬೂಸ್ಟ್

ಬೆಂಗಳೂರು: ಬಹುನಿರೀಕ್ಷಿತ ಮೇಕೆದಾಟು ಸಮತೋಲನ ಜಲಾಶಯ ಯೋಜನೆಗೆ ರಾಜ್ಯ ಸರಕಾರ ಮತ್ತೊಂದು ಪ್ರಮುಖ ಹೆಜ್ಜೆ ಇಟ್ಟಿದೆ.

ಕಾವೇರಿ ವನ್ಯಜೀವಿ ಧಾಮದ ವ್ಯಾಪ್ತಿಯಲ್ಲಿ ಉದ್ದೇಶಿತ ಯೋಜನೆಗಾಗಿ ಬೋರ್‌ವೆಲ್ ಸಮೀಕ್ಷೆ ನಡೆಸುವ ಪ್ರಸ್ತಾವನೆಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅನುಮೋದನೆ ನೀಡಿದ್ದಾರೆ. ಮಂಗಳವಾರ ನಡೆದ ರಾಜ್ಯ ವನ್ಯಜೀವಿ ಮಂಡಳಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಡಿ.ಕೆ.ಶಿವಕುಮಾರ್ ಅವರು, ಈ ಪ್ರಸ್ತಾವನೆಯನ್ನು ರಾಷ್ಟ್ರೀಯ ವನ್ಯಜೀವಿ ಮಂಡಳಿ ಅನುಮೋದನೆಗಾಗಿ ತಕ್ಷಣ ಕಳುಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೇಕೆದಾಟು ಯೋಜನೆಗೆ ಅಗತ್ಯವಿರುವ ಎಲ್ಲ ಅನುಮತಿಗಳನ್ನು ಶೀಘ್ರದಲ್ಲಿ ಪಡೆಯುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಅವರು, ಈ ಯೋಜನೆಗೆ ಸಂಬಂಧಿಸಿದಂತೆ ತಮಿಳುನಾಡು ಸರಕಾರ ಎತ್ತಿರುವ ಆಕ್ಷೇಪಣೆಗಳ ಕುರಿತು ತಾಂತ್ರಿಕ ಅಂಶಗಳನ್ನು ಪರಿಶೀಲಿಸಿ, ಸಾಧ್ಯವಾದಷ್ಟು ಬೇಗ ಸಮಸ್ಯೆಗಳನ್ನು ಬಗೆಹರಿಸುವಂತೆ ಸೂಚಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾತನಾಡಿ, ಯೋಜನೆ ಜಾರಿಗೊಳಿಸಲು ಉದ್ದೇಶಿಸಿರುವ ಸ್ಥಳದಲ್ಲಿನ ಮಣ್ಣಿನ ಗುಣಮಟ್ಟ, ಬಂಡೆಗಳ ಸ್ಥಿತಿ ಹಾಗೂ ಭೂವೈಜ್ಞಾನಿಕ ಮಾಹಿತಿಯನ್ನು ತಿಳಿದುಕೊಳ್ಳಲು ಬೋರ್‌ವೆಲ್ ಸಮೀಕ್ಷೆ ನಡೆಸಲಾಗುತ್ತದೆ. ಈ ಸಮೀಕ್ಷೆಯ ವರದಿ ಆಧರಿಸಿ ಯೋಜನೆಯ ಸವಿಸ್ತಾರ ವರದಿ ಸಿದ್ಧಪಡಿಸಲಾಗುತ್ತದೆ ಎಂದು ಹೇಳಿದ್ದಾರೆ.

ಆದರೆ, ಸಮೀಕ್ಷೆ ಆರಂಭಿಸುವ ಮುನ್ನ ರಾಷ್ಟ್ರೀಯ ವನ್ಯಜೀವಿ ಮಂಡಳಿ, ಅರಣ್ಯ ಇಲಾಖೆ ಹಾಗೂ ಕೇಂದ್ರ ಸರಕಾರದ ಅನುಮತಿ ಕಡ್ಡಾಯವಾಗಿದೆ. ಸಮೀಕ್ಷೆಗಾಗಿ ಕೇವಲ 0.003 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಬಳಸಲು ಪ್ರಸ್ತಾವಿಸಲಾಗಿದೆ.

ಈ ಪ್ರಸ್ತಾವನೆಗೆ ಕೇಂದ್ರ ಸರಕಾರದಿಂದ ಶೀಘ್ರ ಅನುಮೋದನೆ ಪಡೆಯುವ ಅಗತ್ಯಬಿದ್ದರೆ ತಾವು ನೇರವಾಗಿ ಕೇಂದ್ರ ಸರಕಾರದೊಂದಿಗೆ ಮಾತುಕತೆ ನಡೆಸಲು ಸಿದ್ಧ ಎಂದು ಡಿ.ಕೆ.ಶಿವಕುಮಾರ್ ಅವರು ಸಭೆಯಲ್ಲಿ ತಿಳಿಸಿದರು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.



ಮಹತ್ವಾಕಾಂಕ್ಷಿ ಯೋಜನೆ

ಸುಮಾರು 9,000 ರು. ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಮೇಕೆದಾಟು ಯೋಜನೆ ರಾಜ್ಯ ಸರಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಒಂದಾಗಿದೆ. ಈ ಯೋಜನೆಯ ಮೂಲಕ ಬೆಂಗಳೂರು ನಗರಕ್ಕೆ 4.75 ಟಿಎಂಸಿ ಅಡಿ ಕುಡಿಯುವ ನೀರು ಪೂರೈಸುವುದು ಹಾಗೂ 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವ ಗುರಿ ಹೊಂದಲಾಗಿದೆ. ಯೋಜನೆ ಜಾರಿಗೊಳಿಸಲು ಒಟ್ಟು 1,079 ಹೆಕ್ಟೇರ್ ಅರಣ್ಯ ಭೂಮಿ ಅಗತ್ಯವಿದ್ದು, ಇದೇ ಕಾರಣಕ್ಕೆ ವಿವಿಧ ಪರಿಸರ ಮತ್ತು ವನ್ಯಜೀವಿ ಅನುಮತಿ ಅಗತ್ಯವಾಗಿವೆ.

ಮಾನವ-ವನ್ಯಜೀವಿ ಸಂಘರ್ಷದ ಬಗ್ಗೆ ಚರ್ಚೆ

ಸಭೆಯಲ್ಲಿ ಮಾನವ-ವನ್ಯಜೀವಿ ಸಂಘರ್ಷದ ಸಮಸ್ಯೆಯ ಬಗ್ಗೆಯೂ ಚರ್ಚೆ ನಡೆಯಿತು. ಬೆಂಗಳೂರು-ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ನಿರ್ಮಾಣದಿಂದ ವಿಶೇಷವಾಗಿ ರಾಮನಗರ ಮತ್ತು ಚನ್ನಪಟ್ಟಣ ಭಾಗಗಳಲ್ಲಿ ಆನೆ, ಹುಲಿ, ಚಿರತೆ ಸೇರಿದಂತೆ ಹಲವು ವನ್ಯಜೀವಿಗಳ ಸಾಂಪ್ರದಾಯಿಕ ಸಂಚಾರ ಮಾರ್ಗಗಳಿಗೆ ಅಡ್ಡಿಯಾಗಿದೆ ಎಂದು ವನ್ಯಜೀವಿ ಮಂಡಳಿ ಸದಸ್ಯರು ಮುಖ್ಯಮಂತ್ರಿ ಗಮನಕ್ಕೆ ತಂದರು. ಈ ಹಿನ್ನೆಲೆಯಲ್ಲಿ, ವನ್ಯಜೀವಿಗಳ ಸುರಕ್ಷಿತ ಸಂಚಾರಕ್ಕಾಗಿ ನಿರ್ಮಿಸಬೇಕಾಗಿದ್ದ ಅಂಡರ್‌ಪಾಸ್, ಸುರಂಗ ಮಾರ್ಗಗಳು ಹಾಗೂ ಮೇಲ್ಸೇತುವೆಗಳ ಕಾಮಗಾರಿಗಳು ಇನ್ನೂ ಪೂರ್ಣಗೊಂಡಿಲ್ಲ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಮಾಹಿತಿ ನೀಡಿದರು. ಇದೇ ವೇಳೆ ಬಂಡೀಪುರ ಮತ್ತು ನಾಗರಹೊಳೆ ಹುಲಿ ಮೀಸಲು ಪ್ರದೇಶಗಳಲ್ಲಿ ಸಫಾರಿ ಹಾಗೂ ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಪುನರಾರಂಭಿಸುವ ಕುರಿತು ಚರ್ಚೆ ನಡೆದಿದ್ದು, ಪ್ರವಾಸಿಗರ ಸುರಕ್ಷತೆಗೆ ಯಾವುದೇ ರೀತಿಯ ರಾಜಿ ಮಾಡಿಕೊಳ್ಳದೆ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಡಿ.ಕೆ.ಶಿವಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆಂದು ತಿಳಿದುಬಂದಿದೆ.

ಪಾದಚಾರಿ ಮಾರ್ಗ ಒತ್ತುವರಿ ತೆರವಿಗೆ ಜಿಬಿಎ ಸಮರ

← ಮೊದಲಪುಟದಿಂದ

ಸಾರ್ವಜನಿಕರ ಆಸ್ತಿಯಾದ ಪಾದಚಾರಿ ಮಾರ್ಗ ಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಅಥವಾ ಅಕ್ರಮ ನಿರ್ಮಾಣಗಳಿಗಾಗಿ ಬಳಸುವುದನ್ನು ತಡೆಯಲು ಸರಕಾರ ಈ ನಿರ್ಧಾರ ಕೈಗೊಂಡಿದೆ.

ಐದು ಪಾಲಿಕೆಗಳ ವ್ಯಾಪ್ತಿಯಲ್ಲಿ ತೆರವು ಸಮರ

ಬೆಂಗಳೂರಿನ ಐದೂ ನಗರ ಪಾಲಿಕೆಗಳ ಆಯುಕ್ತರ ನೇತೃತ್ವದಲ್ಲಿ, ಪೊಲೀಸ್ ಭದ್ರತೆ ಯೊಂದಿಗೆ ಬೃಹತ್ ತೆರವು ಕಾರ್ಯಾಚರಣೆ ನಡೆಯಿತು. ಬೆಂಗಳೂರು ಪೂರ್ವ ಪಾಲಿಕೆಯ ವ್ಯಾಪ್ತಿಯ ಮಾರತಹಳ್ಳಿ, ಐಟಿಪಿಎಲ್, ವರ್ತೂರು, ಟಿನ್ ಫ್ಯಾಕ್ಟರಿ ಮತ್ತು ರಾಮ ಮೂರ್ತಿನಗರ ಭಾಗದಲ್ಲಿ ಅಕ್ರಮ ಶೆಡ್ ಮತ್ತು ನಾಮಫಲಕಗಳನ್ನು ತೆರವುಗೊಳಿಸಲಾಯಿತು. ಬೆಂಗಳೂರು ಕೇಂದ್ರ ಪಾಲಿಕೆಯ ವ್ಯಾಪ್ತಿಯಲ್ಲಿ ಎಂಜಿ ರಸ್ತೆ, ಇಂದಿರಾನಗರ, ಮೆಜೆಸ್ಟಿಕ್ ಮತ್ತು ಜಯನಗರದಂತಹ ಜನನಿಬಿಡ ಪ್ರದೇಶಗಳಲ್ಲಿ ಪಾದಚಾರಿ ಮಾರ್ಗಗಳನ್ನು ಆವರಿಸಿದ್ದ ಕಟ್ಟಡ ಸಾಮಗ್ರಿ ಮತ್ತು ಅನಧಿಕೃತ ರಚನೆಗಳನ್ನು ತೆರವುಗೊಳಿಸಲಾಯಿತು.

ಅಕ್ರಮ ನಿರ್ಮಾಣಗಳ ತೆರವು: ಬೆಂಗಳೂರು ದಕ್ಷಿಣ ಪಾಲಿಕೆ ವ್ಯಾಪ್ತಿಯಲ್ಲಿ ಉತ್ತರಹಳ್ಳಿ, ಬಿಟಿಎಂ ಲೇಔಟ್, ಕೋರಮಂಗಲ ಮತ್ತು ಜೆಪಿ ನಗರದಲ್ಲಿ ವ್ಯಾಪಾರಿಗಳು ಪಾದಚಾರಿ ಮಾರ್ಗ ವನ್ನೇ ತಮ್ಮ ವಿಸ್ತರಣಾ ಜಾಗವನ್ನಾಗಿ ಮಾಡಿ ಕೊಂಡಿದ್ದನ್ನು ಅಧಿಕಾರಿಗಳು ನೆಲಸಮಗೊಳಿ ಸಿದರು. ಬೆಂಗಳೂರು ಉತ್ತರ ಪಾಲಿಕೆ ವ್ಯಾಪ್ತಿ ಯಲ್ಲಿ ಹೆಬ್ಬಾಳ ಮತ್ತು ಯಲಹಂಕ ಸುತ್ತಮುತ್ತಲಿನ ರಸ್ತೆಗಳಲ್ಲಿ ಅಕ್ರಮ ಒತ್ತುವರಿಗಳನ್ನು ತೆರವುಗೊಳಿಸಲಾಯಿತು. ಬೆಂಗಳೂರು ಪಶ್ಚಿಮ ಪಾಲಿಕೆ ವ್ಯಾಪ್ತಿಯಲ್ಲಿ ಮೈಸೂರು ರಸ್ತೆ, ರಾಜಾಜಿನಗರ ಮತ್ತು ಮಾಗಡಿ ರಸ್ತೆಯಂತಹ ಪ್ರಮುಖ ಮಾರ್ಗಗಳಲ್ಲಿ ಜೆಸಿಬಿಗಳ ಬಳಕೆಯ ಮೂಲಕ ಅಕ್ರಮ ನಿರ್ಮಾಣಗಳನ್ನು ತೆರವುಗೊಳಿಸಲಾಯಿತು.

ತೆರವುಗೊಂಡ ಅಡೆತಡೆಗಳೇನು? ಕಾರ್ಯಾಚರ ಣೆಯ ವೇಳೆ ಅಕ್ರಮ ನಾಮಫಲಕಗಳು, ಅಂಗಡಿಗಳ ಮುಂಭಾಗ ಹಾಕಲಾಗಿದ್ದ ಶೀಟ್‌ಗಳು, ಮೆಟ್ಟಿಲುಗಳು, ಓಎಫ್‌ಸಿ ಕೇಬಲ್‌ಗಳು, ಕಟ್ಟಡ ತ್ಯಾಜ್ಯಗಳು, ತಳ್ಳುಗಾಡಿಗಳು ಮತ್ತು ಶಾಶ್ವತ ಪೆಟ್ಟಿಗೆಗಳನ್ನು ವಶಕ್ಕೆ ಪಡೆಯಲಾಗಿದೆ. ಅತಿಕ್ರಮಣಕಾರರಿಗೆ ಮೊದಲೇ ಎಚ್ಚರಿಕೆ ನೀಡಿದ್ದರೂ ಮಣಿಯದ ಕಾರಣ, ಇದೀಗ ಬಲವಂತದ ತೆರವು ಕಾರ್ಯಾಚರಣೆಯನ್ನು ಅನಿವಾರ್ಯವಾಗಿ ಕೈಗೊಳ್ಳಲಾಗಿದೆ. ವ್ಯಾಪಾರಿ ಗಳಿಗೆ ಕಠಿಣ ಎಚ್ಚರಿಕೆ ನೀಡಿರುವ ಅಧಿಕಾರಿಗಳು ಮುಂದಿನ ಶುಕ್ರವಾರದೊಳಗೆ ಪಾದಚಾರಿ ಮಾರ್ಗವನ್ನು ಸ್ವಯಂಪ್ರೇರಿತವಾಗಿ ತೆರವುಗೊಳಿ ಸದಿದ್ದರೆ, 5 ಸಾವಿರ ರು. ದಂಡ ವಿಧಿಸುವುದರ ಜತೆಗೆ ಪಾದಚಾರಿ ಮಾರ್ಗದಲ್ಲಿಟ್ಟಿರುವ ಎಲ್ಲಾ ಸರಕುಗಳನ್ನು ಜಪ್ತಿ ಮಾಡಲಾಗುವುದು ಎಂದು ಅಧಿಕಾರಿಗಳು ಎಚ್ಚರಿಸಿದ್ದಾರೆ.

ಜನ್ಮಸಿದ್ಧ ಪೌರತ್ವ ರದ್ದು ಆದೇಶಕ್ಕೆ ತಡೆ

← ಮೊದಲಪುಟದಿಂದ

ಭಾರತೀಯರು ಸೇರಿದಂತೆ ಲಕ್ಷಾಂತರ ವಲಸಿಗರಿಗೆ ಈ ಕಾನೂನು ತೊಡಕಾಗಿ ಪರಿಣಮಿಸಿತ್ತು.

ಟ್ರಂಪ್ ಅವರ ವಲಸೆ ನೀತಿಗಳು ಜನಾಂಗೀಯ ಹಾಗೂ ಧಾರ್ಮಿಕ ತಾರತಮ್ಯದಿಂದ ಕೂಡಿವೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು. ಇದೀಗ ಸುಪ್ರೀಂ ಕೋರ್ಟ್ ಆದೇಶದಿಂದ ವಲಸೆ ನಿಯಂತ್ರಣಕ್ಕೆ ಸಂಬಂಧಿಸಿದ ಟ್ರಂಪ್ ಅವರ ಪ್ರಮುಖ ಯೋಜನೆಗೆ ದೊಡ್ಡ ಮಟ್ಟದ ಹಿನ್ನಡೆಯಾಗಿದೆ.

ಟ್ರಂಪ್ ಅವರ ಆದೇಶವು ವಿದೇಶಿ ಪ್ರಜೆಗಳ ಮಕ್ಕಳನ್ನು ಒಳಗೊಂಡಂತೆ ಅಮೆರಿಕದ ನೆಲದಲ್ಲಿ ಹುಟ್ಟಿದ ಮಕ್ಕಳಿಗೆ ಪೌರತ್ವವನ್ನು ನೀಡುವ ಅಮೆರಿಕ ಸಂವಿಧಾನದ 14ನೇ ತಿದ್ದುಪಡಿಯಲ್ಲಿರುವ ನಿಯಮವನ್ನು ಉಲ್ಲಂಘಿಸುತ್ತದೆ ಎಂದು ಮುಖ್ಯ ನ್ಯಾಯಮೂರ್ತಿ ಜಾನ್ ರಾಬರ್ಟ್ಸ್ ಹೇಳಿದ್ದಾರೆ.

1898ರ 'ಯುನೈಟೆಡ್ ಸ್ಟೇಟ್ಸ್ / ವಾಂಗ್ ಕಿಮ್ ಆರ್ಕ್' ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಈಗಾಗಲೇ ಜನ್ಮಸಿದ್ಧ ಪೌರತ್ವದ ಪ್ರಶ್ನೆಯನ್ನು ಇತ್ಯರ್ಥಗೊಳಿಸಿದೆ ಅರ್ಜಿದಾರರು ವಾದಿಸಿದ್ದರು.

ಸಂಸದ ಡಾ.ಕೆ.ಸುಧಾಕರ್ ವಿರುದ್ಧ ತನಿಖೆಗೆ ಆಗ್ರಹಿಸಿ ಎಸ್‌ಪಿಗೆ ದೂರು

ಚಿಕ್ಕಬಳ್ಳಾಪುರ: ಜೂನ್ 27ರಂದು ನಡೆದ ಕೆಂಪೇಗೌಡ ಜಯಂತಿ ಕಾರ್ಯಕ್ರಮದ ವೇಳೆ ಉಂಟಾದ ಗದ್ದಲ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸದ ಡಾ.ಕೆ.ಸುಧಾಕರ್ ಹಾಗೂ ಅವರ ತಂದೆ ಪಿ.ಎನ್. ಕೇಶವರೆಡ್ಡಿ ಅವರ ಪಾತ್ರದ ಬಗ್ಗೆಯೂ ತನಿಖೆ ನಡೆಸುವಂತೆ ಆಗ್ರಹಿಸಿ ತಾಲೂಕು ಬಲಿಜ ಸಂಘದ ಮುಖಂಡರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಬುಧವಾರ ದೂರು ಸಲ್ಲಿಸಿದರು.

ತಾಲೂಕು ಬಲಿಜ ಸಂಘದ ಅಧ್ಯಕ್ಷ ಡಾ.ಬಿ.ವಿ.ಮಂಜುನಾಥ್ ನೇತೃತ್ವದಲ್ಲಿ ಎಸ್‌ಪಿ ಕಚೇರಿಗೆ ತೆರಳಿದ ಮುಖಂಡರು, ಘಟನೆಯ ವಿಡಿಯೊ ದೃಶ್ಯಾವಳಿ ಮತ್ತು ಲಿಖಿತ ಮನವಿಯನ್ನು ಸಲ್ಲಿಸಿ, ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ನಡೆದ ಗದ್ದಲ, ಶಾಸಕರ ವಾಹನದ ಮೇಲೆ ಕಲ್ಲು ಹಾಗೂ ಚಪ್ಪಲಿ ಎಸೆದ ಆರೋಪ ಸೇರಿದಂತೆ ಎಲ್ಲ ಬೆಳವಣಿಗೆಗಳ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ದೂರಿನಲ್ಲಿ, ಕಾರ್ಯಕ್ರಮದ ವೇಳೆ ಗದ್ದಲ ಸೃಷ್ಟಿಸಿ ಸರಕಾರಿ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದ ಘಟನೆಗಳ ಹಿಂದೆ ಸಂಸದರ ಬೆಂಬಲಿಗರ ಪಾತ್ರವಿದೆ ಎಂದು ಆರೋಪಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ಸಂಸದ ಡಾ.ಕೆ.ಸುಧಾಕರ್ ಹಾಗೂ ಪಿ.ಎನ್.ಕೇಶವರೆಡ್ಡಿ ಅವರನ್ನು ವಿಚಾರಣೆಗೆ ಒಳಪಡಿಸಿದರೆ ಪ್ರಕರಣದ ಸತ್ಯಾಸತ್ಯತೆ ಹೊರಬರಲಿದೆ ಎಂದು ಮನವಿ ಮಾಡಲಾಗಿದೆ. ಅಲ್ಲದೆ, ಕಾರ್ಯಕ್ರಮದ ಬಳಿಕ ನೀಡಲಾದ ಹೇಳಿಕೆಗಳ ಬಗ್ಗೆಯೂ ತನಿಖೆ ನಡೆಸಿ, ಪ್ರಕರಣದ ಎಲ್ಲ ಆಯಾಮಗಳನ್ನು ಪರಿಶೀಲಿಸುವಂತೆ ದೂರಿನಲ್ಲಿ ಕೋರಲಾಗಿದೆ.

ದೂರು ಸ್ವೀಕರಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಅಧಿಕಾರಿಗಳು, ಮನವಿಯನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ತಾಲೂಕು ಬಲಿಜ ಸಂಘದ ಅಧ್ಯಕ್ಷ ಡಾ.ಬಿ.ವಿ.ಮಂಜುನಾಥ್, ಉಪಾಧ್ಯಕ್ಷ ಲೋಕೇಶ್ ಸೇರಿದಂತೆ ಸಂಘದ ಪದಾಧಿಕಾರಿಗಳು ಹಾಗೂ ನೂರಾರು ಸದಸ್ಯರು ಉಪಸ್ಥಿತರಿದ್ದರು.

ಸಂಸದ ಡಾ.ಕೆ.ಸುಧಾಕರ್ ಹಾಗೂ ಅವರ ತಂದೆ ಪಿ.ಎನ್.ಕೇಶವರೆಡ್ಡಿ ಅವರ ಪಾತ್ರದ ಬಗ್ಗೆಯೂ ತನಿಖೆ ನಡೆಸುವಂತೆ ಆಗ್ರಹಿಸಿ ತಾಲೂಕು ಬಲಿಜ ಸಂಘದ ಮುಖಂಡರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಬುಧವಾರ ದೂರು ಸಲ್ಲಿಸಿದರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.

ಸಂ:ಕಾನಿಇಂ:ಲೋಇ:ವಿಕೊ:ಟೆಂ:KW-4:2026-27:1117 ದಿನಾಂಕ:30–06–2026

–: ಅಲ್ಪಾವಧಿ ಟೆಂಡರ್ ಪ್ರಕಟಣೆ :–

2026–27ನೇ ಸಾಲಿನ ಲೆಕ್ಕ ಶೀರ್ಷಿಕೆ : 5054–80–190–0–01–132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ, 2025–26ನೇ ಸಾಲಿನ ಲೆಕ್ಕ ಶೀರ್ಷಿಕೆ : ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಮ್ಯಾಕ್ರೋ – ಸಾಮಾನ್ಯ, 2025–26ನೇ ಸಾಲಿನ ಲೆಕ್ಕ ಶೀರ್ಷಿಕೆ : ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಮೈಕ್ರೋ ಮೂಲಭೂತ ಸೌಕರ್ಯ– ಸಾಮಾನ್ಯ ಮತ್ತು 8443–ಠೇವಣಿ ವಂತಿಕೆ ಮತ್ತು 2023–24ನೇ ಸಾಲಿನ ಲೆಕ್ಕ ಶೀರ್ಷಿಕೆ: 5457–00–115–0–02–132 ಅಡಿಗಳಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999–2000 ರ ಪ್ರಕಾರ ಪಾರದರ್ಶಕತೆ ಆ್ಯಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್‌ಡಾಕೂಮೆಂಟ್ KW-4 ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ http://kppp.karnataka.gov.in ಮುಖಾಂತರ ಭಾಗವಹಿಸಬಹುದು. ಒಟ್ಟು 08 ಕಾಮಗಾರಿಗಳಿಗೆ (ವರ್ಕ ಇಂಡೆಂಟ್ ಸಂಖ್ಯೆ: 36603, 36989, 36387, 36971, 36723, 36147, 36710 & 36635) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **13–07–2026** ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **14–07–2026** ಸಮಯ 16.30 ಗಂಟೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **17–07–2026** ಸಮಯ 11.00 ಗಂಟೆ ಕನಿಷ್ಠ ಅಂದಾಜು ಮೊತ್ತ ರೂ. **100.00 ಲಕ್ಷಗಳು** ಹಾಗೂ ಗರಿಷ್ಠ ಅಂದಾಜು ಮೊತ್ತ ರೂ. **970.00 ಲಕ್ಷಗಳು** ಇರುತ್ತದೆ. ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ, ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು.

**ಸಹಿ/–ಕಾರ್ಯನಿರ್ವಾಹಕ ಇಂಜಿನೀಯರು,
ಲೋ.ಇ ವಿಭಾಗ, ಕೊಪ್ಪಳ**

ಡಿಐಪಿಆರ್/ಕೊಪ್ಪಳ/204/ಕೆಎಸ್‌ಎಂಸಿಎ/2026–27

ಗೃಹಜ್ಯೋತಿಗೆ ಕತ್ತರಿ ಹಾಕಲು ಮನೆ ಮನೆ ಪರಿಶೀಲನೆ

ಬೆಂಗಳೂರು: ಚುನಾವಣೆಗೆ ಮುನ್ನ ಕಾಕಾ ಪಾಟೀಲನಿಗೂ ಫ್ರೀ, ಮಹಾದೇವಪ್ಪನಿಗೂ ಫ್ರೀ, ಎಲ್ಲರಿಗೂ ಫ್ರೀ ಎಂದು ಗಂಟಲು ಹರಿದುಕೊಳ್ಳುವಂತೆ ಬೊಬ್ಬೆ ಹೊಡೆದು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರ ಇಂದು ಕರ್ನಾಟಕದ ಜನತೆಗೆ ದ್ರೋಹ ಬಗೆಯಲು ಹೊರಟಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ವಾಗ್ದಾಳಿ ನಡೆಸಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಅವರು, ಖಜಾನೆ ಸಂಪೂರ್ಣ ದಿವಾಳಿಯಾಗಿರುವುದನ್ನು ಮುಚ್ಚಿಡಲು ಈಗ ಗೃಹಜ್ಯೋತಿ ಯೋಜನೆಯ ಫಲಾನುಭವಿಗಳ ಸಂಖ್ಯೆಗೆ ಕತ್ತರಿ ಹಾಕಲು ಈ ಸರಕಾರ ಮನೆ-ಮನೆ ಪರಿಶೀಲನೆಯ ಹೊಸ ಹುನ್ನಾರ ನಡೆಸುತ್ತಿದೆ ಎಂದು ಕಿಡಿಕಾರಿದ್ದಾರೆ.

ಬಡವರ ಹೊಟ್ಟೆಗೆ ಹೊಡೆಯುವ, ಸುಳ್ಳು ಭರವಸೆಗಳ ಮೂಲಕ ಅಧಿಕಾರ ಹಿಡಿದು ಈಗ ಜನರನ್ನು ದಾಖಲೆಗಳ ಹೆಸರಿನಲ್ಲಿ ಸತಾಯಿಸುತ್ತಿರುವ ಈ ಜನವಿರೋಧಿ ಸರಕಾರ ಜನರ ಹಕ್ಕನ್ನು ಕಸಿದುಕೊಳ್ಳಲು ನಾವು ಬಿಡುವುದಿಲ್ಲ.
- ಆರ್.ಅಶೋಕ
ವಿಧಾನಸಭೆ ವಿರೋಧ ಪಕ್ಷದ ನಾಯಕ

ಗೃಹಜ್ಯೋತಿ ಫಲಾನುಭವಿಗಳ ಮರುಪರಿಶೀಲನೆ ಹೆಸರಿನಲ್ಲಿ ಮನೆಗೆ ಬರುವ ಎಸ್ಕಾಂ ಸಿಬ್ಬಂದಿಗೆ ಪ್ಯಾನ್ ಕಾರ್ಡ್ ಮತ್ತು ಜಾತಿ ಪ್ರಮಾಣ ಪತ್ರವನ್ನು ತೋರಿಸಬೇಕಂತೆ. ಚುನಾವಣೆಗೆ ಮುನ್ನ ಅಧಿಕಾರಕ್ಕೆ ಬರುವ ಹಪಾಹಪಿಯಲ್ಲಿ ಯಾವುದೇ ಷರತ್ತಿಲ್ಲದೆ ಎಲ್ಲರಿಗೂ 200 ಯೂನಿಟ್ ಉಚಿತ ವಿದ್ಯುತ್ ಎಂದು ಹೇಳಿ, ಈಗ ಆದಾಯ ಮತ್ತು ಜಾತಿಯ ಆಧಾರದ ಮೇಲೆ ಅರ್ಹತೆ ನಿರ್ಧಾರ ಮಾಡಲು ಹೊರಟಿರುವುದು ಯಾವ ಸೀಮೆ ಗ್ಯಾರೆಂಟಿ ಸ್ವಾಮಿ? ಇಷ್ಟಕ್ಕೂ ಉಚಿತ ವಿದ್ಯುತ್ ನೀಡಲು ಜಾತಿ ಪ್ರಮಾಣ ಪತ್ರ ಯಾಕೆ? ಎಂದು ಪ್ರಶ್ನಿಸಿದ್ದಾರೆ.

ಸಮಗ್ರ ಶಿಕ್ಷಣ ಕರ್ನಾಟಕ
ಉಪನಿರ್ದೇಶಕರು ಹಾಗೂ ಪದನಿಮಿತ್ಯ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಾರ್ಯಾಲಯ, ಕಲಬುರಗಿ

ಸಂಖ್ಯೆ:ಅ1/ಸಶಿಕ/ಕೆಕೆಜಿಬಿವಿ/ಆ.ಪೂ./14/2026–27 ದಿನಾಂಕ: 30–06–2026

:: ಟೆಂಡರ್ ಪ್ರಕಟಣೆ ::

ಸಮಗ್ರ ಶಿಕ್ಷಣ ಕರ್ನಾಟಕ, ಜಿಲ್ಲಾ ಯೋಜನಾ ಕಛೇರಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಸೇವೆ ಸರಬರಾಜು ಇ–ಪ್ರೋಕ್ಯೂರಮೆಂಟ್ ಟೆಂಡರಗಳನ್ನು ಆಹ್ವಾನಿಸಲಾಗಿದೆ.

2026–27ನೇ ಸಾಲಿಗೆ ಕಲಬುರಗಿ ಜಿಲ್ಲೆಯ ಕೆ.ಕೆ.ಜಿ.ಬಿ.ವಿ. ವಸತಿ ಶಾಲೆಗಳಿಗೆ ವಸತಿ ಶಾಲೆಯಲ್ಲಿಯೇ ಸಿದ್ಧಪಡಿಸಿದ ಆಹಾರ ಪೂರೈಕೆ ಮಾಡುವ ಮರು ಟೆಂಡರ್ ಅಂದಾಜು ಮೊತ್ತ: ರೂ. **90,00,000/-,** ಇ.ಎಂ.ಡಿ. ಮೊತ್ತ ರೂ. 1,80,000/–.

1) ಟೆಂಡರ್ ಪ್ರಕಟಣೆ ದಿನಾಂಕ: **30–06–2026**, 2) ಟೆಂಡರ ಫಾರಂ ಅಪಲೋಡ ಮಾಡಲು ಕೊನೆಯ ದಿನಾಂಕ ಮತ್ತು ವೇಳೆ : **09–07–2026**, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **10–07–2026,** 4) ಹಣಕಾಸಿನ ಬಿಡ್ ತೆರೆಯುವ ದಿನಾಂಕ: **13–07–2026.**

ಮೇಲಿನ ಟೆಂಡರ ಸಂಪೂರ್ಣ ವಿವರಗಳನ್ನು (www.kppp.karnataka.gov.in) ಪೋರ್ಟಲ್‌ನಲ್ಲಿ ದಸ್ತಾವೇಜುಗಳನ್ನು ಗಮನಿಸುವುದು.

ಸಹಿ/– ಉಪನಿರ್ದೇಶಕರು ಹಾಗೂ ಪದನಿಮಿತ್ಯ
ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/280/ಕೆ.ಎಸ್.ಎಂ.ಸಿ.&ಎ/2026–27

ಸುಳ್ಳು ಸುದ್ದಿಗಳ ಪರಿಣಾಮ ಏನು ಎನ್ನುವ ಎಚ್ಚರಿಕೆ ಮಾಧ್ಯಮಗಳಿಗೆ ಇರಬೇಕು

ಫೇಕ್ ಸುದ್ದಿ ಮಾಡಬೇಡಿ: ಸಿಎಂ ಡಿಕೆಶಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಿರ್ಭೀತಿಯ ಪತ್ರಿಕಾ ವೃತ್ತಿ ಇಂದಿನ ಸಂದರ್ಭದಲ್ಲಿ ಅತ್ಯಂತ ಸವಾಲಿನ ಕೆಲಸವಾಗಿದ್ದು, ತತ್ವಬದ್ಧ ವೃತ್ತಿಪರತೆ ಇಂದಿನ ಅಗತ್ಯವಾಗಿದೆ. ಇದರಿಂದ ಆ ಸವಾಲನ್ನು ಗೆಲ್ಲಬಹುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಗಾಂಧಿ ಭವನದಲ್ಲಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಪತ್ರಕರ್ತರು ವೃತ್ತಿಯ ತತ್ವ, ನೈತಿಕತೆ ಮತ್ತು ಆತ್ಮಸಾಕ್ಷಿಗೆ ಅನುಗುಣವಾಗಿ ಕಾರ್ಯನಿರ್ವಹಿಸಿದರೆ ಸಮಾಜಕ್ಕೆ ಒಳಿತಾಗುತ್ತದೆ. ಫೇಕ್ ನ್ಯೂಸ್‌ನಿಂದ ಪತ್ರಿಕಾ ವೃತ್ತಿ ಹೊರಬರಬೇಕಿದೆ. ಮೇಕೆದಾಟು ಪಾದಯಾತ್ರೆಯ ವೇಳೆ ನಿತ್ರಾಣಗೊಂಡು ಕಾರ್ಯಕರ್ತರ ತಳ್ಳಾಟದಿಂದ ತೊಂದರೆಯಾಗಿದ್ದ ಘಟನೆ ಕುಡಿದು ನಡೆದುಕೊಂಡು ಬರುತ್ತಿ ದ್ದಾರೆ ಎಂಬ ರೀತಿಯಲ್ಲಿ ಬಿಂಬಿಸಲಾಗಿತ್ತು. ಇದು ಜನರಿಗೆ ತಪ್ಪು ಸಂದೇಶ ನೀಡುವ ಉದ್ದೇಶಪೂರ್ವಕ ಪ್ರಯತ್ನವಾಗಿತ್ತು ಎಂದು ಹೇಳಿದರು.

ನಾನು ತಪ್ಪು ಮಾಡಿದರೆ ಅದನ್ನು ಬಹಿರಂಗ ಪಡಿಸಿ. ಆದರೆ ಸುಳ್ಳು ಸುದ್ದಿಗಳನ್ನು ಪ್ರಕಟಿಸಬೇಡಿ, ಪ್ರಸಾರ ಮಾಡಬೇಡಿ. ಸುದ್ದಿ ಪ್ರಕಟವಾಗುವವರೆಗೆ ಅದು ಪತ್ರಕರ್ತರದ್ದಾಗಿರುತ್ತದೆ. ಪ್ರಕಟವಾದ ನಂತರ ಅದು ಸಮಾಜದ ಆಸ್ತಿಯಾಗುತ್ತದೆ. ಆದ್ದರಿಂದ ಪ್ರತಿಯೊಂದು ಸುದ್ದಿಯಲ್ಲೂ ಸತ್ಯ ಮತ್ತು ಪ್ರಾಮಾಣಿಕತೆ ಇರಬೇಕು. ಮಹಾತ್ಮ ಗಾಂಧಿ ಸೇರಿದಂತೆ ಅನೇಕ ಮಹನೀಯರು ಪತ್ರಕರ್ತರಾಗಿ ಪತ್ರಿಕಾ ವೃತ್ತಿಯ ಘನತೆಯನ್ನು ಹೆಚ್ಚಿಸಿದ್ದಾರೆ. ಆ ಪರಂಪರೆ ಮುಂದುವರಿಸಿಕೊಂಡು ಹೋಗಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ವಾರ್ತಾಭಾರತಿ ಸಂಪಾದಕ ಅಬುಸಾಲಂ ಪುತ್ತಿಗೆ ಪ್ರಧಾನ ಭಾಷಣ ಮಾಡಿದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಸಚಿವ ದಿನೇಶ್ ಗುಂಡೂರಾವ್, ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಆರ್.ಪೂರ್ಣಿಮಾ, ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯಿಷಾ ಖಾನುಂ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಅನುಚೇತ್ ಉಪಸ್ಥಿತರಿದ್ದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಗಾಂಧಿ ಭವನದಲ್ಲಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಮಾತನಾಡಿದರು.

ಫೇಕ್ ನಶೆ ಹತ್ತಿಸಿಕೊಳ್ಳಬೇಡಿ

ಪತ್ರಕರ್ತರು ಏನೇ ಬರೆದರೂ, ಹೇಳಿದರೂ ಆತ್ಮಸಾಕ್ಷಿ ಗಮನದಲ್ಲಿಟ್ಟುಕೊಂಡು ಬರೆಯಿರಿ ಎಂದು ಮನವಿ ಮಾಡಿಕೊಳ್ಳುತ್ತೇನೆ. ವಿರೋಧ ಪಕ್ಷ ಮಾಡುವ ಕೆಲಸ ಮಾಧ್ಯಮ ಮಾಡುತ್ತದೆ ಎಂದು ಹಲವರು ಹೇಳುತ್ತಾರೆ. ಆದರೆ ನನ್ನ ವೈಯಕ್ತಿಕ ಅಭಿಪ್ರಾಯ ಪತ್ರಕರ್ತರು ಸಮಾಜದ ಬದಲಾವಣೆಗೆ ಶ್ರಮಿಸುವವರು. ಆಡಳಿತ ಪಕ್ಷವನ್ನು ತಿದ್ದುವ ಕೆಲಸ ಮಾಡುತ್ತಾರೆ. ಎಷ್ಟೋ ಸಂದರ್ಭಗಳಲ್ಲಿ ಪತ್ರಕರ್ತರು ನನ್ನ ಬಗ್ಗೆ ಟೀಕೆ ಮಾಡಿದ್ದಾರೆ, ವಿರುದ್ಧವಾಗಿ ಬರೆದಿದ್ದಾರೆ. ನನ್ನ ವೈರಿಗಳು ಎಂದು ನಾನು ಭಾವಿಸುವುದಿಲ್ಲ, ಕಳೆದ ಆರೇಳು ತಿಂಗಳಿನಿಂದ ನಾನು ಆರೋಗ್ಯ ತಪಾಸಣೆ ಮಾಡಿಸಿರಲಿಲ್ಲ, ಹೀಗಾಗಿ ನಾನು ಬೆಳಗ್ಗೆ ಸಾಮಾನ್ಯ ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗೆ ಹೋಗಿದ್ದೆ. ಆದರೆ, ಆಸ್ಪತ್ರೆಗೆ ದಾಖಲಾಗಿದ್ದೇನೆ ಎಂದು ಕೆಲವು ಟಿವಿ ವಾಹಿನಿಗಳು ಪ್ರಸಾರ ಮಾಡಿದ್ದವು. ಇದು ಸಂಪೂರ್ಣ ತಪ್ಪು ಸುದ್ದಿ. ಹೀಗೆ ಫೇಕ್ ನ್ಯೂಸ್‌ನ ನಶೆ ಇತ್ತೀಚೆಗೆ ಹೆಚ್ಚಾಗಿದ್ದು, ನಶೆ ಹತ್ತಿಸಿಕೊಳ್ಳಬೇಡಿ. ಯಾರ್‍ಯಾರೋ ಏನೋ ಹೇಳಿದರು ಎಂದ ತಕ್ಷಣ ಮಾಧ್ಯಮಗಳಲ್ಲಿ ಪ್ರಸಾರ ಮಾಡಬೇಡಿ. ಸತ್ಯ ವಿಚಾರಿಸಿ ಪರಾಮರ್ಶೆ ಮಾಡಿ ಬರೆಯಿರಿ ಎಂದು ಸಿಎಂ ಹೇಳಿದರು.

ಸಮಾಚಾರ ಸಣ್ಣದಲ್ಲ

2028ರಲ್ಲಿ ಗೆಲ್ಲಲು ಸಿದ್ದರಾಮಯ್ಯ ಬೇಕು

ಬೆಂಗಳೂರು: ಸಿದ್ದರಾಮಯ್ಯ ಒಬ್ಬ ಜನ ನಾಯಕ. ಅವರನ್ನು ದೂರ ಇಟ್ಟು ಪಕ್ಷ ಸಂಘಟನೆ ಮಾಡುತ್ತೇವೆಂದರೆ, ಅದು ಒಂದು ದೊಡ್ಡ ಪ್ರಮಾದವಾಗಲಿದೆ. ಸಿದ್ದರಾಮಯ್ಯ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋದರೆ ಮಾತ್ರ ನಾವು 2028ರ ಚುನಾವಣೆ ಗೆಲ್ಲುತ್ತೇವೆ ಎಂದು ಶಾಸಕ ಕೆ.ಎನ್.ರಾಜಣ್ಣ ಅಭಿಪ್ರಾಯಪಟ್ಟರು. ಸುದ್ದಿಗಾರರೊಂದಿಗೆ ಮಾತನಾಡಿ, ಸದ್ಯದಲ್ಲಿಯೇ ಪಾಲಿಕೆ ಚುನಾವಣೆ ಎದುರಿಸಬೇಕಾಗುತ್ತದೆ. ಸಿದ್ದರಾಮಯ್ಯ ಅವರನ್ನು ಕಡೆಗಣಿಸಲು ಸಾಧ್ಯವೇ ಇಲ್ಲ. ಜನ ನಾಯಕರೆಂದು ಗುರುತಿಸಿಕೊಂಡವರ ಶಕ್ತಿ, ಜನಪ್ರಿಯತೆಯನ್ನು ತುಳಿಯಲು ಸಾಧ್ಯವೂ ಇಲ್ಲ. ಹಾಗೆಂದು, ವೈರಾಗ್ಯ ಎಂದೇನೂ ಇಲ್ಲ. ನಾನು ಎರಡು ವರ್ಷ ಸಚಿವನಾಗಿ ನನ್ನ ಕೆಲಸವನ್ನು ಪ್ರಾಮಾಣಿಕವಾಗಿ, ದಕ್ಷತೆಯಿಂದ ಮಾಡಿದ್ದೇನೆ. ಹೀಗಾಗಿ, ಬೇರೆಯವರಿಗೂ ಅವಕಾಶ ಕೊಡಲಿ ಎಂದರು.

ಸಾಹಿತಿ ಶಿವಪ್ರಸಾದ್ ಅಂತ್ಯಕ್ರಿಯೆ

ಹಾಸನ: ಅಂತಾರಾಷ್ಟ್ರೀಯ ಚಿತ್ರಕಲಾವಿದ, ಸಾಹಿತಿ, ಹೋರಾಟಗಾರ ಕೆ.ಟಿ.ಶಿವಪ್ರಸಾದ್ ಅನಾರೋಗ್ಯದಿಂದ ಬೆಂಗಳೂರಿನಲ್ಲಿ ನಿಧನ ಹೊಂದಿದ್ದು, ಅವರ ಅಂತ್ಯಕ್ರಿಯೆ ಬುಧವಾರ ಹಾಸನದ ಚಿತಾಗಾರದಲ್ಲಿ ಅವರ ಆಶಯದಂತೆ ಯಾವುದೇ ಸಂಪ್ರದಾಯ ಇಲ್ಲದೆ, ಅವರ ಚಿತೆಗೆ ಅಗ್ನಿಸ್ಪರ್ಶ ಮಾಡಿ ನೆರವೇರಿಸಲಾಯಿತು. ಇದಕ್ಕೂ ಮುನ್ನ ನಗರದ ಕಲಾಭವನದ ಮುಂಭಾಗ ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ನೂರಾರು ಜನರು ಅಂತಿಮ ದರ್ಶನ ಪಡೆದುಕೊಂಡು ಶ್ರದ್ಧಾಂಜಲಿ ಸಲ್ಲಿಸಿದರು. ರಾಜ್ಯ ಪ್ರಶಸ್ತಿ ವಿಜೇತರೂ ಆಗಿದ್ದ ಅವರಿಗೆ ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್ ಸರಕಾರದ ವತಿಯಿಂದ ಗೌರವ ಸಲ್ಲಿಸಿದರು. ಸಂಸದ ಶ್ರೇಯಸ್ ಪಟೇಲ್, ಶಾಸಕ ಎಚ್.ಪಿ.ಸ್ವರೂಪ್ ಪ್ರಕಾಶ್, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್.ಮುದ್ದೇಗೌಡ, ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ, ಎಎಸ್‌ಪಿ ಶ್ರೀನಿಧಿ, ಹಿರಿಯ ದಲಿತ ಮುಖಂಡರಾದ ನಾರಾಯಣದಾಸ್, ಎಚ್.ಕೆ.ಸಂದೇಶ್, ಕೃಷ್ಣದಾಸ್, ಈರಯ್ಯ, ಜಯಕುಮಾರ್, ಸಾಹಿತಿಗಳಾದ ಬಾನು ಮುಷ್ತಾಕ್, ಕರ್ನಾಟಕ ಲಲಿತಾ ಅಕಾಡೆಮಿ ಮಾಜಿ ಅಧ್ಯಕ್ಷ ಕೃಷ್ಣಶೆಟ್ಟಿ ಸೇರಿ ಇತರರು ಅಂತಿಮ ದರ್ಶನ ಪಡೆದರು.

ಶಂಕಿತ ಉಗ್ರ ಸೊಹೇಲ್ ನ್ಯಾಯಾಂಗ ಬಂಧನಕ್ಕೆ

ದಾವಣಗೆರೆ: ಶಂಕಿತ ಉಗ್ರ ಸೊಹೇಲ್‌ನನ್ನು ವಿಚಾರಣೆಗಾಗಿ ವಶಕ್ಕೆ ಪಡೆದಿದ್ದ ಹರಿಹರ ಗ್ರಾಮಾಂತರ ಠಾಣೆಯ ಪೊಲೀಸರು ಅವಧಿಗೂ ಮುನ್ನವೇ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಪಾಕಿಸ್ತಾನದ ಜತೆಗೆ ನಂಟು ಹೊಂದಿದ್ದ ಆರೋಪದಡಿ ಉತ್ತರಪ್ರದೇಶದ ಶಂಕಿತ ಉಗ್ರ ಸೊಹೇಲ್‌ನನ್ನು ಹರಿಹರ ತಾಲೂಕಿನ ಬನ್ನಿಕೋಡು ಗ್ರಾಮದಲ್ಲಿ ಪೊಲೀಸರು ಬಂಧಿಸಿದ್ದರು.

ದಿನ ವಿಶೇಷ

02 ಜುಲೈ 2026 ಗುರುವಾರ

» ಸೂರ್ಯೋದಯ	: 5-44
» ಸೂರ್ಯಾಸ್ತ	: 7-15
» ತಿಥಿ	: ತೃತೀಯ
» ನಕ್ಷತ್ರ	: ಉತ್ತರಷಾಡ
» ಸಂವತ್ಸರ	: ಪರಾಭವ
» ಅಯನ	: ದಕ್ಷಿಣಾಯನ
» ಋತು	: ವರ್ಷ
» ಮಾಸ	: ಜ್ಯೇಷ್ಠ
» ಪಕ್ಷ	: ಕೃಷ್ಣಪಕ್ಷ

ಕುಡಿಯುವ ನೀರು ಪೂರೈಕೆಗಾಗಿ ಪ್ರತಿ ಜಿಲ್ಲೆಗೆ 5 ಕೋಟಿ ರು. ಮೀಸಲು: ಡಿಸಿಎಂ ಡಾ.ಪರಮೇಶ್ವರ

ಸದ್ಯಕ್ಕೆ ಮೋಡ ಬಿತ್ತನೆ ಯೋಚನೆ ಇಲ್ಲ

ವಿಶ್ವವಾಣಿ ಸುದ್ದಿಮನೆ ಬೆಳಗಾವಿ

ಕರ್ನಾಟಕದಲ್ಲಿ ಬರದ ವಾತಾವರಣವಿದ್ದರೂ ಮೋಡ ಬಿತ್ತನೆ ಬಗ್ಗೆ ಚಿಂತನೆ ಇಲ್ಲ. ಸಂದರ್ಭ ನೋಡಿಕೊಂಡು ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬರ ತಾಲೂಕು ಅಥವಾ ಜಿಲ್ಲೆ ಎಂದು ಘೋಷಣೆ ಮಾಡಲು ಮಾನದಂಡಗಳಿವೆ. ಮಳೆ ಬೀಳದಿರುವುದು, ಬೆಳೆ ನಷ್ಟ, ನೀರಿನ ಮಟ್ಟ ಲೆಕ್ಕ ಹಾಕಿ ಘೋಷಣೆ ಮಾಡಲಾಗುತ್ತದೆ. ಈ ಬಗ್ಗೆ ಸದ್ಯ ಚರ್ಚೆ ನಡೆದಿಲ್ಲ ಎಂದರು.

ಈ ವರ್ಷ ಮಳೆ ಕಡಿಮೆಯಾಗಿರುವುದರಿಂದ ಅನೇಕ ಸಮಸ್ಯೆಗಳು ಉಂಟಾಗಿವೆ. ಕುಡಿಯುವ ನೀರಿನ ಸಮಸ್ಯೆ, ಬೆಳೆ ನಾಶದಿಂದಾಗಿ ಜನರ ಮೇಲಾಗುತ್ತಿರುವ ಪರಿಣಾಮಗಳ ಬಗ್ಗೆ ಪರಿಶೀಲನೆ ನಡೆಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಬೆಳಗಾವಿ ಜಿಲ್ಲೆಯಲ್ಲಿ ಬರದ ಛಾಯೆ ಕಾಣಿಸುತ್ತಿದೆ. ಹೀಗಾಗಿ ಕುಡಿಯುವ ನೀರಿಗೆ ಸಮಸ್ಯೆಯಾಗುವ ಸಾಧ್ಯತೆ ಹೆಚ್ಚಿದೆ. ಜೂನ್ ತಿಂಗಳಲ್ಲಿ ವಾಡಿಕೆಯಷ್ಟು ಮಳೆಯಾಗಿಲ್ಲ. ಇದರಿಂದ ಅಂತರ್ಜಲ ಮಟ್ಟ ಕುಸಿದಿದೆ. ಮುಂದಿನ ದಿನಗಳಲ್ಲಿ ಮಳೆ ಬಾರದಿದ್ದರೆ ಕಷ್ಟವಾಗಬಹುದು. ಹೀಗಾಗಿ ಮುನ್ನೆಚ್ಚರಿಕೆ ಕ್ರಮದ ಬಗ್ಗೆ ಚರ್ಚಿಸಿ, ಕುಡಿಯುವ ನೀರಿನ ಸಮರ್ಪಕ ಪೂರೈಕೆಗೆ ಸೂಚನೆ ನೀಡಲಾಗುವುದು ಎಂದು ಭರವಸೆ ನೀಡಿದರು.

ಪ್ರತಿ ಬಾರಿ ಇಂತಹ ಪರಿಸ್ಥಿತಿ ಎದುರಾದಾಗ ಕೇಂದ್ರದ ಗಮನಕ್ಕೆ ತರುತ್ತೇವೆ. ರಾಜಕೀಯವಾಗಿ ಮಾತನಾಡಲು ಹೋಗುವುದಿಲ್ಲ. ನಾವು ಕೊಟ್ಟ ವರದಿಗೆ ಶೇ.10ರಷ್ಟು ಪರಿಹಾರ ಕೇಂದ್ರದಿಂದ ಸಿಕ್ಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಈ ಸಂಬಂಧ ಪ್ಲಾನ್ ಆಫ್ ಆ್ಯಕ್ಷನ್ ಮಾಡಿಕೊಳ್ಳಲಾಗಿದೆ. ಜಿಲ್ಲಾಧಿಕಾರಿಗಳು ಕಾರ್ಯಗತಗೊಳಿಸುತ್ತಾರೆ. ಕುಡಿಯುವ ನೀರಿಗಾಗಿ ಪ್ರತಿ ಜಿಲ್ಲೆಗೆ 5 ಕೋಟಿ ರು. ಮೀಸಲಿಡಲಾಗಿದೆ ಎಂದು ಮಾಹಿತಿ ನೀಡಿದರು.

150 ವರ್ಷಗಳಲ್ಲಿ ಕಂಡರಿಯದ ಬರ ಪರಿಸ್ಥಿತಿ: ಕಳೆದ 150 ವರ್ಷಗಳಲ್ಲಿ ಎಂದೂ ಕಂಡರಿಯದ ಬರ ಪರಿಸ್ಥಿತಿ ರಾಜ್ಯದಲ್ಲಿ ತಲೆದೋರಿದೆ. ಇದನ್ನು ಎದುರಿಸಲು ಕ್ರಿಯಾಯೋಜನೆ ಸಿದ್ಧಪಡಿಸಿದ್ದೇವೆ. ಎಲ್ಲ ಜಿಲ್ಲಾಧಿಕಾರಿಗಳು ಇದನ್ನು ಕಾರ್ಯಗತಗೊಳಿಸುತ್ತಾರೆ. ಬೆಳಗಾವಿ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ವಾಡಿಕೆಗಿಂತ ಶೇ.25ರಿಂದ 30ರಷ್ಟು ಮಳೆಯಾಗಿದೆ. ಮುನ್ನೆಚ್ಚರಿಕೆ ಕ್ರಮದ ಬಗ್ಗೆ ಚರ್ಚಿಸಿ ಸಮರ್ಪಕ ಕುಡಿಯುವ ನೀರು ಪೂರೈಕೆಗೆ ಕ್ರಮ ವಹಿಸಲಾಗುವುದು ಎಂದು ಹೇಳಿದರು. ಇಡೀ ರಾಜ್ಯದಲ್ಲಿ ಬರದ ಛಾಯೆ ಇದೆ. ಜೂನ್‌ನಲ್ಲಿ ಮಳೆ ಕೊರತೆ ಉಂಟಾಗಿದೆ. ಜುಲೈನಲ್ಲೂ ನಾವು ಪರಿಸ್ಥಿತಿ ಮೇಲ್ವಿಚಾರಣೆ ಮಾಡುತ್ತೇವೆ. ಈಗಲೇ ಬರ ಘೋಷಿಸಲು ಸಾಧ್ಯ ಇಲ್ಲ. ಬರಪೀಡಿತ ಜಿಲ್ಲೆ ಅಥವಾ ಬರಪೀಡಿತ ತಾಲೂಕೆಂದು ಘೋಷಿಸಲು ಮಾನದಂಡಗಳಿದ್ದು, ಮಳೆ ಬಾರದಿರುವುದು, ಬೆಳೆಹಾನಿ ಮತ್ತು ನೀರಿನ ಮಟ್ಟ ಲೆಕ್ಕ ಹಾಕಲಾಗುತ್ತದೆ ಎಂದರು.

ದೇವಸ್ಥಾನಗಳ ಒತ್ತುವರಿ ತೆರವಿಗೆ ಸೂಚನೆ: ಧಾರ್ಮಿಕ ಇಲಾಖೆಯಲ್ಲಿ 'ಎ', 'ಬಿ', 'ಸಿ' ವರ್ಗದ ದೇವಸ್ಥಾನಗಳ ಆಸ್ತಿ ಒತ್ತುವರಿ ಯಾಗಿರುವುದು ಕಂಡು ಬಂದಿದೆ. ಸರ್ವೆ ಮಾಡಿ, ಒತ್ತುವರಿಯನ್ನು ತೆರವುಗೊಳಿಸಲು ಪ್ರತಿಯೊಂದು ಜಿಲ್ಲೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ದೇವಾಲಯದಲ್ಲಿ ಭಕ್ತರಿಗೆ ದರ್ಶನ ಪಡೆಯಲು, ಪ್ರಸಾದ ಸ್ವೀಕಾರಕ್ಕೆ ಮತ್ತು ವಸತಿ ವಿಚಾರದಲ್ಲಿ ತೊಂದರೆಯಾಗಬಾರದು. ದೇವಸ್ಥಾನಕ್ಕೆ ಬರುವ ಹಣವನ್ನು ಪ್ರಾಧಿಕಾರದ ಅನುಮತಿ ಪಡೆದು ಖರ್ಚು ಮಾಡಬೇಕು ಎಂದು ಸೂಚಿಸಿದ್ದೇವೆ. ಯಾವುದೇ ಕಾರಣಕ್ಕೂ ಅನಗತ್ಯವಾಗಿ ಖರ್ಚು ಮಾಡಲು ಬಿಡುವುದಿಲ್ಲ. ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೇವೆ. ಎಸ್‌ಒಪಿ, ನಿಯಮಗಳನ್ನು ರೂಪಿಸುತ್ತೇವೆ ಎಂದು ತಿಳಿಸಿದರು.

> ಕಂದಾಯ ಇಲಾಖೆಯಲ್ಲಿ ಪೌತಿ ಖಾತೆ, ಹಕ್ಕು ಪತ್ರ ವಿತರಣೆ, ಆಕಾರ್ ಬಂದ್, ಕಂದಾಯ ಗ್ರಾಮಗಳ ಘೋಷಣೆ ಮೂರು ವರ್ಷಗಳಿಂದ ಯಶಸ್ವಿಯಾಗಿ ನಡೆಯುತ್ತಿದೆ. ಅದನ್ನು ಮತ್ತಷ್ಟು ವೇಗವಾಗಿ ಮಾಡಲು ತೀರ್ಮಾನಿಸಿದ್ದು, ಕಾಲಮಿತಿಯೊಳಗೆ ಪೂರ್ಣಗೊಳಿಸುತ್ತೇವೆ.
> – ಡಾ.ಪರಮೇಶ್ವರ್, ಡಿಸಿಎಂ

ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಡಾ.ಜಿ.ಪರಮೇಶ್ವರ ಸೂಚನೆ

ಡ್ಯಾಂಗಳಲ್ಲಿನ ನೀರನ್ನು ಕುಡಿಯಲಷ್ಟೇ ಬಳಸಿ

ಬೆಳಗಾವಿಯ ಸುವರ್ಣ ವಿಧಾನಸೌಧದ ಸೆಂಟ್ರಲ್ ಹಾಲ್‌ನಲ್ಲಿ ಬುಧವಾರ ನಡೆದ ಬೆಳಗಾವಿ ವಿಭಾಗದ ಹವಾಮಾನ ಪರಿಸ್ಥಿತಿ ಮತ್ತು ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಮಾತನಾಡಿದರು.

ಬೆಳಗಾವಿ: ಬೆಳಗಾವಿ ವಿಭಾಗದ ಯಾವುದೇ ನಗರ, ಪಟ್ಟಣ ಮತ್ತು ಹಳ್ಳಿಗಳಲ್ಲಿ ಜನರು, ಜಾನುವಾರುಗಳಿಗೆ ಕುಡಿಯುವ ನೀರಿಗೆ ಸಮಸ್ಯೆ ಆಗಬಾರದು. ಎಲ್ಲ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಬೇಕು ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಸೂಚಿಸಿದರು.

ಸುವರ್ಣ ವಿಧಾನಸೌಧದ ಸೆಂಟ್ರಲ್ ಹಾಲ್‌ನಲ್ಲಿ ಬುಧವಾರ ನಡೆದ ಬೆಳಗಾವಿ ವಿಭಾಗದ ಹವಾಮಾನ ಪರಿಸ್ಥಿತಿ ಮತ್ತು ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಈಗ ಬರ ಪರಿಸ್ಥಿತಿ ಇದೆ. ಜುಲೈನಲ್ಲೂ ಕಡಿಮೆ ಮಳೆ ಸುರಿಯಬಹುದು ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಜಲಾಶಯಗಳಲ್ಲಿ ನೀರಿನ ಸಂಗ್ರಹ ಡೆಡ್‌ಸ್ಟೋರೇಜ್ ಮಟ್ಟ ತಲುಪಿದೆ.

ಈಗ ಲಭ್ಯವಿರುವ ನೀರನ್ನು ಎಚ್ಚರಿಕೆಯಿಂದ ಬಳಸಬೇಕು. ಜಲಾಶಯಗಳಲ್ಲಿ ಲಭ್ಯವಿರುವ ನೀರನ್ನು ಕುಡಿಯುವ ಉದ್ದೇಶದ ಹೊರತಾಗಿ, ಬೇರೆ ಯಾವುದಕ್ಕೂ ಬಳಸಬಾರದು. ಕಾಲುವೆ ಹಾಗೂ ನದಿಗಳಿಗೆ ಅನಧಿಕೃತವಾಗಿ ಪಂಪ್‌ಸೆಟ್ ಅಳವಡಿಸುವವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಸೂಚಿಸಿದರು.

ನೀರಿನ ಕೊರತೆ ಆಗುತ್ತದೆ ಎಂದು ಕೆಲವರು ಮುಂಜಾಗ್ರತೆಯಿಂದ ನೀರನ್ನು ಹೆಚ್ಚಾಗಿ ಶೇಖರಿಸುತ್ತಾರೆ. ಇದರಿಂದ ಡೆಂಘೀ ಹರಡುವ ಸಾಧ್ಯತೆ ಇದೆ. ಈಗಾಗಲೇ ಬೆಳಗಾವಿ ಜಿಲ್ಲೆಯಲ್ಲಿ 34, ಧಾರವಾಡದಲ್ಲಿ 27, ಗದಗದಲ್ಲಿ 25, ವಿಜಯಪುರದಲ್ಲಿ 24, ಹಾವೇರಿಯಲ್ಲಿ 11, ಉತ್ತರ ಕನ್ನಡದಲ್ಲಿ 10, ಬಾಗಲಕೋಟೆಯಲ್ಲಿ ಐದು ಡೆಂಘೀ ಪ್ರಕರಣ ವರದಿಯಾಗಿವೆ. ಆರಂಭಿಕ ಹಂತದಲ್ಲೇ ಮುನ್ನೆಚ್ಚರಿಕೆ ವಹಿಸುವಂತೆ ಜನರಿಗೆ ತಿಳಿವಳಿಕೆ ಮೂಡಿಸಬೇಕು ಎಂದರು.

ಮಳೆ ಪ್ರಮಾಣ ಗುರುತಿಸಲು ಮಳೆಮಾಪನ ಕೇಂದ್ರಗಳು ಅಗತ್ಯ. ಅವುಗಳನ್ನು ಕೂಡಲೇ ದುರಸ್ತಿಗೊಳಿಸಬೇಕು. ಕೊಳವೆಬಾವಿ, ಕೆರೆ ಸೇರಿ ಜಲಮೂಲ ಇರುವ ಕಡೆ ಜಾನುವಾರುಗಳಿಗೆ ಮೇವು ಬೆಳೆಯಲು ರೈತರಿಗೆ ಪ್ರೋತ್ಸಾಹ ನೀಡಿ, ಮೇವಿನ ಬೀಜ ವಿತರಿಸಬೇಕು. ಕುಡಿಯುವ ನೀರಿಗಾಗಿ ಕೊಳವೆಬಾವಿ ಬಾಡಿಗೆಗೆ ಪಡೆಯಬೇಕು. ನಂತರವೂ ಸಮಸ್ಯೆ ಮುಂದುವರಿದರೆ, ಕೊಳವೆಬಾವಿಗಳ ಡೀಪ ನಿಂಗ್ ಮಾಡಿಸಬೇಕು. ವಿಮೆ ಕಂಪನಿಯವರು ಇದ್ದಕ್ಕಿದ್ದಂತೆ ಮಾನದಂಡ ಬದಲಿಸಿ, ರೈತರಿಗೆ ಮೋಸ ಮಾಡಬಹುದು. ಹಾಗಾಗಿ ಬೆಳೆವಿಮೆ ವಿಷಯವನ್ನು ಕೃಷಿ ಇಲಾಖೆ ಗಂಭೀರವಾಗಿ ಪರಿಗಣಿಸಬೇಕು ಎಂದರು.

ನೇಮಕಾತಿಗಳಲ್ಲಿ ಕ್ರೀಡಾಪಟುಗಳಿಗೆ ಶೇ.2ರಷ್ಟು ಮೀಸಲು

ಕ್ರೀಡಾ ಇಲಾಖೆಗೆ ಸಂಬಂಧಿಸಿದಂತೆ ನಮ್ಮ ಸರಕಾರ ಹೆಚ್ಚಿನ ಆದ್ಯತೆ ನೀಡಲಿದೆ. ಮೂಲಸೌಕರ್ಯ ವ್ಯವಸ್ಥೆ ಕಡಿಮೆ ಇರುವ ಜಿಲ್ಲಾಮಟ್ಟದ ಶಾಲಾ-ಕಾಲೇಜುಗಳಲ್ಲಿ ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ಸಿಗುವಂತೆ ಮಾಡಲಾಗುವುದು. ಕ್ರೀಡಾಪಟುಗಳಿಗೆ ಎಲ್ಲ ರೀತಿಯ ಸಹಕಾರವನ್ನು ನೀಡುತ್ತೇವೆ. ಗೃಹ ಇಲಾಖೆಯ ನೇಮಕಾತಿಯಲ್ಲಿ ಶೇ.3ರಷ್ಟು ಮತ್ತು ಬೇರೆ ಇಲಾಖೆಗಳ ನೇಮಕಾತಿಯಲ್ಲಿ ಶೇ.2ರಷ್ಟು ಮೀಸಲಾತಿ ನೀಡಲಾಗುವುದು ಎಂದು ಡಿಸಿಎಂ ಡಾ.ಜಿ.ಪರಮೇಶ್ವರ ಹೇಳಿದರು.

> ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿದೆ. ಅನೇಕರಿಗೆ ಕಾಯಂ ನಿವಾಸಿ ದೃಢೀಕರಣ ಪತ್ರದ ಅಗತ್ಯವಿದೆ. ಅದನ್ನು ತಹಶೀಲ್ದಾರ್ ಮತ್ತು ಮೇಲ್ಪಟ್ಟ ಅಧಿಕಾರಿಗಳು ನೀಡಬೇಕು. ಯಾವ ಅರ್ಹ ಮತದಾರರನ್ನು ಪಟ್ಟಿಯಿಂದ ಕೈಬಿಡಬಾರದು.
> – ಡಾ.ಜಿ.ಪರಮೇಶ್ವರ, ಡಿಸಿಎಂ

- ದೇಶದ ದೊಡ್ಡ ದೇವಸ್ಥಾನಗಳಲ್ಲಿ ಕಾಣಿಕೆ ಹಣ ದುರುಪಯೋಗ ಆಗುತ್ತಿರುವ ಬಗ್ಗೆ ವರದಿಯಾಗುತ್ತಿದೆ. ಈ ಬಗ್ಗೆ ರಾಜ್ಯದಲ್ಲೂ ನಿಗಾ ವಹಿಸಬೇಕು.
- ರಾಜ್ಯದಲ್ಲಿ 6,686 ದೇವಸ್ಥಾನಗಳ ಸರ್ವೆ ಬಾಕಿ ಇದೆ. ಬೆಳಗಾವಿ ವಿಭಾಗದಲ್ಲಿ 5,571 ದೇವಸ್ಥಾನಗಳ ಖಾತೆಯಾಗಿಲ್ಲ. 2 ತಿಂಗಳಲ್ಲಿ ಈ ಸಮಸ್ಯೆ ಬಗೆಹರಿಸಬೇಕು

ರೈಲ್ವೆ ಬ್ಯಾರಿಕೇಡ್ ನಡುವೆ ಸಿಲುಕಿದ ಕಾಡಾನೆ

ರಾಮನಗರ: ತಾಲೂಕಿನ ಅರೆಕೊಪ್ಪ ಗ್ರಾಮದ ಬಳಿ ಕಾವೇರಿ ವನ್ಯಜೀವಿಧಾಮದ ಗಡಿಯಲ್ಲಿ ಅಳವಡಿಸಿದ್ದ ರೈಲ್ವೆ ಬ್ಯಾರಿಕೇಡ್ ದಾಟಲು ಯತ್ನಿಸಿದ ಕಾಡಾನೆಯೊಂದು ಬ್ಯಾರಿಕೇಡ್ ಮಧ್ಯೆಯೇ ಸಿಲುಕಿ ನರಳಾಡಿರುವ ಘಟನೆ ಮಂಗಳವಾರ ಬೆಳಗ್ಗೆ ನಡೆದಿದೆ.

ಕಾವೇರಿ ವನ್ಯಜೀವಿಧಾಮದಿಂದ ಕಾಡಂಚಿನ ರೈತರ ಜಮೀನಿಗೆ ರಾತ್ರಿ ಬಂದಿದ್ದ ಕಾಡಾನೆ ಮೇವು ತಿಂದಿತ್ತು. ನಸುಕಿನಲ್ಲಿ ಕಾಡಿಗೆ ಹಿಂದಿರುಗುವಾಗ ಬ್ಯಾರಿಕೇಡ್ ಮಧ್ಯೆ ದನಕರುಗಳು ಅರಣ್ಯಕ್ಕೆ ಹೋಗಿ ಬರಲು ಸಣ್ಣದಾಗಿ ಮಾಡಿರುವ ಕಿಂಡಿಯಲ್ಲಿ ವಾಪಸ್ ಹೋಗಲು ಆನೆ ಮುಂದಾಗಿದೆ. ಅರ್ಧದಷ್ಟು ಮುಂದಕ್ಕೆ ಹೋದ ಕಾಡಾನೆಗೆ ಪೂರ್ತಿ ಹೋಗಲು ಸಾಧ್ಯವಾಗಿಲ್ಲ. ಮಧ್ಯದಲ್ಲೇ ಸಿಲುಕಿಕೊಂಡು ನೋವಿನಿಂದ ನರಳುತ್ತಿತ್ತು. ಬೆಳಗ್ಗೆ ಜಮೀನಿಗೆ ಬಂದಿದ್ದ ರೈತರು ಬ್ಯಾರಿಕೇಡ್ ನಡುವೆ ಆನೆ ಸಿಲುಕಿರುವುದನ್ನು ಗಮನಿಸಿ ಇಲಾಖೆ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ.

ಅರಣ್ಯ ಇಲಾಖೆ ಅಧಿಕಾರಿಗಳು ಪಶು ವೈದ್ಯಾಧಿಕಾರಿಗಳನ್ನು ಕರೆಸಿ ಆನೆಗೆ ಅನಸ್ತೇಷಿಯಾ ಕೊಟ್ಟರು. ಕೆಲ ಕ್ಷಣದಲ್ಲೇ ಆನೆ ಪ್ರಜ್ಞೆ ತಪ್ಪಿತು. ಬಳಿಕ ಕಬ್ಬಿಣ ಕತ್ತರಿಸುವ ಯಂತ್ರದಿಂದ ಆನೆ ಸಾಗಲು ಅನುಕೂಲವಾಗುವಷ್ಟು ಬ್ಯಾರಿಕೇಡ್ ಕತ್ತರಿಸಲಾಯಿತು. ಮಧ್ಯಾಹ್ನ 12.30ರ ಸುಮಾರಿಗೆ ಆನೆಗೆ ಪ್ರಜ್ಞೆ ಬಂದ ಬಳಿಕ ಮರಳಿ ಕಾವೇರಿ ವನ್ಯಜೀವಿಧಾಮದ ಕಡೆಗೆ ಓಡಿಸಲಾಯಿತು. ಸ್ಥಳಕ್ಕೆ ಕಾವೇರಿ ವನ್ಯಜೀವಿಧಾಮದ ಎಸಿಎಫ್ ನಾಗೇಂದ್ರ, ಆರ್‌ಎಫ್‌ಒ ಶ್ರೀಧರ್ ಸೇರಿದಂತೆ ಹಿರಿಯ ಅಧಿಕಾರಿಗಳು ಭೇಟಿ ನೀಡಿದ್ದರು.

ಶಿರಾ ಕಾರು ಸ್ಫೋಟ: ನಾಗೇಂದ್ರಗೆ ನಾಡಬಾಂಬ್ ಕೊಟ್ಟಿದ್ದ ನಾಲ್ವರ ಸೆರೆ



ಶಿರಾ ತಾಲೂಕಿನ ಜೋಗಿಹಳ್ಳಿ ಸಮೀಪದ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಸುಟ್ಟು ಕರಕಲಾಗಿರುವ ಕಾರು.

ತುಮಕೂರು: ಶಿರಾ ತಾಲೂಕಿನ ಜೋಗಿಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಈಚೆಗೆ ನಾಡಬಾಂಬ್ ಸ್ಫೋಟಿಸಿಕೊಂಡು ಸಜೀವ ದಹನವಾದ ನಾಗೇಂದ್ರಗೆ ನಾಡಬಾಂಬ್ ಕೊಟ್ಟಿದ್ದ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ಹೊನ್ನಾವರ ತಾಲೂಕಿನ ಚಂದಾವರ ಗ್ರಾಮದ ಜಾರ್ಜ್ ನಿಕ್ಲೋವ್ ಫರ್ನಾಂಡೀಸ್, ಸಂದೀಪ್ ಗೌಡ, ನಾರಾಯಣ ಡೊಲ್ಲುಗೌಡ ಮತ್ತು ನಾಗರಾಜು ಡೊಲ್ಲುಗೌಡ ಬಂಧಿತರು.

ತುಮಕೂರಿನ ವಿಶೇಷ ತನಿಖಾ ತಂಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಪೊಲೀಸರು ಜಂಟಿ ಕಾರ್ಯಾಚರಣೆ ನಡೆಸಿ ನಾಲ್ವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಫರ್ನಾಂಡೀಸ್ ಬಳಿ ನಾಗೇಂದ್ರ ಕಚ್ಚಾ ಬಾಂಬ್ ಖರೀದಿಸಿದ್ದರು. ಉಳಿದ ಮೂವರು ಸಹ ಬಾಂಬ್ ಕೊಟ್ಟಿರುವ ಬಗ್ಗೆ ಮಾಹಿತಿ ಇದೆ. ಫರ್ನಾಂಡೀಸ್‌ಗೆ ಆರೋಗ್ಯದಲ್ಲಿ ಏರುಪೇರಾಗಿದ್ದು, ಕುಮಟಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದ ಮೂವರನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ತಿಳಿಸಿದ್ದಾರೆ. ಫರ್ನಾಂಡೀಸ್ ಮೀನುಗಾರಿಕೆಗಾಗಿ ಕಚ್ಚಾ ಬಾಂಬ್ ತಯಾರಿಸಿ ಮಾರಾಟ ಮಾಡುತ್ತಿದ್ದರು. ಇವರಿಂದ ಬಾಂಬ್ ಖರೀದಿಸಿದವರು ನದಿಯಲ್ಲಿ ಮೀನು ಹಿಡಿಯಲು ಬಳಸುತ್ತಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿದೆ. ಇವರು ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಮತ್ತಷ್ಟು ಮಾಹಿತಿ ಸಿಗಲಿದೆ. ಕಾರು ಸ್ಫೋಟಕ್ಕೂ ಮುನ್ನ ನಾಗೇಂದ್ರ ಬಳಿ ಮೂರು ನಾಡಬಾಂಬ್ ಇದ್ದವು ಎಂಬುದು ತಿಳಿದು ಬಂದಿದೆ. ಪ್ರಕರಣದ ತನಿಖೆಗೆ 15ಕ್ಕೂ ಹೆಚ್ಚು ಸಿಬ್ಬಂದಿ ಇರುವ 3 ತಂಡಗಳನ್ನು ರಚಿಸಲಾಗಿತ್ತು ಎಂದು ತಿಳಿಸಿದರು.

ಅಶ್ವಿನಿ ವೈಷ್ಣವ್, ವಿ.ಸೋಮಣ್ಣಗೆ ಸಚಿವ ಎಂ.ಬಿ.ಪಾಟೀಲ ಪತ್ರ

ವಿಜಯಪುರದಲ್ಲಿ ಕೋಚ್ ಡಿಪೋ ಸ್ಥಾಪಿಸಿ

ಬೆಂಗಳೂರು: ವಿಜಯಪುರ ಜಿಲ್ಲಾ ಕೇಂದ್ರದಲ್ಲಿ ರೈಲ್ವೆ ಸಂಪರ್ಕ ಬಲವರ್ಧನೆಗಾಗಿ ಕೋಚ್ ಡಿಪೋ ಸ್ಥಾಪಿಸಬೇಕು ಮತ್ತು ರೈಲು ನಿಲ್ದಾಣದಲ್ಲಿ ಇನ್ನೊಂದು ಆಗಮನ ಮತ್ತು ನಿರ್ಗಮನ ದ್ವಾರ ಅಭಿವೃದ್ಧಿಪಡಿಸಬೇಕೆಂದು ಕೋರಿ ಕೇಂದ್ರ ರೈಲ್ವೆ ಸಹಾಯಕ ಸಚಿವ ವಿ.ಸೋಮಣ್ಣ ಜತೆ ಚರ್ಚಿಸಲಾಗಿದೆ. ಈ ಸಂಬಂಧ ರೈಲ್ವೇ ಸಚಿವ ಅಶ್ವಿನಿ ವೈಷ್ಣವ್, ಕೇಂದ್ರ ರಾಜ್ಯ ರೈಲ್ವೇ ಸಚಿವ ವಿ. ಸೋಮಣ್ಣ ಅವರಿಗೆ ಪತ್ರ ಬರೆಯಲಾಗಿದೆ ಎಂದು ಮೂಲಸೌಕರ್ಯ ಅಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ತಿಳಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಹಿಂದೆ ವಿಜಯಪುರ ರೈಲು ನಿಲ್ದಾಣದ ಆವರಣದಲ್ಲೇ ಇದ್ದ ಗೂಡ್ಸ್ ಶೆಡ್ಡನ್ನು ಈಗ ಅಲಿಯಾಬಾದಿಗೆ ಸ್ಥಳಾಂತರಿಸಲಾಗಿದೆ. ಹೀಗಾಗಿ ಕೋಚ್ ಡಿಪೋ ಸ್ಥಾಪನೆಗೆ ಜಾಗದ ಕೊರತೆಯೇನೂ ಇಲ್ಲ. ಇಲ್ಲಿ ಕೋಚ್ ಡಿಪೋ ಬಂದರೆ ಇದನ್ನು ನಿರ್ವಹಣಾ ಹಬ್ ಆಗಿ ಬೆಳೆಸಬಹುದು. ಜತೆಗೆ ವಿಜಯಪುರ ಮತ್ತು ಉತ್ತರ ಕರ್ನಾಟಕದ ಪ್ರದೇಶಗಳಿಗೆ ಮತ್ತಷ್ಟು ಪರಿಣಾಮಕಾರಿಯಾಗಿ ರೈಲು ಸಂಪರ್ಕ ಒದಗಿಸಬಹುದು. ವಿಜಯಪುರವು ಚಾರಿತ್ರಿಕ ಸ್ಥಳವಾಗಿದ್ದು, ವರ್ಷವಿಡೀ ಲಕ್ಷಾಂತರ ಪ್ರವಾಸಿಗರನ್ನು ಸೆಳೆಯುತ್ತಿರುವ ಪ್ರವಾಸೋದ್ಯಮ ತಾಣವಾಗಿದೆ. ಅದರಲ್ಲೂ ವಾರಾಂತ್ಯ, ಹಬ್ಬ ಹರಿದಿನ ಮತ್ತು ರಜೆ ದಿನಗಳಲ್ಲಿ ಜನದಟ್ಟಣೆ ಸೃಷ್ಟಿಯಾಗುತ್ತದೆ. ಆದ್ದರಿಂದ ವಿಜಯಪುರ ರೈಲು ನಿಲ್ದಾಣದಲ್ಲಿ ಹೆಚ್ಚುವರಿಯಾಗಿ ಇನ್ನೊಂದು ಆಗಮನ-ನಿರ್ಗಮನ ದ್ವಾರ ಸ್ಥಾಪಿಸಬೇಕು ಎಂದು ಪಾಟೀಲ ತಮ್ಮ ಪತ್ರದಲ್ಲಿ ಮನವಿ ಮಾಡಿದ್ದಾರೆ. ಕಳೆದ ಸೋಮವಾರ ನಡೆದ ರೈಲ್ವೆ ಇಲಾಖೆಯ ಕಾರ್ಯಕ್ರಮದ ಸಂದರ್ಭದಲ್ಲಿ ಈ ವಿಚಾರಗಳನ್ನು ಸೋಮಣ್ಣ ಅವರೊಂದಿಗೆ ಚರ್ಚಿಸಲಾಗಿದೆ. ಅವರಿಂದ ಸಕಾರಾತ್ಮಕ ಸ್ಪಂದನ ಸಿಕ್ಕಿದೆ. ಈ ಬೇಡಿಕೆಗಳು ಈಡೇರಿದರೆ, ಇನ್ನು ಕೆಲವೇ ತಿಂಗಳಲ್ಲಿ ಆರಂಭವಾಗಲಿರುವ ಬೆಂಗಳೂರು-ವಿಜಯಪುರ ವಂದೇ ಭಾರತ್ ಎಕ್ಸ್‌ಪ್ರೆಸ್ ಸೇವೆಯ ನಿರ್ವಹಣೆ ಕೂಡ ಸುಲಭವಾಗಲಿದೆ ಎಂದು ಹೇಳಿದರು.

ಎಸ್‌ಐಆರ್: ಕರ್ತವ್ಯ ಆ್ಯಪ್ ಸೌಲಭ್ಯ

ಬೆಂಗಳೂರು: ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ 2026 ಕಾರ್ಯದಲ್ಲಿ ಪಾಲ್ಗೊಳ್ಳುತ್ತಿರುವ ಬೂತ್ ಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕೆಲಸದ ಅನುಕೂಲಕ್ಕಾಗಿ, ಚುನಾವಣಾ ಆಯೋಗವು ಪ್ರಮುಖ ನಿರ್ಧಾರ ಕೈಗೊಂಡಿದೆ.

ಕ್ಷೇತ್ರ ಮಟ್ಟದಲ್ಲಿ (ಕಚೇರಿಯ ಹೊರಗೆ) ಕಾರ್ಯನಿರ್ವಹಿಸುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಕರ್ತವ್ಯ ಆ್ಯಪ್‌ನಲ್ಲಿನ ಸಾಮಾನ್ಯ ಹಾಜರಾತಿ ದಾಖಲಾತಿಯಿಂದ ವಿನಾಯಿತಿ ನೀಡುವಂತೆ ಜಿಲ್ಲಾಧಿಕಾರಿಗಳ ಕೋರಿಕೆಯ ಮೇರೆಗೆ, ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಮನವಿ ಸಲ್ಲಿಸಲಾಗಿತ್ತು. ಸರಕಾರದ ಅನುಮೋದನೆಯ ಮೇರೆಗೆ, ಕಚೇರಿಯ ಹೊರಗೆ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಕರ್ತವ್ಯ ಆ್ಯಪ್‌ನಲ್ಲಿ On Other Duty (OOD) ಆಯ್ಕೆ ಬಳಸಲು ಅವಕಾಶ ಕಲ್ಪಿಸಲಾಗಿದೆ. ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ಕ್ಷೇತ್ರ ಮಟ್ಟದ ಕರ್ತವ್ಯದಲ್ಲಿದ್ದಾಗ, ಕರ್ತವ್ಯ ಆ್ಯಪ್ ಬಳಸಿಕೊಂಡು ತಮ್ಮ ಹಾಜರಾತಿ 'OOD' ದಾಖಲಿಸುವಂತೆ ಮುಖ್ಯ ಚುನಾವಣಾಧಿಕಾರಿ ವಿ.ಅನ್ಬುಕುಮಾರ್ ಸೂಚಿಸಿದ್ದಾರೆ.

ಐದು ಎಕರೆ ಭೂಮಿ ನೀಡುವಂತೆ ಚಲನಚಿತ್ರ ವಾಣಿಜ್ಯ ಮಂಡಳಿಯಿಂದ ಸಿಎಂಗೆ ಮನವಿ

ಚಿತ್ರರಂಗ ಉಳಿವಿಗೆ ಸರಕಾರದ ನೆರವು: ಸಿಎಂ

ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಡಾ.ಜಯಮಾಲ ಅವರ ನೇತೃತ್ವದಲ್ಲಿ ಚಂದನವನದ ಕಲಾವಿದರು, ನಿರ್ಮಾಪಕರು, ನಿರ್ದೇಶಕರು ಮಂಗಳವಾರ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು.

ಬೆಂಗಳೂರು: ಕನ್ನಡ ಚಿತ್ರರಂಗ ಉಳಿವಿಗಾಗಿ ಸಮಗ್ರ ಹೊಸ ಚಲನಚಿತ್ರ ನೀತಿ ಸೇರಿದಂತೆ ಚಲನಚಿತ್ರ ಪ್ರಾಚ್ಯಾಗಾರ (ಆರ್ಕೈವ್) ಸಹಾಯಧನ ಹೆಚ್ಚಳ, ಸರಕಾರದ ಒಟಿಟಿ ವೇದಿಕೆ, ಸಿನಿಮಾಟೋಗ್ರಫಿ ಕಾಯಿದೆ ತಿದ್ದುಪಡಿ, ಏಕಪರದೆ ಚಿತ್ರಮಂದಿರಗಳ ನವೀಕರಣ, ಆಧುನೀಕರಣಕ್ಕೆ ವಿಶೇಷ ನೆರವು, ಚಿತ್ರರಂಗದವರಿಗೆ ಫ್ಲಾಟ್ ನಿರ್ಮಾಣಕ್ಕೆ ಬಿಡಿಎಯಿಂದ ಐದು ಎಕರೆ ಭೂಮಿ ನೀಡುವಂತೆ ಸಿಎಂ ಡಿ ಕೆ ಶಿವಕುಮಾರ್ ಅವರಿಗೆ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಡಾ. ಜಯಮಾಲ ಅವರ ನೇತೃತ್ವದಲ್ಲಿ ಮಂಗಳವಾರ ಮನವಿ ಸಲ್ಲಿಸಲಾಯಿತು.

ಚಲನಚಿತ್ರ ವಾಣಿಜ್ಯ ಮಂಡಳಿಯವರ ಮನವಿಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಮುಖ್ಯಮಂತ್ರಿಯವರು ಯಾವ ರೀತಿಯಲ್ಲಿ ಸಹಾಯ ಮಾಡಬಹುದು ಎಂದು ಆಲೋಚಿಸಲಾಗುವುದು ಎಂದು ತಿಳಿಸಿದರು. ಹೊಸ ಚಲನಚಿತ್ರ ನೀತಿ ತರಲು ಚರ್ಚೆ, ಸಹಾಯಧನ ಹೆಚ್ಚಳ, ಪ್ರಾಚ್ಯಾಗಾರ ಪ್ರಾರಂಭಿಸಲು ಈ ವರ್ಷದ ಚಲನಚಿತ್ರ ಪ್ರಶಸ್ತಿ ಪ್ರಕ್ರಿಯೆ ಪ್ರಾರಂಭಿಸಲು ಸೂಕ್ತ ಕ್ರಮ, ಚಿತ್ರನಗರಿ ನಿರ್ಮಾಣಕ್ಕೆ ಘೋಷಣೆ ಮಾಡಿರುವ ಅನುದಾನದ ಬಿಡುಗಡೆಯ ಬಗ್ಗೆ ಹಣಕಾಸು ಇಲಾಖೆಯ ಎಸಿಎಸ್ ಅವರನ್ನು ಉಲ್ಲೇಖಿಸಿ ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ತಿಳಿಸಿದ್ದಾರೆ. ಬಿಡಿಎಯಿಂದ ಐದು ಎಕರೆ ಭೂಮಿ ನೀಡುವ ಕುರಿತಾಗಿ, ಯಾವ ರೀತಿಯಲ್ಲಿ ಸರಕಾರ ಸಹಾಯ ಮಾಡಬಹುದು ಎನ್ನುವ ಬಗ್ಗೆ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ.

ಮನವಿ ಪತ್ರದಲ್ಲಿನ ಇತರೆ ಅಂಶಗಳು: 2011ರಲ್ಲಿ ರೂಪಿಸಿದ್ದ ಚಲನಚಿತ್ರ ನೀತಿ ಇಂದಿಗೂ ಅನುಸರಿಸಲಾಗುತ್ತಿದೆ. ಕಳೆದ 15 ವರ್ಷದಲ್ಲಿ ತಂತ್ರಜ್ಞಾನ ವಿಚಾರವಾಗಿ ಸಾಕಷ್ಟು ಬದಲಾವಣೆ ಕಂಡಿದೆ. ಆದ ಕಾರಣ ಹೊಸ ನೀತಿಯಲ್ಲಿ ಓಟಿಟಿ ಮತ್ತು ಡಿಜಿಟಲ್ ವಿತರಣಾ ವ್ಯವಸ್ಥೆ, ಎಐ ಮತ್ತು ಹೊಸ ತಂತ್ರಜ್ಞಾನ ಬಳಕೆ, ಕನ್ನಡ ಚಿತ್ರರಂಗ ರಕ್ಷಣೆ, ಸಣ್ಣ ಚಿತ್ರಗಳಿಗೆ ಪ್ರೋತ್ಸಾಹ, ಚಿತ್ರಮಂದಿರಗಳ ಉಳಿವು, ಕಲಾವಿದರು ಮತ್ತು ಕಾರ್ಮಿಕರ ಕಲ್ಯಾಣ, ಚಲನಚಿತ್ರ ಶಿಕ್ಷಣ ಮತ್ತು ಆರ್ಕೈವ್, ಜಾಗತಿಕ ಮಾರುಕಟ್ಟೆ ವಿಸ್ತರಣೆ ಬಗ್ಗೆ ಬದಲಾವಣೆ ತರಬೇಕು.

ಪ್ರತಿವರ್ಷ 250 ಕ್ಕೂ ಹೆಚ್ಚು ಕನ್ನಡ ಚಿತ್ರಗಳು ಬಿಡುಗಡೆಯಾಗುತ್ತದೆ. ಅನೇಕ ಓಟಿಟಿ ವೇದಿಕೆಗಳು ಬಹುರಾಷ್ಟ್ರೀಯ ಕಂಪನಿಗಳಾಗಿರುವ ಕಾರಣಕ್ಕೆ ಸಣ್ಣ ಮೊತ್ತದ ಸಿನಿಮಾಗಳು ಎಂದು ಖರೀದಿ ಮಾಡುತ್ತಿಲ್ಲ ಆದ ಕಾರಣಕ್ಕೆ ಸರಕಾರದಿಂದಲೇ ಸರಕಾರಿ ಓಟಿಟಿ ವೇದಿಕೆ ಪ್ರಾರಂಭಿಸಿ ಕನ್ನಡ ಚಿತ್ರರಂಗದ ಉಳಿವಿಗೆ ಸಹಕಾರಿಯಾಗಬಹುದು. ಸಿನಿಮಾಟೋಗ್ರಫಿ ಕಾಯಿದೆ ತಿದ್ದುಪಡಿ ಮೂಲಕ ಚಿತ್ರಮಂದಿರಗಳ ಲೈಸೆನ್ಸ್ ನವೀಕರಣಕ್ಕೆ ಏಕಗವಾಕ್ಷಿ ಯೋಜನೆ ತರಬೇಕು. ಅನೇಕ ನಿಯಮಗಳು ಸೆಲ್ಯುಲಾಯ್ಡ್ ಕಾಲಕ್ಕೆ ಹೊಂದಿಕೆಯಾಗುವಂತಿದ್ದು ಡಿಜಿಟಲ್ ಯುಗಕ್ಕೆ ಅನ್ವಯವಾಗುವಂತೆ ಷರತ್ತುಗಳನ್ನು ರೂಪಿಸಬೇಕು. ಈ ಮೊದಲು 1200 ಚಿತ್ರಮಂದಿರಗಳು ರಾಜ್ಯದಲ್ಲಿದ್ದವು. ಈಗ ಅವುಗಳ ಸಂಖ್ಯೆ 400ಕ್ಕೆ ಕುಸಿದಿದೆ.

ಆದ ಕಾರಣ ಹೊಸ ಬಡಾವಣೆ, ಗ್ರಾಮೀಣ ಪ್ರದೇಶದಲ್ಲಿ ಹೊಸ ಚಿತ್ರಮಂದಿರಗಳನ್ನು ನಿರ್ಮಿಸುವುದಕ್ಕೆ ವಿಶೇಷ ಪ್ರೋತ್ಸಾಹ, ತೆರಿಗೆ, ಮೂಲಸೌಕರ್ಯ ವ್ಯವಸ್ಥೆ ಮಾಡುವುದು. ಹೊಂಬಾಳೆ ಫಿಲಂಸ್ ಸಂಸ್ಥೆಯವರು ಕಡಿಮೆ ದರದಲ್ಲಿ ನಿರ್ಮಾಪಕರು, ವಿತರಕರು, ಪ್ರದರ್ಶಕ ಸದಸ್ಯರುಗಳಿಗೆ ವಸತಿ ಫ್ಲಾಟ್‌ಗಳನ್ನು ನಿರ್ಮಿಸಿ ಕೊಡುತ್ತಿದ್ದಾರೆ. ಅದಕ್ಕಾಗಿ ಬಿಡಿಎ ವತಿಯಿಂದ ಐದು ಎಕರೆ ಭೂಮಿ ಮಂಜೂರು ಮಾಡಿ ಕೊಡಬೇಕು ಎಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ.

ವಚನಶ್ರೀ ಜಾಮೀನು ಅರ್ಜಿ ವಿಚಾರಣೆ 3ಕ್ಕೆ

ದಾವಣಗೆರೆ: ಪೋಕ್ಸೊ ಪ್ರಕರಣ ಸಂಬಂಧ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಸಲ್ಲಿಸಿರುವ ಜಾಮೀನು ಅರ್ಜಿಯ ವಿಚಾರಣೆಯನ್ನು ವಿಶೇಷ ಪೋಕ್ಸೊ ನ್ಯಾಯಾಲಯ ಜುಲೈ 3ಕ್ಕೆ ಮುಂದೂಡಿದೆ.

ನಿರೀಕ್ಷಣಾ ಜಾಮೀನು ರದ್ದಾದ ಬೆನ್ನಲ್ಲೇ ವಿಶೇಷ ಪೋಕ್ಸೊ ನ್ಯಾಯಾಲಯಕ್ಕೆ ಜೂನ್ 27ರಂದು ಹಾಜರಾಗಿದ್ದ ಸ್ವಾಮೀಜಿ, ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಬುಧವಾರ ಸಂತ್ರಸ್ತ ಬಾಲಕನ ಪರವಾಗಿ ಸರಕಾರಿ ಅಭಿಯೋಜಕರು ಹಾಗೂ ಆತನ ತಾಯಿ ಪರ ವಕೀಲರು ಪ್ರತ್ಯೇಕವಾಗಿ ತಕರಾರು ಸಲ್ಲಿಸಿದರು. ಹೀಗಾಗಿ ನ್ಯಾಯಾಲಯ ಜುಲೈ 3ರ ಮಧ್ಯಾಹ್ನ 3 ಗಂಟೆಗೆ ವಿಚಾರಣೆ ನಿಗದಿಗೊಳಿಸಿತು. 16 ವರ್ಷದ ಬಾಲಕನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇರೆಗೆ ಸ್ವಾಮೀಜಿ ವಿರುದ್ಧ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದೆ. ಪ್ರಕರಣ ದಾಖಲಾಗುವ ಮುನ್ನವೇ ಸ್ವಾಮೀಜಿ ನಿರೀಕ್ಷಣಾ ಜಾಮೀನು ಪಡೆದಿದ್ದರು. ಸಂತ್ರಸ್ತ ಬಾಲಕನ ತಾಯಿ ಹೈಕೋರ್ಟ್ ಮೆಟ್ಟಿಲೇರಿದ್ದರಿಂದ ಇದು ರದ್ದಾಗಿತ್ತು.

ವಿಶ್ವವಾಣಿ

ಸಂಪಾದಕೀಯ

ರಾಮ್‌ಜಿಯಿಂದ ಅನ್ಯಾಯ ಆಗದಿರಲಿ

ಕೇಂದ್ರ ಸರಕಾರ ಜಾರಿಗೆ ತಂದಿರುವ ವಿಕಸಿತ ಭಾರತ- ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ವಿಬಿ- ಜಿ ರಾಮ್‌ಜಿ) ಕಾಯಿದೆ ಜುಲೈ 1ರಿಂದ ಜಾರಿಗೆ ಬಂದಿದೆ. ಈ ಹಿಂದೆ ಇದ್ದ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಕಾಯಿದೆ (ಮನರೇಗಾ) ಬದಲಿಗೆ ಇದನ್ನು ಜಾರಿಗೊಳಿಸಲಾಗಿದೆ. ದೇಶಾದ್ಯಂತ ಮುಂಗಾರು ಮಳೆ ಕೊರತೆಯಾಗಿ, ಬರದ ದಿನಗಳ ಬರುತ್ತಿವೆ ಎಂಬ ಆತಂಕದ ನಡುವೆ ಈ ಬದಲಾವಣೆ ಆಗಿದೆ. ಹಳೆ ಕಾರ್ಯಕ್ರಮಕ್ಕೂ ಹೊಸ ಕಾರ್ಯಕ್ರಮಕ್ಕೂ ಕೆಲವು ವ್ಯತ್ಯಾಸಗಳಿವೆ. ಈ ಹೊಸ ಕಾಯಿದೆ, ಗ್ರಾಮೀಣ ಕುಟುಂಬಗಳಿಗೆ ವಾರ್ಷಿಕ ಉದ್ಯೋಗ ಖಾತರಿಯನ್ನು 100 ದಿನಗಳ ಬದಲಿಗೆ 125 ದಿನಗಳಿಗೆ ಹೆಚ್ಚಿಸಿದ್ದು, ಕೂಲಿಕಾರರ ಆರ್ಥಿಕ ಭದ್ರತೆಯನ್ನು ಹೆಚ್ಚಿಸುವತ್ತ ಗಮನ ನೆಟ್ಟಿದೆ. ರಾಷ್ಟ್ರೀಯ ಸರಾಸರಿ ವೇತನ, ನರೇಗಾ ಅಡಿಯಲ್ಲಿ ದಿನಕ್ಕೆ 298.8 ರೂ.ಗಳಿತ್ತು. ಈಗ ಅದು ಜಿ ರಾಮ್‌ಜಿ ಅಡಿಯಲ್ಲಿ ದಿನಕ್ಕೆ 327.4 ರೂ.ಗಳಿಗೆ, ಅಂದರೆ 28.6 ರೂ. ಹೆಚ್ಚಳ ಆಗಿದೆ. ಯೋಜನೆಯ ಆಶಯ ಉನ್ನತವಾಗಿದೆ. ಯಾವುದೇ ಅರ್ಹ ಗ್ರಾಮೀಣ ಕಾರ್ಮಿಕ ಒಂದು ದಿನವೂ ಕೆಲಸವಿಲ್ಲದೆ ಉಳಿಯದಂತೆ ನೋಡಿಕೊಳ್ಳುವುದು ಸರಕಾರದ ಆದ್ಯತೆಯಾಗಿದೆ. ಆದರೆ ಕೆಲವು ಸಮಸ್ಯೆಗಳೂ ಇಲ್ಲಿವೆ. ಮೊದಲು ಎಲ್ಲ ವೆಚ್ಚವನ್ನೂ ಕೇಂದ್ರವೇ ನೋಡಿಕೊಂಡರೆ, ಈಗ ಶೇ.60ರಷ್ಟನ್ನು ಕೇಂದ್ರ, ಶೇ.40ರಷ್ಟನ್ನು ರಾಜ್ಯ ಹಂಚಿಕೊಳ್ಳಬೇಕಿದೆ. ಅನುದಾನದ ಕೊರತೆಯಿರುವ ರಾಜ್ಯಗಳಿಗೆ ಇದು ಸಂಕಷ್ಟವೇ ಸರಿ. ಕೃಷಿ ಋತುವಿನಲ್ಲಿ 60 ದಿನಗಳ ವಿರಾಮದ ಷರತ್ತು ವಿಧಿಸಲಾಗಿದೆ. ಆದರೆ ಇದು ವೈವಿಧ್ಯಮಯ ಸ್ಥಳೀಯ ಕೃಷಿ ಸಂಸ್ಕೃತಿಗಳನ್ನು ಹೊಂದಿರುವ ದೇಶದಲ್ಲಿ ಕಷ್ಟಸಾಧ್ಯ; ಹಾಗೂ ಕೂಲಿಕಾರನಿಗೆ ಅತ್ಯಂತ ಹೆಚ್ಚು ಅಗತ್ಯವಿರುವ ಸಮಯದಲ್ಲಿಯೇ ಕೆಲಸದ ನಿರಾಕರಣೆಗೆ ಕಾರಣವಾದೀತು. ರಾಜ್ಯಗಳು ಹೊಸ ಕಾಯಿದೆಯ ಕೆಲವು ಅಂಶಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ್ದು, ಕರ್ನಾಟಕ ಸರಕಾರ ಈ ಬಗ್ಗೆ ಕೋರ್ಟ್‌ಗೆ ಹೋಗಲಿದೆ ಎಂದು ತಿಳಿಸಿದೆ. ರಾಜ್ಯಗಳ ಕಳವಳವನ್ನು ಸಮರ್ಪಕವಾಗಿ ಉತ್ತರಿಸಲು ಕೇಂದ್ರ ಸರಕಾರ ಮುಂದಾಗಬೇಕು. ಅರ್ಹ ಕಾರ್ಮಿಕರಿಗೆ ಹೊಸ ಕಾಯಿದೆಯಿಂದ ಅನ್ಯಾಯ ಆಗಬಾರದು.

ಸೊಂಪಾದಕೀಯ

ನಿಗೂಢ ಬ್ಯಾಟ್‌ಮ್ಯಾನ್

ಕಳ್ಳರು, ದುಷ್ಟರು ಅಬ್ಬರ ಮಾಡುತ್ತಿರುವಾಗ ಎಲ್ಲಿಂದಲೋ ಹಾರಿ ಬಂದು ನೀಚರ ಹೆಡೆಮುರಿ ಕಟ್ಟಿ ಬಂದ ಹಾಗೇ ಮರೆಯಾಗುವ ಬ್ಯಾಟ್‌ಮ್ಯಾನ್ ನಿಮಗೆ ಗೊತ್ತಲ್ಲವೆ? ಮೆಕ್ಸಿಕೋದಲ್ಲಿ ಹಾಗೆಯೇ ಒಬ್ಬ 'ಬ್ಯಾಟ್‌ಮ್ಯಾನ್' ಕಾಣಿಸಿಕೊಂಡಿದ್ದಾನೆ. ಮೆಕ್ಸಿಕೋದ ಜಾಲಿಸ್ಕೊ ರಾಜ್ಯದ ಲಾಗೋಸ್ ಡೆ ಮೊರೆನೋ ಪಟ್ಟಣದಲ್ಲಿ ಬೈಕ್ ಕಳ್ಳರಿಗೆ ತನ್ನದೇ ಸ್ಟೈಲ್‌ನಲ್ಲಿ ಪಾಠ ಕಲಿಸುತ್ತಿದ್ದಾನೆ. ಹೇಗೆ ಗೊತ್ತೆ? ಬೈಕ್ ಕಳ್ಳರನ್ನು ಹಿಡಿದು ಬೀದಿಯ ಲೈಟ್ ಕಂಬಗಳಿಗೆ ಗಮ್ ಟೇಪ್‌ನಿಂದ ಅಂಟಿಸಿ ಕಟ್ಟಿಹಾಕಿ, ಅವರು ಕದ್ದ ಬೈಕ್‌ಗಳನ್ನೂ ಅಲ್ಲೇ ಪಕ್ಕದಲ್ಲಿ ನಿಲ್ಲಿಸಿ ಕಣ್ಮರೆಯಾಗುತ್ತಾನೆ. ಈ ವಿಚಿತ್ರ ಘಟನೆಯ ಫೋಟೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಇದನ್ನು ನೋಡಿದ ನೆಟ್ಟಿಗರು ಆ ರಹಸ್ಯ ವ್ಯಕ್ತಿಗೆ ಬ್ಯಾಟ್‌ಮ್ಯಾನ್ ಎಂಬ ಬಿರುದು ಕೊಟ್ಟೇಬಿಟ್ಟರು. ಆದರೆ ಪೊಲೀಸರು ಬಿಡಬೇಕಲ್ಲ. ಅವರು ಇದನ್ನು ಹೀರೋಗಿರಿ ಎಂದು ಪರಿಗಣಿಸದೆ ಹಿಂಸೆ ಎಂದೇ ಪರಿಗಣಿಸಿದ್ದಾರಂತೆ. ಅಂದರೆ ಇವರು ಕಳ್ಳರಲ್ಲ, ಬದಲಾಗಿ ಸಂತ್ರಸ್ತರು. ಬ್ಯಾಟ್‌ಮ್ಯಾನೇ ಹಿಂಸೆ ನೀಡಿದ ವ್ಯಕ್ತಿ. ಪೊಲೀಸರು ಈಗ ಕಳ್ಳರ ಬದಲು ಬ್ಯಾಟ್‌ಮ್ಯಾನ್ ಹಿಂದೆ ಬಿದ್ದಿದ್ದಾರೆ. ಬಹಳಷ್ಟು ಕಡೆ ಪೊಲೀಸರು ಮಾಡುವ ಕೆಲಸ ಇದೇನೇ. ಕಳ್ಳತನ ಮಾಡಿದವರನ್ನು ಹಿಡಿಯುವ ಬದಲು ಕಳವಿಗೀಡಾದ ಮನೆಯವರನ್ನೇ ರುಬ್ಬುವುದು, ನಿಜವಾದ ಕೊಲೆಗಾರನನ್ನು ಹಿಡಿಯುವ ಬದಲು ಕೊಲೆಯ ಸುದ್ದಿ ಕೊಟ್ಟಾತನನ್ನೇ ಮೊದಲು ಲಾಕಪ್ಪಿಗೆ ದಬ್ಬುವುದು- ಇದೆಲ್ಲ ಸಾಮಾನ್ಯ. ಅದ್ಸರಿ, ಬ್ಯಾಟ್‌ಮ್ಯಾನ್ ಜೊತೆ ಸೂಪರ್‌ಮ್ಯಾನ್, ಸ್ಪೈಡರ್ ಮ್ಯಾನ್, ಫ್ಯಾಂಟಮ್ ಕೂಡ ಇದ್ದಿದ್ದರೆ ಚೆನ್ನಿತ್ತು. ಪೊಲೀಸರ ಅಗತ್ಯವೇ ಇರಲಿಲ್ಲ. ಅದೇ ಪೊಲೀಸರ ಭಯವೂ ಕೂಡ. ಸಾಮಾನ್ಯರು ಪೊಲೀಸರ ಬದಲು ಬ್ಯಾಟ್‌ಮ್ಯಾನ್ ಮೊರೆ ಹೋದರೆ ಎಂಬ ಚಿಂತೆ!

ಸಂಪಾದಕರ ಸದ್ಯಶೋಧನೆ

ಕೆ.ಸಿ.ತ್ಯಾಗಿ ಬೆಳೆದ ಪರಿ

1978ರ ಸುರೇಶ್ ರಾಮ್ ಮತ್ತು ಸುಷ್ಮಾ ಚೌಧರಿ ಅವರ ಲೈಂಗಿಕ ಹಗರಣವು ಭಾರತೀಯ ರಾಜಕೀಯ ಇತಿಹಾಸದ ಗತಿಯನ್ನೇ ಬದಲಿಸಿತು. ಆದರೆ ಈ ಇಡೀ ಹಗರಣದ ಸೂತ್ರಧಾರಿಯಾಗಿ, ದೆಹಲಿಯ ನಿರ್ಜನ ರಸ್ತೆಯಲ್ಲಿ ಕಾರನ್ನು ಅಡ್ಡಗಟ್ಟಿ ಆ ಕುಪ್ರಸಿದ್ಧ ಪೋಲರಾಯ್ಡ್ ಫೋಟೋಗಳನ್ನು ವಶಪಡಿಸಿಕೊಂಡಿದ್ದು ಕೇವಲ 30 ವರ್ಷದ ಒಬ್ಬ ರಾಜಕೀಯ



ಕಾರ್ಯಕರ್ತ. ಆತನೇ ಇಂದಿನ ರಾಷ್ಟ್ರೀಯ ಲೋಕ ದಳದ ಹಿರಿಯ ಮುತ್ಸದ್ದಿ ಹಾಗೂ ಜನತಾ ದಳ ಯುನೈಟೆಡ್ (ಜೆಡಿಯು) ಪ್ರಮುಖ ರಾಷ್ಟ್ರೀಯ ನಾಯಕ ಕಿಶನ್ ಚಂದ್ ತ್ಯಾಗಿ (ಕೆ.ಸಿ.ತ್ಯಾಗಿ). ಪಶ್ಚಿಮ ಉತ್ತರ ಪ್ರದೇಶದ ಒಬ್ಬ ಸಾಮಾನ್ಯ ಗ್ರಾಮೀಣ ಯುವ ನಾಯಕ, ಈ ಒಂದೇ ಒಂದು ಘಟನೆಯಿಂದ ದೆಹಲಿಯ ಅಧಿಕಾರದ ಕಾರಿಡಾರ್‌ನಲ್ಲಿ ಹೆಮ್ಮರವಾಗಿ ಬೆಳೆದ ಕಥೆ ಅತ್ಯಂತ ರೋಚಕ. 1970ರ ದಶಕದ ಕೊನೆಯಲ್ಲಿ ಜನತಾ ಪಕ್ಷದೊಳಗೆ ತೀವ್ರ ಆಂತರಿಕ ಸಂಘರ್ಷ ನಡೆಯುತ್ತಿತ್ತು. ಪ್ರಧಾನಿ ಮೊರಾರ್ಜಿ ಮತ್ತು ರಕ್ಷಣಾ ಸಚಿವ ಜಗಜೀವನ್ ರಾಮ್ ಒಂದು ಬಣದಲ್ಲಿದ್ದರೆ, ಸಮಾಜವಾದಿ ಸಿದ್ಧಾಂತದ ಚೌಧರಿ ಚರಣ್ ಸಿಂಗ್ ಮತ್ತು ರಾಜ್ ನಾರಾಯಣ್ ಮತ್ತೊಂದು ಬಣದಲ್ಲಿದ್ದರು. ಚರಣ್ ಸಿಂಗ್ ಅವರನ್ನು ಪ್ರಧಾನಿ ಗಾದಿಯಲ್ಲಿ ಕೂರಿಸಲು ರಾಜ್ ನಾರಾಯಣ್ ಹಗಲಿರುಳು ತಂತ್ರ ರೂಪಿಸುತ್ತಿದ್ದರು. ಇಂಥ ಸಮಯದಲ್ಲಿ, ಜಗಜೀವನ್ ರಾಮ್ ಮಗ ಸುರೇಶ್ ರಾಮ್ ರಹಸ್ಯ ಪ್ರಣಯದಾಟದ ಫೋಟೋಗಳನ್ನು ಹಿಡಿದು ತಂದ ಕೆ.ಸಿ. ತ್ಯಾಗಿ, ರಾಜ್ ನಾರಾಯಣ್ ಮತ್ತು ಚರಣ್ ಸಿಂಗ್ ಅವರ ಕಣ್ಣಿಗೆ ದೇವದೂತನಂತೆ ಕಂಡರು. ದೆಹಲಿಯ ರಾಜಕೀಯ ಚದುರಂಗದಾಟದಲ್ಲಿ ಎದುರಾಳಿ ಬಣವನ್ನು ಸಂಪೂರ್ಣವಾಗಿ ಧ್ವಂಸ ಮಾಡಬಲ್ಲ ಬ್ರಹ್ಮಾಸ್ತ್ರವನ್ನು ಈ ಯುವಕ ತಂದುಕೊಟ್ಟಿದ್ದ. ಈ ಒಂದೇ ಒಂದು ಸಾಹಸದಿಂದ ಕೆ.ಸಿ.ತ್ಯಾಗಿ ರಾತ್ರೋರಾತ್ರಿ ಜನತಾ ಪಕ್ಷದ ಸಮಾಜವಾದಿ ಬಣದ ಕಣ್ಣಲ್ಲಿ ಹೀರೋ ಆಗಿ ಹೊರಹೊಮ್ಮಿದರು. ಚರಣ್ ಸಿಂಗ್ ಅತ್ಯಂತ ನಂಬಿಕಸ್ಥ ಮತ್ತು ಆಪ್ತ ವಲಯದಲ್ಲಿ ತ್ಯಾಗಿ ಅವರಿಗೆ ಪ್ರಮುಖ ಸ್ಥಾನ ಸಿಕ್ಕಿತು. ಕೆ.ಸಿ.ತ್ಯಾಗಿ ಮುಂದೆ ಬೆಳೆದು ದೊಡ್ಡ ನಾಯಕರಾದ ನಂತರ ತಮ್ಮ ಅನೇಕ ಸಂದರ್ಶನಗಳಲ್ಲಿ ಆ ಐತಿಹಾಸಿಕ ರಾತ್ರಿಯ ಘಟನೆಯನ್ನು ಮುಕ್ತವಾಗಿ ನೆನಪಿಸಿಕೊಂಡಿದ್ದಾರೆ. ಅವರ ಮಾತುಗಳಲ್ಲೇ ಹೇಳುವುದಾದರೆ- 'ನಾವು ಅಂದು ಮಾಡಿದ್ದು ರಾಜಕೀಯ ಹೋರಾಟದ ಒಂದು ಭಾಗವಾಗಿತ್ತೇ ಹೊರತು ನಮ್ಮ ನಡುವೆ ಯಾವುದೇ ವೈಯಕ್ತಿಕ ದ್ವೇಷವಿರಲಿಲ್ಲ. ಆ ದಿನಗಳಲ್ಲಿ ತುರ್ತು ಪರಿಸ್ಥಿತಿಯ ಕಹಿ ನೆನಪುಗಳು ಹಸಿಯಾಗಿದ್ದವು ಮತ್ತು ರಾಜಕೀಯ ಮೌಲ್ಯಗಳಿಗಾಗಿ ದೊಡ್ಡ ಹೋರಾಟ ನಡೆಯುತ್ತಿತ್ತು. ಆದರೆ, ಆ ಪೋಲರಾಯ್ಡ್ ಫೋಟೋಗಳು ಇಷ್ಟೊಂದು ದೊಡ್ಡ ಮಟ್ಟದ ರಾಜಕೀಯ ಭೂಕಂಪ ಸೃಷ್ಟಿಸುತ್ತವೆ ಮತ್ತು ದೇಶದ ಪ್ರಧಾನಿ ಅಭ್ಯರ್ಥಿಯೊಬ್ಬರ ಬದುಕನ್ನು ಹೀಗೆ ಮುಗಿಸುತ್ತವೆ ಎಂದು ನಾವು ಅಂದುಕೊಂಡಿರಲಿಲ್ಲ.' ತ್ಯಾಗಿ ಅವರ ಪ್ರಕಾರ, ಅವರ ಮೂಲ ಉದ್ದೇಶ ಸುರೇಶ್ ರಾಮ್ ಅವರನ್ನು ಬ್ಲ್ಯಾಕ್‌ಮೇಲ್ ಮಾಡುವುದಾಗಲಿ ಅಥವಾ ಹಣ ವಸೂಲಿ ಮಾಡುವುದಾಗಲಿ ಆಗಿರಲಿಲ್ಲ. ಕೇವಲ ತಮ್ಮ ಸಮಾಜವಾದಿ ನಾಯಕರಿಗೆ ರಾಜಕೀಯ ಅನುಕೂಲ ಮಾಡಿಕೊಡುವುದು ಮತ್ತು ಎದುರಾಳಿ ಬಣದ ನೈತಿಕತೆಯನ್ನು ಪ್ರಶ್ನಿಸುವುದಷ್ಟೇ ಅವರ ಗುರಿಯಾಗಿತ್ತು. ಆದರೆ ರಾಜಕೀಯದ ಚಾಣಕ್ಯರು ಆ ಫೋಟೋಗಳನ್ನು ಬಳಸಿದ ರೀತಿ ಇಡೀ ದೇಶವನ್ನೇ ಬೆಚ್ಚಿಬೀಳಿಸಿತು. 1978ರ ಆ ಘಟನೆಯ ನಂತರ ಕೆ.ಸಿ.ತ್ಯಾಗಿ ರಾಜಕೀಯ ಮುನ್ನಡೆಗೆ ಯಾವುದೇ ಅಡೆತಡೆ ಎದುರಾಗಲಿಲ್ಲ. ಚರಣ್ ಸಿಂಗ್ ಆಶೀರ್ವಾದದಿಂದ ಪಶ್ಚಿಮ ಉತ್ತರ ಪ್ರದೇಶದಲ್ಲಿ ಪ್ರಬಲ ಯುವ ನಾಯಕನಾಗಿ ಹೊರಹೊಮ್ಮಿದ ಅವರು, ಮುಂದೆ ಲೋಕದಳ ಮತ್ತು ಜನತಾ ದಳದ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಾಜಿ ಪ್ರಧಾನಿ ವಿ.ಪಿ.ಸಿಂಗ್ ಕಾಲದಲ್ಲೂ ತ್ಯಾಗಿ ರಾಷ್ಟ್ರ ರಾಜಕಾರಣದಲ್ಲಿ ಸಕ್ರಿಯರಾಗಿದ್ದರು. 1989ರ ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದ ಹಾಪುರ್ ಕ್ಷೇತ್ರದಿಂದ ಜನತಾ ದಳ ಅಭ್ಯರ್ಥಿಯಾಗಿ ಸ್ಪರ್ಧಿಸಿ ಭರ್ಜರಿ ಜಯ ಸಾಧಿಸುವ ಮೂಲಕ ಮೊದಲ ಬಾರಿಗೆ ಸಂಸತ್ ಪ್ರವೇಶಿಸಿದರು. ಸಮಾಜವಾದಿ ಸಿದ್ಧಾಂತಕ್ಕೆ ಬದ್ಧರಾಗಿದ್ದ ತ್ಯಾಗಿ, ನಂತರದ ದಿನಗಳಲ್ಲಿ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ಶರದ್ ಯಾದವ್ ಅವರೊಂದಿಗೆ ಕೈಜೋಡಿಸಿದರು. ಜೆಡಿಯು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಮುಖ್ಯ ವಕ್ತಾರರಾಗಿ ದೀರ್ಘಕಾಲ ಸೇವೆ ಸಲ್ಲಿಸಿದರು. ಜೆಡಿಯು ಪಕ್ಷದ ಅತ್ಯಂತ ಪ್ರಭಾವಿ ಧ್ವನಿಯಾಗಿ ಬೆಳೆದ ಇವರನ್ನು ಪಕ್ಷವು ರಾಜ್ಯಸಭೆಗೆ ನಾಮನಿರ್ದೇಶನ ಮಾಡಿತು. ರಾಷ್ಟ್ರೀಯ ಮಾಧ್ಯಮಗಳಲ್ಲಿ ಪಕ್ಷದ ನಿಲುವುಗಳನ್ನು ಅತ್ಯಂತ ತಾರ್ಕಿಕವಾಗಿ ಮತ್ತು ನಯವಾಗಿ ಮಂಡಿಸುವ ಮುತ್ಸದ್ದಿ ನಾಯಕನಾಗಿ ಅವರು ಗುರುತಿಸಿಕೊಂಡರು. ಹಿಂದಿನ ವರ್ಷವಷ್ಟೇ ತ್ಯಾಗಿ ಜೆಡಿಯು ತೊರೆದು ರಾಷ್ಟ್ರೀಯ ಲೋಕ ದಳ ಸೇರಿದರು.

ಸಾಹಿತ್ಯ ಲೋಕದ ಪರನಿಂದಾ ಪುರಾಣವು!

ಬರಹಗಾರರೂ ರಕ್ತಮಾಂಸಗಳಿರುವ ಸಾಧಾರಣ ಜೀವಿಗಳು. ಅವರ ಸಣ್ಣಪುಟ್ಟ ದೌರ್ಬಲ್ಯಗಳು, ಮುನಿಸುಗಳು ಮತ್ತು ಹಠಗಳೇ ಅವರ ಬರಹಕ್ಕೆ ತೀವ್ರತೆಯನ್ನು ಕೊಡುತ್ತವೆ. ಲೇಖಕರೊಳಗಿನ ಈ ಮನುಷ್ಯ ಸಹಜ ಗುಣಗಳೇ ಸಾಹಿತ್ಯ ಲೋಕವನ್ನು ಇಷ್ಟು ಸ್ವಾರಸ್ಯಕರವಾಗಿಸಿವೆ ಮತ್ತು ನಮ್ಮನ್ನು ಅವರ ಅಕ್ಷರಗಳಿಗೆ ಮತ್ತಷ್ಟು ಹತ್ತಿರವಾಗಿಸಿವೆ.

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

ಸಾಹಿತ್ಯ ಎನ್ನುವುದು ಕೇವಲ ಕಾಗದ ಮತ್ತು ಶಾಯಿಯ ಆಟವಲ್ಲ. ಅದು ಲೇಖಕನ ಒಳಗಿನ ಒಂಟಿತನ, ಹಠ, ಸಂಕಟ, ವಿಷಾದ ಹಾಗೂ ಮುನಿಸುಗಳ ಸಮ್ಮಿಶ್ರಣ. ಪ್ರತಿಯೊಬ್ಬ ಬರಹಗಾರನೂ ಬರೆಯಲು ಕೂತಾಗ ತನ್ನದೇ ಆದ ಒಂದು ಕಾಲ್ಪನಿಕ ದ್ವೀಪವನ್ನು ಸೃಷ್ಟಿಸಿಕೊಳ್ಳುತ್ತಾನೆ. ಅಲ್ಲಿ ಆತನದ್ದೇ ಸಾಮ್ರಾಜ್ಯ, ಆತನದ್ದೇ ನಿಯಮಗಳು. ಆದರೆ, ಆತನ ಏಕಾಂತದ ದ್ವೀಪಕ್ಕೆ ಮತ್ತೊಬ್ಬ ಬರಹಗಾರ ತನ್ನದೇ ಸಿದ್ಧಾಂತ ಅಥವಾ ಶೈಲಿಯೊಂದಿಗೆ ಲಗ್ಗೆ ಇಟ್ಟಾಗ, ಅಲ್ಲಿ ಅಹಂಗಳು ಘರ್ಷಿಸಿ ಸಾಹಿತ್ಯಕ ಯುದ್ಧ ಆರಂಭವಾಗುತ್ತದೆ. ಮಾರ್ಕ್ ಟ್ವೇನ್, ಜೇನ್ ಆಸ್ಟನ್, ವಿಲಿಯಂ ಫಾಲ್ಕನರ್ ಅಥವಾ ಮಾರ್ಟಿನ್ ಅಮಿಸ್ ಅವರಂಥ ಜಗತ್ತಿನ ಮಹಾನ್ ಲೇಖಕರು ಎಂದು ಕರೆಯಿಸಿಕೊಂಡವರು ಸಾಮಾನ್ಯ ಲೇಖಕರಂತೆ ಪರಸ್ಪರ ಕಟುವಾಗಿ ನಿಂದಿಸಿಕೊಂಡಿದ್ದನ್ನು, ಕೆಸರೆರಚಾಟ ಮಾಡಿದ್ದನ್ನು, ಕೆಟ್ಟದಾಗಿ ಕಚ್ಚಾಡಿಕೊಂಡಿದ್ದನ್ನು ಇತಿಹಾಸದ ಪುಟಗಳಲ್ಲಿ ನೋಡಿದಾಗ ನಮಗೆ ಆಶ್ಚರ್ಯವಾಗುತ್ತದೆ.

ಆದರೆ, ಈ ಕಾರಣಕ್ಕೆ ಅವರ ಸಾಹಿತ್ಯದ ಮೇಲಿನ ಗೌರವವೇನೂ ಕಡಿಮೆಯಾಗುವುದಿಲ್ಲ. ಬದಲಿಗೆ, 'ಅಯ್ಯೋ, ಇಷ್ಟೆಲ್ಲ ದೊಡ್ಡ ಪುಸ್ತಕ ಬರೆದ ಇವರೂ ನಮ್ಮಂತೆಯೇ ಮತ್ಸರ, ಸಿಟ್ಟು, ಅಸೂಯೆ ಇರುವ ಸಾಮಾನ್ಯ ಮನುಷ್ಯರೇ' ಎಂಬ ವಿಷಣ್ಣ ಭಾವ ನಮ್ಮಲ್ಲಿ ಮೂಡುತ್ತದೆ. ಬರಹಗಾರರು ದೇವರಲ್ಲ. ಅವರೂ ರಕ್ತಮಾಂಸಗಳಿರುವ ಸಾಧಾರಣ ಜೀವಿಗಳು. ಅವರ ಈ ಸಣ್ಣಪುಟ್ಟ ದೌರ್ಬಲ್ಯಗಳು, ಮುನಿಸುಗಳು ಮತ್ತು ಹಠಗಳೇ ಅವರ ಬರಹಕ್ಕೆ ವಿಶಿಷ್ಟವಾದ ತೀವ್ರತೆಯನ್ನು ಕೊಡುತ್ತವೆ ಎಂಬುದೂ ಅಷ್ಟೇ ಸತ್ಯ. ಲೇಖಕರೊಳಗಿನ ಈ ಮನುಷ್ಯ ಸಹಜ ಗುಣಗಳೇ ಸಾಹಿತ್ಯ ಲೋಕವನ್ನು ಇಷ್ಟು ಸ್ವಾರಸ್ಯಕರವಾಗಿಸಿವೆ ಮತ್ತು ನಮ್ಮನ್ನು ಅವರ ಅಕ್ಷರಗಳಿಗೆ ಮತ್ತಷ್ಟು ಹತ್ತಿರವಾಗಿಸಿವೆ.

ನಾನು ಈ ಮಾತನ್ನು ಹೇಳುವಾಗ ನನಗೆ ಇಂಗ್ಲಿಷ್ ಕಾದಂಬರಿಕಾರ, ಪ್ರಬಂಧಕಾರ, ಆತ್ಮಚರಿತ್ರೆಕಾರ, ಚಿತ್ರಕಥೆಗಾರ ಮತ್ತು ವಿಮರ್ಶಕರಾಗಿದ್ದ ಸರ್ ಮಾರ್ಟಿನ್ ಲೂಯಿಸ್ ಅಮಿಸ್ (ಆಗಸ್ಟ್ 25, 1949- ಮೇ 19, 2023) ನೆನಪಾಗುತ್ತಾರೆ. ಅವರು ತಮ್ಮ ಮನಿ, ಮತ್ತು ಲಂಡನ್ ಫೀಲ್ಡ್ಸ್ ಕಾದಂಬರಿಗಳಿಗೆ ಹೆಚ್ಚು ಹೆಸರುವಾಸಿಯಾಗಿದ್ದಾರೆ. ಅವರ ಆತ್ಮಚರಿತ್ರೆ ಅನುಭವಕ್ಕಾಗಿ ಎರಡು ಬಾರಿ ಬೂಕರ್ ಪ್ರಶಸ್ತಿ ಅವರನ್ನು ಸವರಿಕೊಂಡು ಹೋಗಿತ್ತು. 2008ರಲ್ಲಿ, ದಿ ಟೈಮ್ಸ್ ಅವರನ್ನು 1945ರಿಂದ 1950ರ ಅವಧಿಯ ಶ್ರೇಷ್ಠ ಬ್ರಿಟಿಷ್ ಬರಹಗಾರರಲ್ಲಿ ಒಬ್ಬರೆಂದು ಹೆಸರಿಸಿತ್ತು. ಕಳೆದ ಐವತ್ತು ವರ್ಷಗಳಲ್ಲಿ ಅಮಿಸ್ ಬ್ರಿಟಿಷ್ ಕಾದಂಬರಿಕಾರರ ಮೇಲೆ ಪ್ರಭಾವ ಬೀರಿದ ಲೇಖಕ ಎಂದು ಅವರನ್ನು ಇಂದಿಗೂ ಮನ್ನಿಸಲಾಗುತ್ತದೆ.

ಅಮಿಸ್ ಬಿಬಿಸಿ ಕಾರ್ಯಕ್ರಮವೊಂದರಲ್ಲಿ ಮಕ್ಕಳ ಸಾಹಿತ್ಯದ ಕುರಿತು ಆಡಿದ ಮಾತುಗಳು ಸಾಹಿತ್ಯ ಲೋಕದಲ್ಲಿ ದೊಡ್ಡ ಚರ್ಚೆಯನ್ನೇ ಹುಟ್ಟುಹಾಕಿದವು. 'ನನಗೆ ಮಿದುಳಿನ ಗಾಯವಾಗಿ ಬುದ್ಧಿಭ್ರಮಣೆಯಾದರೆ ಮಾತ್ರ ನಾನು ಮಕ್ಕಳಿಗಾಗಿ ಬರೆಯುತ್ತೇನೆ' ಎಂದು ಅವರು ಹೇಳಿಬಿಟ್ಟರು. ಅದು ಅವರೊಳಗಿನ ತೀವ್ರವಾದ ಬೌದ್ಧಿಕ ಅಹಂ ಮತ್ತು ಸಾಹಿತ್ಯದ ಸ್ತರಗಳ ಬಗೆಗಿನ ಕಟು ನಿಲುವನ್ನು ಎತ್ತಿ ತೋರಿಸುತ್ತದೆ ಎಂದು ಇಡೀ ಸಾಹಿತ್ಯ ವಲಯ ಅವರ ಮೇಲೆ ಮುರುಕೊಂಡು ಬಿದ್ದಿತು. ತಮಗಿಂತ ಕೆಳಗಿನ ಸ್ತರದಲ್ಲಿ ಬರೆಯಲು ಯಾರೇ ಬಲವಂತ ಮಾಡಿದರೂ ತಾವು ಬರೆಯುವುದಿಲ್ಲ ಎಂಬ ಅವರ ಹಠ, ಬೌದ್ಧಿಕ ಬರಹಗಾರನೊಬ್ಬನ ಗರ್ವ ಎಂದು ಸಾಹಿತಿಗಳು ಜರೆದರು.

ಅಮಿಸ್ ಅವರ ಈ ವಾದದ ಹಿಂದೆ, ಮಕ್ಕಳ ಸಾಹಿತ್ಯ ಎಂದರೆ ಕೇವಲ ಸರಳ, ಗಂಭೀರವಲ್ಲದ ಮತ್ತು ಕಡಿಮೆ ಬುದ್ಧಿಶಕ್ತಿಯ ಕೆಲಸ ಎಂಬ ತಪ್ಪು ಕಲ್ಪನೆ ಇತ್ತು. ಸಂಕೀರ್ಣ ಪದಗಳ ಹಿಂದೆ ಅಡಗಿಕೊಳ್ಳುವುದು, ಆಧುನಿಕ ಸಮಾಜದ ಗಲಿಬಿಲಿಗಳನ್ನು ವ್ಯಂಗ್ಯವಾಗಿ ಚಿತ್ರಿಸುವುದು ವಯಸ್ಕರ ಸಾಹಿತ್ಯದಲ್ಲಿ ಸುಲಭವಾಗಿ ಒಲಿಯಬಹುದು. ಆದರೆ, ಜಗತ್ತಿನ ಯಾವುದೇ ಸಂಕೀರ್ಣ ಸತ್ಯವನ್ನು ಅತ್ಯಂತ ಸರಳವಾಗಿ, ಮಗುವಿನ ಮುಗ್ಧತೆಗೆ ಒಗ್ಗುವಂತೆ ದಾಟಿಸುವುದು ಜಗತ್ತಿನ ಅತ್ಯಂತ ಕಷ್ಟದ ಕಲೆ ಎಂಬುದನ್ನು ಅವರ ಬೌದ್ಧಿಕ ಅಹಂ ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಮಕ್ಕಳಿಗಾಗಿ ಬರೆಯುವುದೆಂದರೆ ಭಾಷೆಯನ್ನು ಕುಂಠಿತಗೊಳಿಸುವುದಲ್ಲ, ಬದಲಿಗೆ ಕಲ್ಪನೆಯ ರೆಕ್ಕೆಗಳನ್ನು ಮುಕ್ತವಾಗಿ ಬಿಡುವುದು ಎಂದು ಅನೇಕರು ಅವರೊಂದಿಗೆ ವಾದಿಸಿದರು.

ಮಾರ್ಟಿನ್ ಅಮಿಸ್ ಸೃಷ್ಟಿಸಿದ ಸಾಹಿತ್ಯ ಲೋಕವು ಹೆಚ್ಚಾಗಿ ಬುದ್ಧಿವಂತಿಕೆ, ಜಟಿಲ ಭಾಷೆ ಮತ್ತು ನಾಗರಿಕ ಸಮಾಜದ ಕಟು ವಿಮರ್ಶೆಯಿಂದ ಕೂಡಿದ್ದಿರಬಹುದು. ಹೀಗಾಗಿ ಅವರಿಗೆ ಮಕ್ಕಳ ಸಾಹಿತ್ಯ ಲಘುವಾಗಿ ಕಂಡಿರಬಹುದು. ಆದರೆ ಅವರ ಈ ಒಂದು ಹೇಳಿಕೆಯನ್ನು ಇಟ್ಟುಕೊಂಡು 'ದಿ ಗಾರ್ಡಿಯನ್' ಪತ್ರಿಕೆ ಒಂದು ತಿಂಗಳ ಕಾಲ ಬೇರೆ ಬೇರೆ ಲೇಖಕರಿಂದ ಅವರನ್ನು ತರಾಟೆಗೆ ತೆಗೆದುಕೊಳ್ಳುವ ಲೇಖನಗಳನ್ನು ಪ್ರಕಟಿಸಿ, ಅಮಿಸ್ ಅವರ ಮಾನ ಹರಾಜು ಹಾಕಿತು. ಒಬ್ಬ ಲೇಖಕನಂತೂ, 'ಅಮಿಸ್ ಬರೆದಿರುವುದನ್ನು ಯಾವ ದೊಡ್ಡವರಾದರೂ ಅರ್ಥ ಮಾಡಿಕೊಳ್ಳಬಲ್ಲರು.

ಅದನ್ನು ಮಹಾನ್ ಎಂದು ಭಾವಿಸಬೇಕಿಲ್ಲ. ಆದರೆ ಚಿಕ್ಕ ಮಕ್ಕಳಿಗೆ ಅರ್ಥವಾಗುವ ಹಾಗೆ ಅಮಿಸ್ ಬರೆದು ತೋರಿಸಲಿ' ಎಂದು ಸವಾಲು ಹಾಕಿದ. 'ಅಮಿಸ್ ಅವರೇ, ಮಕ್ಕಳ ಲೋಕಕ್ಕೆ ಇಳಿಯಲು ಮಿದುಳಿಗೆ ಗಾಯವಾಗಬೇಕಿಲ್ಲ, ಬದಲಿಗೆ ಹಣ್ಣಾದ ಹೃದಯವಿರಬೇಕು. ನಮಗಿಂತ ಕೆಳಗಿನ ಸ್ತರದಲ್ಲಿ ಬರೆಯಲು ಇಷ್ಟವಿಲ್ಲ ಎನ್ನುವ ನಿಮ್ಮ ಹಠವಿದೆಯಲ್ಲ, ಅದು ಮಗುವಿನ ಮುಗ್ಧತೆಯ ಎದುರು ಸೋತುಹೋಗುವ ಅಹಂಕಾರವಷ್ಟೇ. ಕೆಲವೊಮ್ಮೆ ಸರಳವಾಗಿ ಬರೆಯುವುದೇ ಜಗತ್ತಿನ ಅತ್ಯಂತ ಕಷ್ಟದ ಕೆಲಸ' ಎಂದು ಆ ಪತ್ರಿಕೆ ಮುಖಪುಟದಲ್ಲಿ ಸಂಪಾದಕೀಯ ಬರೆದು ಖಂಡಿಸಿತು.

ನೀವು ಇಂಗ್ಲಿಷ್ ಬರಹಗಾರ್ತಿ ಜೇನ್ ಆಸ್ಟೆನ್ ಹೆಸರನ್ನು ಕೇಳಿರಬಹುದು. ಎರಡು ಮುಕ್ಕಾಲು ಶತಮಾನಗಳಾದರೂ ಜೇನ್ ಆಸ್ಟೆನ್ ಅವರ 'ಪ್ರೈಡ್ ಆಂಡ್ ಪ್ರಿಜುಡಿಸ್' ಇಂದಿಗೂ ಪ್ರೇಮಿಗಳ ನೆಚ್ಚಿನ ಪುಸ್ತಕ. ಆದರೆ ಅನೇಕರಿಗೆ ಅವರನ್ನು ಕಂಡರೆ ಆಗುತ್ತಿರಲಿಲ್ಲ. ಪ್ರಕೃತಿಯ ದಿವ್ಯ ಚೇತನವನ್ನು, ಬ್ರಹ್ಮಾಂಡದ ಅದೃಶ್ಯ ಶಕ್ತಿಯನ್ನು ಆರಾಧಿಸಿದ ಅಮೆರಿಕದ ಮಹಾನ್ ದಾರ್ಶನಿಕ ರಾಲ್ಫ್ ವಾಲ್ಡೋ ಎಮರ್ಸನ್, ಜೇನ್ ಆಸ್ಟೆನ್ ಅವರ ಕಾದಂಬರಿಗಳ ಬಗ್ಗೆ ಅತ್ಯಂತ ಕಟು ಪದಗಳಲ್ಲಿ ಟೀಕಿಸುತ್ತಿದ್ದರು. ಕೇವಲ ಇಂಗ್ಲಿಷ್ ಕೆಳ ಮಧ್ಯಮ ವರ್ಗದ ಸಣ್ಣ ಚೌಕಟ್ಟಿನೊಳಗೆ ಬಂಧಿತವಾದ ಬರಹಗಾರ್ತಿ ಎಂದು ಅವರು ಅವರು ಆಕೆಯನ್ನು ಬಣ್ಣಿಸುತ್ತಿದ್ದರು. ತಮ್ಮ ದಿನಚರಿಯಲ್ಲಿ ಆಸ್ಟೆನ್ ಬರಹವನ್ನು 'ಪ್ರತಿಭೆಯಾಗಲಿ, ಬುದ್ಧಿವಂತಿಕೆಯಾಗಲಿ ಇಲ್ಲದ ಶೂನ್ಯ' ಎಂದು ಕಟುವಾಗಿ ವಿಮರ್ಶಿಸಿದ ಎಮರ್ಸನ್, 'ಬಾಹ್ಯ ಪ್ರಕೃತಿಯ ಅತಿಮಾನುಷ ವಿಸ್ತಾರದಲ್ಲಿ ಮುಳುಗಿಹೋಗಿ ಮನುಷ್ಯ ಸ್ವಭಾವದ ಆಂತರಿಕ ಸೂಕ್ಷ್ಮತೆಗಳನ್ನು ಕಡೆಗಣಿಸಿದ ಬರಹ' ಎಂದು ಜರೆದಿದ್ದರು.

ಒಂದು ಕಾರ್ಯಕ್ರಮದಲ್ಲಿ ಇಂಗ್ಲಿಷ್ ವಿಮರ್ಶಕನೊಬ್ಬ, 'ಪ್ರೈಡ್ ಆಂಡ್ ಪ್ರಿಜುಡಿಸ್ ಕಾದಂಬರಿಯ ಎಲಿಜಬೆತ್ ಮತ್ತು ಡಾರ್ಸಿಯ ನಡುವಿನ ಘರ್ಷಣೆ ಕೇವಲ ಇಬ್ಬರು ವ್ಯಕ್ತಿಗಳ ಮುನಿಸಲ್ಲ, ಅದು ಇಂದಿಗೂ ಜಗತ್ತಿನ ಪ್ರತಿಯೊಬ್ಬ ಪ್ರೇಮಿಯ ಒಳಗೂ ನಡೆಯುವ ಅಹಂನ ಹೋರಾಟ. ದೊಡ್ಡ ಯುದ್ಧಗಳು ಬರದೇ ಇದ್ದರೂ, ಮನುಷ್ಯನ ಮನಸ್ಸಿನ ಒಳಗೆ ದಿನವೂ ನಡೆಯುವ ಸಣ್ಣ ಯುದ್ಧಗಳನ್ನು ಆಸ್ಟೆನ್ ಹೆಣೆದಷ್ಟು ಅದ್ಭುತವಾಗಿ ಮತ್ತೊಬ್ಬರು ಹೆಣೆಯಲಾರರು. ನಿಮ್ಮ ತತ್ವಚಿಂತನೆಗಳು ಕಾಲದ ಓಟದಲ್ಲಿ ಗ್ರಂಥಾಲಯದ ಕಪಾಟುಗಳನ್ನು ಅಲಂಕರಿಸಿದರೆ, ಆಸ್ಟೆನ್ ಅವರ ಮುಗುಳ್ನಗೆಯ ವಿಡಂಬನೆ ಇಂದಿಗೂ ಪ್ರೇಮಿಗಳ ಎದೆಯ ಮೇಲೆ ಜೀವಂತವಾಗಿ ಕುಳಿತಿದೆ. ಆಕೆಯ ಈ ಸೃಜನಶೀಲ ಮುನಿಸುಗಳೇ ಸಾಹಿತ್ಯದ ಇತಿಹಾಸವನ್ನು ಇಷ್ಟು ಸ್ವಾರಸ್ಯಕರವಾಗಿಸಿವೆ' ಎಂದು ಹೇಳಿದಾಗ, ಎಮರ್ಸನ್ ವಿಪರೀತ ಕೋಪಿಸಿಕೊಂಡ. ತಾನು ಕುಳಿತ ಕುರ್ಚಿಯನ್ನೇ ಹಾಗೆ ಹೇಳಿದ ವಿಮರ್ಶಕನತ್ತ ಎಸೆದುಬಿಟ್ಟ.

ಶ್ರೇಷ್ಠ ಬ್ರಿಟಿಷ್ ಕಾದಂಬರಿಗಾರ್ತಿಯರಾದ ಷಾರ್ಲೆಟ್ ಬ್ರಾಂಟೆಗೆ ಕೂಡ ಜೇನ್ ಆಸ್ಟೆನ್ ಕಂಡರೆ ಆಗುತ್ತಿರಲಿಲ್ಲ. 'ನನಗೆ ಆಸ್ಟೆನ್ ಪುಸ್ತಕಗಳನ್ನು ಹಿಡಿದರೆ ಸಾಕು, ಉಸಿರು ಗಟ್ಟಿದಂತಾಗುತ್ತದೆ. ಯಾರಿಗಾದರೂ ಆತ್ಮಹತ್ಯೆ ಮಾಡಿಕೊಳ್ಳಬೇಕು ಎಂದು ಅನಿಸಿದರೆ ಆಸ್ಟೆನ್ ಕೃತಿಗಳನ್ನು ತಲೆದಿಂಬಿನ ಪಕ್ಕ ಇಟ್ಟು ಮಲಗಿದರೆ, ಬೆಳಗಾಗುವುದರೊಳಗೆ ಉಸಿರುಗಟ್ಟಿ ಸಾಯುವುದು ನಿಶ್ಚಿತ' ಎಂದು ಹೇಳಿದ್ದಳು. 'ಆಸ್ಟೆನ್ ಕೃತಿಗಳು ಕೇವಲ ಮೇಲ್ವರ್ಗದ ಜನರ ನಯನಾಜೂಕು, ತೋಟಗಳು ಮತ್ತು ಸುಂದರ ಮನೆಗಳ ಮೇಲ್ಮೈಯನ್ನು ಮಾತ್ರ ಚಿತ್ರಿಸುತ್ತವೆ. ಮಾನವನ ಹೃದಯದ ಆಳದಲ್ಲಿರುವ ನೋವು, ಹಸಿವು, ಕಾಡು ಮತ್ತು ಉನ್ಮಾದದಂಥ ನೈಜ ಮುಖಗಳನ್ನು ಅವು ಮುಚ್ಚಿಡುತ್ತವೆ' ಎಂದು ಬ್ರಾಂಟೆ ಹೇಳಿದ್ದಳು.



'ಜೇನ್ ಆಸ್ಟೆನ್ ಜಗತ್ತು ಸುಂದರವಾದ, ಅಚ್ಚುಕಟ್ಟಾದ ಗಾರ್ಡನ್ ಇದ್ದಂತೆ. ಆದರೆ ಅಲ್ಲಿ ಮುಕ್ತವಾದ ಗಾಳಿಯಾಗಲಿ, ವಿಶಾಲವಾದ ಆಕಾಶವಾಗಲಿ ಇಲ್ಲ' ಎಂಬುದು ಆಕೆಯ ವಾದವಾಗಿತ್ತು. ಜೇನ್ ಆಸ್ಟೆನ್ ಅವರನ್ನು ಇನ್ನಿಲ್ಲದ ಕಟು ಮಾತುಗಳಲ್ಲಿ ಟೀಕಿಸಿದವರು ಮಾರ್ಕ್ ಟ್ವೇನ್. ಇವರಿಬ್ಬರ ನಡುವಿನ ವೈಚಾರಿಕ ವೈರತ್ವ ಇತಿಹಾಸ ಪ್ರಸಿದ್ಧವಾದದ್ದು. ಟ್ವೇನ್ ಅವರಿಗೆ ಆಸ್ಟೆನ್ ಅವರ ಬರವಣಿಗೆ ಎಂದರೆ ಎಷ್ಟು ಸಿಟ್ಟು ಬರುತ್ತಿತ್ತೋ, ಅಷ್ಟೇ ಕ್ರೂರವಾದ ಮತ್ತು ವ್ಯಂಗ್ಯದ ಬಾಣಗಳನ್ನು ಅವರು ಆಕೆಯ ಕೃತಿಗಳ ಮೇಲೆ ಎಸೆಯುತ್ತಿದ್ದರು. ಒಮ್ಮೆ ಟ್ವೇನ್ ಬರೆದಿದ್ದರು- 'ಯಾವುದೇ ಒಂದು ಗ್ರಂಥಾಲಯವು ಜೇನ್ ಆಸ್ಟೆನ್ ಅವರ ಒಂದೂ ಪುಸ್ತಕವನ್ನು ಹೊಂದಿಲ್ಲದೇ ಇದ್ದರೆ, ಅದು ಒಂದು ಅತ್ಯುತ್ತಮ ಗ್ರಂಥಾಲಯ ಎನಿಸಿಕೊಳ್ಳುತ್ತದೆ. ಆಕೆಯ ಪುಸ್ತಕಗಳು ಇಲ್ಲದೇ ಹೋದರೆ ಸಾಕು, ಬೇರೆ ಯಾವುದೇ ಒಳ್ಳೆಯ ಪುಸ್ತಕ ಇಲ್ಲದಿದ್ದರೂ ಆ ಗ್ರಂಥಾಲಯ ಶ್ರೇಷ್ಠವಾಗಿ ಕಾಣುತ್ತದೆ!'

ಅಷ್ಟಕ್ಕೆ ಸುಮ್ಮನಾಗದ ಟ್ವೇನ್, ಆಸ್ಟೆನ್ ಕೃತಿಗಳನ್ನು ಓದುವುದರ ಬಗ್ಗೆ ಹೇಳಿದ್ದರು- 'ನಾನು 'ಪ್ರೈಡ್ ಅಂಡ್ ಪ್ರಿಜುಡಿಸ್' ಕಾದಂಬರಿಯನ್ನು ಓದಲು ತೊಡಗಿದಾಗಲೆಲ್ಲ ನನಗೆ ಆಕೆಯನ್ನು ಸಮಾಧಿಯಿಂದ ಹೊರಗೆ ತೆಗೆದು, ಆಕೆಯದೇ ಮಂಡೆಯ ಮೂಳೆಯಿಂದ ಆಕೆಗೆ ಹೊಡೆದು, ಮತ್ತೊಮ್ಮೆ ಸಾಯಿಸಬೇಕು ಎಂದು ಅನಿಸುತ್ತದೆ.' ಒಂದು ಕಾರ್ಯಕ್ರಮದಲ್ಲಿ ಯಾರೋ ಜೇನ್ ಆಸ್ಟೆನ್ ಹೆಸರು ಪ್ರಸ್ತಾಪಿಸಿದಾಗ, ಹಠಾತ್ ಕ್ರುದ್ಧರಾದ ಟ್ವೇನ್, 'ಆಕೆಯ ಪುಸ್ತಕಗಳನ್ನು ಓದುವುದು ಒಬ್ಬ ರೋಗಿಗೆ ಅತಿಯಾದ ಹಿಂಸೆ ನೀಡಿದಂತೆ. ನನಗೆ ಆಕೆಯ ಪುಸ್ತಕಗಳನ್ನು ಓದಲು ಧೈರ್ಯ ಸಾಲುವುದಿಲ್ಲ. ಓದಿದರೆ ಎಲ್ಲಿ ಹುಚ್ಚು ಹಿಡಿಯುತ್ತದೋ ಎಂಬ ಭಯ' ಎಂದು ಅವರು ಲೇವಡಿ ಮಾಡಿದ್ದರು. 'ಆಕೆಯ ಪಾತ್ರಗಳಿಗೆ ಕೊನೆಪಕ್ಷ ಒಂದು ಸಣ್ಣ ಅಪರಾಧ ಮಾಡುವ, ಪೋಲಿಯಾಗಿ ವರ್ತಿಸುವ ಅಥವಾ ಹಸಿ ಬಿಸಿಯಾಗಿ ಬದುಕುವ ಸ್ವಾತಂತ್ರ್ಯವೂ ಇರುವುದಿಲ್ಲ' ಎಂದು ಟ್ವೇನ್ ವ್ಯಂಗ್ಯ ಮಾಡುತ್ತಿದ್ದರು. ಜೇನ್ ಆಸ್ಟೆನ್ ಸಾಹಿತ್ಯವನ್ನು ಟೀಕಿಸುವ ನೆಪದಲ್ಲಿ ಮಾರ್ಕ್ ಟ್ವೇನ್ ಸೃಷ್ಟಿಸಿದ ವಾಕ್ಯಗಳು, ಇಂದಿಗೂ ಸಾಹಿತ್ಯ ಲೋಕದ ಅತ್ಯಂತ ಚುರುಕಾದ ಮತ್ತು ತಮಾಷೆಯ ಬೈಗುಳಗಳಾಗಿ ನೆನಪಿನಲ್ಲಿ ಉಳಿದಿವೆ.

ಮಾರ್ಕ್ ಟ್ವೇನ್ ತಮ್ಮ ಸಮಕಾಲೀನರನ್ನು ಲೇವಡಿ ಮಾಡುವುದರಲ್ಲೂ ಅಷ್ಟೇ ನಿಪುಣರಾಗಿದ್ದರು. ಅವರ ವ್ಯಂಗ್ಯ ಮತ್ತು ಹಾಸ್ಯ ಪ್ರಜ್ಞೆಗೆ ಯಾವುದೇ ಗಡಿಯಿರಲಿಲ್ಲ. ಜೇನ್ ಆಸ್ಟೆನ್ ಅವರನ್ನಷ್ಟೇ ಅಲ್ಲ, ತಮ್ಮ ಕಾಲದ ಇತರ ಪ್ರಮುಖ ಬರಹಗಾರರನ್ನು ಹಾಗೂ ಇಡೀ ಜರ್ಮನ್ ಭಾಷೆಯನ್ನೂ ಅವರು ತಮ್ಮ ತೀಕ್ಷ್ಣ ನುಡಿಗಳಿಂದ ಚುಚ್ಚಿ ಆನಂದಿಸುತ್ತಿದ್ದರು. ಹೆನ್ರಿ ಜೇಮ್ಸ್ ಅವರ ಕಾದಂಬರಿಗಳ ಸುದೀರ್ಘ, ಜಟಿಲ ಮತ್ತು ವಿವರಣಾತ್ಮಕ ಶೈಲಿಯನ್ನು ಹಂಗಿಸುತ್ತಾ ಟ್ವೇನ್, 'ಕೆಲವರ ಕೃತಿಗಳನ್ನು ಕೆಳಗಿಡಲು ಮನಸ್ಸಾಗುವುದಿಲ್ಲ. ಆದರೆ ಹೆನ್ರಿ ಜೇಮ್ಸ್ ಕೃತಿಗಳನ್ನು ಒಮ್ಮೆ ಕೆಳಗಿಟ್ಟರೆ, ಮತ್ತೆ ಎತ್ತಿಕೊಳ್ಳಲು ಸಾಧ್ಯವೇ ಇಲ್ಲ' ಎಂದು ಹೇಳಿದ್ದರು.

ಇನ್ನು ಜರ್ಮನ್ ಭಾಷೆಯ ವ್ಯಾಕರಣ ನಿಯಮಗಳಂತೂ ಟ್ವೇನ್ ಅವರನ್ನು ಅಕ್ಷರಶಃ ಕೆರಳಿಸಿದ್ದವು. ಜರ್ಮನ್ ಭಾಷೆಯಲ್ಲಿ ಕ್ರಿಯಾಪದದ ಭಾಗಗಳನ್ನು ವಾಕ್ಯದ ಕೊನೆಗೆ ಸೀಳುವ (separable verbs) ಪದ್ಧತಿಯನ್ನು ಅವರು 'ಅಮಾನುಷ' ಎಂದು ಕರೆದರು. ವಾಕ್ಯದ ಕೊನೆಯವರೆಗೂ ಕ್ರಿಯಾಪದಕ್ಕಾಗಿ ಕಾಯಬೇಕಾದ ಓದುಗನ ಸ್ಥಿತಿಯನ್ನು ಕಂಡು ಅವರು ಮರುಗಿದ್ದರು. ತಮ್ಮದೇ ಗೆಳೆಯ ಮತ್ತು ದಾರ್ಶನಿಕ ಎಮರ್ಸನ್ ಅವರ ವ್ಯಾಕರಣದ ಬಗ್ಗೆ ಬರೆಯುತ್ತಾ, ಅದು 'ರೊಟ್ಟಿಯಲ್ಲಿ ಸಿಗುವ ಜಲ್ಲಿಕಲ್ಲಿನಂತೆ ಜುಗುಪ್ಸೆ ತರಿಸುತ್ತದೆ' ಎಂದಿದ್ದರು.

ಅಂದರೆ, ಎಮರ್ಸನ್ ಅವರ ಗಂಭೀರ ಬರಹದ ಸುಗಮ ಹರಿವಿಗೆ ಅವರ ವ್ಯಾಕರಣದ ತಪ್ಪುಗಳು ತಡೆಯೊಡ್ಡುತ್ತವೆ ಎಂಬುದು ಟ್ವೇನ್ ಅವರ ವಾದವಾಗಿತ್ತು. ಅಮೆರಿಕನ್ ಸಾಹಿತ್ಯ ಲೋಕದಲ್ಲಿ ಮಾರ್ಕ್ ಟ್ವೇನ್ ಮತ್ತು ವಿಲಿಯಂ ಫಾಲ್ಕನರ್ ನಡುವಿನ ಜಗಳ ಅಥವಾ ವೈರತ್ವವು ಮುಖಾಮುಖಿ ಜಗಳವಾಗಿರಲಿಲ್ಲ. ಏಕೆಂದರೆ, ಮಾರ್ಕ್ ಟ್ವೇನ್ 1910ರಲ್ಲಿ ನಿಧನರಾದಾಗ ವಿಲಿಯಂ ಫಾಲ್ಕನರ್ ಇನ್ನು ಕೇವಲ ಹನ್ನೆರಡು ವರ್ಷದ ಬಾಲಕ! ಆದರೆ, ಫಾಲ್ಕನರ್ ಬೆಳೆದು ದೊಡ್ಡ ಕಾದಂಬರಿಗಾರನಾದ ಮೇಲೆ ಮಾರ್ಕ್ ಟ್ವೇನ್ ಸಾಹಿತ್ಯದ ಬಗ್ಗೆ ಆಡಿದ ಮಾತುಗಳು, ನಂತರದ ದಿನಗಳಲ್ಲಿ ಅದಕ್ಕೆ ಸಿಕ್ಕ ಪ್ರತಿಕ್ರಿಯೆಗಳು ಮತ್ತು ಇವರಿಬ್ಬರ ಸಾಹಿತ್ಯ ಶೈಲಿಯ ನಡುವಿನ ಬೃಹತ್ ಕಂದಕ ಸಾಹಿತ್ಯ ಲೋಕದಲ್ಲಿ ಒಂದು ದೊಡ್ಡ ವೈಚಾರಿಕ ಸಂಘರ್ಷ ಅಥವಾ 'ಸೃಜನಶೀಲ ಜಗಳ'ವಾಗಿ ಪ್ರಸಿದ್ಧಿ ಪಡೆಯಿತು.

ವಿಲಿಯಂ ಫಾಲ್ಕನರ್ ಒಮ್ಮೆ ಮಾರ್ಕ್ ಟ್ವೇನ್ ಬರವಣಿಗೆಯನ್ನು ತೀವ್ರವಾಗಿ ಲೇವಡಿ ಮಾಡುತ್ತಾ, 'ಮಾರ್ಕ್ ಟ್ವೇನ್ ಕೇವಲ ಒಬ್ಬ ಹ್ಯಾಕ್ ರೈಟರ್ (ಹಣಕ್ಕಾಗಿ ಸಾಧಾರಣವಾಗಿ ಬರೆಯುವವನು). ಒಂದು ವೇಳೆ ಆತ ಯುರೋಪ್ ದೇಶದಲ್ಲಿದ್ದಿದ್ದರೆ ಆತನನ್ನು ಕನಿಷ್ಠ ನಾಲ್ಕನೇ ದರ್ಜೆಯ ಬರಹಗಾರ ಎಂದು ಸಹ ಯಾರೂ ಪರಿಗಣಿಸುತ್ತಿರಲಿಲ್ಲ' ಎಂದು ಕಟುವಾಗಿ ಟೀಕಿಸಿದ್ದರು. ಟ್ವೇನ್ ಅವರ ಸರಳ, ಆಡುಭಾಷೆಯ ಶೈಲಿ ಫಾಲ್ಕನರ್‌ಗೆ ಅತಿ ಸಾಧಾರಣವಾಗಿ ಕಂಡಿತ್ತು.

ಈ ಜಗಳಕ್ಕೆ ಮತ್ತಷ್ಟು ತುಪ್ಪ ಸುರಿದದ್ದು ಫಾಲ್ಕನರ್ ಮತ್ತು ಅರ್ನೆಸ್ಟ್ ಹೆಮಿಂಗ್ವೇ ನಡುವಿನ ಜಗಳ. ಹೆಮಿಂಗ್ವೇ ಮಾರ್ಕ್ ಟ್ವೇನ್‌ನ ಪರಮ ಭಕ್ತರಾಗಿದ್ದರು. ಫಾಲ್ಕನರ್ ಒಮ್ಮೆ ಹೆಮಿಂಗ್ವೇನ ಬರವಣಿಗೆಯನ್ನು ಟೀಕಿಸುತ್ತಾ, 'ಆತ ಎಂದೂ ಡಿಕ್ಷನರಿ ನೋಡಿ ಅರ್ಥ ಹುಡುಕಬೇಕಾದ ಒಂದು ದೊಡ್ಡ ಪದವನ್ನೂ ಬಳಸಿಲ್ಲ' ಎಂದರು. ಅದಕ್ಕೆ ಹೆಮಿಂಗ್ವೇ, 'ಪಾಪ ಫಾಲ್ಕನರ್. ದೊಡ್ಡ ಭಾವನೆಗಳು ಮೂಡಬೇಕಾದರೆ ದೊಡ್ಡ ಪದಗಳೇ ಬೇಕು ಎಂದು ಆತ ನಿಜವಾಗಿಯೂ ಅಂದುಕೊಂಡಿದ್ದಾನಾ? ನಾನು ಅತ್ಯಂತ ಸರಳವಾದ, ಹಳೇ ಪದಗಳನ್ನು ಬಳಸಿಯೇ ತೀವ್ರವಾದ ಭಾವನೆಗಳನ್ನು ಸೃಷ್ಟಿಸಬಲ್ಲೆ ಮತ್ತು ಅದನ್ನು ಓದುಗರು ನಂಬುವಂತೆ ಮಾಡಬಲ್ಲೆ ಎಂದು ಆತನಿಗೆ ಗೊತ್ತಿಲ್ಲವೇ?' ಎಂದು ತಿರುಗೇಟು ನೀಡಿದ್ದರು. ಈ ಮೂಲಕ ಹೆಮಿಂಗ್ವೇ ತನ್ನ ಗುರು ಮಾರ್ಕ್ ಟ್ವೇನ್‌ನ ಸರಳ ಬರವಣಿಗೆಯ ಪರಂಪರೆಯನ್ನು ಫಾಲ್ಕನರ್ ವಿರುದ್ಧ ಸಮರ್ಥಿಸಿಕೊಂಡಿದ್ದರು.

ನಂಬಿಕೆಯ ಗರ್ಭಗುಡಿಗೇ ಕೆಸರು ಚೆಲ್ಲಿದ ವಂಚಕರು!

ಹಿಂದೊಮ್ಮೆ ಬಾಬ್ರಿ ಮಸೀದಿಯಿದ್ದಾಗ ಅಯೋಧ್ಯೆಗೆ ಭೇಟಿ ನೀಡಿದ್ದೆ. ನಂತರ ಇದೇ ಮೊದಲ ಬಾರಿ ಇತ್ತೀಚೆಗೊಮ್ಮೆ ಹೋಗಿಬಂದೆ. ಭವ್ಯ ರಾಮಮಂದಿರದೊಳಗೆ ರಾಮಲಲ್ಲಾನ ದರ್ಶನ ಮಾಡುವಾಗ ಅನೇಕ ಸಂಗತಿಗಳು ಮನಸ್ಸಿನಲ್ಲಿ ಹಾದುಹೋದವು.

ಸಂಗತ
ವಿಜಯ್ ದರಡಾ
vveditoped@gmail.com

ಬಹಳ ವರ್ಷಗಳಿಂದ ನಾನೊಮ್ಮೆ ಅಯೋಧ್ಯೆಗೆ ಭೇಟಿ ನೀಡಿ ಪ್ರಭು ಶ್ರೀರಾಮನ ಆಶೀರ್ವಾದ ಪಡೆದುಕೊಂಡು ಬರಬೇಕು ಅಂದುಕೊಳ್ಳುತ್ತಿದ್ದೆ. ಕಾಲ ಕೂಡಿ ಬಂದಿರಲಿಲ್ಲ. ಹಿಂದೊಮ್ಮೆ ಇನ್ನೂ ಅಲ್ಲಿ ಬಾಬ್ರಿ ಮಸೀದಿ ಇರುವಾಗ ಹೋಗಿ ಬಂದಿದ್ದೆ. ನಂತರ ಆ ಕಡೆ ಹೋಗುವ ಅವಕಾಶ ಲಭಿಸಿರಲಿಲ್ಲ. ಕೊನೆಗೆ ಭವ್ಯವಾದ ರಾಮ ಮಂದಿರ ನಿರ್ಮಾಣವಾದ ಮೇಲೆಯೇ ಅಲ್ಲಿಗೆ ತೆರಳುವ ಸುದೈವ ನನ್ನದಾಯಿತು. ಆದರೆ, ರಾಮ ಮಂದಿರದ ಟ್ರಸ್ಟ್‌ನಲ್ಲಿ ಕೋಟ್ಯಂತರ ರೂಪಾಯಿ ಅವ್ಯವಹಾರ ನಡೆದ ಸುದ್ದಿ ಕೇಳಿ ತುಂಬಾ ಕಸಿವಿಸಿ ಅನುಭವಿಸುತ್ತಲೇ ಅಲ್ಲಿಗೆ ಹೋಗಿ ಬಂದೆ! ಛೆ ಛೆ.. ಎಂಥ ದುರಂತವಿದು! ಸಮಸ್ತ ಹಿಂದೂಗಳು ಇದರಿಂದ ಘಾಸಿಗೊಂಡಿದ್ದಾರೆ. ಎಲ್ಲರೂ ಕೇಳುತ್ತಿರುವುದು ಒಂದೇ ಪ್ರಶ್ನೆ: 'ಜನರ ನಂಬಿಕೆಗೇ ಚೂರಿ ಇರಿದ ಆ ವಂಚಕರು ಯಾರು?'

ಅಯೋಧ್ಯೆಗೆ ಲಖ್ನೋದಿಂದ ಪ್ರಯಾಣಿಸುವಾಗ ನನ್ನ ಮನಸ್ಸು ಇತಿಹಾಸದ ಪುಟಗಳನ್ನು ಮೆಲುಕು ಹಾಕುತ್ತಿತ್ತು. ರಾಮ ಜನ್ಮಭೂಮಿ ಚಳವಳಿ ಹಾಗೂ ರಾಮ ಮಂದಿರಕ್ಕಾಗಿ ನಡೆದ ಹೋರಾಟವನ್ನು ನಾವೆಲ್ಲರೂ ನೋಡಿದ್ದೇವೆ. ಅಲ್ಲಿ ಪುರಾತತ್ವ ಇಲಾಖೆ ಉತ್ಖನನ ನಡೆಸಿದಾಗ ಅದು ರಾಮನ ಜನ್ಮಭೂಮಿ ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಗಳು ಲಭಿಸಿದ್ದವು. ದೇಶಾದ್ಯಂತ ಮನೆಮನೆಗೆ ರಾಮಭಕ್ತರು ತೆರಳಿ ಇಟ್ಟಿಗೆ ಸಂಗ್ರಹಿಸಿದ್ದನ್ನು ಮರೆಯಲು ಸಾಧ್ಯವೇ? ರಾಮ ಮಂದಿರಕ್ಕಾಗಿ ನಮ್ಮ ದೇಶದಲ್ಲಿ ಮಾತ್ರವಲ್ಲ, ಜಗತ್ತಿನ ನಾನಾ ಕಡೆ ಆಂದೋಲನ ನಡೆದಿತ್ತು. ಕೇವಲ ನಂಬಿಕೆಯ ಆಧಾರದ ಮೇಲೆ ನಡೆದ ಇಷ್ಟು ದೊಡ್ಡ ಹೋರಾಟವನ್ನು ಇನ್ನೆಲ್ಲೂ ಕಾಣಲು ಸಾಧ್ಯವಿಲ್ಲ. ಅಯೋಧ್ಯೆಯು ಭಗವಾನ್ ಶ್ರೀರಾಮನ ಜನ್ಮಸ್ಥಳ ಎಂದು ಪ್ರಸಿದ್ಧಿ ಪಡೆದಿರುವುದರಿಂದ ಅಲ್ಲಿನ ರಾಮ ಮಂದಿರದಲ್ಲಿ ಬಾಲಕ ರಾಮನ ಮೂರ್ತಿಯನ್ನು ಇರಿಸಿ ಪೂಜಿಸಲಾಗುತ್ತದೆ. ಸಮಸ್ತ ರಾಮಭಕ್ತರ ಆರಾಧನೆಯ ಕೇಂದ್ರವಾದ ಅಯೋಧ್ಯೆಯಲ್ಲಿ ಭವ್ಯವಾದ ರಾಮ ಮಂದಿರ ಸಾಕಾರಗೊಳ್ಳುವಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖ್ಯಸ್ಥ ಡಾ.ಮೋಹನ್ ಭಾಗ್ವತ್ ಅವರ ಪಾತ್ರ ಬಹಳ ದೊಡ್ಡದಿದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಭಾರತೀಯ ಜನತಾ ಪಾರ್ಟಿ ಮತ್ತು ಆರ್‌ಎಸ್‌ಎಸ್ ಬಹಳ ವರ್ಷಗಳಿಂದ ಅಯೋಧ್ಯೆಯಲ್ಲಿ ಮಂದಿರ ನಿರ್ಮಾಣ ಮಾಡುವುದನ್ನು ತಮ್ಮ ಬಹುದೊಡ್ಡ ಗುರಿಯನ್ನಾಗಿ ಮಾಡಿಕೊಂಡಿದ್ದವು.

ಇಷ್ಟಕ್ಕೂ ರಾಮ ಮಂದಿರ ನಿರ್ಮಾಣದ ಉದ್ದೇಶವೇನು? ನಾವೆಲ್ಲರೂ ರಾಮರಾಜ್ಯ ಎಂಬ ಪದಪುಂಜವನ್ನು ಕೇಳಿದ್ದೇವೆ. ಅದರಂತೆ ನಮ್ಮ ದೇಶದ ಆಡಳಿತದಲ್ಲೂ ಪ್ರಭು ಶ್ರೀರಾಮನ ಆಡಳಿತದಲ್ಲಿದ್ದ ಆದರ್ಶಗಳನ್ನು ಅಳವಡಿಸಿಕೊಳ್ಳುವುದೇ ರಾಮ ಮಂದಿರ ನಿರ್ಮಾಣದ ಪ್ರಮುಖ ಉದ್ದೇಶ. ರಾಮರಾಜ್ಯದಲ್ಲಿ ಎಲ್ಲರಿಗೂ ಸಮಬಾಳು, ಎಲ್ಲರಿಗೂ ಸಮಪಾಲು ಇರುತ್ತಿತ್ತು. ಜಾತಿ ಮತ್ತು ಸಾಮಾಜಿಕ ತಾರತಮ್ಯ ಇರಲಿಲ್ಲ. ನಿರ್ಲಕ್ಷಿತರು ಮತ್ತು ಬಡವರ ಕಲ್ಯಾಣಕ್ಕೆ ಹೆಚ್ಚು ಮಹತ್ವ ನೀಡಲಾಗುತ್ತಿತ್ತು. ಶಬರಿ ನೀಡಿದ ಎಂಜಲು ಹಣ್ಣನ್ನು ಸೇವಿಸಿದ್ದು, ಅಹಲ್ಯೆಯ ಶಾಪವಿಮೋಚನೆ ಮಾಡಿದ್ದು ಇವು ಕರುಣೆ, ಎಲ್ಲರನ್ನೂ ಒಳಗೊಳ್ಳುವಿಕೆ ಹಾಗೂ ಮಾನವೀಯ ಘನತೆಯನ್ನು ಕಾಪಾಡುವ ರಾಮನ ಆಡಳಿತಾತ್ಮಕ ಮೌಲ್ಯಗಳಿಗೆ ಸಾಕ್ಷಿ. ಭಾರತದ ಆಸ್ತಿಕರಿಗೆ ಈ ಮೌಲ್ಯಗಳು ನವ ಭಾರತದ ಆಡಳಿತದಲ್ಲೂ ಇರಬೇಕೆಂಬ ಆಸೆಯಿರುವುದು ಸಹಜವೇ ಆಗಿದೆ.

ಇಂತಹ ಯೋಚನೆಗಳಲ್ಲಿ ಮುಳುಗೇಳುತ್ತ ನಾನು ರಾಮಲಲ್ಲಾನ ಮಂದಿರದೊಳಗೆ ಕಾಲಿಟ್ಟಿದ್ದೆ. ಅದೊಂದು ಭವ್ಯವಾದ ಮಂದಿರ. ಸುತ್ತಮುತ್ತಲ ವಾತಾವರಣ ಭಕ್ತಿಭಾವದಿಂದ ತುಳುಕುತ್ತಿತ್ತು. ಎಲ್ಲೆಡೆ ಪ್ರಶಾಂತತೆ. ಮನಸ್ಸಿಗೂ ಅದೇನೋ ಶಾಂತಿ. ಭಕ್ತರ ಆಧ್ಯಾತ್ಮಿಕ ದಾಹ ಅಲ್ಲಿ ನೀಗುತ್ತಿತ್ತು. ನಿರ್ಮಾಣ ಕಾರ್ಯ ಹೆಚ್ಚುಕಮ್ಮಿ ಪೂರ್ತಿಯಾಗಿತ್ತು. ಬಾಕಿಯುಳಿದ ಕೆಲವೇ ಭಾಗಗಳ ಕೆಲಸವೂ ಕೊನೆಯ ಹಂತದಲ್ಲಿತ್ತು. ದೇಶದ ಮೂಲೆ ಮೂಲೆಗಳಿಂದ ಎಲ್ಲಾ ಸಾಮಾಜಿಕ ಹಿನ್ನೆಲೆಯ ಜನರೂ ಅಲ್ಲಿಗೆ ಆಗಮಿಸುತ್ತಿದ್ದರು. ನನ್ನ ತವರು ರಾಜ್ಯವಾದ ಮಹಾರಾಷ್ಟ್ರದಿಂದಲೂ ಸಾಕಷ್ಟು ಆಸ್ತಿಕರು ಬಂದಿದ್ದರು.

ರಾಮ ಮಂದಿರಕ್ಕೂ ಇನ್ನಿತರ ದೇವಾಲಯಗಳಿಗೂ ಇರುವ ವ್ಯತ್ಯಾಸವೇನು ಗೊತ್ತಾ? ರಾಮ ಮಂದಿರವನ್ನು ಸರಕಾರದ ಹಣದಲ್ಲಿ ಕಟ್ಟಿಸಿಲ್ಲ. ಲಕ್ಷಾಂತರ ಭಕ್ತರು ಹತ್ತು ರೂಪಾಯಿಯಿಂದ ಹಿಡಿದು ಕೋಟ್ಯಂತರ ರೂ.ಗಳವರೆಗೆ ದೇಣಿಗೆ ಕೊಟ್ಟು ನಿರ್ಮಿಸಿದ ಮಂದಿರವಿದು. ಕಡುಬಡವರು ಕೂಡ ರಾಮಮಂದಿರಕ್ಕೆ ದೇಣಿಗೆ ನೀಡಿದ್ದಾರೆ. ಹೀಗಾಗಿ ಅದು ನಂಬಿಕೆ ಹಾಗೂ ಭಕ್ತಿಯೇ ಮೈವೆತ್ತಂತೆ ತಲೆಯೆತ್ತಿ ನಿಂತಿರುವ ಭವ್ಯ ಮಂದಿರ. ರಾಮನೆಂದರೆ ಭಾರತೀಯರಿಗೆ ಎಷ್ಟು ದೊಡ್ಡ ಆದರ್ಶ ಎಂಬುದಕ್ಕೆ ಆ ಮಂದಿರ ನಿರ್ಮಾಣವಾದ ರೀತಿಯೇ ಸಾಕ್ಷಿ. ಹೀಗಾಗಿ ಅಂತಹ ಮಂದಿರದಲ್ಲಿ ಹಣಕಾಸಿನ ಅವ್ಯವಹಾರದ ಆರೋಪ ಕೇಳಿಬಂದಾಗ ಪ್ರತಿಯೊಬ್ಬರಿಗೂ ಆಘಾತವಾಗುತ್ತದೆ. ಅವರಲ್ಲಿನ ನಂಬಿಕೆ ಘಾಸಿಗೊಳ್ಳುತ್ತದೆ.

ಅಯೋಧ್ಯೆಯಲ್ಲಿ ನಾನು ಈ ವಿವಾದದ ಬಗ್ಗೆ ಅನೇಕರ ಜೊತೆಗೆ ಮಾತನಾಡಿದೆ. ಎಲ್ಲರ ಮಾತಿನ ಹಿಂದೆಯೂ ಒಂದೇ ರೀತಿಯ ಭಾವನೆ ಸ್ಫುರಿಸುತ್ತಿತ್ತು. ಉತ್ತರ ಪ್ರದೇಶದ ಹೊರಗಿನಿಂದ ಬಂದ ಕೆಲವರು ಕ್ರಮೇಣ ಇಲ್ಲಿ ಪ್ರಭಾವ ಬೆಳೆಸಿಕೊಂಡು ದೇಗುಲದ ಆಡಳಿತದಲ್ಲಿ ಅವ್ಯವಹಾರ ಎಸಗಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಅಯೋಧ್ಯೆಯಲ್ಲಿ ಕೆಲವರ ಪ್ರಭಾವ ಅನಗತ್ಯವಾಗಿ ಹೆಚ್ಚಾಗಿದ್ದರಿಂದಲೇ ಜನರು ಇಲ್ಲಿನ ಆಡಳಿತದಲ್ಲಿ ನಂಬಿಕೆ ಕಳೆದುಕೊಳ್ಳುವಂತಾಯಿತು ಎಂದು ಅವರು ಹೇಳಿದರು. ತಿರುಪತಿಯಲ್ಲಿರುವ ರೀತಿಯ ಆಡಳಿತ ವ್ಯವಸ್ಥೆ ಇಲ್ಲೇಕಿಲ್ಲ ಎಂದು ಕೆಲವರನ್ನು ಕೇಳಿದೆ. ತಿರುಪತಿಯಲ್ಲಿ ಹಿರಿಯ ಐಎಎಸ್ ಅಧಿಕಾರಿಯೊಬ್ಬರು ಅಲ್ಲಿನ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ. ಹಣಕಾಸು ವ್ಯವಹಾರದ ಮೇಲ್ವಿಚಾರಣೆ ಮತ್ತು ಉತ್ತರದಾಯಿತ್ವಕ್ಕಾಗಿ ಪ್ರತ್ಯೇಕ ಸಮಿತಿಯನ್ನು ನೇಮಿಸಲಾಗುತ್ತದೆ. ಅಯೋಧ್ಯೆಯಿಂದಲೂ ಒಂದು ನಿಯೋಗ ತಿರುಪತಿಗೆ ಹೋಗಿ ಅಲ್ಲಿನ ವ್ಯವಸ್ಥೆಯನ್ನು ಅಧ್ಯಯನ ಮಾಡಿಕೊಂಡು ಬಂದಿದೆಯಂತೆ. ಆದರೆ ಅಲ್ಲಿನ ಮಾದರಿಯನ್ನು ಇಲ್ಲಿ ಅಳವಡಿಸಿಕೊಂಡಿಲ್ಲ. ಸದ್ಯಕ್ಕೆ ಅಯೋಧ್ಯೆಯ ಅವ್ಯವಹಾರದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗಿದೆ. ಅನೇಕರನ್ನು ಬಂಧಿಸಲಾಗಿದೆ. ಚಂಪತ್ ರಾಯ್ ಮತ್ತು ಡಾ.ಅನಿಲ್ ಮಿಶ್ರಾ ಅವರು ಟ್ರಸ್ಟ್‌ಗೆ ರಾಜೀನಾಮೆ ನೀಡಿದ್ದಾರೆ. ಆದರೂ ಅಯೋಧ್ಯೆಯಿಂದ ಲಖ್ನೋಗೆ ಮರಳುವಾಗ ಇನ್ನೊಂದು ಪ್ರಶ್ನೆ ನನ್ನ ಮನಸ್ಸನ್ನು ಕೊರೆಯುತ್ತಲೇ ಇತ್ತು. 'ಭಕ್ತರ ನಂಬಿಕೆಯನ್ನು ಘಾಸಿಗೊಳಿಸಿದ ನಿಜವಾದ ಅಪರಾಧಿಗಳು ಯಾರು?'

ಸಂಸ್ಕೃತಿ, ಕಲೆಯ ತವರು

ಅಯೋಧ್ಯೆಗೆ ಹೋಗಿಬರುವುದರ ನಡುವೆ ಎರಡು ದಿನಗಳ ಕಾಲ ಲಖ್ನೋದಲ್ಲಿ ಉಳಿದುಕೊಳ್ಳುವ ಅವಕಾಶ ಸಿಕ್ಕಿತ್ತು. ಸಂಸ್ಕೃತಿ, ಕಲೆಗಾರಿಕೆ ಹಾಗೂ ಆಹಾರ ವೈವಿಧ್ಯಗಳಿಂದ ತುಂಬಿದ ವಿಶಿಷ್ಟವಾದ ನಗರ ಲಖ್ನೋ. ಸುಂದರ ವಾಸ್ತುಶಿಲ್ಪಕ್ಕೂ ಹೆಸರುವಾಸಿ. ಬಾರಾ ಇಮಾಂಬರಾದಂತಹ ಪುರಾತನ ಕಟ್ಟಡಗಳ ವಿನ್ಯಾಸ ನಮ್ಮ ಮನಸೂರೆಗೊಳ್ಳುತ್ತದೆ. ಲಖ್ನೋದ ಭಾಷೆಯಲ್ಲೇ ಸೌಜನ್ಯ ಹಾಗೂ ನಾಜೂಕುತನವಿದೆ. ಅಲ್ಲಿನ ಖಾದ್ಯಗಳು ಮತ್ತು ಅದಕ್ಕೆ ಸಂಬಂಧಿಸಿದ ಸಂಪ್ರದಾಯಗಳು ಕುತೂಹಲಕಾರಿಯಾಗಿವೆ. ನಗರದ ವಾತಾವರಣದಲ್ಲೇ ಒಂದು ರೀತಿಯ ವಿಶೇಷವಾದ ಕಂಪಿದೆ. ಅದನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ, ಅನುಭವಿಸಿಯೇ ತಿಳಿದುಕೊಳ್ಳಬೇಕು.

ಲಖ್ನೋದ ಪ್ರಸಿದ್ಧ ಪ್ರವಾಸಿ ತಾಣಗಳಲ್ಲಿ ಒಂದಾಗಿರುವ ಬಾರಾ ಇಮಾಂಬರಾದಲ್ಲಿ ಕೆಲ ಸಮಯ ಕಳೆದೆ. 1784ರ ಭೀಕರ ಬರಗಾಲದಲ್ಲಿ ಅವಧ್‌ನ ನವಾಬ್ ಅಸಫ್ ಉದ್ ದೌಲಾ ಕಟ್ಟಿಸಿದ ಕಟ್ಟಡವಿದು. ಅದ್ಭುತ ವಾಸ್ತುಶಿಲ್ಪಕ್ಕಷ್ಟೇ ಇದು ಖ್ಯಾತಿ ಪಡೆದಿಲ್ಲ. ಬದಲಿಗೆ, ಬರಗಾಲದಲ್ಲಿ ಕೆಲಸ ಹಾಗೂ ಊಟಕ್ಕಿಲ್ಲದೆ ಪರಿತಪಿಸುತ್ತಿದ್ದ ಜನರಿಗೆ ಕೆಲಸ ಕೊಟ್ಟು, ಜೀವ ಉಳಿಸಿದ ಯೋಜನೆಯಾಗಿಯೂ ಇದು ಖ್ಯಾತಿ ಪಡೆದಿದೆ. ಇತಿಹಾಸದಲ್ಲಿ ದಾಖಲಾಗಿರುವಂತೆ ಈ ಕಟ್ಟಡವನ್ನು ನಿರ್ಮಿಸಲು ಬಡವರು ಹಗಲು ಹೊತ್ತಿನಲ್ಲಿಯೂ, ಅನಿವಾರ್ಯವಾಗಿ ಬಡತನಕ್ಕೆ ಸಿಲುಕಿದ ಶ್ರೀಮಂತರು ರಾತ್ರಿ ವೇಳೆಯಲ್ಲಿಯೂ ಕೆಲಸ ಮಾಡಿದ್ದರಂತೆ. ಜನರ ಮುಂದೆ ಅವಮಾನವಾಗದೆ ಇರಲಿ ಎಂದು ರಾತ್ರಿಯ ವೇಳೆ ಅವರಿಂದ ಕೆಲಸ ಮಾಡಿಸುತ್ತಿದ್ದರಂತೆ! ಸಾರ್ವಜನಿಕ ಉದ್ಯೋಗ ಖಾತ್ರಿ ಯೋಜನೆಗೆ 18ನೇ ಶತಮಾನದಲ್ಲೇ ಶ್ರೀಕಾರ ಹಾಕಿದ್ದರ ಪ್ರತೀಕವಾಗಿ ನನಗೆ ಆ ಕಟ್ಟಡ ಕಾಣಿಸಿತು.

ಮುಜಾಫರ್ ಅಲಿಯ ಹವೇಲಿಯಲ್ಲಿ ಲಖ್ನೋ ಮತ್ತು ಅಯೋಧ್ಯೆ ಪ್ರವಾಸದ ವೇಳೆ ನನಗೆ ಪದ್ಮಶ್ರೀ ಮುಜಾಫರ್ ಅಲಿಯವರ ಹವೇಲಿಗೆ ಭೇಟಿ ನೀಡುವ ಅವಕಾಶವೂ ಸಿಕ್ಕಿತ್ತು. ಅವಧ್‌ನ ರಾಜವಂಶಸ್ಥರಾದ ಕೊಟ್ವಾರಾ ಮನೆತನದ ಉತ್ತರಾಧಿಕಾರಿ ಮುಜಾಫರ್ ಅಲಿ. ಅವರ ಭೇಟಿಗೆ ಹೋಗುತ್ತೇನೆ ಎಂಬ ಯೋಚನೆಯೇ ನನ್ನಲ್ಲಿ ರೋಮಾಂಚನ ಉಂಟುಮಾಡಿತ್ತು. ಏಕೆಂದರೆ, ಮುಜಾಫರ್ ಅಲಿಯೆಂದರೆ ಬಹಳ ಜನರಿಗೆ ಅವರೊಬ್ಬ ಪ್ರಸಿದ್ಧ ಚಿತ್ರ ನಿರ್ದೇಶಕ ಎಂದಷ್ಟೇ ಗೊತ್ತು. ಭಾರತೀಯ ಚಿತ್ರರಂಗದ ಸಾರ್ವಕಾಲಿಕ ಶ್ರೇಷ್ಠ ಸಿನಿಮಾಗಳ ಸಾಲಿನಲ್ಲಿ ನಿಲ್ಲುವ 'ಉಮ್ರಾವ್ ಜಾನ್' ಇವರದೇ ನಿರ್ದೇಶನದ ಸಿನಿಮಾ. ಆದರೆ ಅವರ ಕಲಾತ್ಮಕ ಕೌಶಲ್ಯ ಸಿನಿಮಾ ನಿರ್ಮಾಣದ ಆಚೆಗೂ ಹರಡಿಕೊಂಡಿದೆ. ಅವರೊಬ್ಬ ಖ್ಯಾತ ಫ್ಯಾಷನ್ ಡಿಸೈನರ್, ಒಳ್ಳೆಯ ಕವಿ ಮತ್ತು ಅದ್ಭುತ ಚಿತ್ರಕಲಾವಿದ. ಜಾಹೀರಾತು ಕ್ಷೇತ್ರಕ್ಕೂ ದೊಡ್ಡ ಕೊಡುಗೆ ನೀಡಿದ್ದಾರೆ. ಅವಧ್‌ನ ಚಿಕನಕಾರಿ ಎಂಬ್ರಾಯ್ಡರಿ ಕಲೆಯನ್ನು ಪುನರುತ್ಥಾನಗೊಳಿಸಲು ಅವರು ಮಾಡಿದ ಪ್ರಯತ್ನಗಳು ಸಣ್ಣದಲ್ಲ. ಅವರ ಪತ್ನಿ ಮೀರಾ ಅಲಿ ಕೂಡ ಪ್ರಸಿದ್ಧ ಫ್ಯಾಷನ್ ಡಿಸೈನರ್. ಇಬ್ಬರೂ ಸೇರಿಕೊಂಡು ಭಾರತೀಯ ಸಾಂಸ್ಕೃತಿಕ ಲೋಕಕ್ಕೆ ಸಾಕಷ್ಟು ಕೊಡುಗೆ ಸಲ್ಲಿಸಿದ್ದಾರೆ.

ನಾನು ತೆರಳಿದಾಗ ಗಂಡ-ಹೆಂಡತಿ ಇಬ್ಬರೂ ತುಂಬಾ ಆಪ್ತವಾಗಿ ಸ್ವಾಗತಿಸಿದರು. ಅವರ ಆತಿಥ್ಯವನ್ನು ನೋಡಿ ಅವಧಿ ಸಂಸ್ಕೃತಿಯ ಶ್ರೀಮಂತಿಕೆಯನ್ನು ಅರ್ಥ ಮಾಡಿಕೊಂಡೆ. ಅವರ ಮನೆಯ ತುಂಬಾ ಪುರಾತನ ಕಲಾಕೃತಿಗಳನ್ನು ಬಹಳ ನಾಜೂಕಾಗಿ ಜೋಡಿಸಿಟ್ಟಿದ್ದಾರೆ. ಪ್ರತಿಯೊಂದು ಕೋಣೆಯಲ್ಲೂ ಇತಿಹಾಸ, ಕಲೆ ಮತ್ತು ನೆನಪಿನ ತುಣುಕುಗಳು ಕಾಣಿಸುತ್ತವೆ. ಅವರ ಮನೆ ಒಂದು ರೀತಿಯಲ್ಲಿ ಮ್ಯೂಸಿಯಂ ಇದ್ದಂತೆ. ಅನೇಕ ಅಪರೂಪದ ವಸ್ತುಗಳು ಹಾಗೂ ಸಾಂಸ್ಕೃತಿಕ ಸಂಪತ್ತುಗಳು ಅಲ್ಲಿವೆ. ಅಲ್ಲಿ ಕಳೆದ ಪ್ರತಿಯೊಂದು ಕ್ಷಣವೂ ಅನುಪಮವಾಗಿತ್ತು. ನಾಜೂಕುತನ ಹಾಗೂ ಕಲಾತ್ಮಕ ಔನ್ನತ್ಯದ ಶ್ರೇಷ್ಠ ಕ್ಷಣಗಳನ್ನು ನಾನಲ್ಲಿ ಅನುಭವಿಸಿದೆ. ಬಹುಶಃ ಅವರ ಹವೇಲಿಗೆ ನೀಡಿದ ಭೇಟಿಯು ಬಹಳ ದೀರ್ಘಕಾಲದವರೆಗೆ ನನ್ನ ಮನಸ್ಸಿನಲ್ಲಿ ಹಸಿರಾಗಿ ಉಳಿಯಲಿದೆ.

ಭಟ್ಟರ್ ಸ್ಕಾಚ್

- **ನವೀನ ನಾಯಕ, ಜಮಾಲಾಬಾದ್**
ಭಟ್ರೇ, ಸಿಗ್ನಲ್‌ನಲ್ಲಿ ಜನ ಹಾರ್ನ್ ಮೇಲೆ ಹಾರ್ನ್ ಮಾಡ್ತಾರೆ. ಅದರಿಂದ ಸಿಗ್ನಲ್ ಬೇಗ ಗ್ರೀನ್ ಆಗುತ್ತಾ?
– **ಹಾರ್ನ್ ಮಾಡಿದ್ರೆ ಪಕ್ಕದವನಿಗೆ 'ನನ್ನ ಹತ್ತಿರವೂ ಸೂಪರ್ ಸೌಂಡ್ ಇರೋ ಹಾರ್ನ್ ಇದೆ' ಅಂತ ತೋರಿಸಿಕೊಳ್ಳೋಕೆ ಆಗಲ್ಲ ಅಲ್ವಾ?**

- **ಚಂಚಲಾ ಚಿಟಗುಪ್ಪಿ, ಮೈಸೂರು**
ಸಾರ್, ಫೇಸ್‌ಬುಕ್, ಇನ್ಸ್ಟಾಗ್ರಾಮ್‌ಗಳಲ್ಲಿ ಜನ ಸದಾ ಹಸನ್ಮುಖಿಯಾಗಿ ಯಾಕೆ ಕಾಣ್ತಾರೆ?
– **ಆಧಾರ್ ಕಾರ್ಡ್ ಫೋಟೋ ನೋಡಿ ಆಗಿರೋ ಆಘಾತವನ್ನು ಜಗತ್ತಿನಿಂದ ಮುಚ್ಚಿಡಲು!**

- **ಹರಿ ಓಂ ಶಾಸ್ತ್ರಿ, ಶಂಕರಪುರ**
ಭಟ್ರೇ, ಸ್ನೇಹಿತರೊಂದಿಗೆ ಹೋಟೆಲ್‌ಗೆ ಹೋದಾಗ ಬಿಲ್ ಕೊಡುವಾಗ ಎಲ್ಲರೂ ಫೋನ್ ನೋಡಲು ಶುರು ಮಾಡುವುದೇಕೆ?
– **ಹಠಾತ್ತನೆ ಅವರೆಲ್ಲರಿಗೂ ಜಗತ್ತಿನ ಆರ್ಥಿಕತೆಯ ಬಗ್ಗೆ ತೀವ್ರ ಚಿಂತೆ ಶುರುವಾಗಿಬಿಡುತ್ತದೆ!**

- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ವಿಮಾನದಲ್ಲಿ ಸಿಗುವ 'ನಟ್ಸ್' ಪ್ಯಾಕೆಟ್ ಬಿಚ್ಚಲು ಜನ ಅಷ್ಟೊಂದು ಕಷ್ಟಪಡುವುದೇಕೆ?
– **ಆಕಾಶದಲ್ಲೂ ಹಲ್ಲು ಮತ್ತು ಕೈಬೆರಳ ಶಕ್ತಿ ಎಷ್ಟಿದೆ ಎಂದು ಪರೀಕ್ಷಿಸುವ ಏರ್‌ಲೈನ್ಸ್ ತಂತ್ರ ಅದು!**

- **ವಿನಾಯಕ ಬನ್ನಿಕೊಪ್ಪ, ಹತ್ತಿಮತ್ತೂರು**
ಭಟ್ರೇ, ವಿಭಟ್ಟರ 'ಕುಡಿಯೋಣು ಬಾರಾ' ಪುಸ್ತಕ ಓದಿ ಕುಡಿಯುವುದನ್ನು ಕಲಿತೆ ಅಂತಾನಲ್ಲ?
– **ಸದ್ಯ 'ಸೇದೋಣ ಬಾರಾ' ಪುಸ್ತಕ ಬರೆಯಲಿಲ್ಲ!**

- **ಶ್ರೇಯಾ ಪಾಟೀಲ, ಶಿರಹಟ್ಟಿ**
ಭಟ್ರೇ, ಪ್ಯೂರ್ ವೆಜಿಟೇರಿಯನ್ ಜನರಿಗೆ ಮದುವೆ ರಿಸೆಪ್ಷನ್‌ನಲ್ಲಿ ಅತಿ ದೊಡ್ಡ ಬೇಜಾರು ಏನು?
– **ಅವರು ಕ್ಯೂನಲ್ಲಿ ನಿಂತಾಗ, ಪಕ್ಕದ ಕೌಂಟರ್‌ನ ನಾನ್‌ವೆಜ್ ಘಮ ಇವರ ಮೂಗಿಗೆ ಬಡಿಯುವುದು!**

- **ಗಣೇಶ ಡಂಬಳ, ಹರಪನಹಳ್ಳಿ**
ಕಾರಿನಲ್ಲಿ ಸೀಟ್ ಬೆಲ್ಟ್ ಹಾಕಿಕೊಳ್ಳುವುದು ಸುರಕ್ಷತೆಗಾಗಿಯೋ ಅಥವಾ ದಂಡದ ಭಯಕ್ಕೋ?
– **ಪೊಲೀಸರ ಕೈಗೆ ಕಷ್ಟಪಟ್ಟು ಸಂಪಾದಿಸಿದ ದುಡ್ಡು ಕೊಡಬಾರದು ಅನ್ನೋ ಛಲಕ್ಕೆ!**

ಮಳೆ ನಿಂತು ಹೋದ ಮೇಲೆ ಕಂಬನಿ ಮೂಡಿದೆ



ಕಾಡುದಾರಿ
ಹರೀಶ್ ಕೇರ
vveditoped@gmail.com

ಪಶ್ಚಿಮ ಘಟ್ಟದ ಕಾಡುಗಳ ನಡುವೆ ವಾಸಿಸುವ ಮಿತ್ರರೊಬ್ಬರು ಫೋನ್ ಮಾಡಿದ್ರು. ಇಷ್ಟು ಹೊತ್ತಿಗೆ ಹಗಲೆನ್ನದೆ ರಾತ್ರಿ ಎನ್ನದೆ ಮಳೆ ಸುರಿಯುತ್ತಿರಬೇಕಿತ್ತು. ಕೊಡೆಯಿಲ್ಲದೆ ಆಚೆ ಹೊರಡಲೇ ಆಗುತ್ತಿರಲಿಲ್ಲ, ಬಾನಿನಲ್ಲಿ ಸೂರ್ಯನ ದರ್ಶನವೇ ಆಗದೆ ವಾರಗಟ್ಟಲೆ ಕಳೆದುದು ಉಂಟು. ರಾತ್ರಿಯಾಗುವುದಕ್ಕೂ ಮೊದಲೇ ಕಪ್ಪೆಗಳು ವಟರ್ ವಟರ್ ಆರಂಭಿಸುತ್ತಿದ್ದವು. ರಾತ್ರಿಯಿಡೀ ಈ ಸಂಗೀತ ಕಛೇರಿ ನಡೆಯುತ್ತಿತ್ತು. ಕೆಲವೊಮ್ಮೆ ತುಂಬಾ ತಂಪಿನ ತಾಣಗಳಲ್ಲಿ, ಕೆರೆ ತೋಡುಗಳ ಬಳಿಯಲ್ಲಿ ಹಗಲಿನಲ್ಲೂ ಈ ಭಜನೆ ಮುಂದುವರಿಯುತ್ತಿತ್ತು. ಕಾಡಿನ ನಡುವೆ ಹೋದರೆ ಮರಗಪ್ಪೆಗಳು ಮೈಮೇಲೆ ಜಿಗಿದು ಬಿಡುತ್ತಿದ್ದವು. ಎಲ್ಲೆಂದರಲ್ಲಿ ಓಡಾಡುವ, ಎಣೆಯಾಡುವ ಹಾವುಗಳು ಕಾಣಸಿಗುತ್ತಿದ್ದವು. ಜಿಗಣೆಗಳು ರಾತ್ರಿಯಿಡೀ ಮೈಗೆ ಹತ್ತಿಕೊಂಡು ನೆತ್ತರೊಡಕು ಮಾಡಿಬಿಡುತ್ತಿದ್ದವು. ಆ ದೃಶ್ಯಗಳೆಲ್ಲ ಈಗ ಕಾಣಸಿಗುತ್ತಿಲ್ಲ ಇಲ್ಲ, ಪ್ರಕೃತಿ ಏನೋ ಆಗಿದೆ ಎಂದು ಗೋಳು ತೋಡಿಕೊಂಡರು.

ಈ ವರ್ಷದ ಮಳೆಗಾಲ ಪಶ್ಚಿಮ ಘಟ್ಟ, ಬಯಲುಸೀಮೆ, ರಾಜಧಾನಿ ಎನ್ನದೆ ಎಲ್ಲರನ್ನೂ ಬಾಯಾರಿ ಬೆಂಡಾಗುವಂತೆ ಮಾಡಿದೆ. ರಾಯಚೂರಿನ ರೈತರು ಹೊಲಗಳನ್ನು ಸಿದ್ಧ ಮಾಡಿಕೊಂಡು ಬಿತ್ತನೆಗಾಗಿ ಮಳೆಗೆ ಕಾದು ಕೂತಿದ್ದಾರೆ. ಸುಳ್ಯದ ಅಡಕೆ ಕೃಷಿಕರು ಕೊಳೆರೋಗ ಎದುರಿಸಲು ಬೋರ್ಡೋ ಮಿಶ್ರಣ ಸಿದ್ಧಪಡಿಸಿಕೊಂಡು ಕಾಯುತ್ತಿದ್ದಾರೆ. ಹಾಸನದ, ಚಿಕ್ಕಮಗಳೂರಿನಲ್ಲಿ ಆಗುವ ಕಾಫಿ ಕೆಲಸಕ್ಕೆ ಮಳೆ ಬಂದರೆ ಮಾತ್ರ ಮುಂದಿನ ಸಲದ ಕಾಫಿ ಬೆಳೆ ಸರಾಗ. ಬೆಟ್ಟದೂರುಗಳಲ್ಲಿ ಮಳೆ ನೋಡಲೆಂದೇ ಬರುವ ಹೋಂಸ್ಟೇಗಳಲ್ಲಿ ರೂಂಗಳು ಖಾಲಿಯಾಗಿವೆ. ಕಳೆದ ವರ್ಷ ಸಾಕುಸಾಕೆನ್ನುವಷ್ಟು ಮಳೆ ಸುರಿದಿತ್ತು.

ಮನುಷ್ಯನಷ್ಟೇ ಅಲ್ಲ, ಮಳೆಗಾಗಿ ಕಾಯುವುದು. ಅಥವಾ ಹೀಗೆ ಹೇಳೋಣ- ಮಳೆಗಾಗಿ ಮನುಷ್ಯ ಕಾಯದಿದ್ದರೂ ಸಕಲ ಜೀವಜಾತಿಗಳು ತಮ್ಮದೇ ಆದ ರೀತಿಯಲ್ಲಿ ಕಾಯುತ್ತವೆ. ಸಣ್ಣ ಕ್ರಿಮಿಕೀಟಗಳಿಂದ ಹಿಡಿದು ಭವ್ಯ ಜೀವಿ ಆನೆಯವರೆಗೂ. ಮಳೆ ಸರಿಯಾದ ಪ್ರಮಾಣದಲ್ಲಿ ಸುರಿದರೆ ಅವುಗಳ ಜೀವನ ಚಲನೆ ಸರಾಗ. ಉದಾಹರಣೆಗೆ ಮೀನಿನ ಈ ಜೀವಚಕ್ರವನ್ನು ನೋಡಿ.

ಪಶ್ಚಿಮ ಘಟ್ಟಗಳಲ್ಲಿ ಅಬ್ಬರದ ವರ್ಷಧಾರೆ ಒಂದು ತಿಂಗಳು ಸುರಿದರೆ, ದಟ್ಟ ಕಾಡುಗಳ ತಪ್ಪಲಿನಲ್ಲಿರುವ ಹೊಳೆ ನದಿ ತೊರೆಗಳಲ್ಲಿರುವ ಮೀನುಗಳಿಗೆ ಸಂತೋಷವೋ ಸಂತೋಷ. ಅವು ಇದೇ ಸಂದರ್ಭದಲ್ಲಿ ಮೊಟ್ಟೆಯಿಡಲು ಪ್ರಯಾಣ ಆರಂಭಿಸುತ್ತವೆ. ಮರಿಯಿಡುವುದಕ್ಕೆ ಸುರಕ್ಷಿತ ತಾಣ ಹುಡುಕಿಕೊಂಡು ಅವು ಧಾವಿಸುವುದು ನೀರಿನಲ್ಲಿ ಮೇಲ್ಮುಖವಾಗಿ, ನೀರಿನ ಪ್ರವಾಹ ಹರಿಯುತ್ತಿರುವ ಕಡೆಗೆ. ಜಲಮೂಲಗಳ ಎಡೆ. ತಪ್ಪಲಿನಿಂದ ಮೇಲಕ್ಕೆ, ಹೊಲಗದ್ದೆಗಳಿಗೆ. ಹಿಂಚಿಲಿನ ಗದ್ದೆಗಳಲ್ಲಿ, ನಿಂತ ನೀರಿನಲ್ಲಿ ಮೊಟ್ಟೆಯಿಟ್ಟು ಮತ್ತೆ ಕೆಳಮುಖವಾಗಿ ಚಲಿಸುವುದು ಅವುಗಳ ಆಚರಣೆ. ಇದೊಂದು ಹೆಗ್ಗಿಗೆ ತೆರಳುವ ಹಬ್ಬದ ಕಾಲ.

ಈ ಮೀನಿನ ದಾರಿ ಬಲ್ಲವರು ಇದೇ ಸಂದರ್ಭವನ್ನು ಕಾಯುತ್ತಾರೆ. ತೊರೆಗಳ ಹರಿವು ಅಗಲವಾಗಿಲ್ಲದ ಕಡೆಗಳಲ್ಲಿ ಅವರು ಬಲೆ, ಗೂಡು ಹಿಡಿದು ಕಾಯುತ್ತಾರೆ. ಕೆಲವು ಸಂದರ್ಭಗಳಲ್ಲಿ ಸಾವಿರಾರು ಮೀನುಗಳು ಪ್ರವಾಹದಂತೆ ನುಗ್ಗಿಕೊಂಡು, ಸಣ್ಣ ಜಲಪಾತಗಳಲ್ಲಿ ಮೇಲಕ್ಕೆ ಹಾರುತ್ತ ಧಾವಿಸುತ್ತವೆ. ಅಲ್ಲಿ ಬಲೆ ಹಾಕಿದರೆ ನೂರಾರು ಒಂದೇಟಿಗೆ ಸಿಕ್ಕಿಬೀಳುತ್ತವೆ.

ಮಲೆನಾಡಿನಲ್ಲಿ ಇದು ಈ ಸಮಯದಲ್ಲಿ ರಾತ್ರಿ ವೇಳೆಯ ಸಾಮಾನ್ಯ ಚಟುವಟಿಕೆ. ಆದರೆ ಈ ಸಲ ಇದು ಕಾಣಿಸುತ್ತಿಲ್ಲ. ಮೀನುಗಳು ಮರಿಯಿಡಲು ಹೊರಟೇ ಇಲ್ಲ. ಆದರರ್ಥ ಮುಂದಿನ ವರ್ಷ ಮತ್ಸ್ಯಕ್ಷಾಮ ಖಚಿತ.

ಈ ಬಾರಿ ಇನ್ನೊಂದು ವಿಶೇಷ ಘಟಿಸಿದೆ. ಪಶ್ಚಿಮ ಘಟ್ಟಗಳ ತಪ್ಪಲಲ್ಲಿ ಹಾಗೂ ಕಾಡುಗಳಲ್ಲಿ ಹಣ್ಣುಗಳು ಈ ಬೇಸಿಗೆಯಲ್ಲಿ ಹೇರಳವಾಗಿ ಕಾಣಿಸಿಕೊಂಡಿವೆ. ಹಲಸು, ಕಾಡುಮಾವು, ನೇರಳೆ, ಹೆಬ್ಬಲಸು ಹಾಗೂ ಕಾಡುಹಣ್ಣುಗಳು ಪುಷ್ಕಳವಾಗಿ ದೊರಕಿರುವುದರಿಂದ ಮಂಗಗಳ ಕಾಟ ಅಷ್ಟಾಗಿ ರೈತರಿಗೆ ಕಾಡಿಲ್ಲ. ನೇರಳೆ ಮಾತ್ರವಲ್ಲ, ಎಲ್ಲ ಮರಗಳೂ ಸಿಕ್ಕಾಪಟ್ಟೆ ಫಲ ಬಿಟ್ಟಿರುವುದು ಮುಂಬರುವ ಬರದ ದ್ಯೋತಕ ಎಂಬುದರಲ್ಲಿ ಅನುಮಾನವಿಲ್ಲ ಎಂದು ಬಹಳಷ್ಟು ಮಂದಿ ಹೇಳುತ್ತಾರೆ. ತಜ್ಞರಲ್ಲಿ ಈ ಬಗ್ಗೆ ಭಿನ್ನಾಭಿಪ್ರಾಯ ಇದೆ. ಹಲಸು ಸಾಮಾನ್ಯವಾಗಿ ಬಿಟ್ಟ ಶಿಸ್ತಿನಲ್ಲೂ ಫಲ ಬಿಡುತ್ತದೆ. ಆದರೆ ಅದರಲ್ಲಿ ಮಳೆ ನೀರು ಸೇರಿಕೊಳ್ಳುವ ಕಾರಣ ಮನುಷ್ಯರು ಸೇವಿಸುತ್ತಿಲ್ಲ. ಇವೇ ಮರದಿಂದ ಬಿದ್ದು, ಆನೆಗಳಿಗೆ ಹೇರಳ ಆಹಾರವಾಗಿವೆ. ಕಾಫಿ- ಟೀ ತೋಟಗಳ ಪಕ್ಕದಲ್ಲಿರುವ ಹಲಸಿನ ಮರಗಳ ಬಳಿ ಈಗ ಆನೆಗಳ ಗುಂಪಿದೆ. ಈ ಎಲ್ಲ ಹಣ್ಣುಗಳ ಬೀಜ, ಗೊರಟು ನೆಲ ಸೇರಿ ದೊಡ್ಡ ಪ್ರಮಾಣದಲ್ಲಿ ಮೊಳಕೆ ಒಡೆಯ ಬೇಕಲ್ಲವೆ? ಇದು ಬರಕ್ಕೆ ಪ್ರಕೃತಿಯೇ ಒಡ್ಡುತ್ತಿರುವ ಸವಾಲು ಇರಬಹುದು. ಆದರೆ ಮೊಳಕೆಗೆ ಮಳೆ ಬೇಕಲ್ಲ.

ಪಶ್ಚಿಮ ಘಟ್ಟಗಳ ಒಡಲಿನಲ್ಲಿರುವ ಕೆಲವು ಜಾತಿಯ ಚಿಟ್ಟೆಗಳ ಜೀವನಚಕ್ರವನ್ನು ಒಂದು ಕ್ಷಣ ನೋಡಿ. ಈ ಅದ್ಭುತ ಚಿಟ್ಟೆಗಳು ದೂರದ ವಲಸೆ ಪ್ರಯಾಣಕ್ಕೂ ಪ್ರಸಿದ್ಧ. ದಕ್ಷಿಣ ಭಾರತದಲ್ಲಿ ಎರಡು ಮುಂಗಾರುಗಳು ಬೀಸುತ್ತವೆ- ನೈಋತ್ಯ ಮತ್ತು ಈಶಾನ್ಯ ಮುಂಗಾರು. ಪರಿಣಾಮ ಡೆನೈನ್ ಜಾತಿಯ ಚಿಟ್ಟೆಗಳು ವರ್ಷಕ್ಕೆ ಎರಡು ಬಾರಿ ಪಶ್ಚಿಮ ಘಟ್ಟದ ಮಳೆಕಾಡುಗಳು ಮತ್ತು ಪೂರ್ವ ಘಟ್ಟ ಹಾಗೂ ಡೆಕ್ಕನ್ ಪ್ರದೇಶಗಳ ನಡುವೆ ವಲಸೆ ಹೋಗುತ್ತವೆ.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ, ಬಿಸಿಲಿನಿಂದ ಕಾದ ಪಶ್ಚಿಮ ಘಟ್ಟಗಳಲ್ಲಿ ಮುಂಗಾರು ಪೂರ್ವ ಮಳೆ ಸುರಿದ ಬಳಿಕ ಕಾಡು ಹೂಗಳು ಅರಳುತ್ತವೆ. ಆಗ ಹೊಸದಾಗಿ ಬೆಳೆದ ಟೈಗರ್ ಮತ್ತು ಕ್ರೋ ಜಾತಿಯ ಚಿಟ್ಟೆಗಳು ಹೂಗಳ ಮಕರಂದ ಕುಡಿದು ತಮ್ಮ ಪ್ರಯಾಣಕ್ಕೆ ಬೇಕಾದ ಶಕ್ತಿಯನ್ನು ಸಂಗ್ರಹಿಸಿಕೊಳ್ಳುತ್ತವೆ. ನಂತರ ಪಶ್ಚಿಮ ಘಟ್ಟದಲ್ಲಿ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಸುರಿಯುವ ಭಾರಿ ನೈಋತ್ಯ ಮುಂಗಾರು ಮಳೆಯ ಕಾಲ. ಈ ಕಾಲದಲ್ಲಿ ಅವು ಅಲ್ಲಿರುವುದಿಲ್ಲ. ಅಲ್ಲಿಂದ ಪೂರ್ವದ ಒಣ ಪ್ರದೇಶಗಳ ಕಡೆಗೆ ಹಾರುತ್ತವೆ.

ಡೆನೈನ್ ಚಿಟ್ಟೆಗಳ ವಲಸೆ ಮಾರ್ಗದ ಬಗ್ಗೆ ಪ್ರಕೃತಿ ತಜ್ಞರು ನಿಖರವಾದ ವಿವರ ನೀಡಿದ್ದಾರೆ. ಈ ಚಿಟ್ಟೆಗಳ ಪ್ರಯಾಣ ಶೃಂಗೇರಿ ಸಮೀಪದ ಕಾಡುಗಳಿಂದ ಆರಂಭವಾಗುತ್ತದೆ. ಅಲ್ಲಿಂದ ಕುಕ್ಕೆ ಸುಬ್ರಹ್ಮಣ್ಯ ಮತ್ತು ಮಡಿಕೇರಿ ತಲುಪಿದ ನಂತರ ಅವು ಎರಡು ಗುಂಪುಗಳಾಗಿ ವಿಭಜನೆಯಾಗುತ್ತವೆ. ಒಂದು ಗುಂಪು ಹಾಸನ, ಬೆಂಗಳೂರು ಹೊರವಲಯ, ಮಲೆ ಮಹದೇಶ್ವರ ಬೆಟ್ಟ ಮೂಲಕ ಸಾಗುತ್ತಾ ತಮಿಳುನಾಡಿನ ಏರ್ಕಾಡ್ ತಲುಪುತ್ತದೆ. ಇನ್ನೊಂದು ಗುಂಪು ಬ್ರಹ್ಮಗಿರಿ ಬೆಟ್ಟಗಳು, ವಯನಾಡು, ನಾಗರಹೊಳೆ ರಾಷ್ಟ್ರೀಯ ಉದ್ಯಾನ, ನೀಲಗಿರಿ, ಆನಮಲೈ ಬೆಟ್ಟಗಳ ಮೂಲಕ ಹಾಗೂ ಕೊಯಮತ್ತೂರು ಕಡೆಗೆ ಹಾರುತ್ತವೆ. ಕೆಲವು ಚಿಟ್ಟೆಗಳು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಮೂಲಕ ಬಿಳಿಗಿರಿರಂಗನ ಬೆಟ್ಟ ತಲುಪುತ್ತವೆ.

ಏಪ್ರಿಲ್‌ನಿಂದ ಜೂನ್‌ವರೆಗೆ, ನೈಋತ್ಯ ಮುಂಗಾರು ಚೆನ್ನಾಗಿ ಸುರಿಯುವ ಮುನ್ನ, ಈ ಅದ್ಭುತ ಚಿಟ್ಟೆಗಳ ವಲಸೆಯನ್ನು ಬೆಂಗಳೂರಿನ ಹೊರವಲಯದ ಜನರು ಕಣ್ತುಂಬಿಕೊಳ್ಳಬಹುದು. ಪೂರ್ವದ ಪ್ರದೇಶ ತಲುಪಿದ ನಂತರ ಈ ಚಿಟ್ಟೆಗಳು ಅಲ್ಲಿ ಸಂತಾನೋತ್ಪತ್ತಿ ಮಾಡಿ ತಮ್ಮ ಜೀವನ ಮುಗಿಸುತ್ತವೆ. ಅವುಗಳ ಮರಿಗಳು ಅಥವಾ ಕೆಲವೊಮ್ಮೆ ಮೊದಲನೇ ತಲೆಮಾರಿನ ಚಿಟ್ಟೆಗಳು, ಸೆಪ್ಟೆಂಬರ್‌ನಿಂದ ನವೆಂಬರ್‌ವರೆಗೆ ಈಶಾನ್ಯ ಮುಂಗಾರು ಆರಂಭವಾಗುವ ಸಮಯದಲ್ಲಿ ಮತ್ತೆ ಪಶ್ಚಿಮ ಘಟ್ಟದತ್ತ ಹಿಂದಿರುಗುತ್ತವೆ.

ಆದರೆ ಈ ಬಾರಿ ಈ ಚಿಟ್ಟೆಗಳ ವಲಸೆ ಅಂಥ ಪ್ರಮಾಣದಲ್ಲಿ ಕಾಣಿಸಲಿಲ್ಲ. ಕಾರಣ, ಮಳೆಯೇ ಬರಲಿಲ್ಲ ಎಂದರೆ ಚಿಟ್ಟೆಗಳಿಗೆ ಯಾಕೆ ಅಲ್ಲಿಂದ ಹೊರಡಬೇಕು. ಇದರಿಂದ ಅವುಗಳ ವಲಸೆ ಚಕ್ರವೂ ಅಸ್ತವ್ಯಸ್ತವಾಗಿದೆ. ಇದಲ್ಲದೆ ಅವುಗಳ ವಲಸೆ ಮಾರ್ಗಗಳನ್ನು ಹಾದು ಹೋಗುವ ಹೆದ್ದಾರಿಗಳ ಭಯವೂ ಇದೆ. ಅಲ್ಲಿ ಸಾವಿರಾರು ಚಿಟ್ಟೆಗಳು ವಾಹನಗಳಿಗೆ ಸಿಲುಕಿ ಸಾಯುತ್ತವೆ. ಜತೆಗೆ ಕೀಟನಾಶಕಗಳ ಅತಿಯಾದ ಬಳಕೆಯಿಂದ ಡೆನೈನ್ ಚಿಟ್ಟೆಗಳ ಮರಿಗಳು ಬೆಳೆಯಲು ಅಗತ್ಯವಾದ ಎಕ್ಕದ ಜಾತಿಯ ಸಸ್ಯಗಳು ನಾಶವಾಗುತ್ತಿವೆ. ಹೀಗಾಗಿ ಇದರಿಂದ ಅವುಗಳ ವಲಸೆ ಮತ್ತು ಸಂತಾನೋತ್ಪತ್ತಿಯ ಚಕ್ರಕ್ಕೂ ಗಂಭೀರ ಅಪಾಯ ಬಂದಿದೆ. ಈ ಚಿಟ್ಟೆಗಳು ಇಲ್ಲದೆ ಹೋದರೆ ಈ ಜಾತಿಯ ಸಸ್ಯಗಳೂ ಮುಂದೊಂದು ದಿನ ಅಳಿಸಿ ಹೋಗುತ್ತವೆ.

ಬಿಸಿಲೆ ಘಾಟಿಯಲ್ಲಿ ಮಳೆಗಾಲದಲ್ಲಿ 'ಕಪ್ಪೆ ಶಿಬಿರ' ನಡೆಯುತ್ತದೆ. ಇಲ್ಲಿ ಕಪ್ಪೆಗಳ ಜಾತಿ ಹೇರಳ. ಈ ಪ್ರದೇಶದಲ್ಲಿ ಮಾತ್ರ ಕಾಣಸಿಗುವ (ಎಂಡೆಮಿಕ್) ಕಪ್ಪೆಗಳೂ ಬಹಳಷ್ಟಿವೆ. ಬಿಸಿಲೆಯ ಮಳೆಗಾಲದ ರಾತ್ರಿಗಳೆಂದರೆ ಕಪ್ಪೆಗಳ ಜೋಗುಳದ ಎಂದೇ ಅರ್ಥ. ಆಗುಂಬೆ, ಉತ್ತರಕನ್ನಡ, ಕೊಡಗಿನ ಕಾಡುಗಳಿಗೂ ಇದು ನಿಜ. ಕಪ್ಪೆಗಳನ್ನು ಜೈವ ಸೂಚಕಗಳು ಎಂದೇ ಕರೆಯಲಾಗುತ್ತದೆ. ಕಾರಣ, ಪರಿಸರದಲ್ಲಿ ಏನಾದರೂ ಬದಲಾವಣೆ ಅಥವಾ ಹಾನಿ ಆದರೆ ಅದರ ಪರಿಣಾಮ ಮೊದಲು ಕಾಣಿಸಿಕೊಳ್ಳುವ ಜೀವಿ ಕಪ್ಪೆ. ಇವು ಆಹಾರ ಸರಪಳಿಯಲ್ಲಿ ಬಹಳ ಮುಖ್ಯ. ಅವು ಕೀಟಗಳನ್ನು ತಿನ್ನುವ ಪರಭಕ್ಷಕ, ಹಾವುಗಳಿಗೆ ಆಹಾರ. ಈ ಬಾರಿ ಅವುಗಳ ಕಲರವ ಕಡಿಮೆ.

ಇಷ್ಟು ಹೊತ್ತಿಗೆ ಸಾಮಾನ್ಯವಾಗಿ ಕಪ್ಪೆಗಳು ಸಂತಾನೋತ್ಪತ್ತಿ ಮಾಡುವ ಅನೇಕ ಸ್ಥಳಗಳು ಈ ಬಾರಿ ಸಂಪೂರ್ಣ ನಿಶ್ಯಬ್ದವಾಗಿವೆ. ವರ್ಷಪೂರ್ತಿ ನೀರು ಹರಿಯುವ ಹೊಳೆಗಳು ಹಲವು ಜಾತಿಯ ಕಪ್ಪೆಗಳ ಜೀವನಚಕ್ರದಲ್ಲಿ ಪ್ರಮುಖ. ಇವು ಹರಿಯುವ ನೀರಿನಲ್ಲೇ ಅಥವಾ ಅದರ ಸುತ್ತಮುತ್ತ ಮೊಟ್ಟೆ ಇಡುತ್ತವೆ. ಈ ಬಾರಿ ಮಳೆ ಕಡಿಮೆಯಾಗಿರುವುದರಿಂದ ನೀರಿನ ಮಟ್ಟ ಇಳಿದಿದ್ದು, ಇಲ್ಲಿ ಆಶ್ರಯ ಪಡೆದ ಕಪ್ಪೆಗಳ ಜೀವನಚಕ್ರಕ್ಕೆ ಅಡ್ಡಿ ಆಗಿದೆ. ಈ ಪ್ರದೇಶಗಳಲ್ಲಿ ಕಪ್ಪೆಗಳ ಸಂತಾನೋತ್ಪತ್ತಿಗೆ ಏಟು ಬಿದ್ದಿದೆ. ಪಶ್ಚಿಮ ಘಟ್ಟದಲ್ಲಿ ಮುಂಗಾರು ವರ್ಷದಿಂದ ವರ್ಷಕ್ಕೆ ಅಸ್ಥಿರವಾಗುತ್ತಿರುವುದರಿಂದ, ಕಳೆದ ನಾಲ್ಕು ವರ್ಷಗಳಿಂದ ಕಪ್ಪೆಜಾತಿಗೆ ಬಹಳ ಕಷ್ಟವಾಗಿದೆ.

ಭಾರತದ ಅತಿ ದೊಡ್ಡ ಕಪ್ಪೆ ಜಾತಿಗಳಲ್ಲಿ ಒಂದಾದ ಡೋಂಕರು ಕಪ್ಪೆ ಅಥವಾ ಇಂಡಿಯನ್ ಬುಲ್‌ಫ್ರಾಗ್ ಸಾಮಾನ್ಯವಾಗಿ ಮುಂಗಾರು ಆರಂಭವಾದ ಕೂಡಲೇ ಮೊದಲು ಸಂತಾನೋತ್ಪತ್ತಿ ಮಾಡುತ್ತವೆ. ಆದರೆ ಈ ವರ್ಷ ಹಲವು ಪ್ರದೇಶಗಳಲ್ಲಿ ಅವುಗಳ ಚಟುವಟಿಕೆ ಕಾಣುತ್ತಿಲ್ಲ. ಈ ಕಪ್ಪೆಗಳು ಮೊಟ್ಟೆ ಇಡಲು ಕನಿಷ್ಠ ಒಂದೆರಡು ವಾರ ಗದ್ದೆಯಲ್ಲಿ ನೀರು ನಿಂತಿರಬೇಕು.

ಈ ಕಪ್ಪೆಗಳ ಪ್ರಮಾಣ ಹಿಂದಿನ ವರ್ಷಗಳಿಗೆ ಹೋಲಿಸಿದರೆ ಶೇಕಡ 10ಕ್ಕಿಂತಲೂ ಕಡಿಮೆಯಾಗಿದೆ. ಕೆಲವು ಸಾಮಾನ್ಯ ಕಪ್ಪೆಗಳು ಮೊಟ್ಟೆ ಇಟ್ಟಿವೆ. ಆದರೆ ನೀರಿನ ಪ್ರದೇಶಗಳು ಬೇಗ ಒಣಗುತ್ತಿರುವುದರಿಂದ ಆ ಮೊಟ್ಟೆಗಳು ಬದುಕುಳಿಯುವ ಸಾಧ್ಯತೆ ತುಂಬಾ ಕಡಿಮೆ.

ಮಲಬಾರ್ ಟ್ರೀ ಟೋಡ್, ನೈಟ್ ಫ್ರಾಗ್, ಬುಷ್ ಫ್ರಾಗ್ ಮೊದಲಾದ ಸಣ್ಣ ಕಪ್ಪೆಗಳು ಇಷ್ಟು ಹೊತ್ತಿಗಾಗಲೇ ಜೋರು ಗಲಾಟೆ ಮಾಡುತ್ತ ಸಂಗಾತಿಗಳನ್ನು ಹುಡುಕಿಕೊಂಡು ಮಿಲನಕ್ರಿಯೆಯಲ್ಲಿ ತೊಡಗಿರಬೇಕಿತ್ತು. ಆದರೆ ಅವುಗಳ ಮೇಟಿಂಗ್ ಕಾಲ್ ಬಹಳಷ್ಟು ಕಡಿಮೆಯಾಗಿವೆ. ಕಪ್ಪೆಗಳು ಕೀಟಗಳನ್ನು ತಿನ್ನುವ ಮೂಲಕ ಕೀಟಗಳ ಸಂಖ್ಯೆಯನ್ನು ನಿಯಂತ್ರಿಸುವುದು ನಿಮಗೆ ಗೊತ್ತು. ಕಪ್ಪೆಗಳಿಲ್ಲದಿದ್ದರೆ ಕ್ರಿಮಿಕೀಟಗಳು ಹೆಚ್ಚುವುದು ಖಚಿತ.

ಮತ್ತೊಂದೆಡೆ ಹಾವುಗಳಿಗೆ ಕಪ್ಪೆಗಳೇ ಪ್ರಮುಖ ಆಹಾರ. ನಾಗರ, ಕನ್ನಡಿ ಮೊದಲಾದ ಹಾವುಗಳು ಕಪ್ಪೆಗಳನ್ನೇ ಅವಲಂಬಿಸಿವೆ. ಕನ್ನಡಿ ಹಾವುಗಳು ಏಪ್ರಿಲ್- ಮೇ ತಿಂಗಳಲ್ಲಿ ಮರಿ ಇಡುತ್ತವೆ. ಆ ಪುಟ್ಟ ಹಾವುಗಳಿಗೆ ಸಣ್ಣ ಕಪ್ಪೆ- ಗೊದ್ದಗಳೇ ಮುಖ್ಯ ಆಹಾರ. ಈಗ ಕಪ್ಪೆಗಳಿಲ್ಲದೆ ಹಾವುಗಳೂ ಸಂತಾನೋತ್ಪತ್ತಿ ಮಾಡುವುದಿಲ್ಲ. ಮಾಡಿದರೂ ಬದುಕುಳಿಯುವುದಿಲ್ಲ. ಹಾವುಗಳಿಲ್ಲದೆ ಇಲಿಗಳ ಸಂಖ್ಯೆ ಹೆಚ್ಚಬಹುದು. ಬರಗಾಲದಲ್ಲಿ ಇಲಿಗಳ ಸಂಖ್ಯೆ ಹೆಚ್ಚು ಯಾಕೆ ಎಂಬುದು ಗೊತ್ತಾಯಿತೆ?

ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಹುಂಡಿಗೆ ಕನ್ನ, ಭಕ್ತಿಗೆ ದ್ರೋಹ

ರಾಮ ಭಕ್ತರ ಹೃದಯ ಕಲಕಿದ ಹುಂಡಿ ಕಳವು- 'ಜನಪಥ' ಅಂಕಣದ ಬರಹ ಓದಿದೆ. ಅಸಂಖ್ಯಾತ ಭಾರತೀಯರ ಭಕ್ತಿ ಶ್ರದ್ಧೆಯ ದಿವ್ಯ ಕ್ಷೇತ್ರವಾದ ಅಯೋಧ್ಯೆಯ ರಾಮಮಂದಿರದ ಹುಂಡಿಗೆ ಕನ್ನ ಹಾಕಿದ ದುರುಳರು ರಾಮನ ಬಗೆಗಿನ ಆಳವಾದ ನಿಷ್ಠೆಗೆ ಗುನ್ನ ಹಾಕಿದ್ದಾರೆ. ಜಗತ್ತಿನಾದ್ಯಂತ ಹರಡಿರುವ ಭಕ್ತರ ದೇಣಿಗೆಗೆ ಕೊಳಕು ಕೈ ಹಾಕಿರುವ ದುಷ್ಟರನ್ನು ಹೆಡೆಮುರಿ ಕಟ್ಟಬೇಕು. ಕೇಂದ್ರ ಸರಕಾರ, ಉತ್ತರ ಪ್ರದೇಶದ ಯೋಗಿ ಆದಿತ್ಯನಾಥ್ ಆಡಳಿತ ಆರ್‌ಎಸ್‌ಎಸ್ ಮತ್ತು ವಿಶ್ವ ಹಿಂದೂ ಪರಿಷತ್ ಸಮಗ್ರ ನಿಷ್ಪಕ್ಷಪಾತ ತನಿಖೆ ನಡೆಸಿ ನಿಜವಾದ ಆರೋಪಿಗಳಿಗೆ ತಕ್ಕ ಶಾಸ್ತಿ ಮಾಡಬೇಕು. ಇಲ್ಲದಿದ್ದರೆ ಬಿಜೆಪಿ ಮತ್ತದರ ಸರ್ಕಾರಿ ಸಂಘಗಳಿಗೆ ಅಪಖ್ಯಾತಿ ತಪ್ಪದಲ್ಲ.

- ಬಿ.ಎಸ್ ಮೋಹನಕುಮಾರ್, ಬೆಂಗಳೂರು

ಬೋಗಿ ಜೋಡಣೆ ಬದಲಾಯಿಸಿ

ಮೈಸೂರಿನ ಮುಖ್ಯ ರೈಲು ನಿಲ್ದಾಣದಿಂದ ಬೆಳಗ್ಗೆ 8.35ಕ್ಕೆ ಹೊರಡುವ ಮಯ್ಲಾಡುತುರೈ ಎಕ್ಸ್‌ಪ್ರೆಸ್ ಸೇರಿದಂತೆ, ಎಲ್ಲ ರೈಲು ಗಾಡಿಗಳಲ್ಲಿ ಮಧ್ಯದ ಜಾಗದಲ್ಲಿ ಬೋಗಿಗಳು ಕಾಯ್ದಿರಿಸಿದ ಹವಾನಿಯಂತ್ರಿತ ಬೋಗಿಗಳಾಗಿವೆ. ಇದು ಅಂಗವಿಕಲರ ರೈಲು ಪ್ರಯಾಣ ಮಾಡುವ ಪ್ರಯಾಣಿಕರಿಗೆ ಕಷ್ಟ ತೆರಿಸುತ್ತದೆ. ಕೆಲವು ಸಾಮಾನ್ಯ ಪ್ರಯಾಣಿಕರು ಬೋಗಿಗಳನ್ನು ಹುಡುಕಲು ಸಮಯ ಸಾಲದ ಸಮಸ್ಯೆ ಉಂಟಾಗುತ್ತದೆ. ಈ ಕಾರಣಕ್ಕಾಗಿ ಕಾಯ್ದಿರಿಸಿದ ಹವಾನಿಯಂತ್ರಿತ ಬೋಗಿಗಳನ್ನು ಎಲ್ಲಾ ರೈಲು ಗಾಡಿಯಲ್ಲಿ ರೈಲಿನಲ್ಲಿ ಕಡೆಗೆ ಹಾಕುವುದರಿಂದ ಸಾಮಾನ್ಯ ವರ್ಗದ ರೈಲು ಪ್ರಯಾಣಿಕರಿಗೆ ಯಾವುದೇ ತೊಂದರೆ ಆಗುವುದಿಲ್ಲ. ಈ ಬಗ್ಗೆ ರೈಲ್ವೆ ಇಲಾಖೆ ಹಿರಿಯ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು.

- ಬೂಕನಕೆರೆ ವಿಜೇಂದ್ರ, ಮೈಸೂರು

ತೈಲ ಬೆಲೆ ಇಳಿಸಿ

ಮಧ್ಯ ಪ್ರಾಚ್ಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಹಲವು ತಿಂಗಳಿನಿಂದ ಸತತವಾಗಿ ತೈಲ ಬೆಲೆ ಏರಿಕೆಯಾಗಿದ್ದ ಪರಿಣಾಮ ದೇಶದಲ್ಲಿ ಪ್ರಯಾಣ ದರ, ವಿದ್ಯುತ್, ಸಾರಿಗೆ, ಹೋಟೆಲ್ ಆಹಾರ, ಅಗತ್ಯ ವಸ್ತುಗಳು ಸೇರಿದಂತೆ ಎಲ್ಲವೂ ಬೆಲೆ ಏರಿಕೆಯಾಗಿದ್ದವು. ಪ್ರಸ್ತುತ ಯುದ್ಧದ ಕಾರ್ಮೋಡ ಸರಿದಿದ್ದು ಎಲ್ಲವೂ ಸಾಮಾನ್ಯ ಸ್ಥಿತಿಗೆ ಬಂದ ಪರಿಣಾಮ ಕಚ್ಚಾ ತೈಲದ ಬೆಲೆ ಅಂತರಾಷ್ಟ್ರೀಯ ಮಟ್ಟದಲ್ಲಿ ಗಣನೀಯವಾಗಿ ಇಳಿಯುತ್ತಲೇ ಇದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡ ತೈಲಗಳ ಬೆಲೆ ಇಳಿಸಲು ಮನವಿ ಮಾಡಿದ್ದಾರೆ. ಈಗಾಗಲೇ ಬೆಲೆ ಏರಿಕೆಯಿಂದ ಕಂಗೆಟ್ಟಿರುವ ಜನಸಾಮಾನ್ಯರಿಗೆ ಪೆಟ್ರೋಲ್ ಡೀಸೆಲ್ ದರವನ್ನು ಇಳಿಸುವ ಮೂಲಕ ಜನಸಾಮಾನ್ಯರ ಮೇಲಿರುವ ಬೆಲೆಯ ಹೊರೆಯನ್ನು ಇಳಿಸುವ ಮೂಲಕ ಬೆಲೆ ಇಳಿಕೆಯ ಲಾಭವನ್ನು ಜನಸಾಮಾನ್ಯರಿಗೆ ವರ್ಗಾಯಿಸಬೇಕಾಗಿದೆ.

- ಮುರುಗೇಶ ಡಿ., ದಾವಣಗೆರೆ

ರೈತರಿಗೆ ಅನುದಾನ ಹೆಚ್ಚಿಸಿ

ಕರ್ನಾಟಕದಾದ್ಯಂತ ಕೃಷಿ ವಲಯವು ತೀವ್ರ ಅಂತರ್ಜಲ ಕುಸಿತ ಹಾಗೂ ಬೋರ್‌ವೆಲ್ ಬಿಕ್ಕಟ್ಟಿನಿಂದಾಗಿ ತತ್ತರಿಸುತ್ತಿದ್ದು, ಸರಕಾರದ ಸದ್ಯದ ನೀತಿಗಳು ರೈತರ ಸಂಕಷ್ಟಕ್ಕೆ ಪೂರ್ಣ ಪರಿಹಾರ ನೀಡುವಲ್ಲಿ ವಿಫಲವಾಗಿವೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟವು ತೀರಾ ಕೆಳಮಟ್ಟಕ್ಕೆ ತಲುಪಿದ್ದು, ಸರಕಾರ ನೀಡುವ ಸೀಮಿತ ಅನುದಾನವು ಆಳವಾದ ಬೋರ್‌ವೆಲ್ ಕೊರೆಯಲು ಹಾಗೂ ಪಂಪ್‌ಸೆಟ್ ಅಳವಡಿಸಲು ಸಾಕಾಗುತ್ತಿಲ್ಲ. ಈ ಅರೆಬರೆ ನೆರವು ಮತ್ತು ಯೋಜನೆಗಳ ಅನುಷ್ಠಾನದಲ್ಲಿ ಆಗುತ್ತಿರುವ ಆಡಳಿತಾತ್ಮಕ ವಿಳಂಬ ನೀತಿಯಿಂದಾಗಿ ಬಡ ರೈತರು ಅನಿವಾರ್ಯವಾಗಿ ಖಾಸಗಿ ಸಾಲದ ಸುಳಿಗೆ ಸಿಲುಕುವಂತಾಗಿದೆ. ಇಡೀ ರಾಜ್ಯದ ಅನ್ನದಾತರ ಹಿತದೃಷ್ಟಿಯಿಂದ ಬೋರ್‌ವೆಲ್‌ನ ಸಂಪೂರ್ಣ ವೆಚ್ಚವನ್ನು ಸರಕಾರ ತಾನೇ ಭರಿಸಿ ಕೃಷಿ ಕ್ಷೇತ್ರವನ್ನು ಆರ್ಥಿಕ ದುರಂತದಿಂದ ಪಾರು ಮಾಡಬೇಕಾಗಿದೆ.

- ಡಾ.ವಿಜಯಕುಮಾರ್ ಎಚ್.ಕೆ., ರಾಯಚೂರು

ಅನಿವಾಸಿ ಕನ್ನಡಿಗರನ್ನು ತವರು ಮನೆ ಮರೆಯದಿರಲಿ

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಸ್ವಾತಂತ್ರ್ಯಾನಂತರದ ಭಾರತದ ಆರ್ಥಿಕ, ಸಾಮಾಜಿಕ ಮತ್ತು ತಾಂತ್ರಿಕ ವಿಕಾಸದಲ್ಲಿ ಅನಿವಾಸಿ ಭಾರತೀಯರು ಮತ್ತು ಭಾರತದ ಸಾಗರೋತ್ತರ ನಾಗರಿಕರ ಕೊಡುಗೆ ಅಪಾರವಾದುದು. ಜಾಗತಿಕ ಮಟ್ಟದಲ್ಲಿ ನೆಲೆಸಿರುವ ಅನಿವಾಸಿ ಕನ್ನಡಿಗರ ಪಾತ್ರವನ್ನು ಕೇವಲ ತಾಯ್ನಾಡಿಗೆ ಹರಿದುಬರುವ ವಿದೇಶಿ ಹಣದ ರವಾನೆಗೆ ಮಾತ್ರ ಸೀಮಿತಗೊಳಿಸಿ ನೋಡಲು ಸಾಧ್ಯವಿಲ್ಲ. ವಿದೇಶಿ ವಿನಿಮಯ ಮೀಸಲನ್ನು ಹೆಚ್ಚಿಸುವುದರ ಜೊತೆಗೆ ಜ್ಞಾನ, ಸುಧಾರಿತ ತಂತ್ರಜ್ಞಾನ, ಜಾಗತಿಕ ಸಂಪರ್ಕ ಜಾಲ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಸಾಫ್ಟ್ ಪವರ್ ಬಲಪಡಿಸುವಲ್ಲಿ ಅವರ ಕೊಡುಗೆ ಹಿರಿದಾಗಿದೆ. ಒಂದು ಕಾಲದಲ್ಲಿ 'ಪ್ರತಿಭಾ ಪಲಾಯನ' (ಬ್ರೈನ್ ಡ್ರೈನ್) ಎಂದು ಕರೆಯಲ್ಪಡುತ್ತಿದ್ದ ಪ್ರವೃತ್ತಿಯನ್ನು ಇಂದು ತಾಯ್ನಾಡಿನ ಅಭಿವೃದ್ಧಿಗೆ ಪೂರಕವಾದ 'ಪ್ರತಿಭಾ ಕ್ರೋಢೀಕರಣ' (ಬ್ರೈನ್ ಗೇನ್) ಆಗಿ ಪರಿವರ್ತಿಸುವ ಅದ್ಭುತ ಸಾಮರ್ಥ್ಯ ನಮ್ಮ ಅನಿವಾಸಿ ಸಮುದಾಯಕ್ಕಿದೆ.

ರಾಜ್ಯದ ಒಟ್ಟಾರೆ ಆರ್ಥಿಕ ಮತ್ತು ಸಾಮಾಜಿಕ ಸುಸ್ಥಿರತೆಗೆ ಅನಿವಾಸಿ ಕನ್ನಡಿಗರು ನೀಡುತ್ತಿರುವ ಕೊಡುಗೆಗಳು ಅನೂಹ್ಯ. ವಿದೇಶಗಳಿಂದ ಬರುವ ಹಣದ ಹರಿವು ಗ್ರಾಮೀಣ ಭಾಗದ ಖರೀದಿ ಶಕ್ತಿಯನ್ನು ಹೆಚ್ಚಿಸಿ, ಸ್ಥಳೀಯ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ಬಂಡವಾಳವಾಗಿ ಪರಿಣಮಿಸುತ್ತಿದೆ. ರಿಯಲ್ ಎಸ್ಟೇಟ್, ಬ್ಯಾಂಕ್ ಠೇವಣಿಗಳು ಮತ್ತು ನೂತನ ಸ್ಟಾರ್ಟಪ್‌ಗಳಲ್ಲಿ ಇವರು ಹೂಡಿಕೆ ಮಾಡುತ್ತಿದ್ದಾರೆ. ಇದು ಸ್ಥಳೀಯವಾಗಿ ಹೊಸ ಉದ್ಯೋಗಗಳನ್ನು ಸೃಷ್ಟಿಸುವುದಲ್ಲದೆ, ಕರ್ನಾಟಕದ ಉತ್ಪನ್ನಗಳಿಗೆ ಜಾಗತಿಕ ಸಪ್ಲೈ ಚೈನ್ ಮೂಲಕ ಅಂತಾರಾಷ್ಟ್ರೀಯ ಮಾರುಕಟ್ಟೆ ಸಂಪರ್ಕವನ್ನು ಒದಗಿಸುತ್ತಿದೆ.

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ಕೃತಕ ಬುದ್ಧಿಮತ್ತೆಯ (ಎಐ) ಕ್ಷೇತ್ರಗಳಲ್ಲಿ ಜಾಗತಿಕ ತಜ್ಞರೊಂದಿಗೆ ಸಂಪರ್ಕ ಕಲ್ಪಿಸುವಲ್ಲಿ ಅನಿವಾಸಿ ಕನ್ನಡಿಗರು ಮುಂಚೂಣಿಯಲ್ಲಿದ್ದಾರೆ. ಗ್ರಾಮೀಣ ಭಾಗದ ಶಾಲೆಗಳಿಗೆ ದೇಣಿಗೆ, ಡಿಜಿಟಲ್ ತರಗತಿಗಳ ನಿರ್ಮಾಣ, ವಿದ್ಯಾರ್ಥಿವೇತನಗಳು ಹಾಗೂ ವೈದ್ಯಕೀಯ ಶಿಬಿರಗಳು ಮತ್ತು ಆಂಬ್ಯುಲೆನ್ಸ್‌ಗಳ ಒದಗಣೆಯ ಮೂಲಕ ಆರೋಗ್ಯ ಕ್ಷೇತ್ರಕ್ಕೆ ಇವರು ನಿರಂತರ ಬೆಂಬಲ ನೀಡುತ್ತಿದ್ದಾರೆ. ಜೊತೆಗೆ ಕರಾವಳಿ ಸೇರಿದಂತೆ ರಾಜ್ಯದ ಪ್ರವಾಸೋದ್ಯಮದ ಜಾಗತಿಕ ಪ್ರಚಾರಕ್ಕೂ ಇವರೇ ಬ್ರ್ಯಾಂಡ್ ರಾಯಭಾರಿಗಳಾಗಿದ್ದಾರೆ.

ಜಗತ್ತಿನಾದ್ಯಂತ ಇರುವ ಕನ್ನಡ ಕೂಟಗಳ ಮೂಲಕ ಯಕ್ಷಗಾನ, ಜಾನಪದ ಕಲೆಗಳು ಮತ್ತು ಕನ್ನಡ ಭಾಷೆಯ ಪ್ರಚಾರವನ್ನು ಕೈಗೊಳ್ಳುವ ಮೂಲಕ ಜಾಗತಿಕ ಮಟ್ಟದಲ್ಲಿ ನಮ್ಮ ಪರಂಪರೆಯನ್ನು ಜೀವಂತವಾಗಿರಿಸುವ ಸಾಮುದಾಯಿಕ ಪ್ರಜ್ಞೆಯನ್ನು ಇವರು ಪ್ರದರ್ಶಿಸುತ್ತಿದ್ದಾರೆ.

ಬಿಕ್ಕಟ್ಟುಗಳು ಹಾಗೂ ಸವಾಲುಗಳು

ಜಾಗತಿಕ ಮಟ್ಟದಲ್ಲಿ ಕನ್ನಡಿಗರು ಇಷ್ಟೆಲ್ಲಾ ಸಾಧನೆ ಮಾಡುತ್ತಿದ್ದರೂ, ತಳಮಟ್ಟದಲ್ಲಿ ಅವರು ಎದುರಿಸುತ್ತಿರುವ ಸಾಂಸ್ಥಿಕ ಹಾಗೂ ಆಡಳಿತಾತ್ಮಕ ಬಿಕ್ಕಟ್ಟುಗಳು ಅತ್ಯಂತ ಜಟಿಲವಾಗಿವೆ. ನಕಲಿ ನೇಮಕಾತಿ ಸಂಸ್ಥೆಗಳಿಂದ ಉದ್ಯೋಗ ವಂಚನೆಗೆ ಒಳಗಾಗುವುದು, ವೀಸಾ ಮತ್ತು ಪಾಸ್‌ಪೋರ್ಟ್‌ಗಳನ್ನು ವಿದೇಶಿ ಮಾಲೀಕರು ವಶಪಡಿಸಿಕೊಳ್ಳುವುದು ಹಾಗೂ ಸಕಾಲಕ್ಕೆ ವೇತನ ಸಿಗದೆ ಅಸುರಕ್ಷಿತ ಪರಿಸ್ಥಿತಿಯಲ್ಲಿ ದುಡಿಯುವುದು ಗಲ್ಫ್ ರಾಷ್ಟ್ರಗಳಲ್ಲಿರುವ ಸಾಮಾನ್ಯ ಕನ್ನಡಿಗ ಕಾರ್ಮಿಕರ ದೊಡ್ಡ ಸಮಸ್ಯೆಯಾಗಿದೆ. ಕೆಲಸದ ಸ್ಥಳದಲ್ಲಿ ಅಪಘಾತ ಅಥವಾ ಸಾವು ಸಂಭವಿಸಿದಾಗ ವಿಮಾ ಸೌಲಭ್ಯ ಪಡೆಯಲು ತಿಂಗಳುಗಟ್ಟಲೆ ಕಾಯಬೇಕಾಗಿದೆ. ಯುದ್ಧ ಅಥವಾ ಪ್ರಕೃತಿ ವಿಕೋಪದಂತಹ ತುರ್ತು ಸಂದರ್ಭಗಳಲ್ಲಿ ಸುರಕ್ಷಿತವಾಗಿ ಸ್ವದೇಶಕ್ಕೆ ಮರಳಲು ತಕ್ಷಣದ ಸಾಂಸ್ಥಿಕ ವ್ಯವಸ್ಥೆಯ ಕೊರತೆಯಿದೆ. ವಿದೇಶಿ ನೆಲದಲ್ಲಿ ಕನ್ನಡಿಗರು ಕಾನೂನು ಸಂಕಷ್ಟಕ್ಕೆ ಸಿಲುಕಿದಾಗ ಬೇಕಾದ ಆಡಳಿತಾತ್ಮಕ ನೆರವು ಸಿಗುತ್ತಿಲ್ಲ. ಅದೇ ಸಮಯದಲ್ಲಿ, ತಾಯ್ನಾಡಿನಲ್ಲಿರುವ ಅವರ ಸ್ವಂತ ಆಸ್ತಿ ವಿವಾದಗಳು, ಕುಟುಂಬ ಕಲಹಗಳು ಮತ್ತು ವೈವಾಹಿಕ ಸಮಸ್ಯೆಗಳನ್ನು ಬಗೆಹರಿಸಲು ಕಂದಾಯ ಮತ್ತು ಗೃಹ ಇಲಾಖೆಗಳ ನಡುವೆ ಸಮರ್ಪಕ ಸಮನ್ವಯದ ಕೊರತೆಯಿದೆ. ದಾಖಲೆಗಳ ದೃಢೀಕರಣದಲ್ಲಿ ಆಗುವ ವಿಳಂಬ ಮತ್ತು ಹೂಡಿಕೆಗೆ ಏಕಗವಾಕ್ಷಿ ಪದ್ಧತಿಯ ಕೊರತೆಯಿಂದಾಗಿ ಆರ್ಥಿಕ ನಷ್ಟಗಳು ಸಂಭವಿಸುತ್ತಿವೆ.

ಸುದೀರ್ಘ ಕಾಲ ಕುಟುಂಬದಿಂದ ದೂರವಿರುವ ಮಾನಸಿಕ ಒತ್ತಡ ಒಂದೆಡೆಯಾದರೆ, ತಾಯ್ನಾಡಿನಲ್ಲಿರುವ ವೃದ್ಧ ಪೋಷಕರ ಆರೈಕೆಯ ಆತಂಕ ಇವರನ್ನು ಸದಾ ಕಾಡುತ್ತದೆ. ಇವೆಲ್ಲದರ ನಡುವೆ, ಜಾಗತಿಕ ಮಾರುಕಟ್ಟೆಯ ಏರುಪೇರುಗಳಿಂದಾಗಿ ಹಠಾತ್ ಉದ್ಯೋಗ ಕಳೆದುಕೊಂಡು ಕಣ್ಣೀರಿನಲ್ಲಿ ತಾಯ್ನಾಡಿಗೆ ಮರಳುವವರ ಮರು-ಕೌಶಲ್ಯೀಕರಣ ಮತ್ತು ಆರ್ಥಿಕ ಪುನರ್ವಸತಿಗಾಗಿ ರಾಜ್ಯದಲ್ಲಿ ಯಾವುದೇ ಸುಸ್ಥಿರ ಯೋಜನೆಗಳಿಲ್ಲದಿರುವುದು ಅತ್ಯಂತ ಕರುಣಾಜನಕ ಸ್ಥಿತಿಯಾಗಿದೆ.

ಸರಕಾರದ ನೀತಿ ನಿರೂಪಣೆಯಲ್ಲಿ ಅನಿವಾಸಿ ಕನ್ನಡಿಗರ ಸಮಸ್ಯೆಗಳ ಕುರಿತು ಕಾಣಿಸುವ ಆಡಳಿತಾತ್ಮಕ ಉದಾಸೀನತೆ ಮತ್ತು ನಿರಾಸಕ್ತಿ ಅತ್ಯಂತ ಕಳವಳಕಾರಿಯಾಗಿದೆ. ಜಾಗತಿಕ ಹೂಡಿಕೆದಾರರ ಸಮಾವೇಶಗಳು ಅಥವಾ ಪ್ರಮುಖ ಸಾಂಸ್ಕೃತಿಕ ಉತ್ಸವಗಳು ನಡೆದಾಗ ಅನಿವಾಸಿಗಳ ಬಂಡವಾಳವನ್ನು ಆಕರ್ಷಿಸಲು ತೋರುವ ರಾಜಕೀಯ ಉತ್ಸಾಹವು, ಅವರ ದೈನಂದಿನ ಜ್ವಲಂತ ಸಮಸ್ಯೆಗಳಿಗೆ ಸ್ಪಂದಿಸುವಾಗ ಸಂಪೂರ್ಣವಾಗಿ ಮರೆಯಾಗುತ್ತದೆ.

ಸುಧಾರಣಾ ಸೂತ್ರಗಳು

ಅನಿವಾಸಿ ಕನ್ನಡಿಗರ ಒಟ್ಟಾರೆ ಕಲ್ಯಾಣ ಮತ್ತು ರಾಜ್ಯದ ಸುಸ್ಥಿರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಆಡಳಿತ ಯಂತ್ರವು ಕಾಗದದ ಮೇಲಿನ ಯೋಜನೆಗಳಿಂದ ಹೊರಬಂದು ಕೆಲವು ಪ್ರಮುಖ ಸುಧಾರಣೆಗಳನ್ನು ತುರ್ತಾಗಿ ಜಾರಿಗೆ ತರಬೇಕಾಗಿದೆ. ಬೇರೆ ರಾಜ್ಯಗಳನ್ನು ನೋಡುವುದಾದರೆ ಕೇರಳದ 'ನೋರ್ಕಾ-ರೂಟ್ಸ್' ಸಂಸ್ಥೆಯು ಮರಳುವ ವಲಸಿಗರ ಆರ್ಥಿಕ ಪುನರ್ವಸತಿ ಹಾಗೂ ತುರ್ತು ಧನಸಹಾಯಕ್ಕೆ ಅತ್ಯುತ್ತಮ ಮಾದರಿಯಾಗಿದ್ದರೆ, ತಮಿಳುನಾಡು ಸರ್ಕಾರವು ತನ್ನ ಅನಿವಾಸಿ ಕಾರ್ಮಿಕರಿಗೆ ಉಚಿತ ವಿಮೆ ಮತ್ತು ಅಂತರರಾಷ್ಟ್ರೀಯ ಕಾನೂನು ನೆರವನ್ನು ಒದಗಿಸುತ್ತಿದೆ. ಹಾಗೆಯೇ, ಪಂಜಾಬ್ ರಾಜ್ಯವು ಅನಿವಾಸಿಗಳ ಸ್ವದೇಶಿ ಆಸ್ತಿ ವಿವಾದಗಳ ಶೀಘ್ರ ವಿಲೇವಾರಿಗಾಗಿ ಪ್ರತ್ಯೇಕ ವಿಶೇಷ ನ್ಯಾಯಾಲಯಗಳ ವಿಶಿಷ್ಟ ವ್ಯವಸ್ಥೆಯನ್ನೇ ರೂಪಿಸಿದೆ. ಕರ್ನಾಟಕವು ಈ ಎಲ್ಲಾ ಯಶಸ್ವಿ ರಾಜ್ಯಗಳ ಉತ್ತಮ ಆಡಳಿತಾತ್ಮಕ ಅಂಶಗಳನ್ನು ಸಮೀಕರಿಸಿ ತನ್ನದೇ ಆದ 'ಜಾಗತಿಕ ಕನ್ನಡ ವ್ಯವಹಾರಗಳ ಪ್ರಾಧಿಕಾರ'ವನ್ನು ರೂಪಿಸುವುದು ಇಂದಿನ ತುರ್ತು ಅಗತ್ಯವಾಗಿದೆ.

ಮೊದಲನೆಯದಾಗಿ, ರಾಜ್ಯದ ನೀತಿ ನಿರೂಪಣೆಗೆ ಬಲಿಷ್ಠ ಬುನಾದಿ ಹಾಕಲು ಪ್ರತ್ಯೇಕ ಅನಿವಾಸಿ ಕನ್ನಡಿಗರ ಸಚಿವಾಲಯಕ್ಕೆ ಸಂಪೂರ್ಣ ಕಾನೂನುಬದ್ಧ ಮತ್ತು ಸಾಂಸ್ಥಿಕ ಅಧಿಕಾರವನ್ನು ನೀಡಬೇಕಾಗಿದೆ. ಇದರ ಅಡಿಯಲ್ಲಿ ಸ್ವತಂತ್ರವಾಗಿ ತಕ್ಷಣದ ನಿರ್ಧಾರಗಳನ್ನು ಕೈಗೊಳ್ಳುವ ಶಕ್ತಿಯುಳ್ಳ 'ಕರ್ನಾಟಕ ಅನಿವಾಸಿ ಭಾರತೀಯ ಪ್ರಾಧಿಕಾರ'ವನ್ನು ಸ್ಥಾಪಿಸುವುದು ಅತ್ಯಂತ ನಿರ್ಣಾಯಕ ಹೆಜ್ಜೆಯಾಗಬಲ್ಲದು. ಯಾವುದೇ ಕಲ್ಯಾಣ ನೀತಿಯು ಯಶಸ್ವಿಯಾಗಬೇಕಾದರೆ ಜಗತ್ತಿನಾದ್ಯಂತ ಇರುವ ಕನ್ನಡಿಗರ ನಿಖರ ಸಂಖ್ಯೆ ಮತ್ತು ಮಾಹಿತಿಯುಳ್ಳ 'ಸಮಗ್ರ ಜಾಗತಿಕ ಕನ್ನಡ ದತ್ತಾಂಶ ನೋಂದಣಿ' ವ್ಯವಸ್ಥೆಯನ್ನು ಆದ್ಯತೆಯ ಮೇರೆಗೆ ಸಿದ್ಧಪಡಿಸಬೇಕಿದೆ. ಇದರೊಂದಿಗೆ, ಅನಿವಾಸಿಗಳು ಮತ್ತು ಸರ್ಕಾರದ ನಡುವೆ ನೇರ ಮುಖಾಮುಖಿ ಸಂವಾದಕ್ಕೆ ಅವಕಾಶ ಕಲ್ಪಿಸಲು ಪ್ರತಿ ವರ್ಷ ವಾರ್ಷಿಕ ಜಾಗತಿಕ ಕನ್ನಡ ಸಮ್ಮೇಳನಗಳನ್ನು ನಿರಂತರವಾಗಿ ಆಯೋಜಿಸುವುದು ಅತ್ಯಗತ್ಯವಾಗಿದೆ.

ಎರಡನೆಯದಾಗಿ, ಅನಿವಾಸಿಗಳು ತಮ್ಮ ದೂರುಗಳು ಮತ್ತು ಆಡಳಿತಾತ್ಮಕ ಕೆಲಸಗಳಿಗಾಗಿ ರಾಜಧಾನಿ ಬೆಂಗಳೂರಿಗೇ ಅಲೆಯುವುದನ್ನು ತಪ್ಪಿಸಲು ಜಿಲ್ಲಾ ಮಟ್ಟದಲ್ಲೇ ಪ್ರತ್ಯೇಕ ಅನಿವಾಸಿ ಸಹಾಯ ಕೇಂದ್ರಗಳನ್ನು ತಕ್ಷಣ ಆರಂಭಿಸಬೇಕಾಗಿದೆ. ಈ ಕೇಂದ್ರಗಳ ಸುಗಮ ನಿರ್ವಹಣೆಗೆ ಮತ್ತು ಸ್ಥಳೀಯ ಸಮಸ್ಯೆಗಳ ಶೀಘ್ರ ವಿಲೇವಾರಿಗಾಗಿ ಜಿಲ್ಲಾವಾರು ಜಾಗತಿಕ ಕನ್ನಡ ಸಲಹಾ ಮಂಡಳಿಗಳನ್ನು ರಚಿಸುವುದು ಸೂಕ್ತ. ಜಾಗತಿಕವಾಗಿ ವಿವಿಧ ಕಾಲ ವಲಯಗಳಲ್ಲಿ ಸಂಕಷ್ಟಕ್ಕೆ ಸಿಲುಕುವ ಕನ್ನಡಿಗರಿಗಾಗಿ ಇಪ್ಪತ್ತನಾಲ್ಕು ಗಂಟೆಗಳ ಕಾಲ ನಿರಂತರವಾಗಿ ಕಾರ್ಯನಿರ್ವಹಿಸುವ ಜಾಗತಿಕ ಸಹಾಯವಾಣಿ ಮತ್ತು ಮೊಬೈಲ್ ಮೂಲಕವೇ ದೂರುಗಳನ್ನು ದಾಖಲಿಸಿ ಪರಿಹಾರದ ಸ್ಥಿತಿಗತಿಯನ್ನು ತಿಳಿಯಲು ಪ್ರತ್ಯೇಕ ಮೊಬೈಲ್ ಆಪ್ ವ್ಯವಸ್ಥೆಯನ್ನು ತರಬೇಕಾಗಿದೆ. ಇವೆಲ್ಲವನ್ನೂ ಒಂದೇ ಸೂರಿನಡಿ ತರಲು ಸುಧಾರಿತ 'ಜಾಗತಿಕ ಕನ್ನಡ ಡಿಜಿಟಲ್ ಪೋರ್ಟಲ್' ಬಲಿಷ್ಠ ಸಾಂಸ್ಥಿಕ ಕೊಂಡಿಯಾಗಿ ಕೆಲಸ ಮಾಡಬಲ್ಲದು.

ಮೂರನೆಯದಾಗಿ, ರಾಜ್ಯದ ಆರ್ಥಿಕತೆಗೆ ಅನಿವಾಸಿಗಳ ಕೊಡುಗೆಯನ್ನು ದ್ವಿಗುಣಗೊಳಿಸಲು ಕೈಗಾರಿಕಾ ಮತ್ತು ವಾಣಿಜ್ಯ ಹೂಡಿಕೆಗಳಿಗೆ ತಕ್ಷಣ ಅನುಮೋದನೆ ನೀಡುವ ದಕ್ಷ 'ಏಕಗವಾಕ್ಷಿ ಹೂಡಿಕೆ ಕೋಶ'ವನ್ನು ಕಡ್ಡಾಯವಾಗಿ ಸೃಷ್ಟಿಸಬೇಕಾಗಿದೆ. ಬೃಹತ್ ಮೂಲಸೌಕರ್ಯ ಯೋಜನೆಗಳಲ್ಲಿ ಜಾಗತಿಕ ಕನ್ನಡಿಗರ ಪಾಲುದಾರಿಕೆಯನ್ನು ಖಚಿತಪಡಿಸಿಕೊಳ್ಳಲು 'ಜಾಗತಿಕ ಕನ್ನಡ ಹೂಡಿಕೆ ಮಂಡಳಿ'ಯನ್ನು ರಚಿಸುವುದರ ಜೊತೆಗೆ, ಸ್ಥಳೀಯ ವೈವಿಧ್ಯಮಯ ಆವಿಷ್ಕಾರಗಳಿಗೆ ಅನಿವಾಸಿಗಳಿಂದ ಬಂಡವಾಳ ಕ್ರೋಢೀಕರಿಸಲು ಪ್ರತ್ಯೇಕ 'ಅನಿವಾಸಿ ಸ್ಟಾರ್ಟಪ್ ನಿಧಿ'ಯನ್ನು ಸ್ಥಾಪಿಸುವುದು ಇಂದಿನ ತುರ್ತು ಅಗತ್ಯವಾಗಿದೆ. ಇದು ಕೇವಲ ಹಣಕಾಸಿನ ಹೂಡಿಕೆಯಾಗಿ ಉಳಿಯದೆ, ನಮ್ಮ ಸ್ಥಳೀಯ ಯುವ ಉದ್ಯಮಿಗಳಿಗೆ ಅಂತರರಾಷ್ಟ್ರೀಯ ಮಟ್ಟದ ವ್ಯವಹಾರಿಕ ಮಾರ್ಗದರ್ಶನ ನೀಡಲು 'ಜಾಗತಿಕ ಮಾರ್ಗದರ್ಶನ ಕಾರ್ಯಕ್ರಮ' ಮತ್ತು ನವೀನ ಕೌಶಲ್ಯ ವರ್ಗಾವಣೆಗೆ ದಾರಿ ಮಾಡಿಕೊಡುತ್ತದೆ.

ಕೊನೆಯದಾಗಿ, ಅನಿವಾಸಿಗಳ ಸಾಮಾಜಿಕ ಭದ್ರತೆ ಮತ್ತು ವೈಯಕ್ತಿಕ ರಕ್ಷಣೆಗೆ ಗರಿಷ್ಠ ಆದ್ಯತೆ ನೀಡಬೇಕಾಗಿದೆ. ಅವರ ಆಸ್ತಿ ಮತ್ತು ವಾಣಿಜ್ಯ ವಿವಾದಗಳ ಶೀಘ್ರ ವಿಲೇವಾರಿಗಾಗಿ ತಜ್ಞ ವಕೀಲರನ್ನೊಳಗೊಂಡ 'ಕಾನೂನು ಸಹಾಯ ಕೋಶ' ಮತ್ತು ವಿದೇಶಗಳಲ್ಲಿ ಅಪಘಾತ ಅಥವಾ ಸಾವು ಸಂಭವಿಸಿದಾಗ ಆರ್ಥಿಕ ನೆರವು ನೀಡಲು 'ತುರ್ತು ಪರಿಹಾರ ನಿಧಿ'ಯನ್ನು ಬಲಪಡಿಸಬೇಕಿದೆ. ಕೆಲಸ ಕಳೆದುಕೊಂಡು ಮರಳುವ ವಲಸಿಗರ ಮರು-ಕೌಶಲ್ಯೀಕರಣಕ್ಕಾಗಿ 'ವಲಸಿಗರ ಪುನರ್ವಸತಿ ಮಿಷನ್' ಮತ್ತು ಅವರ ತಾಂತ್ರಿಕ ಜ್ಞಾನವನ್ನು ಸ್ಥಳೀಯ ಯುವಕರಿಗೆ ತಲುಪಿಸಲು 'ಜಾಗತಿಕ ಕನ್ನಡ ಕೌಶಲ್ಯ ಜಾಲ'ವನ್ನು ರೂಪಿಸಬೇಕಾಗಿದೆ. ಇದಲ್ಲದೆ, ಅನಿವಾಸಿಗಳ ಮಕ್ಕಳ ಉನ್ನತ ಶಿಕ್ಷಣದ ಪ್ರವೇಶಾತಿಗಾಗಿ ಪ್ರತ್ಯೇಕ 'ಶಿಕ್ಷಣ ಮತ್ತು ವಿದ್ಯಾರ್ಥಿವೇತನ ಕೋಶ' ಹಾಗೂ ತಾಯ್ನಾಡಿನಲ್ಲಿರುವ ಅವರ ವೃದ್ಧ ಪೋಷಕರ ಆರೋಗ್ಯ ರಕ್ಷಣೆಗಾಗಿ 'ಆರೋಗ್ಯ ಬೆಂಬಲ ಕೋಶ'ಗಳನ್ನು ಸ್ಥಾಪಿಸುವುದು ಸರಕಾರದ ಹೊಣೆಗಾರಿಕೆಯಾಗಿದೆ. ಈ ಎಲ್ಲಾ ಸೌಲಭ್ಯಗಳು ಮತ್ತು ರಾಜ್ಯದ ಪ್ರಮುಖ ಸೇವೆಗಳಲ್ಲಿ ಸೂಕ್ತ ಆದ್ಯತೆ ಹಾಗೂ ರಿಯಾಯಿತಿಗಳನ್ನು ಒದಗಿಸಲು ಪ್ರತಿ ಪ್ರಜೆಗೆ ಅಧಿಕೃತ 'ಪ್ರವಾಸಿ ಕನ್ನಡ ಕಾರ್ಡ್' ವಿತರಿಸುವ ಮೂಲಕ ಇಡೀ ವ್ಯವಸ್ಥೆಗೆ ಸುಸ್ಥಿರ ಚೌಕಟ್ಟನ್ನು ನೀಡಬಹುದಾಗಿದೆ.

ಕರ್ನಾಟಕದ ಸಮಗ್ರ ಪ್ರಗತಿಯ ದೃಷ್ಟಿಯಿಂದ, ಅನಿವಾಸಿ ಕನ್ನಡಿಗರನ್ನು ಕೇವಲ ವಿದೇಶದಲ್ಲಿ ನೆಲೆಸಿರುವ ಸಾಮಾನ್ಯ ನಾಗರಿಕರಾಗಿ ನೋಡುವ ಹಳೆಯ ಸಂಕುಚಿತ ದೃಷ್ಟಿಕೋನವನ್ನು ಆಡಳಿತ ಯಂತ್ರವು ಬದಲಾಯಿಸ ಬೇಕಿದೆ. ಅವರನ್ನು 'ತಾಯ್ನಾಡಿನ ಪರಮೋಚ್ಚ ಜಾಗತಿಕ ಅಭಿವೃದ್ಧಿ ಪಾಲುದಾರರು' ಎಂದು ಪರಿಗಣಿಸುವ ಹೊಸ ನೀತಿ ಪರಿಣಾಮಕಾರಿಯಾಗುತ್ತದೆ. ಅವರ ಬಳಿ ಇರುವ ಬೃಹತ್ ಬಂಡವಾಳ, ತಾಂತ್ರಿಕ ಪರಿಣತಿ, ಜಾಗತಿಕ ಸಂಪರ್ಕ ಜಾಲ ಮತ್ತು ಬದ್ಧತೆಯನ್ನು ರಾಜ್ಯದ ಪ್ರಮುಖ ವಲಯಗಳಾದ ಶಿಕ್ಷಣ, ಆರೋಗ್ಯ, ಕೃಷಿ, ಪ್ರವಾಸೋದ್ಯಮ, ಮೀನುಗಾರಿಕೆ, ನೂತನ ಉದ್ಯಮಗಳು ಹಾಗೂ ಗ್ರಾಮೀಣ ಅಭಿವೃದ್ಧಿಯೊಂದಿಗೆ ಜೋಡಿಸಿದರೆ, ಕರ್ನಾಟಕದ ಸುಸ್ಥಿರ ವಿಕಾಸಕ್ಕೆ ವೇಗ ದೊರೆಯುವುದರಲ್ಲಿ ಸಂಶಯವಿಲ್ಲ.

ಆದರೆ, ಇಂತಹ ಸುವರ್ಣ ಅವಕಾಶಗಳನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಪ್ರಸ್ತುತ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರತ್ಯೇಕ ಅನಿವಾಸಿ ಸಚಿವಾಲಯ ಮತ್ತು ಕಾರ್ಯದರ್ಶಿ ಕಚೇರಿಯನ್ನು ಸ್ಥಾಪಿಸಲು ಯೋಜನೆ ರೂಪಿಸುತ್ತಿರುವುದು ಮೇಲ್ನೋಟಕ್ಕೆ ಆಶಾದಾಯಕ ಹೆಜ್ಜೆಯಾಗಿ ಕಂಡರೂ, ಅದರ ಆಂತರಿಕ ಕಾರ್ಯವಿಧಾನ ಮಾತ್ರ ತೀವ್ರ ನಿರಾಶೆ ಮೂಡಿಸಿದೆ. ಈ ಇಡೀ ಪ್ರಕ್ರಿಯೆಯಲ್ಲಿ ವಿದೇಶಗಳಲ್ಲಿ ದಶಕಗಳಿಂದ ಶ್ರಮಿಸುತ್ತಿರುವ ನೈಜ ಪಾಲುದಾರರನ್ನು, ಗಲ್ಫ್ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರಮುಖ ಕನ್ನಡ ಸಂಘಟನೆಗಳನ್ನು ಅಥವಾ ತಳಮಟ್ಟದ ಹಿತರಕ್ಷಕರನ್ನು ಸರಕಾರ ಎಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿಲ್ಲವೆಂಬ ಅಳುವು ಅನಿವಾಸಿ ಕನ್ನಡಿಗರದ್ದಾಗಿದೆ. ಯಾವುದೇ ಪ್ರಾಯೋಗಿಕ ಕಾರ್ಯವಿಧಾನಗಳು ಮತ್ತು ವಾಸ್ತವಿಕ ಕ್ರಮಗಳನ್ನು ಅಳವಡಿಸಿಕೊಳ್ಳದೆ ಕೇವಲ ಆತುರದ ಪ್ರಕಟಣೆಗಳನ್ನು ಹೊರಡಿಸುತ್ತಿರುವುದು ಈ ಐತಿಹಾಸಿಕ ನಿರ್ಧಾರವು ಕೇವಲ ರಾಜಕೀಯ ತೋರಿಕೆಯ ಪ್ರದರ್ಶನ ಹಾಗೂ ಕೇವಲ ಫೋಟೋ ಆಪ್‌ಗೆ ಸೀಮಿತವಾಗುತ್ತಿದೆಯೇ ಎಂಬ ಬಲವಾದ ಅನುಮಾನವನ್ನು ಹುಟ್ಟುಹಾಕಿದೆ. ಈ ಧೋರಣೆ ಸುಧಾರಿಸದಿದ್ದರೆ ಜಾಗತಿಕ ಕನ್ನಡಿಗರ ತಾಯ್ನಾಡಿನ ಕನಸುಗಳು ಸಂಪೂರ್ಣವಾಗಿ ಮರೀಚಿಕೆಯಾಗಲಿವೆ.

ಪ್ರತಿಕ್ರಿಯೆ
ವಿನಯ ಶಿರಹಟ್ಟಿಮಠ

ಪ್ರಬುದ್ಧ ಮುಖಾಮುಖಿಯ ಅಪೇಕ್ಷೆ

(ನಿನ್ನೆಯ ಸಂಚಿಕೆಯಿಂದ)

ಬೌದ್ಧಿಕ ಚರ್ಚೆಗಳ ಮೂಲಭೂತ ನಿಯಮವೆಂದರೆ, ವಿಚಾರಗಳನ್ನು ವಿಚಾರಗಳಿಂದಲೇ ಎದುರಿಸುವುದು. ಆದರೆ, ರವಿ ಹಂಜ್ ಅವರ ಲೇಖನವು ಈ ಪ್ರಜಾಸತ್ತಾತ್ಮಕ ಚರ್ಚೆಯ ಮಿತಿಯನ್ನು ಮೀರಿ, ವೈಯಕ್ತಿಕ ನಿಂದನೆಯ ಮಟ್ಟಕ್ಕೆ ಇಳಿದಿರುವುದು ಅತ್ಯಂತ ವಿಷಾದನೀಯ. ಸಿದ್ಧರಾಮ ಬೆಲ್ದಾಳ ಅವರಂತಹ ದೀರ್ಘಕಾಲದ ಅಧ್ಯಯನಶೀಲ ಚಿಂತಕರ ವಿಚಾರಗಳನ್ನು ಒಪ್ಪದಿರಲು ಯಾರಿಗಾದರೂ ಹಕ್ಕಿದೆ; ಆದರೆ, ಅವರ ಶೈಕ್ಷಣಿಕ ಅರ್ಹತೆಗಳನ್ನು, ಅವರು ಓದಿದ ಗ್ರಂಥಗಳನ್ನು ಮತ್ತು ಅವರ ಬದ್ಧತೆಯನ್ನು ವ್ಯಂಗ್ಯವಾಡುವುದು ಅಸಹಿಷ್ಣುತೆಯ ಪರಮಾವಧಿಯಾಗಿದೆ. ನಾಡಿನ ಅಗ್ರಗಣ್ಯ ಪತ್ರಿಕೆಗಳ ಪುಟವನ್ನು ಅಲಂಕರಿಸುವಂತಹ ಗಂಭೀರ ಸಂಶೋಧನಾತ್ಮಕ ಬರಹಗಳು ಇಂತಹ ಅಗ್ಗದ ವ್ಯಕ್ತಿನಿಂದನೆಯಿಂದ ಬಹುದೂರವಿರಬೇಕು.

ಬೆಲ್ದಾಳ ಶರಣರಿಗೆ ಗುಲ್ಬರ್ಗ ವಿಶ್ವವಿದ್ಯಾಲಯ ನೀಡಿದ ಗೌರವ ಡಾಕ್ಟರೇಟ್ ಮತ್ತು ಕರ್ನಾಟಕ ಸರಕಾರ ಅನುಭವ ಮಂಟಪದಂತಹ ಬೃಹತ್ ಯೋಜನೆಗಳಲ್ಲಿ ಅವರಿಗೆ ನೀಡಿದ ಜವಾಬ್ದಾರಿಯನ್ನು ಲೇಖಕರು ಲೇವಡಿ ಮಾಡಿದ್ದಾರೆ. ಕೇವಲ ತಮಗೆ ಒಪ್ಪಿಗೆಯಾಗದ ಒಂದೇ ಒಂದು ಐತಿಹಾಸಿಕ ವ್ಯಾಖ್ಯಾನವನ್ನು ಮುಂದಿಟ್ಟುಕೊಂಡು, ನಮ್ಮ ನಾಡಿನ ಘನತೆವೆತ್ತ ವಿಶ್ವವಿದ್ಯಾಲಯಗಳ ಮೌಲ್ಯಮಾಪನ ಪ್ರಕ್ರಿಯೆಯನ್ನೇ ಕೀಳಾಗಿ ಕಾಣುವುದು ಎಷ್ಟರಮಟ್ಟಿಗೆ ಸರಿ? ಸರಕಾರ ಮತ್ತು ವಿಶ್ವವಿದ್ಯಾಲಯಗಳು ಕೇವಲ ಒಂದು ಲೇಖನವನ್ನೋ, ಒಂದು ಭಾಷಣವನ್ನೋ ನೋಡಿ ಪ್ರಶಸ್ತಿಗಳನ್ನು ನೀಡುವುದಿಲ್ಲ; ಅದರ ಹಿಂದೆ ದಶಕಗಳ ಕಾಲದ ಸೇವೆ, ಸಮಾಜಮುಖಿ ಚಿಂತನೆ ಮತ್ತು ಸಮಗ್ರ ಸಾಧನೆಯ ಮೌಲ್ಯಮಾಪನವಿರುತ್ತದೆ. ತಮ್ಮ ಸೈದ್ಧಾಂತಿಕ ನಿಲುವಿಗೆ ವಿರುದ್ಧವಾಗಿರುವ ಕಾರಣಕ್ಕಾಗಿ ಇಡೀ ಸಾಂಸ್ಥಿಕ ವ್ಯವಸ್ಥೆಯನ್ನೇ 'ಗಾಂಪ ಸಮಾಜ' ಎಂದು ಹೀಯಾಳಿಸುವುದು ಸರ್ವಾಧಿಕಾರಿ ಮನಸ್ಥಿತಿಯನ್ನು ತೋರುತ್ತದೆಯೇ ಹೊರತು, ಪ್ರಬುದ್ಧತೆಯನ್ನಲ್ಲ.

ಭಿನ್ನಾಭಿಪ್ರಾಯಗಳು ಚರ್ಚೆಯ ಮೂಲಕ ಪರಿಹಾರವಾಗಬೇಕೇ ವಿನಃ ಅಹಂಕಾರದ ತೀರ್ಪುಗಳಿಂದಲ್ಲ. ಇತಿಹಾಸದ ವ್ಯಾಖ್ಯಾನಗಳ ಬಗ್ಗೆ ಭಿನ್ನಮತವಿದ್ದರೆ, ಪ್ರಬಲವಾದ ಶಾಸನಗಳು, ಗ್ರಂಥಗಳು ಅಥವಾ ಐತಿಹಾಸಿಕ ದಾಖಲೆಗಳನ್ನು ಮುಂದಿಟ್ಟು ವಾದಿಸಬೇಕು. ಅದನ್ನು ಬಿಟ್ಟು, ಅವರ ಜ್ಞಾನದ ಹಿನ್ನೆಲೆ ಏನು? ಎಂದು ವ್ಯಕ್ತಿಯನ್ನೇ ಕಟಕಟೆಯಲ್ಲಿ ನಿಲ್ಲಿಸುವುದು, ತಾವು ಮಾತ್ರ ಎಲ್ಲವನ್ನೂ ಬಲ್ಲ ಅಸಾಮಾನ್ಯರು ಎಂಬ ಭ್ರಮೆಯ ದ್ಯೋತಕವಾಗಿದೆ. ಬಸವಣ್ಣನವರ ಹೆಸರನ್ನು ಹೇಳುತ್ತಲೇ, ಅವರ ಮೂಲಭೂತ ಆಶಯವಾದ 'ಸಹಿಷ್ಣುತೆ ಮತ್ತು ಬಹುತ್ವ'ವನ್ನು ಗಾಳಿಗೆ ತೂರಿರುವ ಈ ಬರವಣಿಗೆಯ ಶೈಲಿಯು, ಅಂತಿಮವಾಗಿ ಲೇಖಕರದ್ದೇ ಆದ ತಾಳ್ಮೆಯ ಕೊರತೆಯನ್ನು ಜಗಜ್ಜಾಹೀರು ಮಾಡಿದೆ.

ಸತ್ಯಶೋಧದ ನಿರ್ಭೀತ ಹೆಜ್ಜೆ

ಇತಿಹಾಸವನ್ನು ಇತಿಹಾಸವಾಗಿ ನೋಡುವುದು ಹಾಗೂ ಅದನ್ನು ಗ್ರಹಿಸುವುದು ಒಂದು ಅಪ್ಪಟ ಬೌದ್ಧಿಕ ಪ್ರಬುದ್ಧತೆ. ಗತಕಾಲದ ಘಟನೆಗಳನ್ನು, ಭಾಷಿಕ ಪಲ್ಲಟಗಳನ್ನು ಮತ್ತು ಪದಗಳ ಮೂಲವನ್ನು ನಾವು ಇಂದಿನ ನಮ್ಮ ಭಾವನಾತ್ಮಕ ಚೌಕಟ್ಟಿಗೆ ಸಿಲುಕಿಸಿ ವೈಭವೀಕರಿಸುವುದು ಅಥವಾ ತಿರುಚುವುದು ಆರೋಗ್ಯಕರ ಸಮಾಜದ ಲಕ್ಷಣವಲ್ಲ. 'ಹಿಂದೂ' ಎಂಬ ಪದದ ಭೌಗೋಳಿಕ ಉಗಮವಾಗಲೀ, ಅರಬ್ ಮತ್ತು ಪರ್ಷಿಯನ್ ನಿಘಂಟುಗಳಲ್ಲಿ ದಾಖಲಾಗಿರುವ ಆ ಪದದ ಹಿಂದಿನ ಕರಾಳ ಐತಿಹಾಸಿಕ ಹಿನ್ನೆಲೆಯಾಗಲೀ, ನಮ್ಮ ನೆಲದ ನಿಜವಾದ ದಾರ್ಶನಿಕ ಮೌಲ್ಯಗಳನ್ನು ಎಂದಿಗೂ ಅಳಿಸಿಹಾಕುವುದಿಲ್ಲ. ಆದರೆ, ಆ ಚಾರಿತ್ರಿಕ ಸತ್ಯಗಳನ್ನು ಮುಕ್ತ ಮನಸ್ಸಿನಿಂದ ಒಪ್ಪಿಕೊಳ್ಳಲು ನಿರಾಕರಿಸಿ, ವಾಸ್ತವವನ್ನು ತೆರೆದಿಡುವವರನ್ನು 'ಗಾಂಪರು' ಎಂದು ನಿಂದಿಸಿ ಬಾಯಿ ಮುಚ್ಚಿಸುವ ಪ್ರಯತ್ನವು ಕೇವಲ ಬೌದ್ಧಿಕ ಅಸುರಕ್ಷಿತತೆಯನ್ನು ಪ್ರದರ್ಶಿಸುತ್ತದೆಯೇ ವಿನಃ ಅಸ್ಮಿತೆಯನ್ನಲ್ಲ.

ಸಮಾಜದ ದಿಕ್ಕು ತಪ್ಪಿಸುವ ಭಾವುಕ ಬರಹಗಳಿಗೆ ಪ್ರತಿಯಾಗಿ, ವಿಷಯದ ಬೇರುಗಳನ್ನು ಜಾಲಾಡುವ ಆಳವಾದ ಸಂಶೋಧನಾಧಾರಿತ ಲೇಖನಗಳು ಪತ್ರಿಕೆಗಳಲ್ಲಿ ರಾರಾಜಿಸಬೇಕಾದ ತುರ್ತು ಇಂದಿದೆ. ನಾವು ಬೆಳೆಸಿಕೊಳ್ಳಬೇಕಿರುವುದು ಕಣ್ಣುಮುಚ್ಚಿ ನಂಬುವ ಮೌಢ್ಯವನ್ನಲ್ಲ, ಬದಲಾಗಿ ಬಸವಣ್ಣನವರು ತಮ್ಮ ವಚನಗಳಲ್ಲಿ ಪ್ರತಿಪಾದಿಸಿದಂತೆ, ಪ್ರತಿಯೊಂದನ್ನೂ ಪರಾಮರ್ಶಿಸುವ ಮತ್ತು ಸತ್ಯವನ್ನು ಹೆಕ್ಕಿ ತೆಗೆಯುವ 'ಕರಣಹಸುಗೆ'ಯ ಮಾರ್ಗವನ್ನು. ಇತಿಹಾಸದ ಪುಟಗಳಲ್ಲಿನ ಕಟುಸತ್ಯಗಳನ್ನು ಇರುವಂತೆಯೇ, ಯಾವುದೇ ರಕ್ಷಣಾತ್ಮಕ ಮುಚ್ಚುಮರೆಯಿಲ್ಲದೆ ಸ್ವೀಕರಿಸುವ ವಿಶಾಲ ಮನೋಭಾವ ನಮ್ಮದಾಗಬೇಕು. ಆಗ ಮಾತ್ರ ಸಿದ್ಧರಾಮ ಬೆಲ್ದಾಳ ಅವರಂತಹ ದಶಕಗಳ ಕಾಲ ಅಧ್ಯಯನ ನಡೆಸಿದ ವಿಚಾರವಾದಿಗಳು, ಸಂಶೋಧಕರು ಎತ್ತುವ ಸೂಕ್ಷ್ಮ ಪ್ರಶ್ನೆಗಳಿಗೆ ನಾವು ಸಕಾರಣವಾಗಿ, ಪ್ರಬುದ್ಧವಾಗಿ ಮುಖಾಮುಖಿಯಾಗಲು ಸಾಧ್ಯ. ಸತ್ಯವನ್ನು ಅರಸುವ ಈ ವೈಚಾರಿಕ ಹಾದಿಯಲ್ಲಿ ನಮ್ಮ ಹೆಜ್ಜೆಗಳು ಯಾವುದೇ ಅಂಜಿಕೆಯಿಲ್ಲದೆ, ವ್ಯಕ್ತಿನಿಂದನೆಯ ಕಲ್ಮಶವಿಲ್ಲದೆ, ಕೇವಲ ನಿಷ್ಠುರ ಸತ್ಯದ ಬೆಳಕಿನಲ್ಲಿ ದಿಟ್ಟವಾಗಿ ಮುನ್ನಡೆಯಬೇಕಿದೆ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:11, Issue:167

ಸಮಾಚಾರ ಸಣ್ಣದಲ್ಲ

6ಕ್ಕೆ ರಾಮ ಮಂದಿರ ಟ್ರಸ್ಟ್ ಮಹತ್ವದ ಸಭೆ

ಅಯೋಧ್ಯೆ: ಉತ್ತರ ಪ್ರದೇಶದ ಅಯೋಧ್ಯೆಯಲ್ಲಿನ ಶ್ರೀರಾಮ ಮಂದಿರದ ದೇಣಿಗೆ ಲೂಟಿ ಪ್ರಕರಣ ಹಿನ್ನೆಲೆ ಶ್ರೀ ರಾಮಮಂದಿರ ಟ್ರಸ್ಟ್ ಜು.6ರಂದು ಮಹತ್ವದ ಸಭೆ ಕರೆದಿದೆ. ಈ ಮೊದಲು ಜು.11ಕ್ಕೆ ನಿಗದಿಯಾಗಿದ್ದ ಸಭೆಯನ್ನು ಪರಿಸ್ಥಿತಿ ಗಂಭೀರವಾಗಿರುವ ಹಿನ್ನೆಲೆಯಲ್ಲಿ 5 ದಿನ ಮುಂಚಿತವಾಗಿಯೇ ಕರೆಯಲಾಗಿದೆ. ಟ್ರಸ್ಟ್‌ನ ಪ್ರಮುಖ ಸದಸ್ಯರೆಲ್ಲರು ಹಾಜರಾಗುವ ನಿರೀಕ್ಷೆ ಇದೆ. ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿಯಾಗಿದ್ದ ಚಂಪತ್ ರಾಯ್ ಮತ್ತು ಟ್ರಸ್ಟಿ ಅನಿಲ್ ಮಿಶ್ರಾ ದೇಣಿಗೆ ಲೂಟಿ ಹಿನ್ನೆಲೆ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದು, ಇನ್ನೂ ಅಂಗೀಕಾರವಾಗಿಲ್ಲ, ಮೂಲಗಳ ಪ್ರಕಾರ, ಇವರಿಬ್ಬರ ರಾಜೀನಾಮೆ ಅಂಗೀಕರಿಸುವ ಬಗ್ಗೆ ಮತ್ತು ಟ್ರಸ್ಟ್‌ನ ಪುನರ್‌ರಚನೆ ಸಂಬಂಧ ಈ ಸಭೆಯಲ್ಲಿ ಪ್ರಮುಖ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ. 3 ಹೊಸ ಸದಸ್ಯರ ಪ್ರವೇಶದ ಬಗೆಗೂ ಚರ್ಚೆಯಾಗಲಿದೆ.

ಡಿಜಿಟಲ್ ಲೋಕದಲ್ಲಿ ಭಾರತದ ದಾಪುಗಾಲು

ದೆಹಲಿ: 147 ಕೋಟಿಗೂ ಅಧಿಕ ಜನಸಂಖ್ಯೆಯ ಭಾರತದಲ್ಲಿ ಇಂಟರ್ನೆಟ್ ಬಳಕೆದಾರರ ಸಂಖ್ಯೆಯೂ 107 ಕೋಟಿ ದಾಟಿದೆ. ಅದರಲ್ಲಿ ಬ್ರಾಡ್‌ಬ್ಯಾಂಡ್ ಚಂದಾದಾರರ ಸಂಖ್ಯೆಯೇ 100 ಕೋಟಿ ಮೀರಿದೆ. ಅಲ್ಲದೇ, ಭಾರತೀಯರು ಅದೆಷ್ಟರ ಮಟ್ಟಿಗೆ ಡಿಜಿಟಲೈಸ್ ಆಗಿ ದ್ದಾರೆ ಎಂದರೆ, ಪ್ರತಿನಿತ್ಯ ಸರಾಸರಿ 75 ಕೋಟಿ ವಹಿವಾಟುಗಳಲ್ಲಿ ಯುಪಿಐ ಡಿಜಿಟಲ್ ಪೇಮೆಂಟ್ ಮೂಲಕವೇ ಹಣ ಪಾವತಿ ಪ್ರಕ್ರಿಯೆ ನಡೆಸುತ್ತಿದ್ದಾರೆ. ದಾಖಲೆಗಳ ಸಂಗ್ರಹ-ಸ್ವೀಕಾರಕ್ಕಾಗಿ 'ಡಿಜಿಲಾಕರ್' ಆಪ್ ಬಳಸುವವರ ಸಂಖ್ಯೆಯೂ 70 ಕೋಟಿಯಷ್ಟಿದೆ. ಕೇಂದ್ರ ಸರಕಾರದ ವಿವಿಧ ಯೋಜ ನೆಗಳಲ್ಲಿನ ಫಲಾನುಭವಿಗಳಿಗೆ ನೇರ ನಗದು ವರ್ಗಾ ವಣೆ(ಡಿಬಿಟಿ) ಸೌಲಭ್ಯದಡಿ 51.5 ಲಕ್ಷ ಕೋಟಿ ರು.ಗಳನ್ನು ಈವರೆಗೆ ವರ್ಗಾವಣೆ ಮಾಡಿದೆ ಎಂದು ಕೇಂದ್ರದ ಎಲೆಕ್ಟ್ರಾನಿಕ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಸ್.ಕೃಷ್ಣನ್ ಹೇಳಿದ್ದಾರೆ.

ಪಾಕ್ ಕಟ್ಟಡ ಕುಸಿತ: 14 ವಿದ್ಯಾರ್ಥಿ ಸಾವು

ಇಸ್ಲಾಮಾಬಾದ್: ಪಾಕಿಸ್ತಾನದ ಲಾಹೋರ್ ನಗರದ ಕಹ್ನಾ ನೌ ಪ್ರದೇಶದಲ್ಲಿ ಟ್ಯೂಷನ್ ಸೆಂಟರ್ ನಡೆಯುತ್ತಿದ್ದ ನಿರ್ಮಾಣ ಹಂತದಲ್ಲಿದ್ದ ಬಹು ಮಹಡಿ ಕಟ್ಟಡದ ಛಾವಣಿ ಮಂಗಳವಾರ ಸಂಜೆ ಕುಸಿದು ಬಿದ್ದಿದ್ದು, 14 ಮಕ್ಕಳು ಸಾವಿಗೀಡಾಗಿ, 20ಕ್ಕೂ ಅಧಿಕ ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. 7ರಿಂದ 13 ವರ್ಷದ 35 ವಿದ್ಯಾರ್ಥಿಗಳು ಈ ಕಟ್ಟಡದಲ್ಲಿ ನಡೆಸಲಾಗುತ್ತಿದ್ದ ಟ್ಯೂಷನ್ ಕ್ಲಾಸ್‌ಗೆ ಹಾಜರಾಗಿದ್ದಾಗಲೇ ಕಟ್ಟಡದ ಛಾವಣಿ ದಿಢೀರ್ ಕುಸಿದಿದೆ. ತಕ್ಷಣವೇ ಧಾವಿಸಿ ಬಂದ ಸ್ಥಳೀಯರು ಕುಸಿದ ಕಟ್ಟಡದ ಅವಶೇಷಗಳಡಿಯಿಂದ ಮಕ್ಕಳನ್ನು ರಕ್ಷಣೆ ಮಾಡಿದ್ದಾರೆ. ಅಗ್ನಿಶಾಮಕ ದಳ ಮತ್ತು ಪೊಲೀಸ್ ಸಿಬ್ಬಂದಿಯೂ ಸ್ಥಳಕ್ಕೆ ಧಾವಿಸಿ ಬಂದಿದ್ದು, ರಕ್ಷಣಾ ಕಾರ್ಯಾಚರಣೆ ಕೈಗೊಂಡಿದ್ದಾರೆ. ಈ ವೇಳೆ 14 ವಿದ್ಯಾರ್ಥಿಗಳ ಮೃತದೇಹಗಳನ್ನು ಅವಶೇ ಷಗಳಡಿಯಿಂದ ಹೊರತೆಗೆಯಲಾಗಿದೆ. ಗಾಯಾಳು ವಿದ್ಯಾರ್ಥಿಗಳನ್ನು ಸಮೀಪದ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ನಿರ್ಲಕ್ಷ್ಯ ಪ್ರಕರಣ ದಾಖಲಿಸಿದ ಪೊಲೀಸರು, ಕಟ್ಟಡದ ಮಾಲೀಕ, ಗುತ್ತಿಗೆದಾರನನ್ನು ಬಂಧಿಸಿದ್ದಾರೆ. ಗಾಯಾಳು ಟ್ಯೂಷನ್ ಕ್ಲಾಸ್ ಶಿಕ್ಷಕನ ವಿರುದ್ಧವೂ ಪ್ರಕರಣ ದಾಖಲಿಸಿದ್ದಾರೆ.

ಅಣ್ಣಾಮಲೈ ವಿರುದ್ಧ ಬಾಲು ದಾವೆ ವಾಪಸ್

ಚೆನ್ನೈ: ಕರ್ನಾಟಕ ಕೇಡರ್‌ನ ಮಾಜಿ ಐಪಿಎಸ್ ಅಧಿಕಾರಿ, ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷರಾಗಿದ್ದ (ಈಗ ಪಕ್ಷ ತ್ಯಜಿಸಿದ್ದಾರೆ) ಕೆ.ಅಣ್ಣಾಮಲೈ ಅವರು 2023ರಲ್ಲಿ 'ಡಿಎಂಕೆ ಫೈಲ್ಸ್' ಬಿಡುಗಡೆ ಮಾಡಿ, ಡಿಎಂಕೆಯ ಹಲವು ನಾಯಕರುಗಳ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದ್ದರು. ಆಗ ಅಣ್ಣಾಮಲೈ ವಿರುದ್ಧ ಹೂಡಲಾಗಿದ್ದ 100 ಕೋಟಿ ರು. ಮಾನನಷ್ಟ ಮೊಕದ್ದಮೆಯನ್ನು ಡಿಎಂಕೆ ಪಕ್ಷದ ಹಿರಿಯ ನಾಯಕ-ಸಂಸದ ಟಿ.ಆರ್.ಬಾಲು ಅವರು ಈಗ ವಾಪಸ್ ತೆಗೆದುಕೊಂಡಿದ್ದಾರೆ. ಅದಕ್ಕೆ ಪ್ರತಿಯಾಗಿ, ಬಾಲು ಅವರ ವಿರುದ್ಧ ತಾವು ಹೂಡಿದ್ದ ಪ್ರತ್ಯೇಕ ದೂರು ಪ್ರಕರಣವನ್ನು ನ್ಯಾಯಾಲಯದಲ್ಲಿ ಮುಂದುವರಿಸುವುದಿಲ್ಲ ಎಂದು ಅಣ್ಣಾಮಲೈ ಹೇಳಿದ್ದಾರೆ. ನ್ಯಾಯಾಲಯ ಕೂಡಾ ಎರಡೂ ಪ್ರಕರಣಗಳನ್ನು ಕೊನೆಗೊಳಿಸುವುದಕ್ಕೆ ಅನುಮತಿ ನೀಡಿದೆ ಎಂದು ವರದಿಯಾಗಿದೆ.

{ಅನಿಲ್ ಸಿಂಗ್} ಉನ್ನಾವೊ ಬಿಜೆಪಿ ಶಾಸಕ

ಅಯೋಧ್ಯೆ ಶ್ರೀರಾಮ ಮಂದಿರಕ್ಕೆ ಭಕ್ತರು ನೀಡಿದ್ದ ದೇಣಿಗೆ ಹಣ ಲೂಟಿ ಮಾಡಿದವರು ಕ್ಯಾನ್ಸರ್ ಬಂದು ನರಳಿ ನರಳಿ ಸಾಯುತ್ತಾರೆ. ಸ್ವಲ್ಪ ಕಾಯಿರಿ, ಶ್ರೀರಾಮಚಂದ್ರನಿಗೆ ಸಂದಿದ್ದ ಹಣವನ್ನು ಕದ್ದವರು ಒಂದೇ ವರ್ಷದಲ್ಲಿ ಸಾಯುತ್ತಾರೆ. ಈ ಕಳ್ಳರ ವಂಶದ ಮುಂದಿನ ಏಳು ತಲೆಮಾರುಗಳೂ ಇದರ ಪರಿಣಾಮಗಳನ್ನು ಅನುಭವಿಸುತ್ತವೆ.

ವೆನೆಜುವೆಲಾದಲ್ಲಿ ಜೂ.24ರ ಸಂಜೆ 6.04ರಲ್ಲಿ ಅವಳಿ ಭೂಕಂಪ | ರಾಜಧಾನಿ ಸಮೀಪದ ಲಾ ಗುವೆರಾ ರಾಜ್ಯದಲ್ಲಿ ಬಾಲಕ ಜೀವಂತ | ಅವಶೇಷ ತೆರವುಗೊಳಿಸುವಾಗ ಜೋರ್ಡಾನ್ ತಂಡದಿಂದ ರಕ್ಷಣೆ

6 ದಿನ ಬಳಿಕ 3 ವರ್ಷದ ಬಾಲಕನ ರಕ್ಷಣೆ

ಕ್ಯಾರಾಕಾಸ್: ಕಳೆದ ಬುಧವಾರ(ಜೂ.24) ಸಂಜೆ 6.04ರ ವೇಳೆ ವೆನೆಜುವೆಲಾದಲ್ಲಿ 7.5 ಮತ್ತು 7.2ರಷ್ಟು ತೀವ್ರತೆಯ ಅವಳಿ ಭೂಕಂಪಗಳು ಒಂದೇ ನಿಮಿಷದ ಅಂತರದಲ್ಲಿ ಸಂಭವಿಸಿದ್ದು, ದೇಶದ ರಾಜಧಾನಿ ನಗರ ಕ್ಯಾರಾಕಾಸ್ ಮತ್ತು ಸಮೀಪದ ಲಾಗುವೆರಾ ನಗರಗಳಲ್ಲಿ ಬಹು ಮಹಡಿಯ ನೂರಾರು ಕಟ್ಟಡಗಳು ನೆಲಕ್ಕುರುಳಿ ಈವರೆಗೆ(ಬುಧವಾರ ಬೆಳಗ್ಗೆವರೆಗೆ) ಮಹಿಳೆಯರು, ಮಕ್ಕಳು, ವೃದ್ಧರು ಸೇರಿದಂತೆ ಒಟ್ಟು 1900ಕ್ಕೂ ಅಧಿಕ ಮಂದಿ ಸಾವಿಗೀಡಾಗಿದ್ದಾರೆ.

ಈ ಮಧ್ಯೆ, ಲಾ ಗುವೆರಾ ರಾಜ್ಯದ ಉತ್ತರ ಭಾಗದಲ್ಲಿನ ಲಾಸ್ ಕೊರೇಲ್ಸ್‌ನ ಗಾರ್ಡನ್ 1 ಕಟ್ಟಡದ ಅವಶೇಷಗಳನ್ನು ಜೋರ್ಡಾನ್ ದೇಶದ ರಕ್ಷಣಾ ತಂಡದವರು ತೆರವು ಕಾರ್ಯಾಚರಣೆ ನಡೆಸಿದ್ದಾಗ 3 ವರ್ಷದ ಬಾಲಕನ ರಕ್ಷಣೆಯಾಗಿದೆ.

ಆರು ದಿನಗಳಿಂದ ಆಹಾರ-ನೀರು ಇಲ್ಲದೇ, ಉಸಿರಾಟಕ್ಕೂ ಕಷ್ಟವಾಗಿ ದ್ದರೂ ಬಾಲಕ ಜೀವಂತ ಉಳಿದು ಪವಾಡ ಸದೃಶವಾಗಿ ಪಾರಾಗಿದ್ದಾನೆ. ಬಾಲಕ ಜೀವಂತವಾಗಿರುವುದು ತಿಳಿ ಯುತ್ತಲೇ ಜೋರ್ಡಾನ್‌ನಿಂದ ಬಂದಿದ್ದ ರಕ್ಷಣಾ ತಂಡಗಳ ಸದಸ್ಯರು ಹರ್ಷಾತಿರೇಕದಂತೆ ಚೀರಿ ಸಂಭ್ರಮಿಸಿದ್ದಾರೆ.

ಬಳಿಕ ಬಾಲಕನಿಗೆ ಸ್ಥಳದಲ್ಲೇ ಪ್ರಥಮ ಚಿಕಿತ್ಸೆ ನೀಡಿ ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. 6 ದಿನಗಳಿಂದ ಆಹಾರ-ನೀರು ಇಲ್ಲದೇ, ಭಯದಲ್ಲಿ ಉಸಿರು ಬಿಗಿಹಿಡಿದು ಬದುಕಿದ್ದ ಬಾಲಕ ಮೋರಾನ್ ದೇಹ ಬಹಳಷ್ಟು ಕೃಶವಾಗಿದೆ. ತೀವ್ರ ಅಸ್ವಸ್ಥನಾಗಿ ಗಂಭೀರ ಪರಿಸ್ಥಿತಿಯಲ್ಲಿರುವ ಮೊರಾನ್‌ನನ್ನು ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿರಿಸಿಕೊಂಡು ವೈದ್ಯರ ತಂಡ ಶುಶ್ರೂಷೆ ಮಾಡುತ್ತಿದೆ. ಬಾಲಕ ನಿದಾನವಾಗಿ ಚೇತರಿಸಿಕೊಳ್ಳುತ್ತಿದ್ದಾನೆ ಎಂದು ವೈದ್ಯರು ಹೇಳಿದ್ದಾರೆ.

ವೆನೆಜುವೆಲಾದ ಲಾ ಗುವೆರಾದಲ್ಲಿ ರಕ್ಷಿಸಲಾದ ಬಾಲಕನಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ.

ಲಾ ಗುವೆರಾ ರಾಜ್ಯದಲ್ಲಿ 3 ವರ್ಷದ ಮಗು 'ಕ್ಲೈಬೆರ್ ಮೋರಾನ್' ಜೀವಂತ ರಕ್ಷಣೆಯಾಗಿರುವ ಸಂದರ್ಭದ ವಿಡಿಯೊವನ್ನು ವೀಕ್ಷಿಸಿದ ವೆನೆಜುವೆಲಾದ ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೋಡ್ರಿಗಜ್ ಸಂತಸ ವ್ಯಕ್ತಪಡಿಸಿದ್ದಾರೆ.

ಮಂಗಳವಾರ ಸಂಜೆ ವೇಳೆ ಬಾಲಕನನ್ನು ರಕ್ಷಿಸಲಾಗಿದೆ ಎಂದು ವೆನೆಜುವೆಲಾದ ಸಂಸತ್ತಿನ ಮುಖ್ಯಸ್ಥ ಜಾರ್ಜ್ ರೋಡ್ರಿಗಜ್ ಹೇಳಿಕೊಂಡಿದ್ದಾರೆ. ಸ್ಥಳದಲ್ಲಿ ಅವಶೇಷಗಳ ತೆರವು ಕಾರ್ಯಾಚರಣೆ ಚುರುಕುಗೊಳಿಸಿ, ಬಾಲಕನ ಕುಟುಂಬದವರ ಪತ್ತೆಗೆ ಪ್ರಯತ್ನಿಸಲಾಗುತ್ತಿದೆ.

ಲಾ ಗುವೆರಾ ರಾಜ್ಯದ ಕ್ಯಾರಾಬಾಲ್ಲೆದಾ ನಗರದಲ್ಲಿ ಒಂದೇ ಪ್ರದೇಶದಲ್ಲಿನ ಹತ್ತಾರು ಕಟ್ಟಡಗಳು ಬುಧವಾರದ ಅವಳಿ ಭೂಕಂಪ ವೇಳೆ ನೆಲಕ್ಕುರುಳಿದ್ದವು. ಕಟ್ಟಡದ ಅವಶೇಷಗಳನ್ನು ದೇಶ-ವಿದೇಶದ ರಕ್ಷಣಾ ತಂಡಗಳು ನೂರಾರು ಸಿಬ್ಬಂದಿಗಳು ಮತ್ತು ಸಾವಿರಾರು ಸ್ವಯಂಸೇವಕರು,

ಸ್ಥಳೀಯ ನಿವಾಸಿಗಳು ಹಗಲು-ರಾತ್ರಿ ಎನ್ನದೇ ಸತತವಾಗಿ ಶ್ರಮಿಸಿ ಸಮರೋಪಾದಿಯಲ್ಲಿ ಕೆಲಸ ಮಾಡಿ ಕಟ್ಟಡಗಳ ಅವಶೇಷಗಳನ್ನು ತೆರವುಗೊಳಿಸಿದ್ದಾರೆ. ಅವಶೇಷಗಳಡಿ ಸಿಲುಕಿ ಕೊಂಡಿದ್ದ ಹಲವರನ್ನು ರಕ್ಷಿಸಿ ಆಸ್ಪತ್ರೆಗಳಿಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

ಭೂಕಂಪದಲ್ಲಿ 38 ಆಸ್ಪತ್ರೆಗಳಿಗೆ ಹಾನಿ

ವೆನೆಜುವೆಲಾ ದೇಶದಲ್ಲಿನ ಆಸ್ಪತ್ರೆಗಳಲ್ಲಿ ಕ್ಯಾರಾಕಾಸ್ ಮತ್ತು ಲಾ ಗುವೆರಾ ನಗರಗಳಲ್ಲಿ 38 ಆಸ್ಪತ್ರೆಗಳೂ ಜೂ.24ರ ಅವಳಿ ಭೂಕಂಪದಲ್ಲಿ ಹಾನಿಗೀಡಾಗಿವೆ. ಹಾಗಾಗಿ, ಭೂಕಂಪದಲ್ಲಿ ಬದುಕುಳಿದರೂ ಗಾಯಗೊಂಡಿರುವವರ ಶುಶ್ರೂಷೆ ಮಾಡುವುದೂ ವೆನೆಜುವೆಲಾ ಸರಕಾರಕ್ಕೆ ದೊಡ್ಡ ಸವಾಲಿನ ಕೆಲಸವಾಗಿದೆ. ಭಾರತ-ಅಮೆರಿಕ ಸೇರಿದಂತೆ ವಿವಿಧ ದೇಶಗಳಿಂದ ವೆನೆಜುವೆಲಾ ಜನತೆಗೆ ನೆರವಾಗಲು ವೈದ್ಯಕೀಯ ತಂಡಗಳು ಬಂದಿವೆ. ವಿಶ್ವಸಂಸ್ಥೆಯೂ ವೈದ್ಯಕೀಯ ತಂಡಗಳನ್ನು ಕಳುಹಿಸಿಕೊಟ್ಟಿದೆ. ಈ ಮಧ್ಯೆ, ವಸತಿ, ನೀರು-ಆಹಾರ ಮತ್ತು ಶೌಚಾಲಯ ವ್ಯವಸ್ಥೆಯ ಕೊರತೆಯಿಂದಾಗಿ ಭೂಕಂಪ ಸಂತ್ರಸ್ತರು ಕಳೆದೊಂದು ವಾರದಲ್ಲಿ ಬಹಳವಾಗಿ ಪರಿತಪಿಸಿದ್ದಾರೆ. ಶುಚಿತ್ವದ ಕೊರತೆ ಕಾರಣಕ್ಕೆ ಸಂತ್ರಸ್ತರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಸಂತ್ರಸ್ತರಿರುವ ತಾತ್ಕಾಲಿಕ ಶಿಬಿರಗಳಲ್ಲಿ ಡೆಂಗ್ಯು, ಯೆಲ್ಲೊ ಫೀವರ್, ಮಲೇರಿಯ ಸೇರಿದಂತೆ ವಿವಿಧ ರೋಗಗಳು ಕಾಣಿಸಿಕೊಳ್ಳುತ್ತಿವೆ. ಇನ್ನೊಂದೆಡೆ, ಅವಳಿ ಭೂಕಂಪದ ಬಳಿಕ 50 ಸಾವಿರಕ್ಕೂ ಹೆಚ್ಚು ಜನರು ಕಾಣೆಯಾಗಿದ್ದಾರೆ ಎಂದು ಸರಕಾರದ ಅಂಕಿ ಅಂಶಗಳು ತಿಳಿಸಿವೆ. ಮನೆಯನ್ನೂ, ತಮ್ಮ ಕುಟುಂಬದವರನ್ನೂ ಕಳೆದುಕೊಂಡಿರುವ ಜನರು, ಕಾಣೆಯಾಗಿರುವವರ ಪತ್ತೆಗಾಗಿ ಕಟ್ಟಡಗಳ ಅವಶೇಷಗಳಡಿ ಹುಡುಕಾಟ ಮುಂದುವರಿಸಿದಿದ್ದಾರೆ. ಆದರೆ, ರಕ್ಷಣಾ ಕಾರ್ಯಾಚರಣೆ ತಂಡಗಳು ಕಟ್ಟಡದ ಅವಶೇಷಗಳನ್ನು ಕಳೆದ 7 ದಿನಗಳಿಂದ ತೆರವುಗೊಳಿಸುತ್ತಿದ್ದರೂ ಅರ್ಧದಷ್ಟೂ ಕೆಲಸವಾಗಿಲ್ಲ ಎನಿಸಿದೆ. ರಕ್ಷಣಾ ಕಾರ್ಯಾಚರಣೆ ಮಂದಗತಿಯಲ್ಲಿ ಸಾಗುತ್ತಿದೆ. ಭೂಕಂಪವಾಗಿ ವಾರವೇ ಕಳೆದಿರುವುದರಿಂದ ಅವಶೇಷಗಳಡಿ ಸಿಲುಕಿರುವವರು ಬದುಕಿರುವ ಸಾಧ್ಯತೆ ಕ್ಷೀಣ ಎಂದು ವೆನೆಜುವೆಲಾ ಅಧಿಕಾರಿಗಳು ಹತಾಶೆ ವ್ಯಕ್ತಪಡಿಸಿದ್ದಾರೆ. ಆದರೆ, 3 ವರ್ಷದ ಬಾಲಕ ಜೀವಂತ ಪತ್ತೆಯಾಗಿರುವುದರಿಂದ ತಮ್ಮವರಿಗಾಗಿ ಶೋಧ ನಡೆಸುತ್ತಿರುವ ಕುಟುಂಬಗಳಲ್ಲಿ ಆಶಾವಾದ ಉಳಿದಿದೆ. ಹಾಗಾಗಿ, ವೆನೆಜುವೆಲಾದ ಸ್ಥಳೀಯ ಆಡಳಿತದ ಅಧಿಕಾರಿಗಳು, ಭೂಕಂಪದಲ್ಲಿ ಮನೆ ಕಳೆದುಕೊಂಡು ಆಶ್ರಯವಿಲ್ಲದೇ ಪರಿತಪಿಸುತ್ತಿರುವವರು, ಗಾಯಾಳುಗಳತ್ತ ಹೆಚ್ಚು ಗಮನ ಕೇಂದ್ರೀಕರಿಸಿದೆ. ಅವರಿಗೆ ತಾತ್ಕಾಲಿಕ ಆಶ್ರಯಕ್ಕೆ ವ್ಯವಸ್ಥೆ ಮಾಡುವುದು, ಆಹಾರ-ಔಷಧಗಳನ್ನು ಪೂರೈಸುವುದರತ್ತ, ಚಿಕಿತ್ಸೆ ಕೊಡಿಸುವುದರತ್ತ ಗಮನ ಕೊಡುತ್ತಿದೆ ಎಂದು ತಿಳಿದುಬಂದಿದೆ.

ಅಮೆರಿಕದಿಂದ 1700 ಯೋಧರ ರಕ್ಷಣಾ ತಂಡ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸರಕಾರ, 1700 ಯೋಧರು, ರಕ್ಷಣಾ ಕಾರ್ಯಾಚರಣೆ ತಜ್ಞರನ್ನು ಒಳಗೊಂಡ ದೊಡ್ಡ ತಂಡವನ್ನೇ ವೆನೆಜುವೆಲಾಗೆ ಕಳುಹಿಸಿಕೊಟ್ಟಿದೆ. ಗ್ಯಾಸ್ ಕಟರ್‌ಗಳು, ಭೂ ಸ್ಕ್ಯಾನರ್‌ಗಳು, ಡ್ರೋನ್‌ಗಳು, ರಕ್ಷಣಾ ಕಾರ್ಯಾಚರಣೆ ವಾಹನಗಳ ಸಮೇತ ವೆನೆಜುವೆಲಾಗೆ ಧಾವಿಸಿರುವ ಅಮೆರಿಕದ ಸೇನೆಯ ರಕ್ಷಣಾ ಕಾರ್ಯಾಚರಣೆ ತಂಡ, ಕ್ಯಾರಾಕಾಸ್ ಮತ್ತು ಲಾ ಗುವೆರಾ ರಾಜ್ಯಗಳಲ್ಲಿ ಹೆಚ್ಚು ತೊಡಗಿಸಿಕೊಂಡಿದೆ. ಅವಶೇಷಗಳಡಿ ಸಿಲುಕಿರುವ ಜನರನ್ನು ರಕ್ಷಿಸುವತ್ತ ಹೆಚ್ಚು ಗಮನ ಕೇಂದ್ರೀಕರಿಸಿದೆ. ಅಮೆರಿಕದ ಸೇನೆಯ ದಕ್ಷಿಣ ಕಮಾಂಡ್‌ನ ಕಮಾಂಡರ್ ಜನರಲ್ ಫ್ರಾನ್ಸಿಸ್ ಡೊನೊವ್ಯಾನ್ ನೇತೃತ್ವದಲ್ಲಿ ಅಮೆರಿಕದ ರಕ್ಷಣಾ ಕಾರ್ಯಾಚರಣೆ ತಂಡ ವೆನೆಜುವೆಲಾಗೆ ಬಂದಿಳಿದಿದೆ. 900 ಸಿಬ್ಬಂದಿಗಳ ಒಂದು ತಂಡ ವೆನೆಜುವೆಲಾ ದೇಶದ ಒಳಭಾಗಗಳಲ್ಲಿ ಹಲವೆಡೆ ಚದುರಿದಂತೆ ಕಾರ್ಯನಿರತವಾಗಿದ್ದರೆ, 800 ಸಿಬ್ಬಂದಿಗಳ ಮತ್ತೊಂದು ತಂಡ ಪೋರ್ಟರಿಕೊ ಮತ್ತು ಕ್ಯುರಾಕಾವೊದಲ್ಲಿ ಉಳಿದುಕೊಂಡು ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದೆ. ಅವಳಿ ಭೂಕಂಪದಿಂದ ತೀವ್ರವಾಗಿ ಹಾನಿಗೀಡಾಗಿರುವ ಪ್ರದೇಶಗಳಲ್ಲಿ ಹೆಚ್ಚು ಗಮನ ಕೇಂದ್ರೀಕರಿಸಿ ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ. ಜತೆಗೆ, ಭೂಕಂಪದಿಂದ ಹಾನಿಗೀಡಾಗಿರುವ ವಿಮಾನ ನಿಲ್ದಾಣಗಳು, ಬಂದರುಗಳನ್ನು ಸಹಜ ಸ್ಥಿತಿಗೆ ತರಲು ಶ್ರಮಿಸಲಾಗುತ್ತಿದೆ. ಆ ಮೂಲಕ ವಿವಿಧ ದೇಶಗಳಿಂದ ಪರಿಹಾರ ಸಾಮಗ್ರಿಗಳು ಬಂದು ವೆನೆಜುವೆಲಾ ವಿವಿಧೆಡೆ ತಲುಪಲು ಅವಕಾಶವಾಗುವಂತೆ ಮೂಲಸೌಕರ್ಯಗಳನ್ನು ಸುವ್ಯವಸ್ಥೆಗೆ ತರಲು ಯತ್ನಿಸಲಾಗುತ್ತಿದೆ ಎಂದು ಜನರಲ್ ಫ್ರಾನ್ಸಿಸ್ ಡೊನೊವ್ಯಾನ್ ಹೇಳಿದ್ದಾರೆ.

ಡ್ರೋನ್ ನೆರವು: ಅಮೆರಿಕ ಸೇನೆಯಿಂದ 5 ಎಂಕ್ಯು-9 ರೀಪರ್ ಡ್ರೋನ್‌ಗಳನ್ನು ವೆನೆಜುವೆಲಾಗೆ ತರಲಾಗಿದೆ. ಇದರಿಂದ ಅವಶೇಷಗಳಡಿ ಸಿಲುಕಿಕೊಂಡವರ ಪತ್ತೆ ಮತ್ತು ರಕ್ಷಣೆಗೆ ಅನುಕೂಲವಾಗಲಿದೆ ಎಂದೂ ಫ್ರಾನ್ಸಿಸ್ ಹೇಳಿದ್ದಾರೆ. ಪುಟ್ಟ ದೇಶ ವೆನೆಜುವೆಲಾದಲ್ಲಿನ ಸಂಪನ್ಮೂಲ ಕೊರತೆಯ ಕಾರಣ ನೆಲಸಮಗೊಂಡ ಕಟ್ಟಡಗಳ ಅವಶೇಷಗಳನ್ನು ತೆರವುಗೊಳಿಸಿ ಅದರಡಿಯಲ್ಲಿ ಸಿಲುಕಿರುವ ಜನರ ರಕ್ಷಣಾ ಕಾರ್ಯ ಬಲು ನಿದಾನಗತಿಯಲ್ಲಿ ಸಾಗಿರುವುದರಿಂದ ಸಾವಿನ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇದೆ.

ವೆನೆಜುವೆಲಾದ ಲಾ ಗುವೆರಾ ರಾಜ್ಯದ ಕ್ಯಾರಾಬಾಲ್ಲೆದಾ ನಗರದಲ್ಲಿ ಒಂದೇ ಪ್ರದೇಶದಲ್ಲಿ ನೆಲಕ್ಕುರುಳಿದ ಹತ್ತಾರು ಕಟ್ಟಡಗಳ ಅವಶೇಷಗಳನ್ನು ರಕ್ಷಣಾ ಕಾರ್ಯಾಚರಣೆ ತಂಡಗಳು ತೆರವುಗೊಳಿಸಿವೆ.

ತಂದೆ ನಿವೃತ್ತ ಲೆ.ಜ.ಕೆ.ಎಂ.ಸೇಠ್, ಕಿರಿಯ ಸೋದರ ನೌಕಾಪಡೆ

ನೂತನ ಸೇನಾ ಮುಖ್ಯಸ್ಥ ಜ.ಧೀರಜ್ ಸೇಠ್ ಅಧಿಕಾರ

ದೆಹಲಿ: ಆರ್ಮರ್ಡ್ ಕಾರ್ಪ್ಸ್‌ನ ಹಿರಿಯ ಸೇನಾಧಿಕಾರಿ ಜನರಲ್ ಧೀರಜ್ ಸೇಠ್ ಭಾರತೀಯ ಸೇನೆಯ 31ನೇ ಮುಖ್ಯಸ್ಥರಾಗಿ ಮಂಗಳವಾರ ಅಧಿಕಾರ ಸ್ವೀಕರಿಸಿದ್ದು, ಗೌರವ ವಂದನೆ ಸ್ವೀಕಾರ ಬಳಿಕ ತಂದೆ ನಿವೃತ್ತ ಲೆಫ್ಟಿನೆಂಟ್ ಜನರಲ್ ಕೆ.ಎಂ.ಸೇಠ್ ಅವರಿಗೆ ಸೆಲ್ಯೂಟ್ ಹೊಡೆದು ಬಳಿಕ ಕಾಲಿಗೆರಗಿ ನಮಸ್ಕರಿಸಿದರು.

ಇದೇ ವೇಳೆ ಕಿರಿಯ ಸೋದರ, ಭಾರತೀಯ ನೌಕಾಪಡೆಯ ರಿಯರ್ ಅಡ್ಮಿರಲ್ ರವನೀಶ್ ಸೇಠ್ ಅವರು ನೂತನ ಸೇನಾ ಮುಖ್ಯಸ್ಥರಾದ ಅಣ್ಣ ಧೀರಜ್ ಸೇಠ್‌ಗೆ ಸೆಲ್ಯೂಟ್ ಹೊಡೆದು ಗೌರವ ಸಲ್ಲಿಸಿದರು.

ಭಾರತೀಯ ಸೇನಾಪಡೆಗೆ ಸೇವೆ ಸಲ್ಲಿಸಿದ ತಂದೆ(1997ರಲ್ಲಿ ನಿವೃತ್ತಿ)-ಸೇವೆ ಸಲ್ಲಿಸುತ್ತಿರುವ ಅಣ್ಣ-ತಮ್ಮ ಅವರನ್ನೊಳಗೊಂಡ ಈ ಹೃದಯಂಗಮ ಸಂದರ್ಭದ ವಿಡಿಯೊ ಜಾಲತಾಣದಲ್ಲಿ ವೈರಲ್ ಆಗಿದೆ. 62 ವರ್ಷಗಳ ಜನರಲ್ ಉಪೇಂದ್ರ ದ್ವಿವೇದಿ ನಿವೃತ್ತರಾದರು.

ಜನರಲ್ ಸೇಠ್ ರಾಷ್ಟ್ರೀಯ ರಕ್ಷಣಾ ಅಕಾಡೆಮಿ(ಎನ್‌ಡಿಎ) ಹಳೆ ವಿದ್ಯಾರ್ಥಿ. 1997ರಲ್ಲಿ ಜನರಲ್ ಶಂಕರ್ ರಾಯ್ ಚೌಧರಿ ಬಳಿಕ ಸೇನಾ ಮುಖ್ಯಸ್ಥ ಹುದ್ದೆ ಅಲಂಕರಿಸಿದ ಆರ್ಮರ್ಡ್ ಕಾರ್ಪ್ಸ್ ಅಧಿಕಾರಿ ಎನಿಸಿಕೊಂಡಿದ್ದಾರೆ.

ಸಾಧನೆ-ನಿರೀಕ್ಷೆ: ಜನರಲ್ ಸೇಠ್ ಸೇನೆಯಲ್ಲಿ 'ಕಾರ್ಯಾಚರಣೆ-ಕೇಂದ್ರಿತ ಕಮಾಂಡರ್', ಜಾಗತಿಕ-ಪ್ರಾದೇಶಿಕ ಯುದ್ಧತಂತ್ರಗಳ ಬೆಳವಣಿಗೆ ವಿಶ್ಲೇಷಣೆ ಮತ್ತು ಸೇನೆಯ ಆಧುನೀಕರಣಕ್ಕೆ ಒತ್ತು ನೀಡುವ ಅಧಿಕಾರಿ ಎಂದೇ ಪ್ರಸಿದ್ಧರು. ಸೇನೆಯ ದೀರ್ಘಾವಧಿ ಆಧುನೀಕರಣ ಯೋಜನೆ, ಸಾಮರ್ಥ್ಯ ವೃದ್ಧಿ ರೂಪುರೇಷೆ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ನೈಋತ್ಯ ಕಮಾಂಡ್ ಮತ್ತು ದಕ್ಷಿಣ ಕಮಾಂಡ್‌ಗಳಲ್ಲಿ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದ ಜನರಲ್ ಸೇಠ್ ಅವರು ದೀರ್ಘಾವಧಿಯ ಯೋಜನೆ ಹಾಗೂ ಸಾಮರ್ಥ್ಯ ಅಭಿವೃದ್ಧಿಯಲ್ಲಿ ವ್ಯಾಪಕ ಅನುಭವ ಹೊಂದಿದ್ದು, ಸೇನೆಯ ಹಲವು ಪ್ರಮುಖ ಆಧುನೀಕರಣ ಯೋಜನೆಗಳಿಗೆ ಹೊಸ ವೇಗ ನೀಡುವ ನಿರೀಕ್ಷೆ ಇದೆ.

ತಂದೆ ನಿವೃತ್ತ ಲೆ.ಜ.ಕೆ.ಎಂ.ಸೇಠ್, ಮಗ ಜ.ಧೀರಜ್ ಸೇಠ್, ಸೋದರ ರಿ.ಅಡ್ಮಿರಲ್ ರವನೀಶ್ ಸೇಠ್

ಆಗ್ರಾ-ಲಖನೌ ಎಕ್ಸ್‌ಪ್ರೆಸ್ ವೇನಲ್ಲಿ ಉನ್ನಾವೊ ಬಳಿ ಅಪಘಾತ | ಎಸ್‌ಯುವಿ ಅಪ್ಪಚ್ಚಿ: ಒಂದೇ ಕುಟುಂಬದ ಐವರ ದುರ್ಮರಣ

ಎಸ್‌ಯುವಿಗೆ ಬಸ್ ಡಿಕ್ಕಿ: 5 ಸಾವು

ಕಾನ್ಪುರ: ಹರಿಯಾಣದಿಂದ ಬಿಹಾರದತ್ತ ಆಗ್ರಾ-ಲಖನೌ ಎಕ್ಸ್‌ಪ್ರೆಸ್ ವೇನಲ್ಲಿ ಗಂಟೆಗೆ 100 ಕಿಮೀಗಿಂತಲೂ ವೇಗವಾಗಿ ಸಾಗುತ್ತಿದ್ದ ಪ್ರಯಾಣಿಕರ ಸ್ಲೀಪರ್ ಬಸ್, ಆಗ್ರಾದಿಂದ ಲಖನೌಗೆ ತೆರಳುತ್ತಿದ್ದ ಸ್ಪೋರ್ಟ್ ಯುಟಿಲಿಟಿ ವಾಹನಕ್ಕೆ (ಎಸ್‌ಯುವಿ) ಕಾನ್ಪುರ ಸಮೀಪದ ಬಂಗಾರ್ ಮಾವೊ ಪ್ರದೇಶದ ಉನ್ನಾವೋ ಬಳಿ ಹಿಂದಿನಿಂದ ರಭಸವಾಗಿ ಡಿಕ್ಕಿ ಹೊಡೆದಿದೆ. ಪರಿಣಾಮ, ಎಸ್‌ಯುವಿಯಲ್ಲಿದ್ದ 6 ಮತ್ತು 13 ವರ್ಷದ ಇಬ್ಬರು ಹೆಣ್ಣುಮಕ್ಕಳು ಸೇರಿದಂತೆ ಒಂದೇ ಕುಟುಂಬದ ಐವರು ದಾರುಣವಾಗಿ ಸಾವಿಗೀಡಾಗಿದ್ದಾರೆ. ಅದೇ ವಾಹನದಲ್ಲಿದ್ದ ನಾಲ್ವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ವೇಗವಾಗಿ ಸಾಗಿ ಬಂದ ಬಸ್ ಬಲವಾಗಿ ಡಿಕ್ಕಿ ಹೊಡೆದ ಪರಿಣಾಮ, ಎಸ್‌ಯುವಿ(ಮಾರುತಿ ಸುಜುಕಿ ಕಂಪನಿಯ ಎರ್ಟಿಗಾ ಕಾರು) ಸಂಪೂರ್ಣ ನಜ್ಜು ಗುಜ್ಜಾಗಿದೆ. ಮೃತದೇಹಗಳೆಲ್ಲವೂ ಕಾರಿನೊ ಳಗೇ ಅಪ್ಪಚ್ಚಿಯಾಗಿದ್ದವು. ಕಾರಿನೊಳಗಿಂದ ಐವರ ಮೃತದೇಹಗಳನ್ನು ಹೊರತೆಗೆಯುವುದೇ ಬಲು ಕಷ್ಟವಾಗಿತ್ತು. ಅಷ್ಟೊಂದು ತೀವ್ರ ಪ್ರಮಾಣದಲ್ಲಿ ಎಸ್‌ಯುವಿ ನಜ್ಜುಗುಜ್ಜಾಗಿತ್ತು.

ಅಪಘಾತಕ್ಕೆ ಕಾರಣವಾದ ಸ್ಲೀಪರ್ ಬಸ್. ನಜ್ಜುಗುಜ್ಜಾಗಿರುವ ಎಸ್‌ಯುವಿ

ನಾಲ್ಕೂ ಬಾಗಿಲುಗಳು ಸುಲಭಕ್ಕೆ ತೆರೆಯಲಾಗದಷ್ಟು ಬಿಗಿಯಾಗಿ ಜಾಮ್ ಆಗಿಬಿಟ್ಟಿದ್ದವು. ಕಡೆಗೆ ವಾಹನ ಕತ್ತರಿಸುವ ಯತ್ರ ಬಳಸಿ ಕಾರಿನ ಬಾಗಿಲುಗಳು, ಡಿಕ್ಕಿ ಭಾಗವನ್ನು ಕತ್ತರಿಸಿ ತೆಗೆದ ಬಳಿಕವಷ್ಟೇ ಮೃತದೇಹಗಳನ್ನು ಹೊರತೆಗೆಯಲು ಸಾಧ್ಯವಾಯಿತು ಎಂದು ಪೊಲೀಸ್ ಅಧಿಕಾರಿಗಳು ಮತ್ತು ಪ್ರತ್ಯಕ್ಷದರ್ಶಿಗಳು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಸ್ಲೀಪರ್ ಬಸ್ ಕೂಡಾ ಎಸ್‌ಯುವಿ ಕಾರಿಗೆ ಡಿಕ್ಕಿ ಹೊಡೆದ ಬಳಿಕ ರಸ್ತೆಬದಿಗೆ ಮಗುಚಿಕೊಂಡು ಬಿದ್ದಿದ್ದು, ಬಸ್ ಪ್ರಯಾಣಿಕರಲ್ಲಿ ನಾಲ್ವರು ಗಾಯಗೊಂಡಿದ್ದಾರೆ. ಅದೇ ಮಾರ್ಗದಲ್ಲಿ ಸಂಚರಿಸುತ್ತಿದ್ದವರು ತಕ್ಷಣವೇ ಬಸ್‌ನ ಕಿಟಕಿ ಗಾಜಗಳನ್ನು ಒಡೆದು ಪ್ರಯಾಣಿಕರನ್ನು ರಕ್ಷಿಸಿದ್ದಾರೆ.

ಖಮೇನಿ ಅಂತ್ಯಕ್ರಿಯೆ: ಆಚಾರ್ಯ ಲೋಕೇಶ್ ಮುನಿ ಆಹ್ವಾನಿತರು

ಟೆಹರಾನ್: ಫೆ.28ರಂದು ಮೃತಪಟ್ಟ ಇರಾನ್‌ನ ಸರ್ವೋಚ್ಚ ನಾಯಕ-ಷಿಯಾ ಮುಸ್ಲಿಂ ಸಮುದಾಯ ಧಾರ್ಮಿಕ ಮುಖಂಡ ಅಯತೊಲ್ಲ ಸಯ್ಯದ್ ಅಲಿ ಖಮೇನಿ ಅವರ ಅಂತ್ಯಕ್ರಿಯೆಯ ವಾರ ಕಾಲದ ವಿಧಿವಿಧಾನಗಳು ಜುಲೈ 4ರಿಂದ ಆರಂಭಗೊಳ್ಳಲಿದ್ದು, 9ರಂದು ಅಂತಿಮ ವಿಧಿ ನೆರವೇರಲಿದೆ. ಇರಾನ್‌ನಲ್ಲಿ ನಡೆಯಲಿರುವ ಇಸ್ಲಾಂನ ಪ್ರಮುಖ ಧಾರ್ಮಿಕ ಮುಖಂಡನ ಅಂತಿಮ ಪಯಣಕ್ಕೆ ಸಾಕ್ಷಿಯಾಗುವಂತೆ ಭಾರತದ ಹೆಸರಾಂತ ಜೈನ ಧರ್ಮದ ಗುರು ಆಚಾರ್ಯ ಲೋಕೇಶ್ ಮುನಿ ಅವರಿಗೂ ಅಧಿಕೃತ ಆಹ್ವಾನ ಬಂದಿದೆ.

ಇರಾನ್ ಸರಕಾರದ ಅಂತಾರಾಷ್ಟ್ರೀಯ ಸಂಬಂಧಗಳ ಇಲಾಖೆಯ ನಿರ್ದೇಶಕ ಮೊಹ್ಸೆನ್ ಖ್ವಾಮಿ ಅವರ ಸಹಿಯಿರುವ ಅಧಿಕೃತ ಆಹ್ವಾನ ಪತ್ರ ಅಂತಾರಾಷ್ಟ್ರೀಯ ಸಾಮಾಜಿಕ ಸೇವಾ ಸಂಘಟನೆ 'ಅಹಿಂಸಾ ವಿಶ್ವ ಭಾರತಿ' ಸ್ಥಾಪಕರಾದ ಆಚಾರ್ಯ ಲೋಕೇಶ್ ಮುನಿ ಅವರಿಗೆ ಬಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಗೂ ಇರಾನ್ ಸರಕಾರದ ಆಹ್ವಾನವಿದೆಯಾದರೂ ಅವರ ಪರವಾಗಿ ವಿದೇಶಾಂಗ ವ್ಯವಹಾರಗಳ ಸಹಾಯಕ ಸಚಿವ ಪಬಿತ್ರಾ ಮಾರ್ಗರಿಟಾ ಮತ್ತು ಬಿಹಾರ ರಾಜ್ಯಪಾಲ, ನಿವೃತ್ತ ಲೆಫ್ಟಿನೆಂಟ್ ಜನರಲ್ ಸೈಯದ್ ಅತಾ ಹಸ್ನೈನ್ ಭಾಗಿಯಾಗಲಿದ್ದಾರೆ.

ಕೋಟಿ ಜನ: ಪ್ರಸ್ತುತ ಖಮೇನಿ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕಾಗಿ ಟೆಹರಾನ್‌ನ 'ಗ್ರಾಂಡ್ ಮೊಸಲ್ಲಾ' ಸಂಕೀರ್ಣದಲ್ಲಿರಿಸಲಾಗುತ್ತದೆ.

ಟೆಹರಾನ್ ಮತ್ತು ಕೋಮ್ ನಗರಗಳಲ್ಲಿ ಬೃಹತ್ ಮೆರವಣಿಗೆ ನಡೆಯಲಿದೆ. ಇರಾಕ್‌ನ ಪವಿತ್ರ ನಗರಗಳಾದ ನಜಾಫ್ ಮತ್ತು ಕರ್ಬಾಲಾದಲ್ಲಿ ವಿಶೇಷ ಪ್ರಾರ್ಥನೆ ನಡೆಯಲಿವೆ. ಜು.9ರಂದು ಖಮೇನಿ ಅವರ ಹುಟ್ಟೂರು ಮಶ್ಹದ್‌ನಲ್ಲಿರುವ ಪ್ರಸಿದ್ಧ 'ಇಮಾಮ್ ರೆಜಾ' ಮಸೀದಿಯಲ್ಲಿ ಅಂತಿಮ ಕ್ರಿಯೆ ನೆರವೇರಲಿದ್ದು, ವಿವಿಧ ದೇಶಗಳ ಗಣ್ಯರು, ಆಹ್ವಾನಿತರು, ಇರಾನ್ ಪ್ರಜೆಗಳೂ ಸೇರಿದಂತೆ 1 ಕೋಟಿಗೂ ಅಧಿಕ ಜನರು ಭಾಗಿಯಾಗುವ ನಿರೀಕ್ಷೆಯಿದೆ.

ರಾಕೇಶ್ ಆದಿವಾಸಿಗೆ 2 ಬಾರಿ ವಜ್ರ ಸಿಕ್ಕಿದೆ!

ಪನ್ನಾ: ಮಧ್ಯಪ್ರದೇಶದ ಪನ್ನಾ ಜಿಲ್ಲೆಯ ಬುಡಕಟ್ಟು ಸಮುದಾಯದ ಕಾರ್ಮಿಕ ರಾಕೇಶ್ ಆದಿವಾಸಿ ಅವರ ಕುಟುಂಬದವರಿಗೆ ಜಿಲ್ಲೆಯ ಅಹಿರ್‌ಗಾಂವ್ ಪ್ರದೇಶದಲ್ಲಿ ಉತ್ಖನನ ಕಾಮಗಾರಿ ಗುತ್ತಿಗೆ ಕೆಲಸ ನಡೆಸಿದ್ದಾಗ 11.19 ಕ್ಯಾರಟ್‌ನ ಅತ್ಯುತ್ತಮ ಗುಣಮಟ್ಟದ ಬಿಳಿ ವಜ್ರ ಸಿಕ್ಕಿದೆ.

ರಾಕೇಶ್ ಕುಟುಂಬದವರಿಗೆ ವಜ್ರ ಸಿಕ್ಕಿರುವುದು ಇದೇ ಮೊದಲೇನೂ ಅಲ್ಲ. 2 ವರ್ಷದ ಹಿಂದೆಯೂ 19.22 ಕ್ಯಾರಟ್‌ನ ವಜ್ರ ಸಿಕ್ಕಿತ್ತು. ಆ ವಜ್ರವನ್ನು ರಾಕೇಶ್ ಸರಕಾರಕ್ಕೆ ಒಪ್ಪಿಸಿದ್ದರು. ಸರಕಾರ ಹರಾಜು ಹಾಕಿದಾಗ 93 ಲಕ್ಷ ರು.ಗಳಿಗೆ ಬಿಡ್ ಆಗಿತ್ತು. ಈಗ ಏಪ್ರಿಲ್‌ನಲ್ಲಿ ಸಿಕ್ಕ 2ನೇ ವಜ್ರವನ್ನೂ ಸರಕಾರಕ್ಕೆ ಒಪ್ಪಿಸಲಾಗಿದ್ದು, ಬೆಲೆ 30 ಲಕ್ಷ ರು.ಗಳಾಗಲಿದೆ ಎಂದು ಅಂದಾಜು ಮಾಡಲಾಗಿದೆ.

ಮೊದಲ ವಜ್ರಕ್ಕಾಗಿ ರಾಕೇಶ್ ಕುಟುಂಬಕ್ಕೆ ಹರಾಜಾದ ಹಣದಲ್ಲಿ ಸರಕಾರದ ರಾಯಲ್ಟಿ ಮೊತ್ತ ಕಳೆದು ಉಳಿದ ಮೊತ್ತವನ್ನು ನೀಡಲಾಗಿತ್ತು. ಅದರಿಂದ ರಾಕೇಶ್ ಕುಟುಂಬದ ಆರ್ಥಿಕ ಸ್ಥಿತಿ ಸುಧಾರಿಸಿತು. ಈ ಬಾರಿಯೂ ಇದೇ ಕ್ರಮದಲ್ಲಿ ರಾಕೇಶ್‌ಗೆ ಹಣ ಸಿಗಲಿದೆ. ವಜ್ರದಿಂದ ದೊಡ್ಡ ಮೊತ್ತ ಸಿಕ್ಕಿತೆಂದು ನಾವೇನೂ ಮನೆಯಲ್ಲಿ ಕೂರುವುದಿಲ್ಲ. ನಮ್ಮ ಕೆಲಸವೇ ಉತ್ಖನನ ಕಾಮಗಾರಿ. ಅದನ್ನೇ ಮುಂದುವರಿಸುತ್ತೇವೆ ಎಂದು ರಾಕೇಶ್ ಸೋದರ, ರಾಜು ಆದಿವಾಸಿ ಸುದ್ದಿಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ. ಪನ್ನಾ ಜಿಲ್ಲೆ ವಜ್ರ ನಿಕ್ಷೇಪಗಳಿಗೆ ಹೆಸರಾಗಿದೆ ಎಂಬುದು ಗಮನಾರ್ಹ.

ಮಧ್ಯಪ್ರದೇಶ ಪನ್ನಾ ಜಿಲ್ಲೆಯ ರಾಕೇಶ್, ಅವರ ಪತ್ನಿ ಕೈಯಲ್ಲಿರುವುದೇ 2ನೇ ವಜ್ರ.

220 ಅಡಿ ಕೊಳವೆ ಬಾವಿಗೆ ಬಾಲಕ ಬಲಿ

ಚಂಡೀಗಢ: ಹರಿಯಾಣ ರಾಜ್ಯದ ಅಂಬಾಲಾ ಜಿಲ್ಲೆಯಲ್ಲಿ ಧನಿಯೋರಾ ಗ್ರಾಮದಲ್ಲಿ ಹೊಲದಲ್ಲಿ ಉಳುಮೆ ಮಾಡುತ್ತಿದ್ದ ತಂದೆಗೆ ಉಪಹಾರ ತಲಪಿಸಲು ಮಂಗಳವಾರ ಬೆಳಗ್ಗೆ ಮಂಜಿತ್ ಅವರು ತೆರಳಿದ್ದರು. ಆಗ ಅವರ ಜತೆಗೆ 4 ವರ್ಷದ ಪುತ್ರ ನಿವೈರರ್ ಸಿಂಗ್ ಕೂಡಾ ಹೊಲಕ್ಕೆ ತೆರಳಿದ್ದ. ಬಾಲಕ ಹೊಲದಲ್ಲೊಂದೆಡೆ ಮರಳಿನಲ್ಲಿ ಆಟವಾಡುತ್ತಾ, ಅಲ್ಲಿಯೇ ತೆರೆದುಕೊಂಡಿದ್ದ 220 ಅಡಿ ಆಳದ ವಿಫಲ ಕೊಳವೆ ಬಾವಿಯನ್ನು ಬಗ್ಗಿ ನೋಡಲು ಹೋಗಿ ಜಾರಿಬಿದ್ದಿದ್ದಾನೆ.

ಗ್ರಾಮಸ್ಥರು, ಎಸ್‌ಡಿಆರ್‌ಎಫ್ ತಂಡ, ಅಗ್ನಿಶಾಮಕ ದಳ, ಜಿಲ್ಲಾಡಳಿತದ ಹಲವು ಅಧಿಕಾರಿಗಳು, ಸಿಬ್ಬಂದಿಗಳು ಸೇರಿಕೊಂಡು ಸಮರೋಪಾದಿಯಲ್ಲಿ ನಡೆಸಿದ 21 ಗಂಟೆಗಳ ರಕ್ಷಣಾ ಕಾರ್ಯಾಚರಣೆ ಕೊನೆಗೂ ಫಲ ನೀಡಲಿಲ್ಲ. ಪುಟ್ಟ ಬಾಲಕ ನಿವೈರರ್ ಸಿಂಗ್ ಕೊಳವೆ ಬಾವಿಯೊಳಗೇ ಜೀವ ಬಿಟ್ಟಿದ್ದ. ಬುಧವಾರ ನಸುಕಿನ 3.40ರ ವೇಳೆ ಬಾಲಕನ ದೇಹವನ್ನು ಕೊಳವೆ ಬಾವಿಯಿಂದ ಹೊರತೆಗೆದು ತಕ್ಷಣವೇ ಅಂಬುಲೆನ್ಸ್‌ನಲ್ಲಿ ತಡೆರಹಿತ ಸಂಚಾರ ವ್ಯವಸ್ಥೆಯಲ್ಲಿ ಅಂಬಾಲಾ ನಗರದ ಕಂಟೋನ್ಮೆಂಟ್ ಪ್ರದೇಶದಲ್ಲಿರುವ ಸಿವಿಲ್ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ, ವೈದ್ಯರು, ಬಾಲಕ ಅದಾಗಲೇ ಮೃತಪಟ್ಟಿದ್ದಾನೆ ಎಂದು ತಿಳಿಸಿದ್ದಾರೆ.

ಉ.ಪ್ರ. ರಾಕೇಶ್ ಮೆದುಳು, ಹೃದಯ, ಶ್ವಾಸಕೋಸ, ಕಿಡ್ನಿ, ಕರುಳು ಕಾಣೆ

ಮೃತ ಭಾರತದ ನಾವಿಕನ ಅಂಗಾಂಗ ಕದ್ದ ವೆನೆಜುವೆಲಾ

ದೆಹಲಿ: ಉತ್ತರ ಪ್ರದೇಶದ ಡಿಯೋರಿಯಾ ನಿವಾಸಿಯಾದ 33 ವರ್ಷದ ಭಾರತೀಯ ವಾಣಿಜ್ಯ ನೌಕೆಗಳ ನಾವಿಕ ರಾಕೇಶ್ ಚೌಹಾಣ್ ದಕ್ಷಿಣ ಅಮೆರಿಕ ಖಂಡದ ದೇಶ ವೆನೆಜುವೆಲಾದಲ್ಲಿ ಮೇ ತಿಂಗಳಲ್ಲಿ ಸಾವಿಗೀಡಾದರು. ಹೃದಯಾಘಾತದಿಂದ ಸಾವು ಸಂಭವಿಸಿದೆ ಎಂದು ಹೇಳಿದ ವೆನೆಜುವೆಲಾ ಆಡಳಿತ, ಮೃತದೇಹವನ್ನು ಒಂದು ತಿಂಗಳ ಕಾಲ ಫ್ರೀಜರ್‌ನಲ್ಲಿರಿಸಿತ್ತು.

ಆ ಬಳಿಕ ಭಾರತ ಸರಕಾರದ ವಿದೇಶಾಂಗ ಸಚಿವಾಲಯದ ನೆರವಿನಲ್ಲಿ ರಾಜೇಶ್ ಮೃತದೇಹ ಭಾರತಕ್ಕೆ ತರಲಾಯಿತು. ರಾಕೇಶ್ ಮೃತದೇಹದ ಮೇಲೆ ಎಲ್ಲೆಲ್ಲಿಯೂ ಹೊಲಿಗೆಗಳಿದ್ದವು. ಇದರಿಂದ ಅನುಮಾನಗೊಂಡ ರಾಕೇಶ್ ಕುಟುಂಬದವರು, ಜಿಲ್ಲಾ ಕೇಂದ್ರದ ಆಸ್ಪತ್ರೆಯಲ್ಲಿ ಮರು ಮರಣೋತ್ತರ ಪರೀಕ್ಷೆಗೆ ಮನವಿ ಮಾಡಿದರು.

ಅಧಿಕೃತವಾಗಿ ಸರಕಾರಿ ಆಸ್ಪತ್ರೆ ಶವಾಗಾರದಲ್ಲಿ ಮತ್ತೆ ಮರಣೋತ್ತರ ಪರೀಕ್ಷೆ ನಡೆಸಿದಾಗ ಭಯಾನಕ ಸತ್ಯ ಹೊರಬಿದ್ದಿತು. ಮೃತದೇಹದಲ್ಲಿ ಮಿದುಳು, ಹೃದಯ, ಎರಡೂ ಪಾರ್ಶ್ವದ ಶ್ವಾಸಕೋಶಗಳು ಮತ್ತು ಶ್ವಾಸನಾಳ, ಯಕೃತ್, 2 ಮೂತ್ರಪಿಂಡ, ಮೆದೋಜೀರಕ ಗ್ರಂಥಿ, ಜಠರ, ಕರುಳುಗಳು, ಥೈರಾಯ್ಡ್, ಹಯಾಯ್ಡ್, ಲಾರಿಂಕ್ಸ್ ಎಲ್ಲವೂ ನಾಪತ್ತೆಯಾಗಿದ್ದವು. ಇದರಿಂದ ಆಘಾತಗೊಂಡ ಕುಟುಂಬದವರು, ರಾಕೇಶ್ ಸಾವು ಮತ್ತು ದೇಹದ ಅಂಗಾಂಗಗಳು ಕಾಣೆಯಾಗಿರುವ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ಭಾರತ ಸರಕಾರವನ್ನು ಒತ್ತಾಯಿಸಿದ್ದಾರೆ.

ನಾವಿಕ ರಾಕೇಶ್ ಅವರ ಮೃತದೇಹದ ಈ ಸ್ಥಿತಿಯು ವಿದೇಶದಲ್ಲಿ ಭಾರತೀಯ ಕಾರ್ಮಿಕರ ದುಃಸ್ಥಿತಿ ಮತ್ತು ವಿದೇಶದ ಅಧಿಕಾರಿಗಳ ಜವಾಬ್ದಾರಿಗಳ ಬಗ್ಗೆ ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ ಎಂದು ಭಾರತೀಯ ನಾವಿಕರ ಸಂಘಗಳ ಒಕ್ಕೂಟ(ಎಫ್‌ಎಸ್‌ಯುಐ) ಅಸಮಾಧಾನ ವ್ಯಕ್ತಪಡಿಸಿದ್ದು, ಸಮಗ್ರ ತನಿಖೆಗೆ ಆಗ್ರಹಿಸಿದೆ.

ಸಮಾಚಾರ ಸಣ್ಣದಲ್ಲ

ವೃತ್ತಿ ಆಧಾರಿತ ನೂತನ ಯೋಜನೆ ರೂಪಿಸಲು ಮುಂದಾದ ಸಿಎಂ ಡಿಕೆ

ಬೆಂಗಳೂರು: ಗ್ರಾಮೀಣ ಭಾಗಗಳಲ್ಲಿ ವಾಸಿಸುವ ಹಿಂದುಳಿದ ಸಮುದಾಯಗಳ ಸಾಮಾಜಿಕ ಹಾಗೂ ಆರ್ಥಿಕ ಸಬಲೀಕರಣಕ್ಕೆ ಹೊಸ ಆಯಾಮ ನೀಡುವ ಉದ್ದೇಶದಿಂದ, ಇನ್ನೂ ಸಾಂಪ್ರದಾಯಿಕ ವೃತ್ತಿಗಳನ್ನು ಅವಲಂಬಿಸಿರುವ ಸಮುದಾಯಗಳ ಸಮಗ್ರ ದತ್ತಾಂಶ ಸಂಗ್ರಹಿಸಿ, ಅವರ ಅಗತ್ಯಗಳಿಗೆ ಅನುಗುಣವಾದ ವೃತ್ತಿ ಆಧಾರಿತ ಹಾಗೂ ವೈಜ್ಞಾನಿಕ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಇಲಾಖೆಯ ವಿವಿಧ ಯೋಜನೆಗಳ ಅನುಷ್ಠಾನ, ಫಲಾನುಭವಿಗಳ ವ್ಯಾಪ್ತಿ, ಯೋಜನೆಗಳ ಪರಿಣಾಮಕಾರಿತ್ವ ಹಾಗೂ ಮುಂದಿನ ಕಾರ್ಯತಂತ್ರದ ಕುರಿತು ಸಮಗ್ರ ಪರಿಶೀಲನೆ ನಡೆಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಅನೇಕ ಹಿಂದುಳಿದ ಸಮುದಾಯಗಳು ತಮ್ಮ ಸಾಂಪ್ರದಾಯಿಕ ವೃತ್ತಿಗಳನ್ನೇ ಜೀವನೋಪಾಯವಾಗಿ ಅವಲಂಬಿಸಿಕೊಂಡಿದ್ದು, ಬದಲಾಗುತ್ತಿರುವ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಅವರಿಗೆ ಹೊಸ ಕೌಶಲ್ಯ, ಆಧುನಿಕ ತಂತ್ರಜ್ಞಾನ, ಮಾರುಕಟ್ಟೆ ಸಂಪರ್ಕ ಮತ್ತು ಹಣಕಾಸಿನ ಬೆಂಬಲ ಕಲ್ಪಿಸುವ ದಿಸೆಯಲ್ಲಿ ವಿಶೇಷ ಯೋಜನೆಗಳನ್ನು ರೂಪಿಸಬೇಕಾಗಿದೆ. ಇದಕ್ಕಾಗಿ ಸಮುದಾಯವಾರು ಸಮಗ್ರ ದತ್ತಾಂಶ ಸಂಗ್ರಹಿಸಿ, ಅಗತ್ಯಾಧಾರಿತ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವಂತೆ ಮುಖ್ಯಮಂತ್ರಿ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಎರಡು ವರ್ಷದ ಪುಟ್ಟ ಮಕ್ಕಳಿಗೆ ದೈಹಿಕ ಹಿಂಸೆ: ಎಫ್‌ಐಆರ್ ದಾಖಲು

ಬೆಂಗಳೂರು: ನಗರದ ಐಟಿ ಕಂಪನಿಯೊಂದರ ಆವರಣದಲ್ಲಿರುವ ಡೇ-ಕೇರ್ ಕೇಂದ್ರದಲ್ಲಿ ಎರಡು ವರ್ಷದ ಪುಟ್ಟ ಮಕ್ಕಳಿಗೆ ದೈಹಿಕ ಹಿಂಸೆ, ಕಿರುಕುಳ ನೀಡಿರುವ ಆಘಾತಕಾರಿ ಘಟನೆ ಬೆಳಕಿಗೆ ಬಂದಿದೆ. ಮಕ್ಕಳಿಗೆ ದೈಹಿಕ ಹಿಂಸೆ ನೀಡುವ ವಿಡಿಯೋಗಳು ಸದ್ಯ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿವೆ. ಆ ಬೆನ್ನಲ್ಲೇ ಮಕ್ಕಳ ಸಹಾಯವಾಣಿಗೆ ಈ ಬಗ್ಗೆ ದೂರು ಬಂದಿದೆ. ಸದ್ಯ ಡೇ-ಕೇರ್ ಕೇಂದ್ರದ ಐವರು ಆಯಾಗಳ ವಿರುದ್ಧ ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಎಚ್ ಎಎಲ್ ಕ್ಯಾಂಪಸ್‌ನಲ್ಲಿರುವ ಪ್ರಮುಖ ಐಟಿ ಸಂಸ್ಥೆ ಕ್ಯಾಪ್ಜೆಮಿನಿ ಆವರಣದಲ್ಲಿರುವ ಬ್ರೂಕ್‌ಫೀಲ್ಡ್ ನಲ್ಲಿರೋ ಸೊಸೈಟಿ ಜನರಲ್ ಬೇಬಿ ಕೇರ್ ಸೆಂಟರ್ ನಲ್ಲಿ ಈ ಅಮಾನವೀಯ ಕೃತ್ಯ ನಡೆದಿದೆ. ಕಂಪನಿಯಲ್ಲಿ ಕೆಲಸ ಮಾಡುವ ಉದ್ಯೋಗಿಗಳು ತಮ್ಮ ಪುಟ್ಟ ಮಕ್ಕಳನ್ನು ನೋಡಿಕೊಳ್ಳಲು ಈ ಸೆಂಟರ್‌ನಲ್ಲಿ ಬಿಟ್ಟು ಹೋಗುತ್ತಾರೆ. ಆದರೆ, ಅಲ್ಲಿನ ಆಯಾಗಳು ಮಾತ್ರ ಮಕ್ಕಳ ಮೇಲೆ ಮೃಗೀಯ ವರ್ತನೆ ತೋರಿದ್ದಾರೆ. ಮಕ್ಕಳು ಅಳುವಾಗ ಅಥವಾ ಗಲಾಟೆ ಮಾಡಿದಾಗ ಹಿಂಸೆ ನೀಡಿದ್ದಾರೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಮಕ್ಕಳನ್ನು ವಾಷಿಂಗ್ ಮಷಿನ್ ಒಳಗಡೆ ಹಾಕುವ ಸಿಬ್ಬಂದಿ: ಇನ್ನು ವೈರಲ್ ಆಗಿರುವ ವಿಡಿಯೋ ಮತ್ತಷ್ಟು ಭಯಾನಕವಾಗಿವೆ. ಮಕ್ಕಳನ್ನು ವಾಷಿಂಗ್ ಮಷಿನ್ ಒಳಗಡೆ ಹಾಕಿರುವುದು, ಬಲವಂತವಾಗಿ ಟಾಯ್ಲೆಟ್ ಜೆಟ್ ಸ್ಪ್ರೇ ಪೈಪ್ ಮೂಲಕ ನೇರವಾಗಿ ಮಕ್ಕಳ ಬಾಯಿಗೆ ತುರುಕಿ ನೀರು ಬಿಡುವ ಮೂಲಕ ಅತ್ಯಂತ ಅಮಾನುಷವಾಗಿ ನಡೆದುಕೊಂಡಿದ್ದಾರೆ. ಅಷ್ಟೇ ಅಲ್ಲದೆ ಶೌಚಾಲಯದೊಳಗೆ ಕೂಡಿ ಹಾಕುವುದಲ್ಲದೆ ಕಿರುಚಾಡದಂತೆ ಹೆದರಿಸಿದ್ದಾರೆ. ಆಯಾಗಳ ಈ ಕ್ರೂರ ಕೃತ್ಯಗಳು ವಿಡಿಯೋದಲ್ಲಿ ಸೆರೆಯಾಗಿವೆ. ಮಕ್ಕಳು ಭಯದಿಂದ ಅಳುತ್ತಿರುವ ವಿಡಿಯೋಗಳು ವೈರಲ್ ಆಗಿವೆ.

ಸಿಬ್ಬಂದಿ ನೇಮಕಾತಿಯಲ್ಲಿ ಅಕ್ರಮ, ಕಾಮಗಾರಿಗಳಲ್ಲಿ ಹಣ ಲೂಟಿ

ಬಗೆದಷ್ಟು ಬಯಲಾಗುತ್ತಲೇ ಇದೆ ಒಕ್ಕಲಿಗರ ಸಂಘದ ಕರ್ಮಕಾಂಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಿಬ್ಬಂದಿಗಳ ನೇಮಕಾತಿಯಲ್ಲಿ ಅಕ್ರಮ, ಕಾಮಗಾರಿಗಳಲ್ಲಿ ಹಣ ಲೂಟಿ, ಕಾನೂನಿಗೆ ವಿರುದ್ಧವಾಗಿ ಆಡಳಿತಾತ್ಮಕ ನಿರ್ಧಾರಗಳು, ಬಗೆದಷ್ಟು ಬಯಲಿಗೆ ಬರುತ್ತಿದೆ ಒಕ್ಕಲಿಗರ ಸಂಘದ ಕರ್ಮಕಾಂಡ...

ಒಕ್ಕಲಿಗರ ಸಂಘದ ಆಡಳಿತ ಮಂಡಳಿಗೆ ಭ್ರಷ್ಟಾಚಾರ ಆರೋಪ ಅಂಟಿಕೊಂಡಿದೆ. ಸ್ವತಃ ಸಂಘದ ಕೆಲ ನಿರ್ದೇಕರು ನಡೆಯುತ್ತಿರುವ ಅಕ್ರಮಗಳ ಬಗ್ಗೆ ಬೆಳಕಿಗೆ ತಂದಿದ್ದಾರೆ. ರಾಜ್ಯದ ಪ್ರತಿಷ್ಠಿತ ಸಮುದಾಯ ಸಂಸ್ಥೆಗಳಲ್ಲಿ ಒಂದಾದ ರಾಜ್ಯ ಒಕ್ಕಲಿಗರ ಸಂಘ ವಿವಾದಗಳ ಸುಳಿಯಲ್ಲಿ ಸಿಲುಕಿದೆ.

ಸಂಘದ ನಿಯಮಾವಳಿ ಹಾಗೂ ನೇಮಕಾತಿ ನಿಯಮ ಉಲ್ಲಂಘಿಸಿ ಹಲವರನ್ನು ನೇರವಾಗಿ ನೇಮಕ ಮಾಡಲಾಗಿದೆ. ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕಂಪ್ಯೂಟರ್ ಆಪರೇಟರ್ ಮತ್ತು ಇತರೆ ಸಿಬ್ಬಂದಿ ಹುದ್ದೆಗಳನ್ನು ಜಾಹೀರಾತು ನೀಡಿ, ಸಂದರ್ಶನ ನಡೆಸಿ, ನಿಯಮಾನುಸಾರ ನೇಮಕ ಮಾಡಿಕೊಳ್ಳಲು ತೀರ್ಮಾನಿಸಿದ್ದರೂ, ನಂತರ ಅದನ್ನು ಪಾಲಿಸದೇ ಇಷ್ಟಾನಿಷ್ಟವಾಗಿ ನೇಮಕಾತಿ ಆದೇಶ ನೀಡಲಾಗಿದೆ. ಸಂಘದ ಸಿಎನ್‌ಆರ್ ನಿಯಮಾವಳಿಗಳ ಪ್ರಕಾರ ಅರ್ಜಿಗಳನ್ನು ಆಹ್ವಾನಿಸಿ, ಅರ್ಹತಾ ಪಟ್ಟಿ ಸಿದ್ಧಪಡಿಸಿ, ನೇಮಕಾತಿ ಸಮಿತಿಯ ಮೂಲಕ ಸಂದರ್ಶನ ನಡೆಸಬೇಕಿತ್ತು. ಆದರೆ ಈ ಎಲ್ಲ ಪ್ರಕ್ರಿಯೆಗಳನ್ನು ಕಡೆಗಣಿಸಿ, ಅರ್ಹತೆ ಇಲ್ಲದವರಿಗೂ ನೇಮಕಾತಿ ನೀಡಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಒಕ್ಕಲಿಗ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಕೋನಪ್ಪರೆಡ್ಡಿ ಮಾಹಿತಿ ನೀಡಿದ್ದಾರೆ.

ಯೋಗ್ಯವಲ್ಲದ ಗುತ್ತಿಗೆದಾರರಿಗೆ ಟೆಂಡರ್: ಕಪ್ಪುಪಟ್ಟಿಗೆ ಸೇರಿಸಲಾಗಿದ್ದ ಕೆಲವು ಗುತ್ತಿಗೆದಾರರಿಗೆ ಮರುಕಾಮಗಾರಿ ನೀಡಲಾಗಿದೆ. ಕಾರ್ಯಕಾರಿ ಸಮಿತಿಯ ತೀರ್ಮಾನದಂತೆ ಕೆಲವು ಗುತ್ತಿಗೆದಾರರ ಒಪ್ಪಂದಗಳನ್ನು ರದ್ದುಪಡಿಸಿ, ಇಎಂಡಿ ಮೊತ್ತ ವಶದಲ್ಲಿಟ್ಟುಕೊಂಡು ಕಪ್ಪುಪಟ್ಟಿಗೆ ಸೇರಿಸಲಾಗಿತ್ತು. ಆದರೂ ನಂತರ ಅವರಿಗೇ ಮತ್ತೆ ಕಾಮಗಾರಿಗಳನ್ನು ನೀಡಿರುವುದು ಪ್ರಶ್ನಾರ್ಥಕವಾಗಿದೆ. ತಮ್ಮ ವಿರುದ್ಧ ಡೆಂಟಲ್

ಕಾಲೇಜಿನ ಉಪನ್ಯಾಸಕರಿಗೆ ಹೆಚ್ಚುವರಿ ವೇತನ ನೀಡಿದ ಆರೋಪದಡಿ ಕೈಗೊಂಡ ಅಮಾನತು ಕ್ರಮವೂ ಕಾನೂನು ಬಾಹಿರವಾಗಿದೆ. ಈ ಸಂಬಂಧ ಸಹಕಾರ ಇಲಾಖೆ ಹಾಗೂ ನ್ಯಾಯಾಲಯಗಳಿಂದ ನಮ್ಮ ಪರವಾಗಿ ಅನುಕೂಲಕರ ಆದೇಶಗಳು ಬಂದಿದ್ದು, ಸದಸ್ಯತ್ವದಿಂದ ಅಮಾನತುಗೊಳಿಸಿರುವ ಕ್ರಮ ಸಂಘದ ಬೈಲಾ ನಿಯಮಗಳಿಗೆ ವಿರುದ್ಧವಾಗಿದೆ ಎಂದು ಇಲಾಖೆ ವರದಿಗಳು ಹೇಳಿವೆ ಎಂದು ಆರೋಪ ಮಾಡಿದ್ದಾರೆ.

ಫಾರ್ಮಸಿ ಕಾಲೇಜಿನಲ್ಲಿ ಆಯ್ಕೆಯಾದ ಸಿಬ್ಬಂದಿಗೆ ಹಲವು ತಿಂಗಳುಗಳಿಂದ ಸಂಬಳ ಪಾವತಿಸಿಲ್ಲ. ಈ ಸಂಬಂಧ ನ್ಯಾಯಾಲಯ ಆದೇಶ ನೀಡಿದರೂ ಸಂಬಳ ವಿತರಣೆ ಆಗಿಲ್ಲ ಎಂದು ಆರೋಪಿಸಿದರು. ಅಲ್ಲದೆ, ಕಾಲೇಜು ಪ್ರವೇಶಾತಿ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಇಲ್ಲದಿರುವುದು, ಗುತ್ತಿಗೆದಾರರಿಂದ ಕಮಿಷನ್ ಬೇಡಿಕೆ ಇಟ್ಟಿರುವುದು ಹಾಗೂ ವಿವಿಧ ಕಾಮಗಾರಿಗಳಲ್ಲಿ ಹಣಕಾಸು ಅವ್ಯವಹಾರಗಳು ನಡೆದಿವೆ. ಸಂಘದ ಕೆಲ ಪದಾಧಿಕಾರಿಗಳ ವರ್ತನೆ ಮತ್ತು ಆಡಳಿತ ಶೈಲಿಯಿಂದ ಸಂಘದ ಗೌರವಕ್ಕೆ ಧಕ್ಕೆಯಾಗುತ್ತಿದೆ. ಅಧ್ಯಕ್ಷರು ಆಡಳಿತದ ಮೇಲೆ ಸಮರ್ಪಕ ನಿಯಂತ್ರಣ ವಹಿಸುತ್ತಿಲ್ಲ ಎಂಬ ಆರೋಪವನ್ನೂ ಅವರು ಮಾಡಿದರು. ಆಸ್ಪತ್ರೆ ಹಾಗೂ ಶಿಕ್ಷಣ ಸಂಸ್ಥೆಗಳ ಖರೀದಿ ಪ್ರಕ್ರಿಯೆಗಳಲ್ಲಿ ಕೂಡ ಅಕ್ರಮಗಳಿರುವ ಬಗ್ಗೆ ಅನುಮಾನ ವ್ಯಕ್ತಪಡಿಸಿದರು.

ತಮ್ಮ ವಿರುದ್ಧ ಹೊರಡಿಸಿರುವ ಅಮಾನತು ಆದೇಶ ಅನ್ಯಾಯವಾಗಿದೆ ಎಂದು ಹೇಳಿದ ಸೋಮನಾಥ್ ರೆಡ್ಡಿ, ಸಂಘದ ಹಿತಾಸಕ್ತಿಗಾಗಿ ಈ ವಿಚಾರಗಳನ್ನು ಸಾರ್ವಜನಿಕರ ಮುಂದಿಡುತ್ತಿದ್ದೇನೆ ಎಂದು ಸ್ಪಷ್ಟಪಡಿಸಿದರು. ಆರೋಪಗಳ ಕುರಿತು ಸ್ವತಂತ್ರ ತನಿಖೆ ನಡೆಸಿ ಸತ್ಯಾಂಶ ಬಹಿರಂಗಪಡಿಸಬೇಕು ಎಂದು ಅವರು ಆಗ್ರಹಿಸಿದರು.

ವಿವಿಧ ಶಿಕ್ಷಣ ಸಂಸ್ಥೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ನಿಯಮಗಳನ್ನು ಉಲ್ಲಂಘಿಸಿ ಅಂಕಗಳನ್ನು ನೀಡಲಾಗಿದ್ದು, ಇದರಿಂದ ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ. ಕೆಲವು ನೇಮಕಾತಿ ವಿಚಾರಗಳು ಈಗಾಗಲೇ ನ್ಯಾಯಾಲಯದ ಮೆಟ್ಟಿಲೇರಿವೆ.

-ಟಿ.ಕೋನಪ್ಪರೆಡ್ಡಿ
ಒಕ್ಕಲಿಗ ಸಂಘದ ಪ್ರಧಾನ ಕಾರ್ಯದರ್ಶಿ

ಸಂಘದ ಆಡಳಿತದಲ್ಲಿ ಹಣಕಾಸು ದುರುಪಯೋಗ

ಸಂಘದ ಆಡಳಿತದಲ್ಲಿ ಪಾರದರ್ಶಕತೆ ಕೊರತೆಯಿದ್ದು, ಚುನಾವಣಾ ಉದ್ದೇಶದಿಂದ ಹಣಕಾಸು ಮತ್ತು ಆಡಳಿತಾತ್ಮಕ ನಿರ್ಧಾರ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ. ಸಂಘದ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದಲೇ ನಾವು ಈ ವಿಷಯಗಳನ್ನು ಸಾರ್ವಜನಿಕರ ಮುಂದೆ ತರುತ್ತಿದ್ದೇವೆ. ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿಗಾಗಿ ಅಲ್ಲ, ಸಂಸ್ಥೆಯ ಭವಿಷ್ಯಕ್ಕೆ ಧಕ್ಕೆಯಾಗುತ್ತಿರುವ ಅಕ್ರಮಗಳ ವಿರುದ್ಧ ಧ್ವನಿ ಎತ್ತುತ್ತಿದ್ದೇವೆ. ಸಂಘದ ಹಣ ದುರುಪಯೋಗ ಹಾಗೂ ವಂಚನೆಯಾಗುತ್ತಿರುವುದು ಬೇಸರದ ಸಂಗತಿ ಎಂದು ಒಕ್ಕಲಿಗ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಕೋನಪ್ಪ ರೆಡ್ಡಿ ಅವರು ತಿಳಿಸಿದ್ದಾರೆ.

ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ದಿನೇಶ್ ಗುಂಡೂರಾವ್

ಮಾಧ್ಯಮವು ಸರಕಾರ ಜನರ ನಡುವಿನ ಸೇತುವೆ

ಬೆಂಗಳೂರು: ಮಾಧ್ಯಮ ವೃತ್ತಿ ಅತ್ಯಂತ ಶ್ರೇಷ್ಠವಾದದ್ದು. ಮಹಾತ್ಮಾ ಗಾಂಧಿ, ನೆಹರು, ಅಂಬೇಡ್ಕರ್ ಮುಂತಾದವರು ಈ ವೃತ್ತಿಯಿಂದಲೇ ಬಂದು ಜನರ, ದೇಶದ ಸೇವೆ ಮಾಡಿದವರು ಎಂದು ಮಾಜಿ ಸಚಿವ ದಿನೇಶ್ ಗೂಡೂರಾವ್ ಹೇಳಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಗಾಂಧಿ ಭವನದಲ್ಲಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಮಾಧ್ಯಮ, ಸರಕಾರ ಮತ್ತು ಜನರ ಮಧ್ಯೆ ಇರುವ ಸೇತು. ಜನರ ಅಭಿಪ್ರಾಯ ಸರಕಾರಕ್ಕೆ ತಿಳಿಸುವುದು, ಸರಕಾರದ ನೀತಿ ನಿಯಮಗಳನ್ನು ಜನರಿಗೆ ತಲುಪಿಸುವ ಮುಖ್ಯ ಕಾರ್ಯ ಮಾಧ್ಯಮದಿಂದಲೇ ಆಗುತ್ತದೆ. ಮಾಧ್ಯಮ ಯಾರ ಒತ್ತಡಕ್ಕೂ ಮಣಿಯದೇ ಕೆಲಸ ಮಾಡಿದಾಗ ಮಾತ್ರ ವ್ಯವಸ್ಥೆ, ಸಮಾಜಕ್ಕೆ ಒಳ್ಳೆಯದಾಗುತ್ತದೆ. ಕಳೆದ ಒಂದು ದಶಕದಲ್ಲಿ ಮಾಧ್ಯಮ ಅತ್ಯಂತ ವೇಗವಾಗಿ ಬದಲಾವಣೆ ಆಗಿದೆ. ಸಾಮಾಜಿಕ ಜಾಲತಾಣ ಬಂದ ಮೇಲಂತೂ ಮಾಧ್ಯಮಕ್ಕೆ ದೊಡ್ಡ ಸವಾಲೇ ಎದುರಾಗಿದೆ. ನಿಜವಾದ ಸುದ್ದಿ ಯಾವುದು ಎನ್ನುವುದನ್ನು ಸಾರ್ವಜನಿಕರು ತಿಳಿದುಕೊಳ್ಳುವುದು ಕಷ್ಟವಾಗಿದೆ ಎಂದರು.

ಪ್ರಸ್ತುತ ಎಲ್ಲರೂ ಅಭಿಪ್ರಾಯ ವ್ಯಕ್ತಪಡಿಸುವವರೇ ಆಗಿದ್ದಾರೆ. ಆಕರ್ಷಣೀಯ ಸುದ್ದಿಗಳೇ ಪ್ರಾಧಾನ್ಯತೆ ಪಡೆದುಕೊಳ್ಳುತ್ತಿದೆ. ಮಾನವೀಯತೆಯ ಸುದ್ದಿ ಪ್ರಧಾನವಾಗಿ ಬರಬೇಕು. ವ್ಯಾಪಾರೀಕರಣವೂ ಮಾಧ್ಯಮ ಕ್ಷೇತ್ರಕ್ಕೆ ಕಾಲಿಟ್ಟಿದೆ. ಉದ್ದಿಮೆದಾರರು ಮಾಧ್ಯಮ ಸಂಸ್ಥೆಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿದ್ದಾರೆ. ಪತ್ರಿಕಾ ಸ್ವಾತಂತ್ರ್ಯ ಕಡಿಮೆ ಆಗುತ್ತಿದೆ ಎಂದು ಸರ್ವೇಗಳು ಹೇಳುತ್ತಿದೆ. ಒಟ್ಟಿನಲ್ಲಿ ಪಾರದರ್ಶಕ ಮಾಧ್ಯಮಗಳು ಸದಾ ಕಾಲವೂ ಉಳಿದುಕೊಳ್ಳುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೆಷಾ ಖಾನಂ, ತೆಲಂಗಾಣ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಶ್ರೀನಿವಾಸ ರೆಡ್ಡಿ, ವಾರ್ತಾ ಇಲಾಖೆ ಆಯುಕ್ತ ಎಂ ಎನ್ ಅನುಚೇತ್, ಕೆಯುಡಬ್ಲುಜೆ ಅಧ್ಯಕ್ಷ ಶಿವಾನಂದ ತಗಡೂರು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಮುಂತಾದವರು ಇದ್ದರು.

ಪತ್ರಿಕಾ ವಿತರಕರ ಸೇವೆ ಶ್ಲಾಘನೀಯ: ಪ್ರಭಾಕರ್

ಬೆಂಗಳೂರು: ಪತ್ರಿಕಾ ದಿನಾಚರಣೆಯ ಅಂಗವಾಗಿ ನಗರದ ಮೆಜೆಸ್ಟಿಕ್‌ನಲ್ಲಿರುವ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದಲ್ಲಿ ಬುಧವಾರ ಪತ್ರಿಕಾ ವಿತರಕರೊಂದಿಗೆ ಆಚರಿಸಲಾದ ಕಾರ್ಯಕ್ರಮದಲ್ಲಿ ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ಭಾಗವಹಿಸಿ, ಪತ್ರಿಕಾ ವಿತರಕರ ಸೇವೆ ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪತ್ರಿಕಾ ವಿತರಕರು ಮಾಧ್ಯಮ ಸಂಸ್ಥೆಗಳ ನರನಾಡಿಗಳಿಗೆ ಆಮ್ಲಜನಕ ಇದ್ದಂತೆ. ಯಾವುದೇ ಹವಾಮಾನವನ್ನೂ ಲೆಕ್ಕಿಸದೆ ಪ್ರತಿದಿನ ಪತ್ರಿಕೆಗಳನ್ನು ಮನೆಬಾಗಿಲಿಗೆ ತಲುಪಿಸುವ ಅವರ ಸೇವೆ ಅತ್ಯಂತ ಶ್ಲಾಘನೀಯ. ಪತ್ರಿಕೋದ್ಯಮದಲ್ಲಿ ತಾವು ನಡೆದು ಬಂದ ಹಾದಿ ಸ್ಮರಿಸಿ, ಮನೆಮನೆಗೆ ಪತ್ರಿಕೆ ವಿತರಿಸುವ ಮೂಲಕವೇ ಪತ್ರಿಕೋದ್ಯಮಕ್ಕೆ ಕಾಲಿಟ್ಟು ನಂತರ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರ ಹುದ್ದೆಯವರೆಗೆ ಬೆಳೆದ ತಮ್ಮ ಪಯಣ ಹಂಚಿಕೊಂಡರು.

ಕನ್ನಡಪ್ರಭ ಪ್ರಧಾನ ಸಂಪಾದಕ ರವಿ ಹೆಗಡೆ ಮಾತನಾಡಿ, ಚಳಿ, ಮಳೆ, ಬಿಸಿಲೆನ್ನದೆ ದುಡಿಯುವ ಪತ್ರಿಕಾ ವಿತರಕರು ಮಾಧ್ಯಮ ಕ್ಷೇತ್ರದ ಬೆನ್ನೆಲುಬು. ಅವರ ಸೇವೆ ಸಮಾಜ ಸದಾ ಗೌರವಿಸಬೇಕು ಎಂದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಪತ್ರಿಕಾ ವಿತರಕರಿಗೆ ನ್ಯಾಯ ದೊರಕಿಸಲು ಕೆ. ಶಂಭುಲಿಂಗ ಅವರ ನೇತೃತ್ವದಲ್ಲಿ ನಡೆದ ಹೋರಾಟಕ್ಕೆ ಆಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸರಕಾರದಲ್ಲಿ ಕೆ.ವಿ. ಪ್ರಭಾಕರ್ ಅವರ ಸಹಕಾರದಿಂದ ಹಲವು ಸೌಲಭ್ಯಗಳು ದೊರೆತಿವೆ. ಸಂಘಟನೆ ಇದ್ದರೆ ಮಾತ್ರವೇ ಹಕ್ಕುಗಳು ಮತ್ತು ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯ ಎಂಬುದನ್ನು ಈ ಹೋರಾಟ ಸಾಬೀತುಪಡಿಸಿದೆ ಎಂದರು.

ಕಾರ್ಯಕ್ರಮದಲ್ಲಿ ಐಎಫ್‌ಡಬ್ಲ್ಯೂಜೆ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ, ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಉಪಾಧ್ಯಕ್ಷ ಪ್ರಶಾಂತ್, ಪ್ರಧಾನ ಕಾರ್ಯದರ್ಶಿ ಸುರೇಶ್, ಸಂಗಂ, ಗೋಪಾಲ, ಜಗದೀಶ್, ದೇವರಾಜ್, ನಾಗರತ್ನ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಕನ್ನಡಪ್ರಭ ಪ್ರಧಾನ ಸಂಪಾದಕ ರವಿ ಹೆಗಡೆ, ಐಎಫ್‌ಡಬ್ಲ್ಯೂಜೆ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ, ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಉಪಾಧ್ಯಕ್ಷ ಪ್ರಶಾಂತ್ ಸೇರಿದಂತೆ ಇನ್ನಿತರರು ಇದ್ದರು.

ಬಿಎಂಆರ್‌ಸಿಎಲ್‌ಗೆ ರೈಲ್ವೆ ಸುರಕ್ಷತಾ ಮುಖ್ಯ ಆಯುಕ್ತರ ನಿರ್ದೇಶನ

ಮೆಟ್ರೋ ಸೇವಾ ವ್ಯತ್ಯಯಗಳ ತನಿಖೆಗೆ ಸೂಚನೆ

ಬೆಂಗಳೂರು: ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ಮೆಟ್ರೋದಲ್ಲಿ ಸಂಭವಿಸಿದ ಎಲ್ಲ ಸೇವಾ ವ್ಯತ್ಯಯಗಳ ಕುರಿತು ಸಮಗ್ರ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ರೈಲ್ವೆ ಸುರಕ್ಷತೆಯ ಮುಖ್ಯ ಆಯುಕ್ತರು ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತಕ್ಕೆ ನಿರ್ದೇಶನ ನೀಡಿದ್ದಾರೆ. ಸಂಸದ ತೇಜಸ್ವಿ ಸೂರ್ಯ ಅವರು ಜೂನ್ 25ರಂದು ಬರೆದ ಪತ್ರದ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಜೂನ್ 23ರಂದು ನೇರಳೆ ಮಾರ್ಗದಲ್ಲಿ ಉಂಟಾದ ಸೇವಾ ವ್ಯತ್ಯಯದ ಬಳಿಕ ಮೆಟ್ರೋ ಜಾಲದಲ್ಲಿ ಹೆಚ್ಚುತ್ತಿರುವ ತಾಂತ್ರಿಕ ದೋಷಗಳ ಬಗ್ಗೆ ಸಂಸದರು ತೀವ್ರ ಕಳವಳ ವ್ಯಕ್ತಪಡಿಸಿದ್ದರು. ಪ್ರಯಾಣಿಕರ ಸುರಕ್ಷತೆ ಹಾಗೂ ಸೇವೆಗಳ ವಿಶ್ವಾಸಾರ್ಹತೆ ಖಚಿತಪಡಿಸಲು ತುರ್ತು ಸುಧಾರಣಾ ಕ್ರಮ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದರು.

ರೈಲ್ವೆ ಸುರಕ್ಷತೆಯ ಮುಖ್ಯ ಆಯುಕ್ತರು ಬಿಎಂಆರ್‌ಸಿಎಲ್‌ಗೆ ಕಳೆದ ಮೂರು ವರ್ಷಗಳ ಸೇವಾ ವ್ಯತ್ಯಯಗಳ ಕಾರಣಗಳು, ಅವುಗಳ ಹಿನ್ನೆಲೆ ಹಾಗೂ ಕೈಗೊಂಡಿರುವ ಸುಧಾರಣಾ ಕ್ರಮಗಳ ವಿವರ ನೀಡುವಂತೆ ಸೂಚಿಸಿದ್ದಾರೆ. ಜತೆಗೆ ಮೆಟ್ರೋ ಕಾರ್ಯಾಚರಣೆ ಮತ್ತು ನಿರ್ವಹಣೆಯ ಸಮಗ್ರ ಲೆಕ್ಕಪರಿಶೋಧನೆ ನಡೆಸುವಂತೆ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೂ ನಿರ್ದೇಶನ ನೀಡಲಾಗಿದೆ.

ಈ ಕುರಿತು ಸಂಸದ ತೇಜಸ್ವಿ ಸೂರ್ಯ ಮಾತನಾಡಿ, ಜನವರಿ 2024ರಿಂದ ನಮ್ಮ ಮೆಟ್ರೋ ಜಾಲದಲ್ಲಿ ಸುಮಾರು 20 ತಾಂತ್ರಿಕ ದೋಷಗಳು ಮತ್ತು ಸೇವಾ ವ್ಯತ್ಯಯ ವರದಿಯಾಗಿದ್ದು, ಅವುಗಳಲ್ಲಿ ಹೆಚ್ಚಿನವು ನೇರಳೆ ಮಾರ್ಗದಲ್ಲೇ ಸಂಭವಿಸಿವೆ. ಇದು ಕೇವಲ ತಾಂತ್ರಿಕ ವೈಫಲ್ಯಗಳ ಸರಣಿಯಷ್ಟೇ ಅಲ್ಲದೆ, ವ್ಯವಸ್ಥೆಯೊಳಗಿನ ಗಂಭೀರ ಸಮಸ್ಯೆಗಳ ಸೂಚನೆಯಾಗಿರಬಹುದು. ಮೆಟ್ರೋ ಸುರಕ್ಷತೆ ಮತ್ತು ಸಿಸ್ಟಮ್ಸ್ ಎಂಜಿನಿಯರಿಂಗ್ ತಜ್ಞರೊಂದಿಗೆ ಸಮಾಲೋಚನೆ ನಡೆಸಿದ ಬಳಿಕ, ಕಾರ್ಯಾಚರಣೆಯ ಸುರಕ್ಷತೆ, ಮುನ್ನೆಚ್ಚರಿಕೆ ನಿರ್ವಹಣೆ ಹಾಗೂ ವ್ಯವಸ್ಥೆಯ ವಿಶ್ವಾಸಾರ್ಹತೆ ಬಲಪಡಿಸುವ ಹಲವು ತಾಂತ್ರಿಕ ಶಿಫಾರಸುಗಳನ್ನು ಬಿಎಂಆರ್‌ಸಿಎಲ್‌ಗೆ ಸಲ್ಲಿಸಲಾಗಿದೆ. ಅಲ್ಲದೆ, ಪುನರಾವರ್ತಿತ ಸೇವಾ ವ್ಯತ್ಯಯಗಳನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ರೈಲ್ವೆ ಸುರಕ್ಷತಾ ಆಯುಕ್ತರಿಗೂ ಮನವಿ ಮಾಡಲಾಗಿದೆ. ಬೆಂಗಳೂರು ನಗರದ ಪ್ರಮುಖ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಾದ ನಮ್ಮ ಮೆಟ್ರೋದ ಯಶಸ್ಸು ಸುರಕ್ಷತೆ, ವಿಶ್ವಾಸಾರ್ಹತೆ ಮತ್ತು ಹೊಣೆಗಾರಿಕೆಯ ಉನ್ನತ ಮಾನದಂಡಗಳ ಮೇಲೆ ಅವಲಂಬಿತವಾಗಿದೆ ಎಂದರು.

ಪ್ರಯಾಣಿಕರ ಸುರಕ್ಷತೆ ಮತ್ತು ಸೌಕರ್ಯವೇ ಬಿಎಂಆರ್‌ಸಿಎಲ್ ಅತ್ಯುನ್ನತ ಆದ್ಯತೆಯಾಗಬೇಕು. ಬೆಂಗಳೂರಿನ ಜನರು ಸುರಕ್ಷಿತ, ವಿಶ್ವಾಸಾರ್ಹ ಹಾಗೂ ಪಾರದರ್ಶಕ ಮೆಟ್ರೋ ಸೇವೆಗೆ ಅರ್ಹರು. ರಾಜ್ಯ ಸರಕಾರ ಮತ್ತು ಬಿಎಂಆರ್‌ಸಿಎಲ್ ತಕ್ಷಣ ಸುಧಾರಣಾ ಕ್ರಮ ಕೈಗೊಂಡು ವ್ಯವಸ್ಥೆಯ ಲೋಪದೋಷ ಸರಿಪಡಿಸಬೇಕು ಹಾಗೂ ಲಕ್ಷಾಂತರ ಪ್ರಯಾಣಿಕರ ವಿಶ್ವಾಸ ಮರುಸ್ಥಾಪಿಸಬೇಕು.

-ತೇಜಸ್ವಿ ಸೂರ್ಯ, ಸಂಸದ

ಕೆಂಪೇಗೌಡರ ಸಮಾಧಿಯನ್ನು ಸ್ಮಾರಕವನ್ನಾಗಿ ನಿರ್ಮಿಸಿ

ಬೆಂಗಳೂರು: ವಿಶ್ವವಿಖ್ಯಾತ ಬೆಂಗಳೂರು ನಗರದ ಉಗಮ ಸ್ಥಾನ ದೊಡ್ಡಪೇಟೆ ಸರ್ಕಲ್ (ಚಿಕ್ಕಪೇಟೆ) ಹಾಗೂ ಕೆಂಪಾಪುರದ ಕೆಂಪೇಗೌಡರ ಸಮಾಧಿ ಸ್ಥಳ ಶೀಘ್ರವಾಗಿ ಭವ್ಯ ಸ್ಮಾರಕಗಳನ್ನಾಗಿ ಸರಕಾರ ನಿರ್ಮಿಸಬೇಕೆಂದು ಚಿಲುಮೆ ರವಿಕುಮಾರ್ ಹಾಗೂ ಚಿಲುಮೆ ರವಿಕುಮಾರ್ ಫೌಂಡೇಷನ್ ಸದಸ್ಯರು ಕೆಂಪೇಗೌಡರ 517 ಜನ್ಮದಿನೋತ್ಸವ ಆಚರಿಸಿ ಆಗ್ರಹಿಸಿದರು.

ನಾಡಪ್ರಭು ಕೆಂಪೇಗೌಡರು ಕ್ರಿ.ಶ. 1537ರಲ್ಲಿ ಈಗಿನ ದೊಡ್ಡಪೇಟೆ ಸರ್ಕಲ್‌ನಲ್ಲಿ 64 ಪೇಟೆಗಳೊಂದಿಗೆ ಬೆಂದಕಾಳೂರು (ಬೆಂಗಳೂರು) ನಿರ್ಮಿಸಲು ಪಣತೊಟ್ಟರು. ನಗರದ ಗಡಿರೇಖೆಯನ್ನು ಗುರುತಿಸಲು ನೇಗಿಲು ಹೊತ್ತ ಜೋಡೆತ್ತುಗಳನ್ನು ಅಂದು ಬಿಟ್ಟಿದ್ದರು. ನೇಗಿಲು ಕಟ್ಟಿದ 4 ಜೋಡೆತ್ತುಗಳನ್ನು ನಾಲ್ಕು ದಿಕ್ಕುಗಳಿಗೂ ಬಿಟ್ಟು, ಬೆಂಗಳೂರು ನಗರದ ಆರಂಭದ ಸನ್ನಿವೇಶವನ್ನು ಮರುಸೃಷ್ಟಿ ಮೂಲಕ ಕೆಂಪೇಗೌಡ ಜನ್ಮೋತ್ಸವನ್ನು ಕಳೆದ 2 ವರ್ಷಗಳಿಂದ ಚಿಲುಮೆ ರವಿಕುಮಾರ್ ಫೌಂಡೇಶನ್ ಸದಸ್ಯರು ಆಚರಿಸುತಿದ್ದಾರೆ.

ನಾಡಪ್ರಭು ಕೆಂಪೇಗೌಡರು 500 ವರ್ಷಗಳ ಹಿಂದೆ 65 ವಿವಿಧ ನಾಣ್ಯಗಳನ್ನು ಚಲಾವಣೆಗೆ ತಂದು ಬೆಂಗಳೂರು ಮುಕ್ತ ವ್ಯಾಪಾರ ಕೇಂದ್ರವನ್ನಾಗಿ ಮಾಡಿದ್ದರು. ಇಂತಹ ಮಹಾನ್ ವ್ಯಕ್ತಿಯ ಸಮಾಧಿ ಸ್ಥಳವಿಂದು ಶಿಥಿಲ ಅವಸ್ಥೆಗೆ ಬಂದಿದೆ. ನಮ್ಮ ಫೌಂಡೇಶನ್ ಸದಸ್ಯರು ಸಮಾಧಿ ಸ್ಥಳ ಹಾಗೂ ಬೆಂಗಳೂರು ಉಗಮ ಸ್ಥಾನಗಳಲ್ಲಿ ನಾಡ ಹಬ್ಬಗಳಲ್ಲಿ ಮೊದಲು ಸ್ವಚ್ಚತಾ ಕಾರ್ಯಮಾಡುವಂತೆ ಈ ಸ್ಥಳಗಲ್ಲಿ ಕಳೆದ 2 ವರ್ಷಗಳಿಂದ ಸ್ವಚ್ಚತಾ ಅಭಿಯಾನ ಮಾಡಿ ಸಾವಿರಾರು ಜನರೊಂದಿಗೆ ಕೆಂಪೇಗೌಡರ ಜನ್ಮೋತ್ಸ ವನ್ನು ಪ್ರತಿವರ್ಷ ನಾಡಹಬ್ಬದಂತೆ ಆಚರಿಸು ತ್ತೇವೆ. ಮುಂದಿನ ದಿನಗಳಲ್ಲಿ ದೂರ ದೃಷ್ಠಿಯ ಮಹಾನ್ ನಾಯಕ ಕೆಂಪೇಗೌಡರ ಸ್ಮಾರಕ ನಿರ್ಮಿಸುವವರೆಗೂ ಹೋರಾಟ ಮಾಡುತ್ತೇವೆ ಎಂದು ಚಿಲುಮೆ ರವಿಕುಮಾರ್ ಫೌಂಡೇಷನ್ ಅಧ್ಯಕ್ಷ ರವಿಕುಮಾರ್ ಹೇಳಿದರು.



ಚಿಲುಮೆ ರವಿಕುಮಾರ್ ಹಾಗೂ ಚಿಲುಮೆ ರವಿಕುಮಾರ್ ಫೌಂಡೇಷನ್ ಸದಸ್ಯರು ಕೆಂಪೇಗೌಡರ ಜನ್ಮೋತ್ಸವ ಆಚರಿಸಿದರು.

ಚಿಲುಮೆ ರವಿಕುಮಾರ್ ಫೌಂಡೇಶನ್ ಸದಸ್ಯರು ನಾಡಪ್ರಭು ಕೆಂಪೇಗೌಡರ ಜನ್ಮೋತ್ಸವಕ್ಕೆ ಕಳೆದ 2 ವರ್ಷಗಳಿಂದ ಬರುತ್ತಿದ್ದೇನೆ. ನಾಡಪ್ರಭು ಕೆಂಪೇಗೌಡರ ಸಾಧನೆಗಳನ್ನು ಬೆಂಗಳೂರಿಗರು ನಿತ್ಯ ನೆನಪಿಸಿಕೊಳ್ಳಬೇಕು. ಇಂಥ ಮಹಾನ್ ನಾಯಕ ಬೆಂಗಳೂರು ಆರಂಭದ ಸನ್ನಿವೇಶಗಳನ್ನು ಮರುಸೃಷ್ಟಿಮಾಡಿ ಆಚರಿಸುವುದು ವಿಶೇಷ. ಸರಕಾರ ಕೆಂಪೇಗೌಡರ ಸ್ಮಾರಕ ನಿರ್ಮಿಸಿ ಕೆಂಪೇಗೌಡರ ಸಾಧನೆಗಳನ್ನು ಇಂದಿನವರಿಗೆ ತಿಳಿಸಬೇಕು. ಚಿಲುಮೆ ರವಿಕುಮಾರ್ ಫೌಂಡೇಷನ್ ಸದಸ್ಯರ ಈ ಅಂದೋಲನಕ್ಕೆ ನಾವು ಜತೆಯಾಗಿ ಇರುತ್ತೇವೆ.

-ಧರ್ಮೇಂದ್ರಕುಮಾರ್, ಇತಿಹಾಸಕಾರ

ಜಾಗ ಹರಾಜು ಬಳಿಕ ಕನಿಷ್ಠ ಅವಧಿಯೊಳಗೆ ಗಣಿಗಾರಿಕೆ ಆರಂಭಕ್ಕೆ ನಿಯಮ ರೂಪಿಸಿ: ಸಿಎಂ

ವೈಜ್ಞಾನಿಕ ನಿಯಮ ರೂಪಿಸಲು ಸೂಚನೆ

ಬೆಂಗಳೂರು: ಹರಾಜಿನ ಮೂಲಕ ಜಾಗ ಪಡೆದು ವರ್ಷಗಟ್ಟಲೆ ಗಣಿಗಾರಿಕೆ ಆರಂಭಿಸದೆ ಜಾಗ ಇಟ್ಟುಕೊಂಡು ಕುಳಿತವರ ವಿರುದ್ಧ ಏನು ಕ್ರಮ ಕೈಗೊಂಡಿದ್ದೀರಿ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದ ಮುಖ್ಯಮಂತ್ರಿಗಳು, ಹರಾಜು ನಡೆದು ಎಷ್ಟು ಕನಿಷ್ಠ ಅವಧಿಯೊಳಗೆ ಗಣಿಗಾರಿಕೆ ಆರಂಭಿಸಬೇಕು ಎನ್ನುವ ಬಗ್ಗೆ ವೈಜ್ಞಾನಿಕ ನಿಯಮ ರೂಪಿಸಲು ಅಧಿಕಾರಿಗಳಿಗೆ ಜವಾಬ್ದಾರಿ ವಹಿಸಿದರು.

ವಿಧಾನಸೌಧದ ಸಮಿತಿ ಕೊಠಡಿಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸ್ಪಷ್ಟ ಸೂಚನೆಗಳನ್ನು ನೀಡಿದರು. ರಾಜ್ಯದಲ್ಲಿ ಗಣಿಗಾರಿಕೆಗೆ ಭೂಮಿ ಪಡೆದವರು ಎಷ್ಟು ಮಂದಿ ಇದ್ದಾರೆ ? ಲೀಸ್ ಪಡೆದ ಪ್ರಕರಣಗಳ ಸ್ಥಿತಿ ಗತಿ ಏನಿದೆ? ಗಣಿಗಾರಿಕೆ ಆರಂಭಿಸದಿರುವವರ ಪಟ್ಟಿ, ಅದಕ್ಕೆ ಕಾರಣಗಳೇನು, ಅರಣ್ಯ ಅನುಮತಿ ಬಾಕಿ ಇರುವ ಪ್ರಕರಣ ಗಳೆಷ್ಟು, ಬಾಕಿ ಉಳಿಯಲು ಕಾರಣಗಳೇನು ಎನ್ನುವುದೂ ಸೇರಿ ಸಮಗ್ರ ವರದಿ ಸಲ್ಲಿಸುವಂತೆ ಗಣಿ ಇಲಾಖೆಯ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಅವರಿಗೆ ಸಿಎಂ ಸೂಚನೆ ನೀಡಿದರು.

ರಾಜ್ಯದ ಗಣಿ ನೀತಿ ಮತ್ತು ಇತರೆ ರಾಜ್ಯಗಳಲ್ಲಿ ಇರುವ ಗಣಿ ನೀತಿ, ನಿಯಮ ಮತ್ತು ಕಾನೂನುಗಳನ್ನು ಸಮಗ್ರವಾಗಿ ಅಧ್ಯಯನ ನಡೆಸಿ, ವೈಜ್ಞಾನಿಕ ನಿಯಮ ರೂಪಿಸಲು ಸಿಎಂ ಆರ್ಥಿಕ ಸಲಹೆಗಾರರಾದ ಎಲ್.ಕೆ.ಅತೀಕ್ ಮತ್ತು ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್ ಅವರಿಗೆ ಸಿಎಂ ಜವಾಬ್ದಾರಿ ವಹಿಸಿದರು.

ವಿಚಾರಣೆಯಿಂದ ಹಿಂದೆ ಸರಿದ ನ್ಯಾಯಮೂರ್ತಿ

ಬೆಂಗಳೂರು: ರಾಜ್ಯ ಸರಕಾರ ಜಾರಿಗೆ ತಂದಿರುವ ಮಹತ್ವಾಕಾಂಕ್ಷೆಯ 'ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಕಾಯಿದೆ-2025'ರ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯು ಹೊಸ ತಿರುವು ಪಡೆದುಕೊಂಡಿದೆ.

ಹೈಕೋರ್ಟ್ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರು ಈ ಪ್ರಕರಣದ ವಿಚಾರಣೆಯಿಂದ ಹಿಂದೆ ಸರಿದಿದ್ದಾರೆ. ಬುಧವಾರ ಬೆಳಗ್ಗೆ ವಿಚಾರಣೆ ಆರಂಭವಾಗುತ್ತಿದ್ದಂತೆ, ಪ್ರಕರಣವನ್ನು ಬೇರೆ ಪೀಠಕ್ಕೆ ವರ್ಗಾಯಿಸುವಂತೆ ರಿಜಿಸ್ಟ್ರಾರ್ ಜನರಲ್ ಅವರಿಗೆ ಸೂಚಿಸಿ ನ್ಯಾ. ಸೂರಜ್ ಗೋವಿಂದರಾಜು ವಿಚಾರಣೆ ಮುಂದೂಡಿದರು.

ಕಂಪನಿಗಳ ಪ್ರಮುಖ ವಾದ: ಕೇಂದ್ರ ಸರಕಾರ ಈಗಾಗಲೇ ಸಾಮಾಜಿಕ ಭದ್ರತಾ ಸಂಹಿತೆ-2020 ಜಾರಿಗೆ ತಂದಿದೆ. ಇಡೀ ದೇಶಕ್ಕೆ ಅನ್ವಯವಾಗುವ ಕೇಂದ್ರೀಯ ಕಾನೂನು ಜಾರಿಯಲ್ಲಿರುವಾಗ, ರಾಜ್ಯ ಸರಕಾರವು ಅದೇ ವಿಷಯದ ಮೇಲೆ ಸಮಾನಾಂತರ ಕಾನೂನು ರೂಪಿಸಿರುವುದು ಸಂವಿಧಾನದ ವಿಧಿ 254ರ ಅಡಿ ಕಾನೂನುಬಾಹಿರ. ಕೇಂದ್ರದ ಕಾಯಿದೆಯಡಿ ಈಗಾಗಲೇ ಕಂಪನಿಗಳು ವಾರ್ಷಿಕ ವಹಿವಾಟಿನ ಆಧಾರದ ಮೇಲೆ ದೇಣಿಗೆ ನೀಡುತ್ತಿವೆ. ಇದರ ಬೆನ್ನಲ್ಲೇ ರಾಜ್ಯ ಸರಕಾರವು ಪ್ರತಿ ವಹಿವಾಟಿನ ಮೇಲೆ ಪ್ರತ್ಯೇಕ ಕಲ್ಯಾಣ ಶುಲ್ಕ ವಿಧಿಸುತ್ತಿರುವುದು ಉದ್ಯಮದ ಮೇಲೆ ವಿಪರೀತ ಆರ್ಥಿಕ ಹೊರೆ ಹೇರುತ್ತದೆ.

ನಾವು ಅಧಿಕಾರಕ್ಕೆ ಬಂದಿರುವುದನ್ನು ವಿರೋಧ ಪಕ್ಷದವರಿಂದ ಸಹಿಸಲು ಆಗುತ್ತಿಲ್ಲ। ನನ್ನ ಹೆಸರು ಹೇಳಿಕೊಂಡು ಬರುವವರ ಬಗ್ಗೆ ಹುಷಾರಾಗಿರಿ

ಬೆಂಗಳೂರು ದ.ಜಿಲ್ಲೆಗೆ ಹೊಸ ರೂಪದ ಸಂಕಲ್ಪ: ಸಿಎಂ

ಬೆಂಗಳೂರು: ರಾಮನಗರದ ನಗರ ಪ್ರದೇಶ ಮಾತ್ರವಲ್ಲ, ಇಡೀ ಬೆಂಗಳೂರು ದಕ್ಷಿಣ ಜಿಲ್ಲೆಗೆ ಹೊಸ ರೂಪ ನೀಡಬೇಕು ಎಂಬುದು ನನ್ನ ಸಂಕಲ್ಪ. ಈಗ ಮಾಡದಿದ್ದರೆ ಮತ್ಯಾವ ಸಮಯದಲ್ಲೂ ಮಾಡಲು ಸಾಧ್ಯವಿಲ್ಲ ಎಂಬ ಅರಿವಿದೆ. ಇದನ್ನು ಹಂತ ಹಂತವಾಗಿ ಮಾಡುತ್ತೇವೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಅವರು ರಾಮನಗರದ ಜನರಿಗೆ ಭರವಸೆ ನೀಡಿದರು.

ರಾಮನಗರದ ನಗರಸಭೆ ಅಧ್ಯಕ್ಷರಾದ ಕೆ. ಶೇಷಾದ್ರಿ ಅವರ ನೇತೃತ್ವದಲ್ಲಿ ರಾಮನಗರದ ರೈತ ಮುಖಂಡರು ಹಾಗೂ ನಾಗರಿಕರು ಬುಧವಾರ ಸಿಎಂ ಅವರನ್ನು ಗೃಹ ಕಚೇರಿ ಕೃಷ್ಣಾದಲ್ಲಿ ಭೇಟಿ ಮಾಡಿ ತಮ್ಮ ಬೇಡಿಕೆಗಳನ್ನು ನೀಡಿದರು.

ರಾಮನಗರದ ಸಿಎಂಸಿ ಕಚೇರಿ ಬಳಿ ವಾಣಿಜ್ಯ ಸಂಕೀರ್ಣ, ಅಂಬೇಡ್ಕರ್ ಭವನದ ನವೀಕರಣ, ರಾಮನಗರ ರೈಲ್ವೇ ನಿಲ್ದಾಣದಿಂದ ಸಿಎಂಸಿ ವ್ಯಾಪ್ತಿಯ ರಸ್ತೆ ಅಗಲೀಕರಣ, ವಿವಿಧ ವಾರ್ಡ್‌ಗಳ ವಿಸ್ತರಣೆ ಅಭಿವೃದ್ಧಿ ಕಾರ್ಯ ಸೇರಿದಂತೆ ತಾಲ್ಲೂಕಿನಲ್ಲಿ 772.70 ಕೋಟಿ ಮೊತ್ತದ 18 ವಿವಿಧ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ ಮನವಿ ಮಾಡಿದರು.

ರೈತರು ಹಾಗೂ ನಾಗರಿಕರ ಅಹವಾಲು ಸ್ವೀಕರಿಸಿದ ಶಿವಕುಮಾರ್ ಅವರು, ಅವರ ಭರವಸೆಗಳನ್ನು ಈಡೇರಿಸಲಾಗುವುದು ಎಂದು ಭರವಸೆ ನೀಡಿದರು. ಈ ವೇಳೆ ಶಿವಕುಮಾರ್ ಅವರು ಬಂದಿದ್ದ ಜನರನ್ನು ಉದ್ದೇಶಿಸಿ ಮಾತನಾಡಿದರು.

ಈಗಾಗಲೇ ವೈದ್ಯಕೀಯ ವಿವಿ ನಿರ್ಮಾಣ ಕಾರ್ಯ ನಡೆಯುತ್ತಿದೆ. ಈ ಕ್ಷೇತ್ರ ಹಾಗೂ ಜಿಲ್ಲೆ ಈ ಹಿಂದೆ ಹೇಗಿತ್ತು ಎಂದು ನಾನು ಈಗ ಚರ್ಚೆ ಮಾಡುವುದಿಲ್ಲ, ಹೇಳಿದರೆ ಅದು ರಾಜಕೀಯವಾಗುತ್ತದೆ. ಈಗ ನಮ್ಮ ಮೇಲೆ ಜವಾಬ್ದಾರಿ ಇದೆ. ಈ ಭಾಗದ ಅನುಕೂಲಕ್ಕೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಬಡವರಿಗೆ ಯಾವ ರೀತಿ ನಿವೇಶನ ಹಂಚಿಕೆ ಮಾಡಬೇಕು ಎಂದು ಈಗಾಗಲೇ ನಿಮ್ಮ ಶಾಸಕರಾದ ಇಕ್ಬಾಲ್ ಹುಸೇನ್ ಅವರಿಗೆ ಮಾರ್ಗದರ್ಶನ ನೀಡಿದ್ದೇನೆ. ಮೊದಲ ಹಂತದಲ್ಲೇ ನಿವೇಶನ ಹಂಚಿಕೆಗೆ ಶೀಘ್ರದಲ್ಲೇ ಹಣ ಬಿಡುಗಡೆ ಮಾಡಲಾಗುವುದು. ಚನ್ನಪಟ್ಟಣ, ಮಾಗಡಿ, ರಾಮನಗರ, ಕನಕಪುರ ಎಲ್ಲವೂ ನನ್ನ ಕ್ಷೇತ್ರವೇ. ರಾಮನಗರ ಜಿಲ್ಲೆಯ ಕೇಂದ್ರ ಕಚೇರಿಯಾಗಿದ್ದು, ಅದಕ್ಕೆ ಎಷ್ಟು ಗೌರವ ನೀಡಬೇಕೋ ನೀಡುತ್ತೇವೆ ಎಂದು ತಿಳಿಸಿದರು.

ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಿದ ನಂತರ ಹೇಗೆ ಗೌರವ ಬಂದಿದೆ ಎಂದು ನೀವು ಗಮನಿಸಿದ್ದೀರಿ. ಜನ ನಿಮ್ಮನ್ನು ಹೇಗೆ ನೋಡುತ್ತಿದ್ದಾರೆ. ನಿಮ್ಮ ಆಸ್ತಿ ಮೌಲ್ಯ ಎಷ್ಟಾಗಿದೆ ನಿಮಗೆ ಗೊತ್ತಿದೆ. ನೀವುಗಳು ಎಲ್ಲಾ ಜನರನ್ನು ವಿಶ್ವಾಸಕ್ಕೆ ಪಡೆದು ಕೆಲಸ ಮಾಡಿ. ಬೇರೆ ಪಕ್ಷದವರು ಸಂಪರ್ಕ ಮಾಡಲು ಇಚ್ಛಿಸುತ್ತಿದ್ದಾರೆ. ಅವರನ್ನು ಸೇರಿಸಿಕೊಂಡು ಮುಂದಿನ ಚುನಾವಣೆ ಸುಗಮವಾಗಿ ನಡೆಯುವಂತೆ ಮಾಡಿ. ನಾವು ಅಧಿಕಾರಕ್ಕೆ ಬಂದಿರುವುದನ್ನು ವಿರೋಧ ಪಕ್ಷದವರಿಂದ ಸಹಿಸಲು ಆಗುತ್ತಿಲ್ಲ. ನಿಮಗೆ ಒಳ್ಳೆಯದಾಗುವಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ನೀವು ನನ್ನ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಳ್ಳುವ ಕೆಲಸ ಮಾಡುತ್ತೇವೆ ಎಂದರು.

ಏಜೆಂಟರಂತೆ ಬರುವವರ ಬಗ್ಗೆ ಹುಷಾರಾಗಿರಿ

ನನ್ನ ಹೆಸರು ಹೇಳಿಕೊಂಡು ಕೆಲವರು ಏಜೆಂಟರಂತೆ ಬರುತ್ತಾರೆ, ಅಂತಹವರಿಂದ ಹುಷಾರಾಗಿರಿ. ನಿಮ್ಮ ಊರಿನ ಅಭಿವೃದ್ಧಿ ವಿಚಾರ ಹೊರತುಪಡಿಸಿ, ಅಧಿಕಾರಿಗಳು, ಗುತ್ತಿಗೆದಾರರ ವಿಚಾರಕ್ಕೆ ತಲೆಕೆಡಿಸಿಕೊಳ್ಳಬೇಡಿ. ಸಿಎಂ ಜಿಲ್ಲೆ ಎಂದರೆ ಯಾವತ್ತೂ ಇಲ್ಲದ ನೆಂಟರು ಕೂಡಲೇ ಹುಟ್ಟಿಕೊಳ್ಳುತ್ತಾರೆ. ಅಂತಹವರನ್ನು ಹತ್ತಿರಕ್ಕೆ ಬಿಟ್ಟುಕೊಳ್ಳಬೇಡಿ. ಅಂತಹವರು ಬಂದು ಏನಾದರೂ ಕೇಳಿದರೆ, ನೀವುಂಟು, ಅವರುಂಟು ಎಂದು ಹೇಳಿ ಎಂದು ಮುಖ್ಯಮಂತ್ರಿ ಸಲಹೆ ನೀಡಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಸಿಎಂ ಭೇಟಿ ಮಾಡಿ ತಮ್ಮ ಬೇಡಿಕೆಗಳ ಪಟ್ಟಿ ಸಲ್ಲಿಸಿದ ರಾಮನಗರದ ರೈತರು.

ಕ್ಷೇತ್ರ ಬಿಟ್ಟವರಿಂದ ರಾಜಕೀಯ

ಕ್ಷೇತ್ರವನ್ನೇ ಬಿಟ್ಟು ಹೋದವರು ಈಗ ಮತ್ತೆ ಬಂದು ವಿರೋಧ ಮಾಡುತ್ತಿದ್ದಾರೆ. ನಮ್ಮ ಕೈಲಾದಷ್ಟು ಒಳ್ಳೆಯ ಕೆಲಸ ನಾವು ಮಾಡುತ್ತೇವೆ. ನಾನು ಯಾವ ಊರನ್ನು ಒಕ್ಕಲೆಬ್ಬಿಸುವುದಿಲ್ಲ. ಎಲ್ಲಾ ಊರುಗಳು ಅಲ್ಲೇ ಇರುತ್ತವೆ. ಆ ಊರುಗಳು ಅಭಿವೃದ್ಧಿಯಾಗುತ್ತವೆ. ಆ ಭಾಗದ ಜನರಿಗೆ ಪರಿಹಾರ ನೀಡಲಾಗುವುದು. ಎರಡು ಮೂರು ಹಳ್ಳಿಗಳನ್ನು ಸೇರಿ ಅಧಿಸೂಚನೆ ಹೊರಡಿಸುತ್ತಿದ್ದೇವೆ. ಕೆಲವರು ರಾಜಕಾರಣ ಮಾಡುತ್ತಿದ್ದಾರೆ. ಹಾಸನದ ರೈತರು ಬಂದು ಅವರ ಕಷ್ಟ ಹೇಳಿಕೊಂಡರು. ಹಾಸನ ಪಟ್ಟಣ ಪಕ್ಕ ಭೂಸ್ವಾಧೀನಪಡಿಸಿಕೊಂಡಿದ್ದು ಯಾಕೆ? ತಮ್ಮ ಕಾರ್ಯಕರ್ತನ 11 ಎಕರೆ ಬಿಟ್ಟು ಉಳಿದವುಗಳನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಈ ಬಗ್ಗೆ ಈಗ ಚರ್ಚೆ ಬೇಡ. ನಿಮ್ಮೆಲ್ಲರಿಗೂ ಒಳ್ಳೆಯದಾಗಲಿ ಎಂದು ಈ ಹಿಂದೆ ದಳ ಹಾಗೂ ಬಿಜೆಪಿ ಕಾಲದಲ್ಲಿದ್ದ ಈ ಯೋಜನೆ ನಾನು ಮುಂದುವರಿಸುತ್ತಿದ್ದೇನೆ ಎಂದು ಸಿಎಂ ವಿವರಿಸಿದರು.

ಸಮಾಚಾರ ಸಣ್ಣದಲ್ಲ

ಜು.3ನೇ ವಾರದಿಂದ ಅಧಿವೇಶನ ಸಾಧ್ಯತೆ

ದೆಹಲಿ: ಸಂಸತ್ತಿನ ಮುಂಗಾರು ಅಧಿವೇಶನವು ಇದೇ ತಿಂಗಳ 20ರಿಂದ ಆಗಸ್ಟ್ 13ರ ವರೆಗೆ ನಡೆಯುವ ಸಾಧ್ಯತೆ ಇದ್ದು, ಈ ಕುರಿತು ಕೇಂದ್ರ ಸರಕಾರ ಶೀಘ್ರದಲ್ಲೇ ಅಧಿಕೃತ ಪ್ರಕಟಣೆ ಹೊರಡಿಸುವ ನಿರೀಕ್ಷೆಯಿದೆ. ಸುಮಾರು ನಾಲ್ಕು ವಾರಗಳ ಕಾಲ ನಡೆಯಲಿರುವ ಈ ಅಧಿವೇಶನದಲ್ಲಿ ಹಲವು ಮಹತ್ವದ ಮಸೂದೆಗಳು ಕುರಿತು ಚರ್ಚೆ ನಡೆಯಲಿದೆ. ಈ ಬಾರಿಯ ಅಧಿವೇಶನದಲ್ಲಿ ಮಹಿಳೆಯರಿಗೆ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ 33% ಮೀಸಲಾತಿ ಜಾರಿಗೊಳಿಸುವ ಸಂವಿಧಾನ ತಿದ್ದುಪಡಿ ಮಸೂದೆ ಹಾಗೂ ಅದಕ್ಕೆ ಸಂಬಂಧಿಸಿದ ಕ್ಷೇತ್ರ ಪುನರ್‌ವಿಂಗಡನೆ ಮಸೂದೆಯನ್ನು ಕೇಂದ್ರ ಸರಕಾರ ಮರುಪರಿಚಯಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಈ ಎರಡೂ ಮಸೂದೆಗಳು ಏಪ್ರಿಲ್‌ನಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ ಅಗತ್ಯವಾದ ಮೂರನೇ ಎರಡರಷ್ಟು ಬಹುಮತ ದೊರೆಯದ ಕಾರಣ ಅಂಗೀಕಾರವಾಗಿರಲಿಲ್ಲ. ಈಗ ಕೆಲವು ವಿರೋಧ ಪಕ್ಷಗಳ ವಿಷಯಾಧಾರಿತ ಬೆಂಬಲದ ನಿರೀಕ್ಷೆಯೊಂದಿಗೆ ಸರಕಾರ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಮುಂದಾಗಿದೆ. ಈ ಬಾರಿ ಅಧಿವೇಶನದಲ್ಲಿ ಟಿಎಂಸಿ ಮತ್ತು ಶಿವಸೇನೆಯಲ್ಲಿನ (ಯುಬಿಟಿ) ಬಂಡಾಯವು ಹೊರಹೊಮ್ಮುವ ಸಾಧ್ಯತೆ ಇದೆ. ಈಗಾಗಲೇ ಪ್ರತ್ಯೇಕ ಗುಂಪುಗಳಾಗಿ ಗುರುತಿಸಲು ಕೋರಿರುವ 20 ಟಿಎಂಸಿ ಮತ್ತು ಆರು ಶಿವಸೇನೆ (ಯುಬಿಟಿ) ಸಂಸದರ ಬೇಡಿಕೆಗಳ ಕುರಿತು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರ ನಿರ್ಧಾರಕ್ಕಾಗಿ ಕಾಯಲಾಗುತ್ತಿದೆ. ರಾಜ್ಯಸಭೆಯಲ್ಲಿ, ಹೊಸದಾಗಿ ಆಯ್ಕೆಯಾದ ಮತ್ತು ಮರು ಆಯ್ಕೆಯಾದ ಸಂಸದರು ಪ್ರಮಾಣವಚನ ಸ್ವೀಕರಿಸಿದ್ದಾರೆ. ರಾಜ್ಯಸಭೆಯಲ್ಲಿ ಚುನಾವಣೆ ಬಳಿಕ ಆಡಳಿತಾರೂಢ ಎನ್‌ಡಿಎ ಪರವಾಗಿ ಬಲಹೆಚ್ಚಿದೆ.

ವಿಕ್ರಮ್-1 ರಾಕೆಟ್ ಉಡಾವಣೆಗೆ ಸಿದ್ಧ

ಶ್ರೀಹರಿಕೋಟಾ: ಭಾರತದ ಬಾಹ್ಯಾಕಾಶ ಕ್ಷೇತ್ರದಲ್ಲಿ ಮಹತ್ವದ ಮೈಲಿಗಲ್ಲು ಗುರುತಿಸುವ ಹೈದರಾಬಾದ್ ಮೂಲದ ಖಾಸಗಿ ಬಾಹ್ಯಾಕಾಶ ಕಂಪನಿ ಸ್ಕೈರೂಟ್ ಏರೋಸ್ಪೇಸ್ ಅಭಿವೃದ್ಧಿಪಡಿಸಿದ ವಿಕ್ರಮ್-1 ರಾಕೆಟ್ ಅನ್ನು ಆಂಧ್ರಪ್ರದೇಶದ ತಿರುಪತಿ ಜಿಲ್ಲೆಯ ಶ್ರೀಹರಿಕೋಟದಲ್ಲಿರುವ ದೇಶದ ಮೊದಲ ಉಡಾವಣಾ ಕೇಂದ್ರಕ್ಕೆ ಯಶಸ್ವಿಯಾಗಿ ಸಾಗಿಸಲಾಗಿದೆ. ಮುಂಬರುವ 'ಮಿಷನ್ ಕಲಾಂ' ಉಡಾವಣೆಗಾಗಿ ಅಂತಿಮ ತಾಂತ್ರಿಕ ಪರಿಶೀಲನೆಗಳು ನಡೆಯುತ್ತಿವೆ. ಈ ಬೆಳವಣಿಗೆಗೆ ಸಂಬಂಧಿಸಿದ ಚಿತ್ರಗಳನ್ನು ಸ್ಕೈರೂಟ್ ಏರೋಸ್ಪೇಸ್ ಮಂಗಳವಾರ ಎಕ್ಸ್‌ನಲ್ಲಿ ಹಂಚಿಕೊಂಡಿದೆ. ವಿಕ್ರಮ್-1 ದೇಶದ ಮೊದಲ ಖಾಸಗಿ ಕಕ್ಷೆಯ ರಾಕೆಟ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ರಾಕೆಟ್ ಅನ್ನು ಸಣ್ಣ ಉಪಗ್ರಹಗಳನ್ನು ಭೂಮಿಯ ಕೆಳ ಕಕ್ಷೆಗೆ ಸಾಗಿಸಲು ವಿನ್ಯಾಸಗೊಳಿಸಲಾಗಿದೆ. ಸ್ಕೈರೂಟ್ ಪ್ರಕಾರ, ಖಾಸಗಿಯಾಗಿ ವಿನ್ಯಾಸಗೊಳಿಸಿದ, ಅಭಿವೃದ್ಧಿಪಡಿಸಿದ ಮತ್ತು ತಯಾರಿಸಿದ ಕಕ್ಷೀಯ ಉಡಾವಣಾ ವಾಹನವನ್ನು ಇಸ್ರೋದ ಮೊದಲ ಉಡಾವಣಾ ಪ್ಯಾಡ್‌ನಲ್ಲಿ ಜೋಡಿಸಲಾಗಿದೆ. 2022ರ ನವೆಂಬರ್‌ನಲ್ಲಿ ಬಾಹ್ಯಾಕಾಶಕ್ಕೆ ಹಾರಲು ಭಾರತದ ಮೊದಲ ಖಾಸಗಿಯಾಗಿ ಅಭಿವೃದ್ಧಿಪಡಿಸಿದ ಸಬ್ ಆರ್ಬಿಟ್ ರಾಕೆಟ್ ವಿಕ್ರಮ್-ಎಸ್‌ನೊಂದಿಗೆ ಸ್ಕೈರೂಟ್ ಇತಿಹಾಸ ನಿರ್ಮಿಸಿದ ಸುಮಾರು ಮೂರು ವರ್ಷಗಳ ನಂತರ ಈ ಮೈಲಿಗಲ್ಲು ಬಂದಿದೆ.

ಪ. ಬಂಗಾಳ ಸರಕಾರದ ವಿರುದ್ಧ ಮೊಯಿತ್ರಾ ಟೀಕೆ

ನಾಡಿಯಾ: ಪಶ್ಚಿಮ ಬಂಗಾಳದ ನಾಡಿಯಾ ಜಿಲ್ಲೆಯಲ್ಲಿ ಟಿಎಂಸಿ ಶಾಸಕಿ ಅಲಿಫಾ ಅಹ್ಮದ್ ಅವರ ನಿವಾಸದ ಹೊರಗೆ ನಡೆದ ಪ್ರತಿಭಟನೆಯ ಸಂದರ್ಭದಲ್ಲಿ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ತಮ್ಮ ಮೇಲೆ ಮೊಟ್ಟೆಗಳನ್ನು ಎಸೆದು ಘೋಷಣೆಗಳನ್ನು ಕೂಗಿದ್ದಾರೆ ಎಂದು ತೃಣಮೂಲ ಕಾಂಗ್ರೆಸ್ ಸಂಸದೆ ಮಹುವಾ ಮೊಯಿತ್ರಾ ಬುಧವಾರ ಆರೋಪಿಸಿದ್ದಾರೆ. ಅಹ್ಮದ್ ಅವರ ನಿವಾಸದಲ್ಲಿ ನಡೆದ ಟಿಎಂಸಿ ಸಭೆಯಲ್ಲಿ ಭಾಗವಹಿಸಲು ಮೊಯಿತ್ರಾ ಕಾಲಿಗಂಜ್‌ನ ಪಲಾಶಿಗೆ ತೆರಳಿದ್ದರು. ಈ ವೇಳೆ ಹೊರಗೆ ಜಮಾಯಿಸಿದ್ದ ಪ್ರತಿಭಟನಾಕಾರರ ಗುಂಪು 'ಗೋ ಬ್ಯಾಕ್' ಘೋಷಣೆಗಳನ್ನು ಕೂಗಿತು. ಅಲ್ಲದೆ ಮೊಟ್ಟೆಗಳನ್ನು ಎಸೆದು, 'ಚೋರ್' 'ಚೋರ್' ಎಂದು ಘೋಷಣೆಗಳನ್ನು ಕೂಗಿದರು ಎಂದು ಆರೋಪಿಸಿದ್ದಾರೆ. ಈ ಘಟನೆಯ ವಿಡಿಯೊವನ್ನು ಮೊಹಿತ್ರಾ ಅವರು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದು, ಬಿಜೆಪಿ ಕಾರ್ಯಕರ್ತರೇ ಪ್ರತಿಭಟನೆಯನ್ನು ಆಯೋಜಿಸಿದ್ದರು ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಸರಕಾರ ಬದಲಾದ ನಂತರ, ಕಾನೂನು ಮತ್ತು ಸುವ್ಯವಸ್ಥೆ ಕುಸಿದಿದೆ, ಪೊಲೀಸರು ಮೂಕ ಪ್ರೇಕ್ಷಕರಾಗಿದ್ದಾರೆ. ಬಿಜೆಪಿ ಈಗ ನನ್ನ ಮೇಲೆ ದಾಳಿ ಮಾಡಲು ಯೋಜಿಸಿದೆ. ಇವರು ಸಾಮಾನ್ಯ ಜನ ಅಲ್ಲ, ಅವರು ಬಿಜೆಪಿ ಕಾರ್ಯಕರ್ತರು ಎಂದು ಆರೋಪಿಸಿದ್ದಾರೆ. ಪೊಲೀಸರು ಮತ್ತು ಕೇಂದ್ರ ಭದ್ರತಾ ಸಿಬ್ಬಂದಿ ಸ್ವಲ್ಪ ಸಮಯದ ನಂತರ ಸ್ಥಳಕ್ಕೆ ತಲುಪಿ ಅವರೊಂದಿಗೆ ಮಾತನಾಡಿದ ನಂತರ ಪ್ರತಿಭಟನಾಕಾರರನ್ನು ಚದುರಿಸಲಾಯಿತು ಎಂದು ಜಿಲ್ಲೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಾಕ್‌ನಿಂದ ಜಾಗತಿಕ ಸಮುದಾಯಕ್ಕೆ ಮನವಿ

ಇಸ್ಲಾಮಾಬಾದ್: ಭಾರತ ಮತ್ತು ಪಾಕಿಸ್ತಾನ ನಡುವೆ ಸಿಂಧು ನದಿ ಜಲ ಹಂಚಿಕೆ ವಿಚಾರಕ್ಕೆ ಸಂಬಂಧಿಸಿದ ಉದ್ವಿಗ್ನತೆ ಮುಂದುವರೆದಿರುವಂತೆಯೇ ಪಾಕಿಸ್ತಾನ ಜಾಗತಿಕ ಸಮುದಾಯಕ್ಕೆ ಮನವಿ ಮಾಡಿದೆ. ಸಿಂಧು ಜಲ ಒಪ್ಪಂದ ದುರ್ಬಲಗೊಂಡರೆ ಅಥವಾ ಜಾರಿಗೆ ಬರದ ಪರಿಸ್ಥಿತಿ ನಿರ್ಮಾಣವಾದರೆ ಜಾಗತಿಕ ನಿಯಮಾಧಾರಿತ ವ್ಯವಸ್ಥೆಯ ಮೇಲೆಯೇ ಗಂಭೀರ ಪರಿಣಾಮ ಬೀಳಲಿದೆ ಎಂದು ಪಾಕಿಸ್ತಾನ ತನ್ನ ವ್ಯಥೆ ತೋಡಿಕೊಂಡಿದೆ.

ಕಂಚಿಗಾನಹಳ್ಳಿ, ಮಾರಶೆಟ್ಟಿಹಳ್ಳಿ ಅರಣ್ಯ ಪ್ರದೇಶದಲ್ಲಿ ಎತ್ತಿನಹೊಳೆ ಕಾಮಗಾರಿ ಪರಿಶೀಲನೆ

ಅಕ್ಟೋಬರ್ ವೇಳೆಗೆ ತುಮಕೂರಿಗೆ ಎತ್ತಿನಹೊಳೆ ನೀರು: ರಾಮಲಿಂಗಾರೆಡ್ಡಿ

ತುಮಕೂರು: ಮುಂದಿನ ಅಕ್ಟೋಬರ್ ವೇಳೆಗೆ ತುಮಕೂರಿಗೆ ಎತ್ತಿನಹೊಳೆ ನೀರು ಹರಿಯಲಿದೆ ಎಂದು ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಜಿಲ್ಲೆಯ ಗುಬ್ಬಿ ತಾಲೂಕಿನ ಪ್ಯಾಕೇಜ್ 11 ಕಂಚಿಗಾನಹಳ್ಳಿ, ಮಾರಶೆಟ್ಟಿಹಳ್ಳಿ ಅರಣ್ಯ ಪ್ರದೇಶದಲ್ಲಿ ಎತ್ತಿನಹೊಳೆ ಯೋಜನೆ ಕಾಮಗಾರಿ ಪರಿಶೀಲನೆ ನಡೆಸಿ ಮಾತನಾಡಿ, ಮಹತ್ವದ ಎತ್ತಿನಹೊಳೆ ಯೋಜನೆ ಕಾಮಗಾರಿ ಒಟ್ಟು 252 ಕಿ.ಮೀ.ಇದ್ದು, ಈಗಾಗಲೇ 220 ಕಿ.ಮೀ. ಕಾಮಗಾರಿ ಪೂರ್ಣಗೊಂಡಿದೆ. 23 ಕಿ.ಮೀ. ಕಾಮಗಾರಿ ಪ್ರಗತಿಯಲ್ಲಿದೆ. ಬಾಕಿ 9 ಕಿ.ಮೀ. ಕಾಮಗಾರಿ ಆಗಬೇಕಿದೆ. ಈ ವ್ಯಾಪ್ತಿಯಲ್ಲಿ 6 ಕಿ.ಮೀ. ಅರಣ್ಯ ಪ್ರದೇಶ ಇದ್ದುದರಿಂದ ಕಾಮಗಾರಿ ವಿಳಂಬಕ್ಕೆ ಕಾರಣವಾಯಿತು. ಇದೀಗ ಕೇಂದ್ರ ಸರಕಾರ ಪ್ರಕರಣವನ್ನು ಇತ್ಯರ್ಥಗೊಳಿಸಿದ್ದು, ಕಾಮಗಾರಿ ಪೂರ್ಣಗೊಂಡು ಅಕ್ಟೋಬರ್ ವೇಳೆಗೆ ತುಮಕೂರಿನವರೆಗೆ ಎತ್ತಿನಹೊಳೆ ನೀರು ಹರಿಸುವ ಎಲ್ಲಾ ಸಾಧ್ಯತೆಗಳಿವೆ ಎಂದು ತಿಳಿಸಿದರು.

ಮಾರಶೆಟ್ಟಿಹಳ್ಳಿ ಅರಣ್ಯ ವ್ಯಾಪ್ತಿಯಲ್ಲಿ 1.9 ಕಿ.ಮೀ. ಕಾಲುವೆ ಹಾದು ಹೋಗಲಿದ್ದು, ಕಾಮಗಾರಿ ವಿಳಂಬವಾಗಿತ್ತು. ಇದೀಗ ಎಲ್ಲಾ ತೊಡಕುಗಳು ಇತ್ಯರ್ಥವಾಗಿದ್ದು, ಜಿಲ್ಲಾ ಅರಣ್ಯ ಉಪ ಸಂರಕ್ಷಣಾಧಿಕಾರಿ ಅವರು ಮರ ಕಡಿಯಲು ಈಗಾಗಲೇ ಕಾರ್ಯಾದೇಶ ನೀಡಿದ್ದಾರೆ. ಅರಣ್ಯದಲ್ಲಿನ ಪ್ರಾಣಿ, ಪಕ್ಷಿಗಳಿಗೆ ಯಾವುದೇ ತೊಂದರೆಯಾಗದಂತೆ ಮುಚ್ಚಿದ ಕಾಲುವೆಯನ್ನು ನಿರ್ಮಿಸುವ ಷರತ್ತಿಗೊಳಪಟ್ಟು ಅನುಮತಿ ಇರುವು ದರಿಂದ ಈ ಅರಣ್ಯ ಪ್ರದೇಶದಲ್ಲಿ ಮುಚ್ಚಿದ ಕಾಲುವೆಯ ಕಾಮಗಾರಿಯನ್ನು ತಕ್ಷಣ ಆರಂಭಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಮುಂದಿನ 100 ದಿನಗಳಲ್ಲಿ ಒಟ್ಟಾರೆ 174 ಕಿ.ಮೀ. ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು.

12 ರಾಜ್ಯದಲ್ಲಿ ಮಳೆ ಕಡಿಮೆ ಆಗಿದೆ : 12 ರಾಜ್ಯದಲ್ಲಿ ಮಳೆ ಕಡಿಮೆ ಆಗಿದೆ. ಮಧ್ಯ ಭಾರತದಲ್ಲಿ ಶೇ.50 ರಷ್ಟು ಮಳೆ ಕೊರತೆ ಇದೆ. ಕಳೆದ ವರ್ಷ ಈ ದಿನಗಳಿಗೆ ರಾಜ್ಯದ ಎಲ್ಲಾ ಕೆರೆ-ಕಟ್ಟೆಗಳು ತುಂಬಿದ್ದವು. ಆದರೆ, ಪ್ರಸಕ್ತ ಸಾಲಿನಲ್ಲಿ ಮಳೆಯ ಕೊರತೆಯಿಂದಾಗಿ ರಾಜ್ಯ ಸಂಕಷ್ಟ ಎದುರಿಸಬೇಕಾಗಿದೆ. ಪ್ರಸ್ತುತ ಮುಂದಿನ 2 ತಿಂಗಳವರೆಗೆ ಕುಡಿಯುವ ನೀರಿಗೆ ಯಾವುದೇ ಸಮಸ್ಯೆಯಿಲ್ಲ. ಆದರೆ ಬೇಸಾಯಕ್ಕೆ ಮಳೆಯ ಅವಶ್ಯಕತೆ ಇದೆ ಎಂದು ತಿಳಿಸಿದರು.

ಕೊರಟಗೆರೆ ವಡೇರಹಳ್ಳಿ ಬಳಿ ಎತ್ತಿನ ಹೊಳೆ ಬಫರ್ ಡ್ಯಾಮ್ ನಿರ್ಮಾಣ ವಿಚಾರವಾಗಿ ಮಾತನಾಡಿದ ಅವರು, ವಿರೋಧ ಇದೆ ನೀರು ಸ್ಟೋರೇಜ್ ಮಾಡಲೇ ಬೇಕಲ್ಲ. ಎರಡು ಮೂರು ಜಾಗ ಗುರುತಿಸಿದ್ದಾರೆ. ನೀರು ಸ್ಟೋರೇಜ್ ಮಾಡದೇ ಇದ್ದರೆ ಬೇಸಿಗೆಯಲ್ಲಿ ಕಷ್ಟ. 4 ಟಿಎಂಸಿ ನೀರಿದ್ದರೆ ಜನರಿಗೆ ಅನುಕೂಲ ಆಗುತ್ತೆ. ಅದನ್ನ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ ಎಂದರು.

ಈ ಸಂದರ್ಭದಲ್ಲಿ ಹೇಮಾವತಿ ನಾಲಾ ಯೋಜನೆಯ ಮುಖ್ಯ ಎಂಜಿನಿಯರ್ ಎಚ್.ಎಸ್. ಆನಂದ್, ಕಾರ್ಯಪಾಲಕ ಎಂಜಿನಿಯರ್ ಮುರುಳೀಧರ್, ಸಹಾಯಕ ಎಂಜಿನಿಯರ್ ಶಶಾಂಕ್, ತಹಸೀಲ್ದಾರ್ ಆರತಿ, ಹೆಚ್ಚುವರಿ ಪೊಲೀಸ್ ಅಧೀಕ್ಷಕ ಪುರುಷೋತ್ತಮ್ ಮತ್ತಿತರರು ಉಪಸ್ಥಿತರಿದ್ದರು.



ಅರಸೀಕೆರೆ ತಾಲೂಕಿನ ವಿವಿಧೆಡೆ ಎತ್ತಿನಹೊಳೆ ಕಾಮಗಾರಿ ಪ್ರಗತಿಯನ್ನು ಸಚಿವ ರಾಮಲಿಂಗಾರೆಡ್ಡಿ ಪರಿಶೀಲನೆ ನಡೆಸಿದರು.

> ತುಮಕೂರಿನ ಹೇಮಾವತಿ ಲಿಂಕ್ ಕೆನಾಲ್ ಯೋಜನೆಯ ಗೊಂದಲಗಳ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಹಾಗೂ ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ತೀರ್ಮಾನಿಸ ಲಾಗುವುದು. ಯೋಜನೆಯ ಕುರಿತು ಉಭಯ ನಾಯಕರಲ್ಲಿ ಯಾವುದೇ ಗೊಂದಲಗಳಿಲ್ಲ. ಯೋಜನೆಯನ್ನು ಅನುಷ್ಠಾನಗೊಳಿಸುವ ಎಲ್ಲಾ ಪ್ರಯತ್ನ ಮಾಡಲಾಗುವುದು.
> -ರಾಮಲಿಂಗಾರೆಡ್ಡಿ, ಸಚಿವ

ಭೂಮಿ ನೀಡಿದ ರೈತರಿಗೆ ಒಂದು ವಾರದಲ್ಲಿ ಪರಿಹಾರ

ಹಾಸನ: ಸಿಎಂ ಬದಲಾವಣೆ ನಂತರದ ನೂರು ದಿನದ ಸಾಧನಾ ಕಾರ್ಯಕ್ರಮದಲ್ಲಿ ಎತ್ತಿನಹೊಳೆ ಕಾಮಗಾರಿಯೂ ಸೇರುತ್ತದೆ ಎಂದು ಜಲಸಂಪನ್ಮೂಲ ಸಚಿವ ರಾಮಲಿಂಗಾರಡ್ಡಿ ವಿಶ್ವಾಸ ವ್ಯಕ್ತಪಡಿಸಿದರು. ಅರಸೀಕೆರೆ ತಾಲೂಕಿನ ವಿವಿಧೆಡೆ ಎತ್ತಿನ ಹೊಳೆ ಕಾಮಗಾರಿ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು ಕೆಲವೆಡೆ ಭೂ ಸ್ವಾಧೀನ ಸಮಸ್ಯೆ ಇದ್ದದ್ದು ನಿಜ, ಈಗ ಆ ಸಮಸ್ಯೆ ನಿವಾರಣೆಯಾಗಿದ್ದು ರೈತರು ಸ್ವ ಇಚ್ಛೆಯಿಂದ ಭೂಮಿ ನೀಡಲು ಮುಂದಾಗಿದ್ದಾರೆ. ಭೂಮಿ ನೀಡಿದ ರೈತರಿಗೆ ಒಂದು ವಾರದಲ್ಲಿ ಪರಿಹಾರ ನೀಡುವಂತೆಯೂ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಯಾವುದೇ ಸಮಸ್ಯೆ ಇಲ್ಲದೇ ಕಾಮಗಾರಿ ನಡೆಯುತ್ತಿದೆ. ಯೋಜನೆಗೆ ಈಗಾಗಲೇ 18 ಸಾವಿರ ಕೋಟಿ ವೆಚ್ಚ ಖರ್ಚಾಗಿದ್ದು 24ಸಾವಿರ ಕೋಟಿಯ ಯೋಜನೆಯಾಗಿದೆ. ಎತ್ತಿನಹೊಳೆ ಯೋಜನೆಗೆ ಹಣ ಒದಗಿಸಲು ಸರಕಾರದಲ್ಲಿ ಯಾವುದೇ ಸಮಸ್ಯೆ ಇಲ್ಲ ಎಂದರು. ಕೆಲವೆಡೆ ರೈತರು ಸ್ವಾಧೀನದಲ್ಲಿದ್ದು ಅಂತಹ ಭೂಮಿಗೆ ದಾಖಲಾತಿಗಳು ಇಲ್ಲದ್ದನ್ನೂ ಗಮನಿಸಿದ್ದೇವೆ ಈಗಾಗಲೇ ಜಿಲ್ಲಾಧಿಕಾರಿ ಖಾತೆಯಲ್ಲಿ ಇದಕ್ಕೆ ಸಂಬಂಧಿಸಿದಂತೆ 28ಕೋಟಿ ಹಣ ಮೀಸಲಿಡಲಾಗಿದೆ. ಯಾರು ದಾಖಲೆ ಇಲ್ಲದೇ ಅನುಭವದಲ್ಲಿದ್ದಾರೋ ಅಂತಹವರಿಗೂ ಸೂಕ್ತ ಪರಿಹಾರ ಒದಗಿಸಲಾಗುವುದು ಎಂದು ತಿಳಿಸಿದ್ದಾರೆ.

ಜಿಲ್ಲೆಯ ಲಿಂಕ್ ಕೆನಾಲ್ ಯೋಜನೆ ಕೈ ಬಿಡಿ

ಹೇಮಾವತಿ ಎಕ್ಸ್‌ಪ್ರೆಸ್ ಕೆನಾಲ್ ಶಾಸಕ ಶ್ರೀನಿವಾಸ್ ವಿರೋಧ

ತುಮಕೂರು: ಜಿಲ್ಲೆಯ ಬಹುಚರ್ಚಿತ ಹೇಮಾವತಿ ಎಕ್ಸ್‌ಪ್ರೆಸ್ ಕೆನಾಲ್ ಯೋಜನೆಗೆ ಸಂಬಂಧಿಸಿದಂತೆ ಶಾಸಕ ಎಸ್.ಆರ್. ಶ್ರೀನಿವಾಸ್ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಯೋಜನೆ ಜಾರಿಯಾದರೆ ಪಕ್ಷದಲ್ಲಿ ಮುಂದುವರಿಯುವ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ಈ ಯೋಜನೆ ತನ್ನ ರಾಜಕೀಯ ಜೀವನದ ಮಹತ್ವದ ತಿರುವಿಗೆ ಕಾರಣವಾಗಿರುವುದನ್ನು ನೆನಪಿಸಿಕೊಂಡರು. ಈ ಹಿಂದೆ ನಾನು ಜೆಡಿಎಸ್ ತೊರೆಯಲು ಪ್ರಮುಖ ಕಾರಣವೇ ಈ ಲಿಂಕ್ ಕೆನಾಲ್ ಯೋಜನೆ. ಅಂದು ಕುಮಾರಸ್ವಾಮಿ ಅವರು ಸಿಎಂ ಆಗಿದ್ದಾಗ ಮತ್ತು ಡಿಕೆ ಶಿವಕುಮಾರ್ ಜಲಸಂಪನ್ಮೂಲ ಸಚಿವರಾಗಿದ್ದಾಗ ಈ ಯೋಜನೆಗೆ ಅನುಮೋದನೆ ಸಿಕ್ಕಿತ್ತು. ನಾನು ಕ್ಯಾಬಿನೆಟ್ ಸಭೆಯಲ್ಲೇ ಇದನ್ನು ವಿರೋಧಿಸಿ ಸಭೆಯಿಂದ ಹೊರಬಂದಿದ್ದೆ. ನನ್ನ ಮಾತಿಗೆ ಬೆಲೆ ಇಲ್ಲದಿದ್ದಾಗ ಅನಿವಾರ್ಯವಾಗಿ ಜೆಡಿಎಸ್ ತೊರೆದಿದ್ದೆ ಎಂದು ವಿವರಿಸಿದರು.

ಪಕ್ಷದ ಮೇಲೆ ಮುನಿಸು, ಮುಂದಿನ ತೀರ್ಮಾನದ ಸುಳಿವು: ಈಗ ಕಾಂಗ್ರೆಸ್ ಪಕ್ಷದಲ್ಲಿದ್ದರೂ, ತನ್ನ ಹಳೆಯ ನಿಲುವಿಗೆ ಬದ್ಧನಾಗಿರುವುದಾಗಿ ಸ್ಪಷ್ಟಪಡಿಸಿದ ಶಾಸಕರು, ಈ ಯೋಜನೆಯನ್ನು ಆರಂಭಿಸಬೇಡಿ ಎಂದು ಮುಖ್ಯಮಂತ್ರಿಗಳಿಗೆ ಈಗಾಗಲೇ ಮನವರಿಕೆ ಮಾಡಿದ್ದೇನೆ. ಆದರೂ ಕಾಮಗಾರಿ ಆರಂಭವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಇದು ಬೆಟ್ಟಕ್ಕೆ ಕಲ್ಲು ಹೊರುವ ಕೆಲಸ

ಹೇಮಾವತಿ ಎಕ್ಸ್‌ಪ್ರೆಸ್ ಕೆನಾಲ್ ಯೋಜನೆ ವಿರುದ್ಧದ ಹೋರಾಟದ ಕುರಿತು ಮಾತನಾಡಿದ ಅವರು, ಈ ಯೋಜನೆ ಜಾರಿಯಾದರೆ ಜನ ಒಪ್ಪುವುದಿಲ್ಲ ಮತ್ತು ತೀವ್ರ ಹೋರಾಟಗಳು ನಡೆಯುತ್ತವೆ. ನಾನು ಈಗ ಕಾಂಗ್ರೆಸ್ ಪಕ್ಷದ ಶಾಸಕನಾಗಿರುವುದರಿಂದ ಬೀದಿಗೆ ಬಂದು ಹೋರಾಟ ಮಾಡುವುದು ಸರಿಯಲ್ಲ ಎಂಬುದು ನನ್ನ ಹಿತೈಷಿಗಳ ಅಭಿಪ್ರಾಯ. ಆದರೆ, ಎಲ್ಲಿ ತಲುಪಿಸಬೇಕೋ ಅಲ್ಲಿ ನನ್ನ ವಿರೋಧವನ್ನು ಬಲವಾಗಿ ತಲುಪಿಸಿದ್ದೇನೆ. ಇದು ಬೆಟ್ಟಕ್ಕೆ ಕಲ್ಲು ಹೊರುವ ಕೆಲಸದಂತಿದೆ. ಅಂತಿಮವಾಗಿ ಏನಾಗುತ್ತೆ ಎಂದು ಕಾದು ನೋಡುತ್ತೇನೆ ಎಂದು ಶಾಸಕ ಎಸ್.ಆರ್. ಶ್ರೀನಿವಾಸ್ ತಿಳಿಸಿದ್ದಾರೆ.

ಜಮ್ಮು ಕಾಶ್ಮೀರದಲ್ಲಿ ಮೇಘಸ್ಫೋಟ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ದೋಡಾ ಜಿಲ್ಲೆಯ ಕೆಲವು ಭಾಗಗಳಲ್ಲಿ ಮೇಘಸ್ಫೋಟದಿಂದ ಹಠಾತ್ ಪ್ರವಾಹ ಉಂಟಾಗಿದ್ದು, ಭಲೇಸಾ ಪ್ರದೇಶವು ಹೆಚ್ಚು ಹಾನಿಗೊಳಗಾಗಿದೆ. ಮಣ್ಣು ಮತ್ತು ಅವಶೇಷಗಳನ್ನು ಹೊತ್ತೊಯ್ಯುವ ಧಾರಾಕಾರ ಪ್ರವಾಹದ ನೀರು ರಸ್ತೆಗಳ ಮೇಲೆ ಹರಿಯುತ್ತಿದ್ದು, ಹಲವು ಹಳ್ಳಿಗಳ ಸಂಪರ್ಕ ಕಡಿತಗೊಂಡಿದೆ. ಅಧಿಕಾರಿಗಳು ತೆರವು ಕಾರ್ಯಾಚರಣೆಗಳನ್ನು ಪ್ರಾರಂಭಿಸಲು, ಆಗಿರುವ ಹಾನಿಯ ಪ್ರಮಾನ ತಿಳಿದುಕೊಳ್ಳಲು ಮುಂದಾಗಿದ್ದಾರೆ. ಪರಿಸ್ಥಿತಿ ನಿಯಂತ್ರಣಕ್ಕೆ ಬರುವವರೆಗೆ ಪ್ರಯಾಣ ಮಾಡದಂತೆ ಜನರಿಗೆ ಸಲಹೆ ನೀಡಿದ್ದಾರೆ. ದಿಢೀರ್ ಪ್ರವಾಹ, ರಸ್ತೆಗಳು ಜಾರುತ್ತಿರುವುದು ಮತ್ತು ಭಾರಿ ಮಳೆಯ ಮುನ್ನೆಚ್ಚರಿಕೆ ನೀಡಲಾಗಿದೆ.

126 ವರ್ಷದಲ್ಲಿ ಅತಿ ಕನಿಷ್ಠ ಕಂಡ 5ನೇ ಜೂನ್ ಮಾಸ, ಜುಲೈನಲ್ಲೂ ವಾಡಿಕೆ ಮಳೆಯಾಗುವುದು ಅನುಮಾನ

ಜೂನ್ ಮಳೆ 99 ಮಿ.ಮೀ: ಶೇ.40 ಕೊರತೆ

ದೆಹಲಿ: ಪೆಸಿಫಿಕ್ ಮಹಾಸಾಗರದಲ್ಲಿ 'ಎಲ್ ನಿನೊ' ಸೃಷ್ಟಿಯಾಗಿರುವುದರ ಪರಿಣಾಮವಾಗಿ ವಿಶ್ವಾದ್ಯಂತ ಹವಾಮಾನದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳಾಗಿವೆ. ಒಂದೆಡೆ, ಹವಾಮಾನ ವೈಪರೀತ್ಯದಿಂದಾಗಿ ಯೂರೋಪ್ ಖಂಡದ ಹಲವಾರು ದೇಶಗಳು ಹಿಂದೆಂದೂ ಕಾಣದಷ್ಟು ಬಿಸಿಗಾಳಿ, ಉಷ್ಣಾಂಶದಿಂದ(45 ಡಿ.ಸೆ.ಗೂ ಅಧಿಕ) ಬಸವಳಿದಿದ್ದರೆ, ಇತ್ತ ಭಾರತದಲ್ಲಿ ನೈಋತ್ಯ ಮುಂಗಾರು ಅವಧಿಯಲ್ಲೇ ದಕ್ಷಿಣ ಭಾರತ ಭಾಗದಲ್ಲಿ ತೀವ್ರ ಮಳೆ ಕೊರತೆಯಾಗಿದೆ.

ಹವಾಮಾನ ಇಲಾಖೆ ಪ್ರಕಾರ, ಜೂನ್ ತಿಂಗಳಲ್ಲಿ ಕೇವಲ 99.5 ಮಿ.ಮೀ ಮಳೆಯಾಗಿದೆ. ಇದು ಕಳೆದ 126 ವರ್ಷಗಳಲ್ಲಿಯೇ ಅತಿ ಶುಷ್ಕ ತಿಂಗಳಾಗಿದೆ. ಬರ ಸಾಧ್ಯತೆಯ ಭೀತಿ ಎದುರಾಗಿದೆ.

1901ರ ನಂತರದಲ್ಲಿ(126 ವರ್ಷಗಳಲ್ಲಿ) ಈಗಿನದು 5ನೇ ಅತಿ ಶುಷ್ಕ ಜೂನ್ ಮಾಸವಾಗಿದೆ. ಈ ಹಿಂದೆ 2009ರ ಜೂನ್‌ನಲ್ಲಿ 87.6 ಮಿ.ಮೀ., 1905ರಲ್ಲಿ 91.9 ಮಿ.ಮೀ., 2014ರಲ್ಲಿ 92.8 ಮಿ.ಮೀ. ಮತ್ತು 1926ರ ಜೂನ್‌ನಲ್ಲಿ 96.7 ಮಿ.ಮೀ.ಗಳಷ್ಟು ಕಡಿಮೆ ಮಳೆಯಾಗಿತ್ತು. ಅದರೆ ಈ ವರ್ಷ ದೇಶದ ಬಹುತೇಕ ಕಡೆ ಕಡಿಮೆ ಮಳೆ ಅಗುವ ಸೂಚನೆ ಇದೆ.

ಈಶಾನ್ಯ, ಮಧ್ಯ ಭಾರತದಲ್ಲಿ ಮಳೆ

ದೇಶದ ಹೆಚ್ಚಿನ ಭಾಗಗಳಲ್ಲಿ ಕಡಿಮೆ ಮಳೆಯಾಗಿದ್ದರೂ, ವಾಯುವ್ಯ, ಈಶಾನ್ಯ, ಪೂರ್ವ-ಮಧ್ಯ ಭಾರತ ಪ್ರದೇಶಗಳಲ್ಲಿ ಸಾಧಾರಣಕ್ಕಿಂತ ಹೆಚ್ಚು ಮಳೆಯಾಗುತ್ತಿದೆ. ಈಶಾನ್ಯ ಭಾರತದ ಅಸ್ಸಾಂ, ಅರುಣಾಚಲ ಪ್ರದೇಶ ಹಾಗೂ ಮಧ್ಯ ಭಾರತದ ಮಹಾರಾಷ್ಟ್ರದಲ್ಲಿ ಭಾರೀ ಮಳೆಯಾಗುತ್ತಿದೆ. ಕೆಲವೆಡೆ ಪ್ರವಾಹ ಪರಿಸ್ಥಿತಿ ಸೃಷ್ಟಿಯಾ ಗಿದೆ. ಅಸ್ಸಾಂನಲ್ಲಿ ಪ್ರವಾಹದಿಂದಾಗಿ 45 ಸಾವಿರಕ್ಕೂ ಅಧಿಕ ಜನರು ಸಂಕಷ್ಟಕ್ಕೀಡಾಗಿದ್ದಾರೆ. ಅರುಣಾಚಲ ಪ್ರದೇಶದಲ್ಲಿ ಬಹಳಷ್ಟು ಕಡೆ ಭೂಕುಸಿತವಾಗಿದೆ ಎಂದು ವರದಿಯಾಗಿದೆ.

ರಾಜಸ್ಥಾನ ದೌಸಾ ಜಿಲ್ಲೆ ಬಳಿಕ ಅಪಘಾತ: 24 ಜನರಿಗೆ ಗಾಯ

ಟ್ರಕ್‌ಗೆ ಬಸ್ ಡಿಕ್ಕಿ ಭಸ್ಮ, 8 ಜನ ಸಜೀವದಹನ

ಜೈಪುರ: ರಾಜಸ್ಥಾನದ ದೌಸಾ ಜಿಲ್ಲೆಯಲ್ಲಿ ಬುಧವಾರ ಮುಂಜಾನೆ ರಸ್ತೆ ಅಪಘಾತದಲ್ಲಿ 8 ಮಂದಿ ಮೃತಪಟ್ಟು, 24 ಜನರು ಗಾಯಗೊಂಡಿದ್ದಾರೆ. ದೆಹಲಿ-ಮುಂಬೈ ಎಕ್ಸ್‌ಪ್ರೆಸ್ ವೇನಲ್ಲಿ ವೇಗವಾಗಿ ಸಾಗಿದ್ದ ಪ್ರಯಾಣಿಕರ ಬಸ್, ಅದೇ ಮಾರ್ಗದಲ್ಲಿ ನಿದಾನವಾಗಿ ಸಾಗುತ್ತಿದ್ದ ಟ್ರಕ್‌ಗೆ ಹಿಂದಿನಿಂದ ಬಲವಾಗಿ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಬೆಂಕಿ ಹೊತ್ತಿಕೊಂಡಿದ್ದು, ಎರಡೂ ವಾಹನ ಗಳೂ ಸುಟ್ಟು ಹೋಗಿವೆ. ಬಸ್‌ನಲ್ಲಿ ನಿದ್ರೆಯ ಲ್ಲಿದ್ದ ಪ್ರಯಾಣಿಕರಲ್ಲಿ 8 ಮಂದಿ ಸಜೀವ ದಹನವಾಗಿದ್ದಾರೆ. ಹಲವು ಪ್ರಯಾಣಿಕರು ಪ್ರಾಣ ಉಳಿಸಿ ಕೊಳ್ಳಲು ಕಿಟಕಿ ಗಾಜು ಒಡೆದು ಹೊರಗೆ ಜಿಗಿದು ಪಾರಾಗಿ ದ್ದಾರೆ. ಬೆಂಕಿಯಲ್ಲಿ ಸಿಲುಕಿ ಐವರು ಸ್ಥಳದಲ್ಲೇ ಸಜೀವ ದಹನವಾಗಿದ್ದು, ಮೂವರು ತೀವ್ರ ಸುಟ್ಟು ಗಾಯಗಳಿಂದಾಗಿ ಆಸ್ಪತ್ರೆಯಲ್ಲಿ ಅಸುನೀಗಿದರು. ಮೃತರ ಗುರುತು ಪತ್ತೆ ಮಾಡುವ ಕಾರ್ಯ ನಡೆಯುತ್ತಿದೆ. 24 ಗಾಯಾಳು ಪ್ರಯಾಣಿ ಕರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ ಎಂದು ದೌಸಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪಿಯೂಷ್ ದೀಕ್ಷಿತ್ ಸುದ್ದಿಗಾರರಿಗೆ ತಿಳಿಸಿ ದ್ದಾರೆ. ಇಂದೋರ್‌ನ ಹ್ಯಾನ್ಸ್ ಟ್ರಾವೆಲ್ಸ್ ಸಂಸ್ಥೆಯ ಬಸ್ ಉತ್ತರಾಖಂಡದ ಋಷಿಕೇ ಶದಿಂದ ಮಧ್ಯಪ್ರದೇಶದ ಇಂದೋರ್‌ಗೆ ತೆರಳುತ್ತಿತ್ತು.

117 ಗಣ್ಯರಿಂದ ಪ್ರಧಾನಿ ಮೋದಿ, ಶೆಹಬಾಜ್ ಶರೀಫ್‌ಗೆ ಬಹಿರಂಗ ಪತ್ರ

ಭಾರತ-ಪಾಕ್ ಗಣ್ಯರಿಂದ ಶಾಂತಿಗಾಗಿ ಮನವಿ

ದೆಹಲಿ: ಆಪರೇಷನ್ ಸಿಂದೂರ ಕಾರ್ಯಾಚರಣೆ ನಡೆದು ಒಂದು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಭಾರತ ಮತ್ತು ಪಾಕಿಸ್ತಾನದ ಪ್ರಮುಖ ರಾಜಕಾರಣಿಗಳು ಹಾಗೂ ಸಾರ್ವಜನಿಕ ಗಣ್ಯರು ಸೇರಿ 100ಕ್ಕೂ ಹೆಚ್ಚು ಪ್ರಸಿದ್ಧ ವ್ಯಕ್ತಿಗಳು ಉಭಯ ದೇಶಗಳ ನಡುವೆ ಶಾಂತಿ ಮತ್ತು ಸಾಮಾನ್ಯ ದ್ವಿಪಕ್ಷೀಯ ಸಂಬಂಧಗಳನ್ನು ಮರುಸ್ಥಾಪಿಸಲು ಒಟ್ಟಾಗಿ ಕರೆ ನೀಡಿದ್ದಾರೆ. ಭಾರತದ ಪ್ರಧಾನಿ ಮೋದಿ ಮತ್ತು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಶರೀಫ್ ಅವರಿಗೆ ಜಂಟಿ ಮನವಿ ಸಲ್ಲಿಸಿರುವ ಅವರು, ಸುಸ್ಥಿರ ಶಾಂತಿಗಾಗಿ ಕ್ರಮಗಳನ್ನು ತೆಗೆದುಕೊಳ್ಳುವಂತೆ ಆಗ್ರಹಿಸಿದ್ದಾರೆ.

ಸೆಂಟರ್ ಫಾರ್ ಪೀಸ್ ಆ್ಯಂಡ್ ಪ್ರೋಗ್ರೆಸ್ ಬಿಡುಗಡೆ ಮಾಡಿರುವ ಈ ಬಹಿರಂಗ ಪತ್ರಕ್ಕೆ ಭಾರತದ 61 ಮತ್ತು ಪಾಕಿಸ್ತಾನದ 56 ಜನ ಸೇರಿ ಒಟ್ಟು 117 ಗಣ್ಯರು ಸಹಿ ಹಾಕಿದ್ದಾರೆ. ದೀರ್ಘಕಾಲದ ಹಗೆತನವು ಕೋಟ್ಯಂತರ ಯುವ ಪೀಳಿಗೆಯ ಅವಕಾಶಗಳು, ಸಮೃದ್ಧಿ ಮತ್ತು ಸುರಕ್ಷಿತ ಭವಿಷ್ಯವನ್ನು ಕಸಿದುಕೊಳ್ಳುತ್ತಿದೆ ಎಂದು ಈ ಗಣ್ಯರು ಉಭಯ ಸರಕಾರಗಳಿಗೆ ಎಚ್ಚರಿಸಿದ್ದಾರೆ. ಭಾರತದ ಕಡೆಯಿಂದ ಫಾರೂಕ್ ಅಬ್ದುಲ್ಲಾ, ಮಿರ್ವೈಜ್ ಉಮರ್ ಫಾರೂಕ್, ಮೆಹಬೂಬಾ ಮುಫ್ತಿ, ಮನೋಜ್ ಝಾ ಸಹಿ ಹಾಕಿದ್ದರೆ, ಖುರ್ಷಿದ್ ಮಹಮೂದ್ ಕಸೂರಿ, ಅಶ್ರಫ್ ಜೆಹಾಂಗೀರ್ ಖಾಜಿ ಮತ್ತು ಪರ್ವೇಜ್ ಹೂಡ್‌ಭಾಯ್ ಪಾಕಿಸ್ತಾನದ ಪರವಾಗಿ ಸಹಿ ಹಾಕಿದ ಪ್ರಮುಖರಾಗಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ಸೇರಿದಂತೆ ಹಳೆಯ ವಿವಾದಗಳನ್ನು ಇತ್ಯರ್ಥಗೊಳಿಸಲು 2004 ಮತ್ತು 2007ರ ನಡುವೆ ನಡೆದ ಸಮಾಲೋಚನೆಗಳ ಚೌಕಟ್ಟನ್ನು ಮರುಪರಿಶೀಲಿಸುವಂತೆ ಪತ್ರದಲ್ಲಿ ವಿನಂತಿಸಲಾಗಿದೆ. ಆದರೆ ಪಾಕಿಸ್ತಾನದ ಕುರಿತು ದೆಹಲಿಯ ಕಠಿಣ ನಿಲುವಿನಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಭಯೋತ್ಪಾದನೆ ಮತ್ತು ಮಾತುಕತೆ ಜತೆಯಾಗಿ ಸಾಗಲು ಸಾಧ್ಯವಿಲ್ಲ, ಹಾಗೆಯೇ ಭಯೋತ್ಪಾದನೆ ಮತ್ತು ವ್ಯಾಪಾರ ಒಂದೇ ದಾರಿಯಲ್ಲಿ ಹೋಗಲು ಸಾಧ್ಯವಿಲ್ಲ ಎಂದು ಭಾರತ ಸರಕಾರವು ಪುನರುಚ್ಚರಿಸಿದೆ. ಗಡಿಯಾಚೆಗಿನ ಭಯೋತ್ಪಾದನೆ ಸಂಪೂರ್ಣವಾಗಿ ನಿಂತರೆ ಮಾತ್ರ ದ್ವಿಪಕ್ಷೀಯ ಬಾಂಧವ್ಯ ಸುಧಾರಿಸಲು ಸಾಧ್ಯ ಎಂದು ಭಾರತ ಸ್ಪಷ್ಟಪಡಿಸಿದೆ. ದಕ್ಷಿಣ ಏಷ್ಯಾದ ಭವಿಷ್ಯವು ಸಂಘರ್ಷದಿಂದಲ್ಲ, ಬದಲಿಗೆ ಶಾಂತಿ ಮತ್ತು ಪ್ರಗತಿಯಿಂದ ರೂಪಿತವಾಗಬೇಕು ಎಂದು ಗಣ್ಯರು ಆಶಿಸಿದ್ದಾರೆ.

ಪತ್ರದಲ್ಲಿರುವ ಪ್ರಮುಖಾಂಶವೇನು?

ಉಭಯ ದೇಶಗಳ ನಡುವೆ ವಿಶ್ವಾಸ ವೃದ್ಧಿಸಲು ಪೂರ್ಣ ಪ್ರಮಾಣದ ರಾಜತಾಂತ್ರಿಕ ಸಂಬಂಧಗಳನ್ನು ಮರುಸ್ಥಾಪಿಸಬೇಕು, ದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿ ಹೈಕಮಿಷನರ್‌ಗಳನ್ನು ಮರುನೇಮಕ ಮಾಡಬೇಕು, ವೀಸಾ ಸೇವೆಗಳನ್ನು ಪುನರಾರಂಭಿಸಬೇಕು ಮತ್ತು ವಾಣಿಜ್ಯ ವಿಮಾನಗಳಿಗಾಗಿ ವಾಯುಪ್ರದೇಶವನ್ನು ಮುಕ್ತಗೊಳಿಸಬೇಕು ಎಂದು ಪತ್ರ ಬರೆದಿರುವ ಗಣ್ಯರು ಕೋರಿದ್ದಾರೆ. ಇದರೊಂದಿಗೆ ವ್ಯಾಪಾರಕ್ಕಾಗಿ ಅಟ್ಟಾರಿ-ವಾಘಾ ಭೂ ಗಡಿಯನ್ನು ಪುನಃ ತೆರೆಯುವುದು, ಶ್ರೀನಗರ-ಮುಜಾಫರಾಬಾದ್ ಬಸ್ ಸೇವೆ ಪುನರಾರಂಭಿಸುವುದು ಹಾಗೂ ಪಾಕಿಸ್ತಾನದ ನೀಲಂ ಕಣಿವೆಯಲ್ಲಿರುವ ಶಾರದಾ ಪೀಠಕ್ಕೆ ಸುಲಭ ಪ್ರಯಾಣ ಕಲ್ಪಿಸುವುದು ಶಾಂತಿ ಸ್ಥಾಪನೆಗೆ ಪೂರಕವಾಗಲಿದೆ ಎಂದೂ ಪತ್ರದಲ್ಲಿ ತಿಳಿಸಲಾಗಿದೆ.

ಗೋಹತ್ಯೆ ನಿಷೇಧ ಆದೇಶ: ಸುಪ್ರೀಂಕೋರ್ಟ್‌ಗೆ ತ.ನಾಡು

ಚೆನ್ನೈ: ತಮಿಳುನಾಡಿನಲ್ಲಿ ಸಂಪೂರ್ಣ ಗೋಹತ್ಯೆಯನ್ನು ನಿಷೇಧಿಸಿ ಮದ್ರಾಸ್ ಹೈಕೋರ್ಟ್ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ತಮಿಳುನಾಡು ಸರಕಾರ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದೆ. ತಮಿಳುನಾಡು ಪ್ರಾಣಿ ಸಂರಕ್ಷಣಾ ಕಾಯ್ದೆ-1958 ರ ಸೆಕ್ಷನ್ 4 ರ ಅಡಿಯಲ್ಲಿ ಅನುಮತಿಸಲಾದ ಪ್ರಕರಣಗಳನ್ನು ಹೊರತುಪಡಿಸಿ ರಾಜ್ಯದಲ್ಲಿ ಗೋಹತ್ಯೆ ನಿಷೇಧ ಆದೇಶವನ್ನು ಮದ್ರಾಸ್ ಹೈಕೋರ್ಟ್ ಹೊರಡಿಸಿತ್ತು.

ಮದ್ರಾಸ್ ಹೈಕೋರ್ಟ್‌ನ ನ್ಯಾಯಮೂರ್ತಿ ಜಿ.ಆರ್. ಸ್ವಾಮಿನಾಥನ್ ಮತ್ತು ನ್ಯಾಯಮೂರ್ತಿ ವಿ. ಲಕ್ಷ್ಮೀನಾರಾಯಣ್ ಅವರಿದ್ದ ದ್ವಿಪೀಠವು ಮಹತ್ವದ ತೀರ್ಪೊಂದನ್ನು ನೀಡಿತ್ತು.

ಇದೀಗ ಆದೇಶವನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿರುವ ತಮಿಳುನಾಡು ಸರಕಾರ, ಹೈಕೋರ್ಟ್ ತನ್ನ ವ್ಯಾಪ್ತಿಯನ್ನು ಮೀರಿ ಸಂಪೂರ್ಣ ನಿಷೇಧ ಹೇರಿದೆ ಎಂದು ವಾದಿಸಿದೆ. ತಮಿಳುನಾಡು ಪ್ರಾಣಿ ಸಂರಕ್ಷಣಾ ಕಾಯ್ದೆಯ ಸೆಕ್ಷನ್ 4ರ ಅಡಿಯಲ್ಲಿ, 10 ವರ್ಷಕ್ಕಿಂತ ಮೇಲ್ಪಟ್ಟ, ಕೆಲಸ ಮಾಡಲು ಅಥವಾ ತಳಿ ಅಭಿವೃದ್ಧಿಗೆ ಯೋಗ್ಯವಲ್ಲದ ಮತ್ತು ಅದಕ್ಕೆ ಸಂಬಂಧಿಸಿದ ಸಕ್ಷಮ ಅಧಿಕಾರಿಯಿಂದ ಅಧಿಕೃತ ಪ್ರಮಾಣಪತ್ರ ಪಡೆದ ಹಸುಗಳನ್ನು ಮಾತ್ರ ವಧೆ ಮಾಡಲು ಕಾನೂನಿನಲ್ಲಿ ಅವಕಾಶವಿದೆ.

ಆದರೆ ನಿಷೇಧಿಸುವಂತೆ ಆದೇಶಿಸಿದೆ ಎಂದು ತಮಿಳುನಾಡು ಸರಕಾರ ಅರ್ಜಿಯಲ್ಲಿ ತಿಳಿಸಿದೆ. ಹಲವು ಮುಸ್ಲಿಮರು ಬಕ್ರೀದ್ ದಿನದಂದು ಹಸುವನ್ನು ಬಲಿ ಕೊಡುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿರುವುದಾಗಿ ಹೈಕೋರ್ಟ್ ಪೀಠವು ತನ್ನ ಆದೇಶದಲ್ಲಿ ತಿಳಿಸಿತ್ತು.

ಮಹಾ ದುರಂತಗಳಿಗೆ ನಾಂದಿ ಹಾಡುವ ಸಾಧ್ಯತೆ ಹೆಚ್ಚು | ಪೂರೈಕೆ ಸರಪಳಿಯನ್ನು ತುಂಡರಿಸುವುದು ಅನಿವಾರ್ಯ

ನಾಡಬಾಂಬ್: ಕರಾವಳಿಯ ನಿದ್ದೆಗೆಡಿಸುತ್ತಿರುವ ಮಾರಕ ಶಸ್ತ್ರ

ವಿನುತಾ ಹೆಗಡೆ ಶಿರಸಿ

ತುಮಕೂರಿನಲ್ಲಿ ಅಂಕೋಲಾ ವ್ಯಕ್ತಿಯೊಬ್ಬ ನಾಡಬಾಂಬ್ ಸಿಡಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡ ಆಘಾತಕಾರಿ ಘಟನೆ ರಾಜ್ಯವನ್ನೇ ಬೆಚ್ಚಿಬೀಳಿಸಿತ್ತು. ಆ ಕರಾಳ ನೆನಪು ಮಾಸುವ ಮುನ್ನವೇ, ಉತ್ತರ ಕನ್ನಡದ ಅಂಕೋಲಾದಲ್ಲಿ ಪತ್ತೆಯಾದ 'ಬಾಂಬ್ ಜಾಲ'ವು ಕೇವಲ ವ್ಯಕ್ತಿಯೊಬ್ಬನ ದುರಂತವಲ್ಲ, ಬದಲಿಗೆ ಸಮಾಜದ ಭದ್ರತೆಗೆ ಎದುರಾಗಿರುವ ಗಂಭೀರ ಸವಾಲು ಎಂಬುದನ್ನು ಸಾಬೀತುಪಡಿಸಿದೆ. ಮೀನು ಹಿಡಿಯಲು ಬಳಸುವ ಸಣ್ಣ ಸ್ಫೋಟಕಗಳು ಇಂದು ಆತ್ಮಹತ್ಯೆಯ ಅಸ್ತ್ರಗಳಾಗಿ, ನಾಳೆಯ ದಿನ ಸಮಾಜಘಾತುಕರ ಕೈ ಸೇರಿ ಮಹಾ ದುರಂತಗಳಿಗೆ ನಾಂದಿ ಹಾಡುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಭದ್ರತೆಯ ಲೋಪ: ಮೀನುಗಾರಿಕೆಯಿಂದ ಮೃತ್ಯುವಿನವರೆಗೆ ಒಂದು ಕಾಲದಲ್ಲಿ ಗ್ರಾಮೀಣ ಭಾಗದ ನದಿ, ತೊರೆಗಳಲ್ಲಿ ಮೀನು ಹಿಡಿಯಲು ಬಳಸುತ್ತಿದ್ದ ಈ ನಾಡಬಾಂಬ್‌ಗಳು ಇಂದು ಭೀಕರ ಸ್ವರೂಪ ಪಡೆದುಕೊಂಡಿವೆ. ಅಂಕೋಲಾದಲ್ಲಿ ಬಂಧಿತರಾದ ಆರೋಪಿಗಳ ಪ್ರಕರಣ ಗಮನಿಸಿದರೆ, ಈ ಸ್ಫೋಟಕಗಳು ಕೇವಲ ವೃತ್ತಿಪರ ಬಳಕೆಗಷ್ಟೇ ಸೀಮಿತವಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ತುಮಕೂರಿನ ದುರಂತದ ಬಳಿಕ ಎಚ್ಚೆತ್ತ ಆರೋಪಿಗಳು, ತಮ್ಮಲ್ಲಿದ್ದ ಸ್ಫೋಟಕಗಳನ್ನು ನಾಶಪಡಿಸಲು ಯತ್ನಿಸಿದ್ದು, ಇವುಗಳ ಲಭ್ಯತೆ ಎಷ್ಟು ಸುಲಭ ಮತ್ತು ಎಷ್ಟು ಅಪಾಯಕಾರಿ ಎಂಬುದಕ್ಕೆ ಮನಗಂಡಿದ್ದಾರೆ.

ಗಂಭೀರ ಆತಂಕಗಳು: ಕರಾವಳಿಯ ಭದ್ರತೆಗೆ ಸವಾಲಾಗಿರುವ ಈ ಪ್ರಕರಣವು ಕೇವಲ ಸ್ಥಳೀಯ ಅಪರಾಧವಲ್ಲ, ಬದಲಿಗೆ ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದಲೂ ಕಳವಳಕಾರಿಯಾಗಿದೆ. ಹೊರಗಿನಿಂದ ಶಸ್ತ್ರಾಸ್ತ್ರಗಳನ್ನು ಸಾಗಿಸುವುದು ಸುಲಭವಲ್ಲ, ಆದರೆ ನಾಡಬಾಂಬ್‌ಗಳನ್ನು ಸ್ಥಳೀಯವಾಗಿಯೇ, ಸುಲಭವಾಗಿ ಸಿಗುವ ಕಚ್ಚಾವಸ್ತುಗಳಿಂದ ತಯಾರಿಸಬಹುದು. ಹಾಗಾಗಿ ಇದು ತನಿಖಾ ಸಂಸ್ಥೆಗಳಿಗೆ ದೊಡ್ಡ ತಲೆನೋವಾಗಿ ಪರಿಣಮಿಸಿದೆ.

ಜಾಲದ ಬುಡ ಕತ್ತರಿಸಬೇಕು

ಮೀನು ಹಿಡಿಯುವ ನೆಪದಲ್ಲಿ ನಡೆಯುತ್ತಿರುವ ಈ ಮಾರಕ ಚಟುವಟಿಕೆಯು ನಾಳೆಯ ದಿನ ದೊಡ್ಡ ಆಂತರಿಕ ಭದ್ರತಾ ಸಮಸ್ಯೆಯಾಗಿ ಮಾರ್ಪಾಡಾಗುವ ಮುನ್ನವೇ ಸರಕಾರ ಮತ್ತು ಪೊಲೀಸ್ ಇಲಾಖೆ ಎಚ್ಚೆತ್ತುಕೊಳ್ಳಬೇಕಿದೆ. ಅಪರಾಧಿಗಳ ಕೈಗೆ ಸಿಗುವ ಮುನ್ನವೇ ಈ 'ಬಾಂಬ್ ಸಂಸ್ಕೃತಿ'ಯನ್ನು ನಿರ್ಮೂಲನೆ ಮಾಡುವುದು ನಾಗರಿಕ ಸಮಾಜದ ಶಾಂತಿ ಮತ್ತು ಭದ್ರತೆಗೆ ಅನಿವಾರ್ಯವಾಗಿದೆ. ಕೇವಲ ಬಂಧನಗಳಲ್ಲ, ಇಡೀ ಜಾಲದ ಬುಡವನ್ನು ಕತ್ತರಿಸುವ ದಿಟ್ಟ ಹೆಜ್ಜೆಗಳೇ ಈ ಆತಂಕಕ್ಕೆ ಶಾಶ್ವತ ಪರಿಹಾರ ನೀಡಬಲ್ಲವು.

ಕರಾವಳಿ ಮತ್ತು ಉಗ್ರರ ನಂಟು: ಭಟ್ಕಳದಂತಹ ಪ್ರದೇಶಗಳಲ್ಲಿನ ಹಿಂದಿನ ಅಹಿತಕರ ಘಟನೆಗಳು ಮತ್ತು ಉಗ್ರರ ನಂಟಿನ ಹಿನ್ನೆಲೆಯಲ್ಲಿ, ಇಂತಹ ಸ್ಫೋಟಕಗಳು ಸಮಾಜದ್ರೋಹಿಗಳ ಕೈಸೇರಿದರೆ ಕಲ್ಪಿಸಿಕೊಳ್ಳಲಾರದಷ್ಟು ದೊಡ್ಡ ಅನಾಹುತ ಸಂಭವಿಸಬಹುದು.

ಅಪರಾಧ ಜಗತ್ತಿನ ಹೊಸ ಶೈಲಿ: ತಲ್ವಾರ್, ಚಾಕು-ಕತ್ತಿಗಳ ಜಾಗವನ್ನು ಬಾಂಬ್ ಆಕ್ರಮಿಸಿಕೊಳ್ಳುತ್ತಿದೆ. ಇದು ಸಣ್ಣ ಜಗಳಗಳು ಅಥವಾ ವೈಯಕ್ತಿಕ ದ್ವೇಷಗಳು ದೊಡ್ಡ ಸ್ಫೋಟಕ್ಕೆ ದಾರಿ ಮಾಡಿಕೊಡುವ ಭೀತಿಯನ್ನು ಹುಟ್ಟುಹಾಕಿದೆ.

ಕಾರ್ಯಾಚರಣೆಯ ಅನಿವಾರ್ಯತೆ: ಪೊಲೀಸರು ಈ ಜಾಲದ ಮೂಲವನ್ನು ಪತ್ತೆಹಚ್ಚುವ ಕೆಲಸವನ್ನು ಆರಂಭಿಸಿದ್ದಾರೆ, ಆದರೆ ಇದು ಕೇವಲ ಮಾರಾಟಗಾರರ ಬಂಧನಕ್ಕೆ ಸೀಮಿತವಾಗಬಾರದು. ಬಾಂಬ್ ತಯಾರಿಕೆಗೆ ಬೇಕಾಗುವ ರಾಸಾಯನಿಕಗಳು ಮತ್ತು ಸ್ಫೋಟಕ ವಸ್ತುಗಳು ಎಲ್ಲಿಂದ, ಯಾರಿಗೆ ಪೂರೈಕೆಯಾಗುತ್ತಿವೆ ಎಂಬುದನ್ನು ಪತ್ತೆ ಹಚ್ಚಿ, ಆ ಪೂರೈಕೆ ಸರಪಳಿಯನ್ನು ತುಂಡರಿಸಬೇಕು. ಜಿಲ್ಲೆಯ ಮೂಲೆಮೂಲೆಗಳಲ್ಲಿ ಅಕ್ರಮವಾಗಿ ಸ್ಫೋಟಕ ತಯಾರಿಕಾ ಘಟಕಗಳು ಎಲ್ಲೆಲ್ಲಿವೆ ಎಂಬುದನ್ನು ಪತ್ತೆ ಹಚ್ಚಿ, ಅವುಗಳನ್ನು ಬುಡಸಮೇತ ಕಿತ್ತೊಗೆಯುವ ದೊಡ್ಡ ಮಟ್ಟದ ಕಾರ್ಯಾಚರಣೆ ನಡೆಯಬೇಕು.

ಶಸ್ತ್ರಾಸ್ತ್ರ ಕಾಯ್ದೆಯಡಿ ಕಠಿಣ ಕ್ರಮ ಕೈಗೊಳ್ಳುವ ಮೂಲಕ ಇಂತಹ ಸ್ಫೋಟಕಗಳನ್ನು ಇಟ್ಟುಕೊಳ್ಳುವುದು ಅಥವಾ ತಯಾರಿಸುವುದು ಗಂಭೀರ ಅಪರಾಧ ಎಂಬ ಸಂದೇಶವನ್ನು ಸಮಾಜಕ್ಕೆ ರವಾನಿಸಬೇಕು.

ಭಾವುಕತೆ

ಕಲ್ಲು ಒಡೆದ ಕ್ಷಣ

ಒಬ್ಬ ಯುವಕ ಜೆನ್ ಗುರುಗಳ ಬಳಿ ಬಂದು ಹೇಳಿದ: ಗುರುಗಳೇ, ನಾನು ತುಂಬಾ ಶ್ರಮಪಡುತ್ತೇನೆ. ಆದರೂ ಯಶಸ್ಸು ಸಿಗುತ್ತಿಲ್ಲ. ಬಹುಶಃ ನಾನು ಅದೃಷ್ಟಹೀನ. ಗುರು ಅವನನ್ನು ಒಂದು ದೊಡ್ಡ ಬಂಡೆಯ ಬಳಿಗೆ ಕರೆದುಕೊಂಡು ಹೋದರು. ಈ ಕಲ್ಲನ್ನು ಒಡೆ ಎಂದರು. ಯುವಕ ಸುತ್ತಿಗೆಯಿಂದ ಒಡೆಯಲು ಆರಂಭಿಸಿದ. ತೊಂಬತ್ತೊಂಬತ್ತು ಹೊಡೆತವಾದರೂ ಕಲ್ಲು ಅಲುಗಲಿಲ್ಲ. ನೂರನೇ ಹೊಡೆತಕ್ಕೆ ಬಂಡೆ ಎರಡು ತುಂಡಾಯಿತು. ಯುವಕ ಸಂತೋಷದಿಂದ, 'ನೂರನೇ ಹೊಡೆತಕ್ಕೆ ಕಲ್ಲು ಒಡೆಯಿತು' ಎಂದ.

ಗುರು ತಲೆಯಾಡಿಸಿ ಹೇಳಿದರು, 'ಹಾಗಾದರೆ ನೀನು ನೂರನೇ ಹೊಡೆತವನ್ನೇ ಮೊದಲು ಹೊಡೆಯಬಹುದಾಗಿತ್ತಲ್ಲ?' 'ಅದು ಹೇಗೆ ಸಾಧ್ಯ ಗುರುಗಳೇ, ತೊಂಬತ್ತೊಂಬತ್ತಿಲ್ಲದೇ ನೂರಾಗುವುದೇ?' ಎಂದು ಪ್ರಶ್ನಿಸಿದ. ಗುರು ಹೇಳಿದ– 'ಯಶಸ್ಸೂ ಹಾಗೇ. ತೊಂಬತ್ತೊಂಬತ್ತು ಹೊಡೆತಗಳಿಲ್ಲದೆ ನೂರನೇ ಹೊಡೆತಕ್ಕೆ ಕಲ್ಲು ಹೇಗೆ ಬಿರಿಯದೋ, ಹಾಗೇ ಕಾಣದ ನೂರಾರು ಸಣ್ಣ ಪ್ರಯತ್ನಗಳಿಲ್ಲದೆ ಕಾಣುವ ಯಶಸ್ಸು ಇಲ್ಲ.'

ಸುತ್ತಮುತ್ತ

ಏಕಾಂಗಿ ಮರ

'ಜಗತ್ತಿನ ಅತ್ಯಂತ ಒಂಟಿ ಮರ' ಎಂದೇ ಪ್ರಸಿದ್ಧಿ ಪಡೆದಿರುವ ಈ ಮರ ಈಗ ವಿಜ್ಞಾನಿಗಳ ಗಮನ ಕೇಂದ್ರವಾಗಿದೆ. ಜನವಸತಿ ಇಲ್ಲದ ಕ್ಯಾಂಪ್ಬೆಲ್ ದ್ವೀಪದಲ್ಲಿರುವ ಈ ಸಿಟ್ಕಾ ಸ್ಪ್ರೂಸ್ ಮರ, ಹವಾಮಾನ ಬದಲಾವಣೆಯ ಹಲವು ರಹಸ್ಯಗಳನ್ನು ಬಿಚ್ಚಿಡುವ ಸುಳಿವುಗಳನ್ನು ನೀಡಬಹುದು ಎಂದು ನ್ಯೂಜಿಲೆಂಡ್‌ನ ಸಂಶೋಧಕರ ತಂಡ ನಂಬಿದೆ. ಸುಮಾರು 9 ಮೀಟರ್ ಎತ್ತರದ ಈ ಸ್ಪ್ರೂಸ್ ಮರ ಭೂಮಿಯಲ್ಲಿ ಅತ್ಯಂತ ಏಕಾಂಗಿಯಾಗಿರುವ ಮರ ಎಂಬ ಗಿನ್ನೆಸ್ ವಿಶ್ವ ದಾಖಲೆ ಹೊಂದಿದೆ. ದಕ್ಷಿಣ ಮಹಾಸಾಗರದಲ್ಲಿರುವ, ನ್ಯೂಜಿಲೆಂಡ್‌ನಿಂದ ಸುಮಾರು 700 ಕಿಲೋಮೀಟರ್ ದಕ್ಷಿಣಕ್ಕೆ ಇರುವ ನಿರ್ಜನ ಕ್ಯಾಂಪ್ಬೆಲ್ ದ್ವೀಪದಲ್ಲಿರುವ ಇದು ಅಲ್ಲಿರುವ ಒಂದೇ ಒಂದು ಮರ. ಈ ಮರದ 222 ಕಿಲೋಮೀಟರ್ ವ್ಯಾಪ್ತಿಯೊಳಗೆ ಮತ್ತೊಂದು ಮರವೇ ಇಲ್ಲ. ಉಳಿದಂತೆ ಪೊದೆಗಳಿವೆ. ಕ್ಯಾಂಪ್ಬೆಲ್ ದ್ವೀಪದ ಈ ಸ್ಪ್ರೂಸ್ ಮರಕ್ಕೂ ಮೊದಲು, ನೈಜರ್‌ನಲ್ಲಿದ್ದ 'ಟ್ರೀ ಆಫ್ ಟೆನೆರೆ'ಯನ್ನು ವಿಶ್ವದ ಅತ್ಯಂತ ಒಂಟಿ ಮರ ಎಂದು ಪರಿಗಣಿಸಲಾಗುತ್ತಿತ್ತು. 1973ರಲ್ಲಿ ಒಂದು ವಾಹನ ಡಿಕ್ಕಿ ಹೊಡೆದು ಆ ಮರ ನಾಶವಾಯಿತು.

ಮಾತು ಗೀತೆ

ಮೋಸಗಾರನ ಗುಣಗಳು

ಬದುಕಿನಲ್ಲಿ ಮೋಸ ವಂಚನೆಗಳು ಸಾಮಾನ್ಯ. ಭಗವದ್ಗೀತೆಯಲ್ಲಿ ಮೋಸಗಾರನ ಗುಣಗಳನ್ನು ವಿವರಿಸುವ ಶ್ಲೋಕಗಳಿವೆ. 'ದಂಭೋ ದರ್ಪೋಭಿಮಾನಶ್ಚ ಕ್ರೋಧಃ ಪಾರುಷ್ಯಮೇವ ಚ । ಅಜ್ಞಾನಂ ಚಾಭಿಜಾತಸ್ಯ ಪಾರ್ಥ ಸಂಪದಮಾಸುರೀಮ್.' ಅಂದರೆ, ಕಪಟ, ಅಹಂಕಾರ, ಗರ್ವ, ಕೋಪ, ಕಠೋರ ಮಾತು ಮತ್ತು ಅಜ್ಞಾನ– ಇವೆಲ್ಲವೂ ಆಸುರೀ ಸ್ವಭಾವದ ಲಕ್ಷಣಗಳು. 'ತ್ರಿವಿಧಂ ನರಕಸ್ಯೇದಂ ದ್ವಾರಂ ನಾಶನಮಾತ್ಮನಃ । ಕಾಮಃ ಕ್ರೋಧಸ್ತಥಾ ಲೋಭಃ ತಸ್ಮಾದೇತತ್ತ್ರಯಂ ತ್ಯಜೇತ್' ಅಂದರೆ, ಕಾಮ, ಕ್ರೋಧ ಮತ್ತು ಲೋಭ– ಇವು ಆತ್ಮನಾಶಕ್ಕೆ ಕಾರಣವಾಗುವ ನರಕದ ಮೂರು ಬಾಗಿಲುಗಳು. ಆದ್ದರಿಂದ ಇವುಗಳನ್ನು ತ್ಯಜಿಸಬೇಕು. ಒಟ್ಟಾರೆಯಾಗಿ, ಮೋಸವು ಹೆಚ್ಚಾಗಿ ಲೋಭ, ಅಹಂಕಾರ ಮತ್ತು ಕಪಟದಿಂದ ಹುಟ್ಟುತ್ತದೆ. ಇವುಗಳನ್ನು ತೊರೆದಾಗಲೇ ಮನುಷ್ಯನು ಧರ್ಮದ ಮಾರ್ಗದಲ್ಲಿ ನಡೆಯಲು ಸಾಧ್ಯ.

ಹನಿ ಹನಿ ಕವಿತೆ

ಪ್ರೇಮದ ಸುಳಿವು

ಪ್ರೇಮಿಯ ಜೋಕಿಗಿಂತ
ಅವನ ರೋಷಾವೇಶ
ನಗು ತರಿಸಿದರೆ
ಅದು ಪ್ರೇಮದ ಸುಳಿವು

• ಚೈತ್ರಾ, ಜೋಶಿ, ಕಳ್ಳಂಬೆಳ್ಳ



ಕುಟ್ರಕ್ಕಿ ಪ್ರತಿದಿನ ಕಿಟಕಿಯ ಬಳಿ ಬಂದು ಕಿಟಕಿ ಗಾಜಿನ ಮೇಲೆ ಕೊಕ್ಕಿನಿಂದ ಕುಟ್ಟುತ್ತಿತ್ತು. ಅಲ್ಲಿ ಕಾಣುತ್ತಿದ್ದ ಅದರದೇ ಪ್ರತಿಬಂಬವನ್ನು ಇನ್ನೊಂದು ಹಕ್ಕಿ ಎಂದು ತಿಳಿದಿತ್ತು. ಒಂದು ದಿನ ಅದು ಬರದೇ ಹೋದರೆ ಏನೋ ಕಳೆದುಕೊಂಡಂತೆ.

ಬಿಂಬದ ಯುದ್ಧದಿಂದ ಸ್ನೇಹದ ಪಯಣದವರೆಗೆ!

• ಹೊಸ್ಮನೆ ಮುತ್ತು

ಪ್ರಕೃತಿ ಅನೇಕ ವಿಸ್ಮಯಗಳ ಗೂಡು. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕಾಣಸಿಗುವ ಪಶು-ಪಕ್ಷಿಗಳ ನಡವಳಿಕೆಗಳು ಕೆಲವೊಮ್ಮೆ ನಮಗೆ ಆಶ್ಚರ್ಯವನ್ನುಂಟು ಮಾಡುತ್ತವೆ. ಅಂತಹದ್ದೇ ಒಂದು ವಿಚಿತ್ರ ಹಾಗೂ ದಿನನಿತ್ಯದ ಅನುಭವವೆಂದರೆ, ಕುಟ್ರಕ್ಕಿ (ವೈಟ್ ಚೀಕ್ ಬಾರ್ಬೆಟ್) ಎಂಬ ಪುಟ್ಟ ಹಕ್ಕಿಯ ಒಡನಾಟ. ಪ್ರತಿದಿನ ಬೆಳಿಗ್ಗೆ ಸೂರ್ಯನ ಮೊದಲ ಕಿರಣಗಳು ಕೊಠಡಿಯೊಳಗೆ ಬೀಳುವಷ್ಟರಲ್ಲೇ, ಕಿಟಕಿಯ ಗಾಜಿಗೆ ಯಾರೋ ಬೆರಳಿನಿಂದ ಬಡಿಯುವಂತಹ 'ಟಕ್..ಟಕ್..ಟಕ್!' ಎಂಬ ವಿಶಿಷ್ಟ ಶಬ್ದ ನನ್ನನ್ನು ಎಚ್ಚರಗೊಳಿಸುತ್ತದೆ. ಇದು ಮತ್ಯಾರದ್ದೂ ಅಲ್ಲ; ಕುಟ್ರಕ್ಕಿಯ ಕೊಕ್ಕಿನ ದೃಢವಾದ ತಾಳ. ಮೇಲ್ನೋಟಕ್ಕೆ ಇದು ಕೇವಲ ಒಂದು ಹಕ್ಕಿಯ ಚೇಷ್ಟೆಯಂತೆ ಕಂಡರೂ, ಇದರ ಹಿಂದೆ ಪ್ರಕೃತಿಯದೇ ಆದ ಕೆಲವು ರೋಚಕ ಕಾರಣಗಳಿವೆ.

ವಿಜ್ಞಾನಿಗಳ ಪ್ರಕಾರ, ಹಕ್ಕಿಗಳಿಗೆ ಕಿಟಕಿಯ ಗಾಜಿನಲ್ಲಿ ಕಾಣುವ ತನ್ನದೇ ಪ್ರತಿಬಿಂಬವು ಮತ್ತೊಂದು ಹಕ್ಕಿ ಎಂಬ ಭ್ರಮೆ ಮೂಡಿಸುತ್ತದೆ. ವಿಶೇಷವಾಗಿ ಸಂತಾನೋತ್ಪತ್ತಿಯ ಅವಧಿಯಲ್ಲಿ ಈ ಹಕ್ಕಿಗಳು ತಮ್ಮ ಪ್ರದೇಶದ ಬಗ್ಗೆ ಅತಿಯಾದ 'ಸ್ವಾಮ್ಯ ಪ್ರಜ್ಞೆ'ಯನ್ನು (Territorial behaviour) ಹೊಂದಿರುತ್ತವೆ. ಆಗ ಗಾಜಿನಲ್ಲಿ ಮೂಡುವ ತನ್ನದೇ ಬಿಂಬವನ್ನು, ತನ್ನ ಪ್ರದೇಶವನ್ನು ಅತಿಕ್ರಮಿಸಲು ಬಂದ ಎದುರಾಳಿ ಎಂದು ಭಾವಿಸುತ್ತವೆ. ಆ ಎದುರಾಳಿಯನ್ನು ಓಡಿಸಿ, ತನ್ನ ಗೂಡು ಅಥವಾ ಆಹಾರದ ಮೂಲವನ್ನು ರಕ್ಷಿಸಿಕೊಳ್ಳಲು ಪ್ರತಿಬಿಂಬವನ್ನು ಮತ್ತೆ ಮತ್ತೆ ಕುಕ್ಕುತ್ತವೆ. ಪ್ರಕೃತಿಯಲ್ಲಿ ಹಲವು ಪಕ್ಷಿಗಳು ತಮ್ಮ ಪ್ರದೇಶದಲ್ಲಿ ಇತರ ಪಕ್ಷಿಗಳನ್ನು ಸಹಿಸುವುದಿಲ್ಲ; ಇದು ಅವುಗಳ ಸಹಜ ವರ್ತನೆಯಾಗಿದೆ.

ಇದರೊಂದಿಗೆ ಆಹಾರದ ಹುಡುಕಾಟವೂ ಮತ್ತೊಂದು ಕಾರಣ. ಹಳೆಯದಾದ ಮರದ ಕಿಟಕಿಗಳ ಸಂದಿಗಳಲ್ಲಿ ಅಥವಾ ಬಿರುಕುಗಳಲ್ಲಿ ಅಡಗಿರುವ ಸಣ್ಣ ಸಣ್ಣ ಕೀಟಗಳು ಮತ್ತು ಗೆದ್ದಲುಗಳ ಸುಳಿವು ಕುಟ್ರಕ್ಕಿಯ ತೀಕ್ಷ್ಣವಾದ ಕಣ್ಣು ಹಾಗೂ ಶ್ರವಣ ಶಕ್ತಿಗೆ ಸುಲಭವಾಗಿ ಸಿಗುತ್ತದೆ. ಆಗ ಅದು ಕಿಟಕಿಯ ಮರವನ್ನು ಕುಕ್ಕುವ ಮೂಲಕ ತನ್ನ ನೆಚ್ಚಿನ ಆಹಾರವನ್ನು ಹೊರತೆಗೆಯಲು ಪ್ರಯತ್ನಿಸುತ್ತದೆ. ಕೆಲವೊಮ್ಮೆ ಗಾಜಿಗೆ ಅಂಟಿಕೊಂಡ ಧೂಳಿನ ಕಣಗಳು ಅಥವಾ ಕೀಟಗಳನ್ನು ಆಹಾರವೆಂದು ಭ್ರಮಿಸಿ ಕುಕ್ಕುವ ಸಾಧ್ಯತೆಯೂ ಇರುತ್ತದೆ.

ಪ್ರಕೃತಿ– ಮಾನವ ಬಾಂಧವ್ಯ

ಆರಂಭದಲ್ಲಿ ಈ ಶಬ್ದ ಕಿರಿಕಿರಿಯೆನಿಸಿದರೂ, ದಿನಕಳೆದಂತೆ ಅದು ನಮ್ಮ ದೈನಂದಿನ ಜೀವನದ ಒಂದು ಅವಿಭಾಜ್ಯ ಮತ್ತು ಮಧುರ ಭಾಗವಾಗಿ ಮಾರ್ಪಟ್ಟಿದೆ. ಮಳೆ, ಬಿಸಿಲು, ಚಳಿ ಏನೇ ಇದ್ದರೂ ಪ್ರತಿದಿನ ತಪ್ಪದೇ ಬರುವ ಈ ಹಕ್ಕಿ ನಮಗೆ ಸ್ಥಿರತೆ ಮತ್ತು ಶಿಸ್ತಿನ ಪಾಠವನ್ನು ಕಲಿಸುವುದರ ಜೊತೆಗೆ, ಬೆಳಗ್ಗೆ ಏಳಲು ಒಂದು ಸುಂದರ 'ಅಲಾರಾಂ ಕ್ಲಾಕ್' ಆಗಿಬಿಟ್ಟಿದೆ. ಆ 'ಟಕ್-ಟಕ್' ಶಬ್ದ ಕೇಳಿದೊಡನೆಯೇ ಜಗತ್ತಿನ ಎಲ್ಲ ಚಿಂತೆಗಳಿಂದ ದೂರ ಸರಿದು, ಕಿಟಕಿಯ ಬಳಿ ಹೋಗಿ ಅದರ ಚುರುಕಿನ ಭಂಗಿಯನ್ನು ನೋಡುವುದೇ ಒಂದು ಮೌನವಾದ ಧ್ಯಾನಸ್ಥಿತಿಯಾಗಿದೆ.

ಈ ಹಕ್ಕಿಯ ನೈಸರ್ಗಿಕ ಪ್ರವೃತ್ತಿಯಿಂದ ಅದರ ಕೊಕ್ಕಿಗೆ ಹಾಗೂ ಕಿಟಕಿಯ ಗಾಜಿಗೆ ಹಾನಿಯಾಗಬಾರದೆಂಬ ಕಾಳಜಿಯಿಂದ, ಗಾಜಿನ ಪ್ರತಿಬಿಂಬ ಸ್ಪಷ್ಟವಾಗಿ ಕಾಣದಂತೆ ಸ್ಟಿಕ್ಕರ್ ಅಂಟಿಸಿದೆ. ಕಿಟಕಿಯ ಹೊರಗೆ ಒಂದು ಸಣ್ಣ ತಟ್ಟೆಯಲ್ಲಿ ಸ್ವಲ್ಪ ನೀರು ಮತ್ತು ರಾಗಿ ಹಾಕಿಟ್ಟು, ಅದು ಬಂದು ವಿಶ್ರಾಂತಿ ಪಡೆಯಲು ಅನುವು ಮಾಡಿಕೊಡಲಾಗಿದೆ. ಹೀಗಾಗಿ ಈಗ ಅದು ಯುದ್ಧಕ್ಕಲ್ಲ, ಸ್ನೇಹಕ್ಕಾಗಿ ಬರುತ್ತಿದೆ. ಅದು ಬಾರದಿರುವ ದಿನ ಏನೋ ಕೊರತೆಯಾದಂತೆ ಅನಿಸುತ್ತದೆ.

ಕುಟ್ರಕ್ಕಿಯ ಈ ದಿನನಿತ್ಯದ ಭೇಟಿ ಪ್ರಕೃತಿ ಮತ್ತು ಮನುಷ್ಯನ ನಡುವಿನ ಅಪರೂಪದ ಸಹಬಾಳ್ವೆಗೆ ಒಂದು ಉತ್ತಮ ಉದಾಹರಣೆ.

ಕಿಟಕಿಯ ಗಾಜು ನಮ್ಮ ಒಳಗಿನ ಲೋಕ ಮತ್ತು ಹೊರಗಿನ ಪ್ರಕೃತಿಯ ನಡುವೆ ಇರುವ ಗಡಿ. ಕುಟ್ರಕ್ಕಿ ಪ್ರತಿದಿನ ಆ ಗಡಿಯನ್ನು ಪ್ರಶ್ನಿಸುತ್ತಾ, ನಮ್ಮ ಜೀವನವು ಹೊರಗಿನ ಜಗತ್ತಿನಿಂದ ಪ್ರತ್ಯೇಕವಾಗಿರದೆ ನಿರಂತರ ಸಂಪರ್ಕದಲ್ಲಿದೆ ಎಂಬುದನ್ನು ನೆನಪಿಸುತ್ತದೆ.

ಜೀವನದ ಸೌಂದರ್ಯ ಇಂತಹ ಸಣ್ಣ-ಪುಟ್ಟ ಕ್ಷಣಗಳಲ್ಲೇ ಅಡಗಿದೆ. ನಾವು ಮರಗಳನ್ನು ಬೆಳೆಸಿ ಪಕ್ಷಿಗಳಿಗೆ ಸುರಕ್ಷಿತ ವಾತಾವರಣ ಒದಗಿಸಿದರೆ, ಅವು ನಮ್ಮ ಮನೆಯ ಅಂಗಳವನ್ನೇ ತಮ್ಮ ನೆಲೆಯನ್ನಾಗಿ ಮಾಡಿಕೊಳ್ಳುತ್ತವೆ. ಮನುಷ್ಯ ಮತ್ತು ಪ್ರಕೃತಿಯ ನಡುವೆ ಯಾವುದೇ ಗೋಡೆಗಳಿಲ್ಲವೆಂಬುದನ್ನು ಅರಿತು, ಪ್ರಕೃತಿಯೊಂದಿಗೆ ಹೊಂದಿಕೊಂಡು ಬದುಕಿದಾಗಲೇ ಜೀವನ ಮತ್ತಷ್ಟು ಸುಂದರ, ಅರ್ಥಪೂರ್ಣ ಮತ್ತು ಆನಂದಮಯ.

ಹನಿ ಹನಿ ಕತೆಗಳು

• ಯಾಮಾರಿಸು

ನಾಳೆಯಿಂದ ನಾನು ಖಂಡಿತ ಆರೋಗ್ಯದ ಮೇಲೆ ಗಮನ ಕೊಡುತ್ತೇನೆಂದು ಹೇಳಿ ಹೆಂಡತಿಯನ್ನು ಎಷ್ಟೇ ಯಾಮಾರಿಸಿದ್ರೂ, ಯಮರಾಜನನ್ನು ಯಾಮಾರಿಸಲಾಗಲಿಲ್ಲ.

• ಆರೋಗ್ಯ ವಿಮೆ

ನಾನು ದೈಹಿಕವಾಗಿ ಸದೃಢವಾಗಿರುವಾಗ ಆರೋಗ್ಯ ವಿಮೆ ಯಾಕೆ ಎಂಬ ತಪ್ಪು ಗ್ರಹಿಕೆಯನ್ನು ಹೋಗಲಾಡಿಸಿದ್ದು, ಆಕಸ್ಮಿಕವಾಗಿ ಮೇಲಿಂದ ಕಾಲುಜಾರಿ ಬಿದ್ದು, ಆಸ್ಪತ್ರೆಯ ಬಿಲ್ಲಿಗೆ ಮಗಳ ಶಿಕ್ಷಣಕ್ಕೆ ಇಟ್ಟ ದುಡ್ಡನ್ನು ಕಟ್ಟಿದಾಗ.

• ಬುದ್ಧಿವಂತಿಕೆ

ವರ್ಷಗಟ್ಟಲೆ ಓದಿ ಒಳ್ಳೆಯ ಕೆಲಸ ಸಿಗುವ ಹೊತ್ತಿಗೆ ಮೊದಲೇ, ಕೃತಕ ಬುದ್ಧಿಮತ್ತೆ ಬಹುಪಾಲು ಕೆಲಸಗಳನ್ನು ಅಪೋಷನ ತೆಗೆದುಕೊಂಡಿತ್ತು.

• ಹಣ

ಸಿಕ್ಕಸಿಕ್ಕವರ ಕಡೆ ಚೀಟಿ ಹಾಕಿ ಹಣ ಕಳೆದುಕೊಂಡ ಕತೆ ತಂದೆಯಿಂದ ನೂರು ಬಾರಿ ಕೇಳಿ– ನಿಮಗೆ ಹಣಕಾಸು ನಿರ್ವಹಣೆ ಗೊತ್ತಿಲ್ಲ ಅನ್ನುತ್ತಿದ್ದ ಮಗ, ಗೆಳೆಯ ಕೊಟ್ಟ ಸ್ಟಾಕ್ ಟಿಪ್ಸ್ ಅನ್ನು ಪರಿಶೀಲಿಸದೆ ಶೇರುಗಳನ್ನು ಕೊಂಡುಕೊಂಡ.

• ತೆರೆದ ಪುಸ್ತಕ

ನಾನಿರುವದೇ ನಿಮಗಾಗಿ, ನನ್ನ ಜೀವನ ತೆರೆದ ಪುಸ್ತಕ ಅನ್ನುತ್ತಿದ್ದ ರಾಜಕಾರಣಿ ಮನೆ ಮೇಲೆ ರೈಡ್ ಆದಾಗ ತಿಳಿದದ್ದು, ಅವನು ಮತ್ತೊಂದು ಪುಸ್ತಕದಲ್ಲಿ ಬೇನಾಮಿ ಆಸ್ತಿಗಳ ಬಗ್ಗೆ ವಿವರವಾಗಿ ಬರೆದಿದ್ದ.

• ಜೀವನ

ಇರುವುದೊಂದೇ ಜೀವನ ಅದನ್ನು ಪ್ರತಿ ಕ್ಷಣ ಎಂಜಾಯ್ ಮಾಡಬೇಕು ಎಂದು ದುಡ್ಡಿಗೆ ಬೆಲೆ ಕೊಡದೆ ಬದುಕುತ್ತಿದ್ದ ಪ್ರೀತಿಗೆ ಕಣ್ಣು ತೆರೆದದ್ದು, ತನ್ನ ಕೋಟ್ಯಾಧಿಪತಿ ತಂದೆ, ಉಯಿಲಿನಲ್ಲಿ, ಇರುವ ಒಂದು ಮನೆಯೊಂದನ್ನು ಕೊಟ್ಟು, ಮಿಕ್ಕೆಲ್ಲಾ ಆಸ್ತಿಗಳನ್ನು ಅನಾಥ ಮಕ್ಕಳ ಸಂಸ್ಥೆಗೆ ದಾನ ಮಾಡಿದಾಗ.

• ಸಮರ್ಪಣೆ

ಎಲ್ಲರೂ ನಮ್ಮವರೇ ಎಂಬ ಸಿದ್ಧಾಂತದ ಮೇಲೆ ಚುನಾವಣೆ ಗೆದ್ದ ನಂತರ, ತನ್ನ ಗೆಲುವನ್ನು ತನ್ನ ಜಾತಿಯ ಮತದಾರರಿಗೆ ಸಮರ್ಪಿಸಿದ.

• ವಾಸ್ತವ

ಓದು ಮುಗಿದು ಕೆಲಸಕ್ಕೆ ಸೇರಿದ ಮೇಲೆ ಜೀವನ ಸೆಟಲ್ ಎಂಬ ಮಾತುಗಳು ಸತ್ಯವಲ್ಲ ಎಂದು ಗೊತ್ತಾದದ್ದು, ಕೆಲವು ವರ್ಷಗಳು ಕೆಲಸ ಮಾಡಿದ ಮೇಲೆ.

• ವಿಪರ್ಯಾಸ

ಗಲಾಟೆ ಇಲ್ಲದ ಪ್ರಶಾಂತ ವಾತಾವರಣ ಬೇಕೆಂದು ಊರಾಚೆ ಜಾಗ ಕೊಂಡು ಜೀವಿಸುತ್ತಿದ್ದ ಮನೋಹರನ ಮನೆಯ ಪಕ್ಕ, ರಾಜ್ಯದ ಅತಿ ದೊಡ್ಡ ಶಾಪಿಂಗ್ ಮಾಲ್ ಬಂದಿತು.

ಜೀವ ದಯೆ ತೋರಿದ ಆದರ್ಶ ವ್ಯಕ್ತಿಗಳು

• – ಎಂ. ಪರಮೇಶ್ವರ, ಮದ್ದಿಹಳ್ಳಿ

ನಾವು ಅಕ್ಷರಸ್ಥರನ್ನು ವಿದ್ಯಾವಂತರೆಂದು ಕರೆಯುತ್ತಿದ್ದೇವೆ. ಆದರೆ ಅಕ್ಷರ ಜ್ಞಾನ ಇಲ್ಲದ, ವಿದ್ಯೆ ಇರುವ ಮಂದಿ ಹಳ್ಳಿಗಳಲ್ಲಿ ಹೆಜ್ಜೆ ಹೆಜ್ಜೆಗೂ ನಾನು ನನ್ನ ಬಾಲ್ಯದಲ್ಲಿ ನೋಡಿದ್ದೆ. ಅಂತಹ ಮಹನೀಯರ ಪೈಕಿ ಪ್ರಾಣಿಗಳಲ್ಲಿ ಜೀವದಯೆ ತೋರಿದ ಅಸಾಮಾನ್ಯ ವಾಗಿದ್ದರೂ ಸಾಮಾನ್ಯರಂತೆ ಇದ್ದ ವ್ಯಕ್ತಿಗಳ ನಿಜ ಚಿತ್ರಣ ಮುಂದಿಡುತ್ತಿದ್ದೇನೆ.

ನಮ್ಮ ಹಳ್ಳಿಯಲ್ಲಿ ಅಂದು ಪಶು ಆಸ್ಪತ್ರೆ ಇರಲಿಲ್ಲ, ಈಗಲೂ ಇಲ್ಲ ಬಿಡಿ. ವೈದ್ಯೋ ನಾರಾಯಣ ಹರಿ ಅಂತ ಇದ್ದವರು ಗೊಲ್ಲರಹಟ್ಟಿಯ ಬಸಜ್ಜ, ಶಂಡೂರಜ್ಜನವರ ಕರಿಯಜ್ಜ ಅಂತ. ನಮಗೆ ಇಬ್ಬರಲ್ಲಿ ಒಬ್ಬರಂತೂ ಸಿಕ್ಕರೆ ಅಮೃತ ಸಿಕ್ಕ ಹಾಗೆ. ಹಸು ಕರು, ಎಮ್ಮೆ, ಎತ್ತು, ಮೇಕೆ, ಕುರಿ ಯಾರ ಮನೆಯಲ್ಲಿ ಹಟ್ಟಿಯಲ್ಲಿ ಚನ್ನಾಗಿಲ್ಲ ಅಂತಾ ಗೊತ್ತಾದ ತಕ್ಷಣ ಸೇವೆಗೆ ನಿಲ್ಲುತ್ತಿದ್ದವರು ಈ ಇಬ್ಬರು

ಮಹನೀಯರು. ಕೆಲವೊಂದು ದನಗಳು ಹಟ್ಟಿಯಲ್ಲಿ, ಹುಲ್ಲು ಮೇಯಲು ಹೋದ ಜಾಗದಲ್ಲೇ ಎದ್ದೇಳದೆ ಮಲಗಿದಾಗ ನಮಗೆ ಸಾಕ್ಷಾತ್ ಭಗವಂತನಂತೆ ಕಂಡು ಬಂದ ಈ ಇಬ್ಬರು ಮಹನೀಯರಿಗೆ ಹೇಳಿ ಕಳುಹಿಸಿದರೆ ತಮ್ಮ ಎಲ್ಲಾ ವೈಯಕ್ತಿಕ ಕೆಲಸ ಕಾರ್ಯಗಳನ್ನು ಬಿಟ್ಟು ಬಂದು ಯಾವ ಕಾಯಿಲೆ ಅಂತ ನೋಡಿ ಅವರು ಯಾವುದೋ ಗಿಡ ಮೂಲಿಕೆ ಹನುಮಂತ ಸಂಜೀವಿನಿ ಹುಡುಕಿದಂತೆ ಗೋಮಾಳ ಕೆರೆ ಕಾಲುವೆ ಅಥವಾ ಆ ಗಿಡ ಹುಡುಕಿ ಹುಡುಕಿ ತಂದು ಮದ್ದು ಮಾಡಿ ಅರೆದು ದನಗಳಿಗೆ ಗೊಟ್ಟ ಕುಡಿಸಿದರೆ ಮುಗಿಯಿತು. ಸ್ವಲ್ಪ ಸಮಯ ಕಳೆದ ಮೇಲೆ ಮೂಕ ಪ್ರಾಣಿಗಳ ಆರೋಗ್ಯ ಸುಧಾರಿಸಿದ ಮೇಲೆ ಬಸಜ್ಜ ಅಥವಾ ಕರಿಯಜ್ಜ ಮುಖದಲ್ಲಿ ಸಂತಸದ ಕಳೆ. ತಾವು ಪಟ್ಟ ಕಷ್ಟಕ್ಕೆ ಎಂದೂ ಒಂದಾಣೆ ಹಣವನ್ನಾಗಲಿ ಇನ್ನೇನನ್ನೂ ಸ್ವೀಕರಿಸದ ಅಪರಿಗ್ರಹ ವ್ಯಕ್ತಿತ್ವ. ಈಗಿನಂತೆ ಬೈಕ್, ಮೊಬೈಲ್ ಇಲ್ಲದೇ ಇದ್ದ ಕಾಲ ಕರಿಯಜ್ಜ ಊರಲ್ಲಿ ಸಿಗುತ್ತಿದ್ದರು. ಬಸಜ್ಜ ಅಡವಿಯೊಳಗೆ ಮನೆ ಮಾಡಿಕೊಂಡಿದ್ದರು. ನಡೆದುಕೊಂಡು ಹೋಗಿ ನಮ್ಮ ಎಮ್ಮೆ, ಎತ್ತು, ಹಸು ಚನ್ನಾಗಿಲ್ಲ ಎಂದು ಹೇಳಿದರೆ ಸಾಕು, ಮಧ್ಯ ರಾತ್ರಿಯಲ್ಲಿ ಬರುತ್ತಿದ್ದ ಮಹನೀಯರು ಇಂದಿನ ಪ್ರಪಂಚದಲ್ಲಿ ನಾವು ಹಣ ಕೊಟ್ಟರೂ ಸಿಗುವುದು ಕಷ್ಟ. ಸಿಕ್ಕರೂ ಭಾವದಿಂದ ಕೆಲಸ ಮಾಡುವು ದು ಕಷ್ಟ.

ಇಷ್ಟೇ ಅಲ್ಲ ತಿರುಪತಿ ಮುಂತಾದ ಪುಣ್ಯಕ್ಷೇತ್ರಗಳಿಗೆ ಪಾದಯಾತ್ರೆ ಮಾಡುತ್ತಿದ್ದ ಭಕ್ತರು ನಮ್ಮೂರಿನಲ್ಲಿ ತಂಗುತ್ತಿದ್ದರು. ಅವರಿಗೆ ಆಹಾರ ವಸತಿ ಸೌಲಭ್ಯ ಕಲ್ಪಿಸಲು ಜನ ನಾಮುಂದು ತಾಮುಂದು ಎಂದು ಬರುತ್ತಿದ್ದರು. ನಾವು ಚಿಕ್ಕಂದಿನಲ್ಲಿ ಗದ್ದ ಬಾಲ, ಗಂಟಲು ನೋವು ಬಂದರೆ ಕೆಂಚಮ್ಮ, ಕರಿಯಮ್ಮ ಬಂದು ಮಕ್ಕಳ ಹಾಗೂ ದೊಡ್ಡವರ ಗಂಟಲು ನೋವಿಗೆ ಇನ್ನಿತರೇ ಬಾಲ ಕಾಯಿಲೆಗಳಿಗೆ ಉಚಿತವಾಗಿ ಚಿಕಿತ್ಸೆ ಕೊಡುತ್ತಿದ್ದರು. ಕೆಲವು ಜನ ಊರಿಂ ದೂರಿಗೆ ಅಲೆದು ಭಿಕ್ಷಾ ವೃತ್ತಿ ಮಾಡುತ್ತಿದ್ದ ಅನೇಕ ಅಲೆಮಾರಿ ಜನಗಳು ಉಳಿದುಕೊಂಡರೆ ಅವರಿಗೆ ಊಟದ ಸೌಲಭ್ಯ ಮಾಡುತ್ತಿದ್ದದ್ದನ್ನು ನೋಡಿದ್ದೇನೆ. ನಮ್ಮ ತಂದೆಯವರು ಅಂದಿನಿಂದ ಇಂದಿಗೂ ಸಹ ಮನೆಯಲ್ಲಿ ಸಾಮಾನ್ಯ ಕಾಯಿಲೆಗಳಾದ ಜ್ವರ, ನೆಗಡಿ, ಹೊಟ್ಟೆ ನೋವಿಗೆ ಔಷಧಿ ಇಟ್ಟುಕೊಂಡಿರುತ್ತಾರೆ. ಅದೆಲ್ಲವೂ ಉಚಿತವಾಗಿಯೇ ಅಂದಿನಿಂದ ಇಂದಿನವರೆಗೆ ಕೊಡುತ್ತಲೇ ಬಂದಿದ್ದಾರೆ. ಹನುಮಣ್ಣನವರ ಕರಿಯಜ್ಜನ ವಂಶ ಅಂತ ಇತ್ತು ಅಂತ ನಮ್ಮ ತಾಯಿ ಹೇಳುತ್ತಾ ಇರುತ್ತಾರೆ. ಊರಲ್ಲಿ ಯಾರೇ ಬಡವರು, ನಿರ್ಗತಿಕರ ಮನೆಯಲ್ಲಿ ಮದುವೆ ನಡೆದರೆ ಅವರಿಗೆ ಉಚಿತ ತಾಳಿ, ಬಟ್ಟೆಯನ್ನು ಕೊಡ್ತಾ ಇದ್ದರಂತೆ. ಇಂದು ನಾವು ಮಾನವೀಯ ಗುಣಗಳನ್ನು ಅಂದಿನವ ರನ್ನು ನೋಡಿ ಕೇಳಿ ತಿಳಿದುಕೊಂಡು ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿದ್ದರು.

ಕಣ್ಣೀರು ಒರೆಸುವ ಧನ್ವಂತರಿಗಳು

• ರಾ. ರಾಮಾರಾಧ್ಯ, ಮೈಸೂರು

ನಮ್ಮ ತಾಯಿ ಮಹಿಳಾ ಸರಕಾರಿ ವೈದ್ಯಾಧಿಕಾರಿಯಾಗಿದ್ದರು. ಹೀಗಾಗಿ ನನಗೆ ಬಾಲ್ಯದಿಂದಲೂ ಡಾಕ್ಟರ್ ಕೆಲಸದಲ್ಲಿ ವಿಶೇಷ ಆಸಕ್ತಿ ಮತ್ತು ಕುತೂಹಲ. ನನ್ನ ಅಮ್ಮ ಪ್ರತಿ ದಿನ ಪಡುತ್ತಿದ್ದ ಕಷ್ಟ, ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದ ಕಾರಣ ವೃತ್ತಿ ಬದುಕು ಹಾಗು ಕುಟುಂಬವನ್ನು ಅವರು ಬ್ಯಾಲೆನ್ಸ್ ಮಾಡುತ್ತಿದ್ದುದು ಇಂದಿಗೂ ನನಗೆ ಒಂದು ವಿಸ್ಮಯವಾಗಿಯೇ ಕಾಡುತ್ತಿದೆ. ಹೀಗಾಗಿ ವೈದ್ಯ ವೃತ್ತಿ ನನಗೆ ಪ್ರೀತಿಪಾತ್ರವಾದ ಮತ್ತು ಹೃದಯಕ್ಕೆ ಹತ್ತಿರವಾದ ವೃತ್ತಿ ಎನಿಸಿದೆ. ಇಂತಹ ಶ್ರೇಷ್ಠ, ಪವಿತ್ರ ಹುದ್ದೆಯ ದಿನದ ಬಗೆಗೆ ಪ್ರತಿ ವ್ಯಕ್ತಿಯೂ ತಪ್ಪದೇ ಅರಿಯಬೇಕಾದ ಅನೇಕ ಕುತೂಹಲಭರಿತ ಅಂಶಗಳಿವೆ.

ನಿನ್ನೆ ವೈದ್ಯರ ದಿನ. ವೈದ್ಯ ವೃತ್ತಿ ಕೇವಲ ಒಂದು ಉದ್ಯೋಗವಲ್ಲ. ಅದು ಮಾನವೀಯತೆಯ ಪರಮೋಚ್ಚ ಸೇವೆ. ಜೀವ ಕೊಡುವುದು ದೇವ ರಹಸ್ಯವಾದರೆ, ಆ ಜೀವವನ್ನು ಉಳಿಸುವುದು ವೈದ್ಯರ ಚಾತುರ್ಯ. ಜಗತ್ತಿನ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಜೀವನದ ಯಾವುದಾದರೊಂದು ಹಂತದಲ್ಲಿ ವೈದ್ಯರ ಸಹಾಯವನ್ನು ಪಡೆದೇ ಇರುತ್ತಾನೆ. ಸಮಾಜದಲ್ಲಿ ರೋಗಿಗಳ ಕಣ್ಣೀರನ್ನು ಒರೆಸಿ, ಆರೋಗ್ಯ ಮತ್ತು ಭರವಸೆಯನ್ನು ಮೂಡಿಸುವ ವೈದ್ಯರ ನಿಸ್ವಾರ್ಥ ಸೇವೆಯನ್ನು ಸ್ಮರಿಸಲಾಗುತ್ತದೆ.

ಭಾರತದಲ್ಲಿ ವೈದ್ಯರ ದಿನವನ್ನು ಡಾ.ಬಿ.ಸಿ. ರಾಯ್ ಅವರಿಗೆ ಸಮರ್ಪಿಸಲು ಬಲವಾದ ಕಾರಣಗಳಿವೆ. ಅವರು ವೈದ್ಯಕೀಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರ. ಅವರು ಲಂಡನ್‌ನಲ್ಲಿ ಎಂಡಿ, ಎಂಆರ್‌ಸಿಪಿ, ಎಫ್‌ಆರ್‌ಸಿಎಸ್ ಪದವಿಗಳನ್ನು ಪಡೆದು ಭಾರತಕ್ಕೆ ಬಂದು ಬಡ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡುತ್ತಿದ್ದರು. ತಮ್ಮ ಸಂಪಾದನೆಯ ಬಹುಭಾಗವನ್ನು ಸಾಮಾಜಿಕ ಸೇವೆಗೆ ಮತ್ತು ವೈದ್ಯಕೀಯ ಸಂಸ್ಥೆಗಳ ಸ್ಥಾಪನೆಗೆ ಧಾರೆ ಎರೆದರು. ದೇಶಕ್ಕೆ ಅವರು ನೀಡಿದ ನಿಸ್ವಾರ್ಥ ಸೇವೆಯನ್ನು ಗುರುತಿಸಿ 1961ರಲ್ಲಿ ಭಾರತ ರತ್ನ ನೀಡಿ ಗೌರವಿಸಲಾಯಿತು. ವೈದ್ಯರನ್ನು ಸಮಾಜದಲ್ಲಿ ನಡೆದಾಡುವ ದೇವರು ಎಂದು ಕರೆಯಲಾಗುತ್ತದೆ. ಅವರು ಜೀವ ರಕ್ಷಕರು. ತೀವ್ರ ಅಪಘಾತಗಳು, ಮಾರಣಾಂತಿಕ ಕಾಯಿಲೆಗಳು ಮತ್ತು ತುರ್ತು ಪರಿಸ್ಥಿತಿಗಳಲ್ಲಿ ಸಮಯ ಪ್ರಜ್ಞೆಯಿಂದ ಕಾರ್ಯನಿರ್ವಹಿಸಿ ಜೀವ ಉಳಿಸುತ್ತಾರೆ. ಕೋವಿಡ್-19, ಪ್ಲೇಗ್, ಕಾಲರಾ, ಎಬೋಲಾದಂತಹ ಜಾಗತಿಕ ಸಾಂಕ್ರಾಮಿಕ ರೋಗಗಳು ಹರಡಿದಾಗ ವೈದ್ಯರು ತಮ್ಮ ಪ್ರಾಣದ ಹಂಗು ತೊರೆದು ಮುಂಚೂಣಿಯಲ್ಲಿ ನಿಂತು ಹೋರಾಡಿದ್ದಾರೆ. ಕಾಯಿಲೆಗಳನ್ನು ಗುಣಪಡಿಸುವುದು ಮಾತ್ರವಲ್ಲದೆ, ಸಮಾಜದಲ್ಲಿ ಉತ್ತಮ ಜೀವನಶೈಲಿ, ಪೌಷ್ಟಿಕ ಆಹಾರ ಮತ್ತು ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುತ್ತಾರೆ. ಇಂದಿನ ತಾಂತ್ರಿಕ ಯುಗದಲ್ಲಿ ವೈದ್ಯರ ಸೇವೆ ಸುಲಭವಾಗಿದೆ ಎಂದು ಮೇಲ್ನೋಟಕ್ಕೆ ಅನಿಸಿದರೂ, ಅವರು ಎದುರಿಸುತ್ತಿರುವ ಮಾನಸಿಕ ಮತ್ತು ಸವಾಲುಗಳು ಸಣ್ಣದಲ್ಲ.

ಭಾರತದಂತಹ ಅತಿ ಹೆಚ್ಚು ಜನಸಂಖ್ಯೆ ಇರುವ ದೇಶದಲ್ಲಿ ವೈದ್ಯರು ಮತ್ತು ರೋಗಿಗಳ ಅನುಪಾತ ತೀರಾ ಅಸಮತೋಲನದಲ್ಲಿದೆ. ಇದರಿಂದಾಗಿ ವೈದ್ಯರು ದಿನಕ್ಕೆ 14 ರಿಂದ 18 ಗಂಟೆಗಳ ಕಾಲ ಸತತವಾಗಿ ಕೆಲಸ ಮಾಡಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ರೋಗಿಗಳು ಮೃತಪಟ್ಟಾಗ ಅಥವಾ ಚಿಕಿತ್ಸೆ ವಿಫಲವಾದಾಗ ರೋಗಿಗಳ ಸಂಬಂಧಿಕರು ವೈದ್ಯರ ಮೇಲೆ ಹಲ್ಲೆ ಮಾಡುವ ಘಟನೆಗಳು ಹೆಚ್ಚುತ್ತಿವೆ. ಇದು ವೈದ್ಯರಲ್ಲಿ ಆತಂಕ ಮೂಡಿಸಿದೆ. ಸದಾ ಸಾವು, ನೋವು, ರೋಗಿಗಳ ಕಣ್ಣೀರನ್ನು ನೋಡುವ ವೈದ್ಯರು ತೀವ್ರ ಮಾನಸಿಕ ಒತ್ತಡ ಮತ್ತು ಖಿನ್ನತೆಗೆ ಒಳಗಾಗುತ್ತಿದ್ದಾರೆ.

ವೈದ್ಯರ ದಿನವನ್ನು ಆಚರಿಸುವ ಆಳವಾದ ಉದ್ದೇಶವನ್ನು ಅರ್ಥಮಾಡಿಕೊಳ್ಳಬೇಕು. ದಿನದ 24 ಗಂಟೆಯೂ ವಿಶ್ರಾಂತಿ ಇಲ್ಲದೆ ದುಡಿಯುವ ವೈದ್ಯರಿಗೆ ಇಡೀ ಸಮಾಜ ಒಟ್ಟಾಗಿ ಧನ್ಯವಾದ ಹೇಳುವ ದಿನವಿದು. ವೈದ್ಯರು ಮತ್ತು ಸಾರ್ವಜನಿಕರ ನಡುವೆ ಪರಸ್ಪರ ನಂಬಿಕೆ ಮತ್ತು ಗೌರವವನ್ನು ಮರುಸ್ಥಾಪಿಸಲು ಈ ದಿನ ಸಹಕಾರಿಯಾಗಿದೆ. ಉದಯೋನ್ಮುಖ ಯುವ ವೈದ್ಯರಿಗೆ ವೈದ್ಯಕೀಯ ವೃತ್ತಿಯ ಪಾವಿತ್ರ್ಯವನ್ನು ನೆನಪಿಸಲು ಮತ್ತು ಡಾ. ಬಿ.ಸಿ. ರಾಯ್ ಅವರಂತಹ ಮಹನೀಯರ ಆದರ್ಶಗಳನ್ನು ಅಳವಡಿಸಿ ಕೊಳ್ಳಲು ಪ್ರೇರೇಪಿಸಬೇಕು. ವೈದ್ಯರು ಸಮಾಜದ ಸ್ವಾಸ್ಥ್ಯವನ್ನು ಕಾಯುವ ಕಾವಲುಗಾರರು.

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಇಪ್ಪತ್ತನಾಲ್ಕು ಘಂಟೆಗಳ ಅವಧಿ (2)
3. ಮುಖ ಅಥವಾ ವದನಕ್ಕೆ ಮತ್ತೊಂದು ಹೆಸರು (3)
5. ಜಗಕೆಲ್ಲ ಬೆಳಕು ಕೊಡುವ ಸೂರ್ಯನ ಮತ್ತೊಂದು ಹೆಸರು (2)
6. ಎರಡು ಹೃದಯಗಳೊಂದಿಗೆ, ಮನೆ-ಮನಸ್ಸುಗಳನ್ನೂ ಬೆಸೆಯುವ ಪರಿಣಯ (3)
8. ದುಂಬಿಯು ಹೂವುಗಳಿಂದ ಸಂಗ್ರಹಿಸುವ ಸಿಹಿ (4)
10. ಮೋಸ ಮಾಡುವುದನ್ನು ಧ್ವನಿಸುವ ನುಡಿಗಟ್ಟು (4)
12. ಕೊನೆಗೆ ಮತ್ತೊಂದು ಕೈಯನ್ನು ಕಟ್ಟಿಕೊಂಡಿರುವ ಸೂರ್ಯ (4)
15. ಮನಸ್ಸಿನೊಳಗೇ ನಡೆಯುವ ಘರ್ಷಣೆ (4)
17. ಜೋಪಾನವಿಲ್ಲ ಅಸ್ತವ್ಯಸ್ತವಾಗಿ ಬಂದಿದೆ (3)
19. ಇನ್ನೊಂದು ಹಸುವಿಗೆ ಬಾಲ ಬಂದರೆ ಸಿಕ್ಕುವ ಹಣ (2)
20. ನೂರ ನಲುವತ್ತು ಕೋಟಿಗೂ ಅಧಿಕ ಜನರ ಭಾರ ಹೊತ್ತ ದೇಶ (3)
21. ಸುಳ್ಳಲ್ಲ, ಇದು ನಿಜ (2)

ಮೇಲಿಂದ ಕೆಳಕ್ಕೆ

2. ದಮಯಂತಿಯ ಪತಿಯ ಅಡುಗೆ ಬಹಳ ರುಚಿ (4)
4. ಕೈಯಲ್ಲಿರುವ ಹಣ (3)
5. ನಾಟಕದಲ್ಲಿ ಬಂದ ವಿದೂಷಕ ಇಲ್ಲಿ ಶೀರ್ಷಾಸನ ಮಾಡಿದ್ದಾನೆ (4)
6. ದಮನಿಸಲಾಗದ ಸೊಕ್ಕು (2)
7. ಪುಟ್ಟ ದೋಣಿಯಿಲ್ಲಿ ಅಡಿಮೇಲಾಗಿದೆಯಲ್ಲ (2)
9. ಒಂದು ಬಗೆಯ ಅಲೋಹ ಮೂಲಧಾತು, ಫಿರಂಗಿಮದ್ದು ಕೂಡ ಹೌದು (3)
11. ಪುಸ್ತಕ ಓದಿ ಜ್ಞಾನವನ್ನು ತುಂಬಿಡಬೇಕಾದ್ದು ಇಲ್ಲಿ (3)
13. ಗಾಳಿ, ಬೆಳಕು ಚೆನ್ನಾಗಿ ಬರಲೆಂದು ಮಾಡಿದ ಕಿಟಕಿ (4)
14. ಬಿಡುವಿದ್ದಾಗ ಗುಡಿಸಿದ ಧೂಳು (2)
15. ಅಜ್ಜನಿಗೆ ಮತ್ತೊಂದು ಹೆಸರಾಗಿದೆ (2)
16. ಬಾಯಿಯಲ್ಲಿ ಬಂದಿರುವ ಜೊಲ್ಲು (4)
18. ಇಲ್ಲವೆಂದು ನಿರಾಕರಿಸುವಿಕೆ (3)

ಸರಿಯುತ್ತರಗಳು

ಕಾಶ್ಮೀರದ ಕಣಿವೆಯಲ್ಲಿ ಅಮಾಯಕ ಹೆಣ್ಣು ಮಕ್ಕಳ ಆಪದ್ಬಾಂಧವ

ಅಹ್ಮದ್ ನಗರದ ರೈತ ಕುಟುಂಬದಲ್ಲಿ ಜನಿಸಿದ ಅಧಿಕ್ ಕದಂ, 1997ರಲ್ಲಿ ಕೇವಲ 15 ದಿನಗಳ ಸಂಶೋಧನಾ ಪ್ರವಾಸಕ್ಕಾಗಿ ಕಾಶ್ಮೀರಕ್ಕೆ ಕಾಲಿಟ್ಟಿದ್ದರು. ಆದರೆ ಅಲ್ಲಿ ಹಿಂಸಾಚಾರದಿಂದ ತಂದೆ-ತಾಯಿಯನ್ನು ಕಳೆದುಕೊಂಡು ಬೀದಿಗೆ ಬಿದ್ದಿದ್ದ ಅನೇಕ ಅನಾಥ ಮಕ್ಕಳ ಸ್ಥಿತಿ ಅವರ ಇಡೀ ಜೀವನದ ದಾರಿಯನ್ನೇ ಬದಲಾಯಿಸಿತು. ಕಣಿವೆಯ ಕಣ್ಣೀರು ಒರೆಸಲು ಅವರು ಅಲ್ಲೇ ಉಳಿದುಕೊಂಡರು.

ಗಡಿ ನಿಯಂತ್ರಣ ರೇಖೆಯ (LoC) ಅತ್ಯಂತ ಸೂಕ್ಷ್ಮ ಪ್ರದೇಶವಾದ ಕುಪ್ವಾರದಲ್ಲಿ ಇವರು ಕೆಲಸ ಮಾಡಲು ಆರಂಭಿಸಿದಾಗ, ಉಗ್ರರು ಇವರನ್ನು ಗುಪ್ತಚರ ಏಜೆಂಟ್ ಎಂದು ಶಂಕಿಸಿ 19 ಬಾರಿ ಅಪಹರಿಸಿದ್ದರು. ಆದರೆ ಅಧಿಕ್ ಅವರ ನಿಷ್ಕಲ್ಮಶ ಸೇವೆಯನ್ನು ಕಂಡಿದ್ದ ಸ್ಥಳೀಯ ಕಾಶ್ಮೀರಿ ಬಾಂಧವರೇ ಉಗ್ರರ ಎದುರು ನಿಂತು ಇವರನ್ನು ಪ್ರತಿ ಬಾರಿಯೂ ಜೀವಂತವಾಗಿ ಬಿಡಿಸಿಕೊಂಡು ಬರುತ್ತಿದ್ದರು. ಜೀವಕ್ಕೆ ಕಂಟಕವಿದ್ದರೂ ಅಧಿಕ್ ಹೆದರಿ ಓಡಲಿಲ್ಲ.

ಕಾಶ್ಮೀರದ ಸಂಘರ್ಷದಲ್ಲಿ ಅತಿ ಹೆಚ್ಚು ನೊಂದಿದ್ದು ಅಲ್ಲಿನ ಹೆಣ್ಣುಮಕ್ಕಳು. ಅವರಿಗಾಗಿ

ಒಂದೊಳ್ಳೆ ಮಾತು
ರೂಪಾ ಗುರುರಾಜ್

Vishwavani TV Special
ಯೂಟ್ಯೂಬ್ ಚಾನೆಲ್‌ನಲ್ಲಿ

2002ರಲ್ಲಿ ಅಧಿಕ್ 'ಬಾರ್ಡರ್‌ಲೆಸ್ ವರ್ಲ್ಡ್ ಫೌಂಡೇಶನ್' (BWF) ಸಂಸ್ಥೆಯನ್ನು ಸ್ಥಾಪಿಸಿ, 'ಬಸೇರಾ-ಎ-ತಬಸ್ಸುಮ್' (ನಗುವಿನ ಮನೆ) ಎಂಬ ಅನಾಥಾಶ್ರಮಗಳನ್ನು ಆರಂಭಿಸಿದರು. ಹಿಂಸಾಚಾರದಲ್ಲಿ ಸರ್ವಸ್ವವನ್ನೂ ಕಳೆದುಕೊಂಡ 700ಕ್ಕೂ ಹೆಚ್ಚು ಹೆಣ್ಣುಮಕ್ಕಳಿಗೆ ಅಧಿಕ್ ಅವರೇ ತಂದೆಯಾಗಿ ಸಲಹಿ ಜೀವನದ ದಾರಿ ತೋರಿದ್ದಾರೆ. ಇಂದು ಆ ಹೆಣ್ಣುಮಕ್ಕಳು ಸಮಾಜದಲ್ಲಿ ವೈದ್ಯರು, ವಕೀಲರು ಹಾಗೂ ಇಂಜಿನಿಯರ್‌ಗಳಾಗಿ ತಲೆ ಎತ್ತಿ ಬಾಳುತ್ತಿದ್ದಾರೆ. 'ರಾಹ್-ಎ-ನಿಸ್ವಾನ್' ಕೇಂದ್ರದ ಮೂಲಕ ಹೆಣ್ಣುಮಕ್ಕಳಿಗೆ ಸ್ಯಾನಿಟರಿ ನ್ಯಾಪ್ಕಿನ್ ಹಾಗೂ ಕರಕುಶಲ ವಸ್ತುಗಳ ತಯಾರಿಕೆಯಲ್ಲಿ ತರಬೇತಿ ನೀಡಿ, ಅವರಿಗೆ ಆರ್ಥಿಕ ಭದ್ರತೆ ಒದಗಿಸಿದ್ದಾರೆ.

ಅಷ್ಟೇ ಅಲ್ಲ ಪ್ರಸಿದ್ಧ ಅಲ್ಲಿನ ದಾಲ್ ಸರೋವರದ ಹೌಸ್‌ಬೋಟ್‌ಗಳಲ್ಲಿ ವಾಸಿಸುವ ಸಾವಿರಾರು ಬಡ ನಿವಾಸಿಗಳಿಗೆ ತುರ್ತು ವೈದ್ಯಕೀಯ ಚಿಕಿತ್ಸೆ ಸಿಗುವುದು ಮರೀಚಿಕೆಯಾಗಿತ್ತು. ಇದನ್ನು ಮನಗಂಡ ಅಧಿಕ್, ಸರೋವರದ ಒಳಗೆ ಆಮ್ಲಜನಕ, ಸ್ಟ್ರೆಚರ್ ಹಾಗೂ ಸುಸಜ್ಜಿತ ವೈದ್ಯಕೀಯ ಸೌಲಭ್ಯವಿರುವ ವಿಶಿಷ್ಟ 'ಶಿಖಾರಾ ಆಂಬ್ಯುಲೆನ್ಸ್' (Water Ambulance) ವ್ಯವಸ್ಥೆ ಕಲ್ಪಿಸಿದರು. ಇದು ನೂರಾರು ಗರ್ಭಿಣಿಯರು ಹಾಗೂ ವೃದ್ಧರ ಜೀವ ಉಳಿಸುತ್ತಿದೆ.

'ಕಾಶ್ಮೀರ್ ಲೈಫ್ ಲೈನ್' ಅಡಿಯಲ್ಲಿ ಉಚಿತ ಆಂಬ್ಯುಲೆನ್ಸ್ ಸೇವೆ ನೀಡುವುದರ ಜೊತೆಗೆ, ಪೆಲೆಟ್ ಗನ್‌ಗಳಿಂದ ದೃಷ್ಟಿ ಕಳೆದುಕೊಂಡಿದ್ದ ಸಾವಿರಾರು ಕಾಶ್ಮೀರಿ ಯುವಕರಿಗೆ ದೇಶದ ಪ್ರಮುಖ ತಜ್ಞರಿಂದ ಉಚಿತ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಿಸುವ ವ್ಯವಸ್ಥೆಯನ್ನೂ ಇವರು ಮಾಡಿದ್ದಾರೆ.

ಕಾಶ್ಮೀರವೆಂದರೆ ಹಿಂಸೆ, ಭಯೋತ್ಪಾದನೆ ಎಂದು ಹೆದರಿ ದೂರ ಸರಿಯುತ್ತಿದ್ದ ನೂರಾರು ಜನರ ನಡುವೆ ಪ್ರೀತಿಯ ಬೀಜ ಬಿತ್ತಿ ನೂರಾರು



ಹೆಣ್ಣುಮಕ್ಕಳಿಗೆ ರಕ್ಷಕರಾಗಿರುವ ಅಧಿಕ್ ಕದಂ ಅವರಿಗೆ ದಲೈ ಲಾಮಾ ಅವರ ಹಸ್ತದಿಂದ ಪ್ರತಿಷ್ಠಿತ 'ಮದರ್ ತೆರೇಸಾ ಪ್ರಶಸ್ತಿ' ಲಭಿಸಿದೆ. ಬಂದೂಕಿನ ಗುಂಡುಗಳಿಗೆ ಕೇವಲ ಜೀವ ತೆಗೆಯಲು ಮಾತ್ರ ಸಾಧ್ಯ, ಆದರೆ ನಿಸ್ವಾರ್ಥ ಪ್ರೀತಿ ಮತ್ತು ಕರುಣೆಗೆ ಇಡೀ ಸಮಾಜವನ್ನೇ ಬದಲಾಯಿಸುವ ಶಕ್ತಿ ಇದೆ ಎಂಬುದಕ್ಕೆ ಅಧಿಕ್ ಕದಂ ಅವರ ಬದುಕೇ ದೊಡ್ಡ ಸಾಕ್ಷಿ. ಕಣಿವೆಯ ಮಕ್ಕಳಲ್ಲಿ ಅವರು ಮೂಡಿಸುತ್ತಿರುವ ನಗು, ಇಡೀ ಮಾನವಕುಲಕ್ಕೆ ಪ್ರೇರಣೆಯಾಗಿದೆ.

ಇಂದಿನ ದಿನಗಳಲ್ಲಿ ನಾನು ನನ್ನ ಕುಟುಂಬ ನನ್ನ ಮಕ್ಕಳು, ಅವರ ಏಳಿಗೆ ಎಂದು ಅಗತ್ಯಕ್ಕಿಂತ 100 ಪಟ್ಟು ಹೆಚ್ಚು ಆಸ್ತಿ ಮಾಡಿ ತಮ್ಮನ್ನು ತಾವು ಉದ್ಧಾರ ಮಾಡಿಕೊಳ್ಳುವ ಸ್ವಾರ್ಥಪರ ಜನರ ನಡುವೆ ಇಂತಹವರು ನಕ್ಷತ್ರಗಳಾಗಿ ಮಿನುಗುತಾರೆ. ಸಮಾಜಕ್ಕೆ ಒಳಿತನ್ನು ಮಾಡಲು ಅನೇಕ ಬಾರಿ ನಮ್ಮಲ್ಲಿ ಹಣ, ಆಸ್ತಿ, ಅಧಿಕಾರ ಬೇಕಾಗಿಲ್ಲ. ಆದರೆ ನಮಗೆ ಒಳ್ಳೆ ಬದುಕು ವ್ಯಕ್ತಿತ್ವ ನೀಡಿದ ಸಮಾಜಕ್ಕೆ ಏನನ್ನಾದರೂ ಮಾಡುವ ಒಳ್ಳೆಯ ಮನಸ್ಸು ಮತ್ತು ಛಲ ಇರಬೇಕು ಅಷ್ಟೇ. ಅಧಿಕ್ ಕದಂನಂತಹ ಒಬ್ಬರು ನೂರಾರು ಜನರಿಗೆ ಪ್ರೇರಣೆಯಾಗಿ ಸಾವಿರಾರು ಜನರ ಬದುಕನ್ನು ಬದಲಾಯಿಸುವ ಶಕ್ತಿ ಹೊಂದಿರುತ್ತಾರೆ. ಭಾರತದ ಪ್ರತಿ ಮನೆಯಲ್ಲೂ ಇಂತಹ ಧೀಮಂತ ಮಕ್ಕಳು ಬೆಳೆಯುವಂತಾಗಲಿ.

ಸಮಾಚಾರ ಸಣ್ಣದಲ್ಲ

ಶ್ರೀಶಾಂತ್ ಮೇಲಿನ ನಿಷೇಧ: ಕೆಸಿಎ ತೆರವು

ತಿರುವನಂತಪುರಂ: ಮಾಜಿ ಕ್ರಿಕೆಟಿಗ ಎಸ್. ಶ್ರೀಶಾಂತ್ ಮೇಲೆ ವಿಧಿಸಲಾಗಿದ್ದ ಮೂರು ವರ್ಷಗಳ ನಿಷೇಧವನ್ನು ಕೇರಳಂ ಕ್ರಿಕೆಟ್ ಅಸೋಸಿಯೇಷನ್ (ಕೆಸಿಎ)

ತೆಗೆದುಹಾಕಲು ನಿರ್ಧರಿಸಿದೆ. ದೃಶ್ಯ ಮತ್ತು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಕೆಸಿಎ ವಿರುದ್ಧ ಅವಹೇಳನಕಾರಿ ಹೇಳಿಕೆಗಳನ್ನು ನೀಡಿದ್ದಕ್ಕಾಗಿ ಶಿಸ್ತು ಕ್ರಮದ ಭಾಗವಾಗಿ ಶ್ರೀಶಾಂತ್ ಅವರ ಮೇಲೆ ಕೆಸಿಎ ಈ ಹಿಂದೆ ನಿಷೇಧ ಹೇರಿತ್ತು. ಅದನ್ನು ಪ್ರಶ್ನಿಸಿ ಅವರು ತಿರುವನಂತಪುರಂ ಮುನ್ಸಿಫ್ ನ್ಯಾಯಾಲಯವನ್ನು ಸಂಪರ್ಕಿಸಿದ್ದರೂ, ನ್ಯಾಯಾಲಯವು ಅವರ ಅರ್ಜಿಯನ್ನು ವಜಾಗೊಳಿಸಿತ್ತು. ಇದರ ನಂತರ, ಶ್ರೀಶಾಂತ್ ಕೆಸಿಎ ವಿರುದ್ಧದ ಹೇಳಿಕೆಗಳಿಗೆ ತೀವ್ರ ವಿಷಾದ ವ್ಯಕ್ತಪಡಿಸಿ ಸಂಘಕ್ಕೆ ಅಧಿಕೃತ ಬೇಷರತ್ ಕ್ಷಮೆಯಾಚನೆ ಯಾಚಿಸಿದ್ದರು. ಭವಿಷ್ಯದಲ್ಲಿ ಅಂತಹ ನಡವಳಿಕೆಯನ್ನು ಪುನರಾವರ್ತಿಸದಂತೆ ಶ್ರೀಶಾಂತ್‌ಗೆ ಎಚ್ಚರಿಕೆ ನೀಡಿದೆ. ಸಂಸ್ಥೆಯ ಘನತೆ ಮತ್ತು ಶಿಸ್ತಿಗೆ ಕುಂದು ತರುವ ಯಾವುದೇ ಕ್ರಮಗಳು ಭವಿಷ್ಯದಲ್ಲಿ ಕಂಡುಬಂದರೆ ಯಾವುದೇ ರಾಜಿ ಇಲ್ಲದೇ ಕಠಿಣ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಸಂಘ ಹೇಳಿದೆ. ಸಂಜು ಸ್ಯಾಮ್ಸನ್ ಅವರನ್ನು ಟೀಮ್ ಇಂಡಿಯಾದಿಂದ ಹೊರಗಿಟ್ಟ ನಂತರ ಶ್ರೀಶಾಂತ್ ಕೇರಳ ಕ್ರಿಕೆಟ್ ಅಸೋಸಿಯೇಷನ್ ಅನ್ನು ದೃಶ್ಯ ಮತ್ತು ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ತೀವ್ರವಾಗಿ ಟೀಕಿಸುವ ಮೂಲಕ ವಿವಾದವನ್ನು ಸೃಷ್ಟಿಸಿದ್ದರು.

ಡಿಸೇಬಲ್ಡ್ ಗಾಲ್ಫ್ ಟೂರ್ನಿ: ಭಾರತದ ಐತಿಹಾಸಿಕ ಸಾಧನೆ

ಜೆಕ್ ಗಣರಾಜ್ಯ: ಪ್ರೇಗ್‌ನಲ್ಲಿ ನಡೆದ ಪ್ರತಿಷ್ಠಿತ ಜೆಕ್ ಡಿಸೇಬಲ್ಡ್ ಗಾಲ್ಫ್ ಮಾಸ್ಟರ್ಸ್-2026 ಟೂರ್ನಿಯಲ್ಲಿ ಭಾರತದ ಇಬ್ಬರು ವಿಶೇಷಚೇತನ ಗಾಲ್ಫ್ ಆಟಗಾರರು ಐತಿಹಾಸಿಕ ಸಾಧನೆ ಮಾಡಿದ್ದಾರೆ. ಪೋಡಿಯಂ ಫಿನಿಶ್ ಸಾಧಿಸಿದ್ದು, ನೆಟ್ ಸ್ಟ್ರೋಕ್ ಪ್ಲೇ ವಿಭಾಗದಲ್ಲಿ ಈ ಯಶಸ್ಸು ಲಭಿಸಿದೆ. ನೋಯ್ಡಾದ ವಿಷ್ಣುವರ್ಧನ್ ಭಾಟಿ ಅವರು ಒಟ್ಟಾರೆ 2 ಅಂಡರ್ ಪಾರ್ ಸ್ಕೋರ್‌ನೊಂದಿಗೆ ದ್ವಿತೀಯ ಸ್ಥಾನ ಪಡೆದು ರನ್ನರ್ ಅಪ್ ಆದರು. ಮೊದಲ ಸುತ್ತಿನಲ್ಲಿ 6 ಅಂಡರ್ ಪಾರ್ ಸಾಧಿಸಿ ಅಗ್ರಸ್ಥಾನದಲ್ಲಿದ್ದ ಭಾಟಿ, ಅಂತಿಮ ಸುತ್ತಿನಲ್ಲಿ ದ್ವಿತೀಯ ಸ್ಥಾನ ಕಾಯ್ದುಕೊಂಡರು. ಬೆಂಗಳೂರಿನ ಅಂಕುಶ್ ಸಹಾ ಅವರು ಲೆವೆಲ್ ಪಾರ್ ಟೋಟಲ್‌ನೊಂದಿಗೆ ತೃತೀಯ ಸ್ಥಾನ ಮುಡಿಗೇರಿಸಿಕೊಂಡರು. ಮೊದಲ ಸುತ್ತಿನಲ್ಲಿ 10ನೇ ಸ್ಥಾನದಲ್ಲಿದ್ದ ಸಹಾ, ಎರಡನೇ ಸುತ್ತಿನಲ್ಲಿ ಭರ್ಜರಿ ಪ್ರದರ್ಶನ ನೀಡಿ ಮೂರನೇ ಸ್ಥಾನಕ್ಕೆ ಜಿಗಿದರು. ಜೆಕ್ ಗಣರಾಜ್ಯದ ತೆರೇಸಾ ಟೂರ್ನಿಯಲ್ಲಿ ವಿಜೇತರಾದರು. ಈ ಬಗ್ಗೆ ಮಾತಾಡಿರುವ ಅಡಾಪ್ಟಿವ್ ಗಾಲ್ಫ್ ಅಲಯನ್ಸ್ ಫೌಂಡೇಶನ್ ನಿರ್ದೇಶಕ ಹಾಗೂ ಟಿಎಆರ್‌ಎಸ್ ಲೆವೆಲ್-3 ನಿಯಮಗಳ ಅಧಿಕಾರಿ ಚಂದ್ರಶೇಖರ್ ಕಿನಿ ಗಾಲ್ಫ್ ಕೇವಲ ಒಂದು ಕ್ರೀಡೆಯಲ್ಲ, ಅದು ಮಾನಸಿಕ ನೆಮ್ಮದಿಗೂ ಉತ್ತಮ ಎಂದಿದ್ದಾರೆ.

ಎಂಬಪ್ಪೆ ಆಟದ ಎದುರು ಶರಣಾದ ಸ್ವೀಡನ್: ಟೂರ್ನಿಯಿಂದ ಹೊರಕ್ಕೆ

ಪ್ರೀ ಕ್ವಾರ್ಟರ್‌ಗೆ ಫ್ರಾನ್ಸ್ ಲಗ್ಗೆ

ನ್ಯೂಯಾರ್ಕ್: ಸ್ಟಾರ್ ಆಟಗಾರ ಕೈಲಿಯನ್ ಎಂಬಪ್ಪೆ ಅವರು ಬಾರಿಸಿದ 2 ಅಮೋಘ ಗೋಲುಗಳ ಸಹಾಯದಿಂದ ಫ್ರಾನ್ಸ್ ತಂಡವು ಬುಧವಾರ ಇಲ್ಲಿ ನಡೆದ ವಿಶ್ವಕಪ್ ಪಂದ್ಯದಲ್ಲಿ 3-0 ಗೋಲುಗಳಿಂದ ಸ್ವೀಡನ್ ತಂಡವನ್ನು ಮಣಿಸಿ ಅಬ್ಬರಿಸಿದೆ. ನ್ಯೂಯಾರ್ಕ್‌ನ ನ್ಯೂಜೆರ್ಸಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಫ್ರಾನ್ಸ್ ಭರ್ಜರಿ ಪ್ರದರ್ಶನ ನೀಡಿ 16ನೇ ಸುತ್ತನ್ನು ಪ್ರವೇಶಿಸಿತು.

ಸ್ವೀಡನ್ ವಿರುದ್ಧದ ಪಂದ್ಯದ ಮೊದ ಲಾರ್ಧದಿಂದಲೇ ಫ್ರಾನ್ಸ್ ಆಕ್ರಮಣಕಾರಿಯಾಗಿ ಆಡಿತು, ಆರಂಭದ 45 ನಿಮಿಷಗಳಲ್ಲಿ ಗೋಲು ಗಳಿಸಲು ಅದು ಸತತ ಪ್ರಯತ್ನಪಟ್ಟಿತು. ಸ್ಟಾರ್ ಆಟಗಾರ ಎಂಬಪ್ಪೆ ಅವರ ಸೊಗಸಾದ ಗೋಲ್ ಅದಕ್ಕೆ ಮುನ್ನಡೆ ದೊರಕಿಸಿಕೊಟ್ಟಿತು.

ದ್ವಿತೀಯಾರ್ಧದ ಆರಂಭದೊಂದಿಗೆ ಬ್ರಾಡ್ಲಿ ಬಾರ್ಕೋಲಾ ಅವರು 53ನೇ ನಿಮಿಷದಲ್ಲಿ ಅಮೋಘ ಕಾಲ್ಚಳಕದ ಪ್ರದರ್ಶನ ನೀಡಿ ಫ್ರಾನ್ಸ್‌ಗೆ 2-0 ಮುನ್ನಡೆ ತಂದುಕೊಟ್ಟರು. ಅಲ್ಲಿಂದ ಫ್ರಾನ್ಸ್ ಪಂದ್ಯದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿತು. 74ನೇ ನಿಮಿಷದಲ್ಲಿ ಎಂಬಪ್ಪೆ ಮತ್ತೊಂದು ಗೋಲು ದಾಖಲಿಸಿದರು. ಅದರಿಂದಾಗಿ ಫ್ರಾನ್ಸ್ ತಂಡದ ಗೆಲುವು ಹತ್ತಿರವಾಯಿತಲ್ಲದೆ, ಕೊನೆಗೂ ಸುಲಭವಾಗಿ ಪಂದ್ಯವನ್ನು ಗೆದ್ದು ಬೀಗಿತು.

ಎಂಬಪ್ಪೆ ದಾಖಲೆ: ಸ್ವೀಡನ್ ವಿರುದ್ಧದ ಪಂದ್ಯದಲ್ಲಿ 2 ಗೋಲು ಬಾರಿಸುತ್ತಲೇ ಎಂಬಪ್ಪೆ ಫಿಫಾ ವಿಶ್ವಕಪ್‌ನಲ್ಲಿ ಅತೀ ಹೆಚ್ಚು ಗೋಲು ಬಾರಿಸಿದ ಆಟಗಾರರ ಪಟ್ಟಿಯಲ್ಲಿ ಈಗ ಎರಡನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ. ಇವರು ಒಟ್ಟಾರೆ ಫುಟ್ಬಾಲ್ ವಿಶ್ವಕಪ್‌ನಲ್ಲಿ ಈ ವರೆಗೆ 18 ಗೋಲು ದಾಖಲಿಸಿದ್ದಾರಲ್ಲದೆ ಈ ಸಲ ಗೋಲ್ಡನ್ ಬೂಟ್ ಮೇಲೆ ಕಣ್ಣು ನೆಟ್ಟಿದ್ದಾರೆ.

ವಿಶ್ವಕಪ್‌ನಿಂದ ಈಕ್ವೆಡಾರ್ ತಂಡಕ್ಕೆ ಆಘಾತಕಾರಿ ಸೋಲು

ಮೆಕ್ಸಿಕೋಗೆ 2-0 ಗೆಲುವು



ಮೆಕ್ಸಿಕೋ: ವಿಶ್ವಕಪ್ ಫುಟ್‌ಬಾಲ್ ಮಹಾಸಮರದ ಜಂಟಿ ಅತಿಥೇಯ ದೇಶವಾದ ಮೆಕ್ಸಿಕೋ ಹೊಸ ಇತಿಹಾಸವೊಂದನ್ನು ಸೃಷ್ಟಿಸಿದೆ. ಇಡೀ ವಿಶ್ವವೇ ಅತ್ಯಂತ ಕುತೂಹಲದಿಂದ ವೀಕ್ಷಿಸುತ್ತಿದ್ದ ರೌಂಡ್ ಆಫ್-32 ಪಂದ್ಯದಲ್ಲಿ ಮೆಕ್ಸಿಕೊ ತಂಡವು 2-0 ಗೋಲುಗಳ ಅಂತರದಿಂದ ಬಲಿಷ್ಠ ಈಕ್ವೆಡಾರ್ ತಂಡವನ್ನು ಮಣಿಸಿದೆ. ಕಳೆದ 40 ವರ್ಷಗಳಿಂದ ಮೆಕ್ಸಿಕೋ ತಂಡಕ್ಕೆ ವಿಶ್ವಕಪ್‌ನ ನಾಕೌಟ್ ಹಂತವನ್ನು ದಾಟಿ ಮುನ್ನಡೆಯಲು ಸಾಧ್ಯವಾಗಿರಲಿಲ್ಲ.

ತವರಿನ ಅಂಗಳದಲ್ಲಿ ನೆರೆದಿದ್ದ ಸಹಸ್ರಾರು ಅಭಿಮಾನಿಗಳ ಸಮ್ಮುಖದಲ್ಲಿ ಮೆಕ್ಸಿಕೋ ಆಟಗಾರರು ಆರಂಭಿಕ ಹಂತದಿಂದಲೇ ಹಠ ಬಿಡದೆ ಎದುರಾಳಿಯ ರಕ್ಷಣಾ ಕೋಟೆಯನ್ನು ಬೇಧಿಸುವಲ್ಲಿ ಯಶಸ್ವಿಯಾದರು. ಪಂದ್ಯದ 22ನೇ ನಿಮಿಷದಲ್ಲಿ ಜೂಲಿಯನ್ ಕ್ವಿನೋನೆಸ್ ಮೊದಲ ಗೋಲ್ ಬಾರಿಸಿದರು.

ಮುನ್ನಡೆಯ ಉತ್ಸಾಹದಲ್ಲಿದ್ದ ಅತಿಥೇಯರು ತಮ್ಮ ದಾಳಿಯ ವೇಗವನ್ನು ಹೆಚ್ಚಿಸಿದರು. ಮೊದಲ ಗೋಲ್ ದೊರೆತ ಕೇವಲ ಒಂಬತ್ತು ನಿಮಿಷಗಳ ಅಂತರದಲ್ಲಿ ಅಂದರೆ ಸರಿಯಾಗಿ 31ನೇ ನಿಮಿಷದಲ್ಲಿ ಸ್ಟ್ರೈಕರ್ ರೌಲ್ ಜಿಮೆನೆಜ್ ಅವರು ತನ್ನತ್ತ ಬಂದ ಚೆಂಡನ್ನು ಗೋಲಾಗಿ ಪರಿವರ್ತಿಸಿದರು. ಮೆಕ್ಸಿಕೋದ ಬ್ಯಾಕ್ ಟು ಬ್ಯಾಕ್ ಗೋಲುಗಳು ಈಕ್ವೆಡಾರ್ ತಂಡದ ಯೋಜನೆಗಳನ್ನು ಸಂಪೂರ್ಣ ಧೂಳೀಪಟ ಮಾಡಿದವು. ಪಂದ್ಯದ ಕೊನೆಯ ಕ್ಷಣದವರೆಗೂ ಗೋಲು ಬಾರಿಸುವ ಈಕ್ವೆಡಾರ್‌ನ ಆಸೆ ಫಲಿಸಲಿಲ್ಲ. ಮೆಕ್ಸಿಕೋ 1986ರಲ್ಲಿ ತವರಿನ ನಡೆದ ವಿಶ್ವಕಪ್‌ನಲ್ಲಿ 16ರ ಸುತ್ತಿಗೆ ಅರ್ಹತೆ ಪಡೆದ ಬಳಿಕ, ಆ ತಂಡದ ಅತ್ಯುತ್ತಮ ಪ್ರದರ್ಶನ ಈ ಸಲ ಮೂಡಿ ಬಂದಿದೆ.

ಮಹಿಳಾ ಟಿ20 ವಿಶ್ವಕಪ್: ವೆಸ್ಟ್ ಇಂಡೀಸ್‌ಗೆ ಹೀನಾಯ ಸೋಲು

ಫೈನಲ್ ಪ್ರವೇಶಿಸಿದ ಆಸೀಸ್ ವನಿತೆಯರು

ಲಂಡನ್: ಮಂಗಳವಾರ ರಾತ್ರಿ ಓವಲ್‌ನಲ್ಲಿ ನಡೆದ ಮೊದಲ ಸೆಮಿಫೈನಲ್‌ನಲ್ಲಿ ಎಂಟು ವಿಕೆಟ್‌ಗಳಿಂದ ಜಯಗಳಿಸುವ ಮೂಲಕ ಆಸ್ಟ್ರೇಲಿಯಾ ತಂಡವು ವೆಸ್ಟ್ ಇಂಡೀಸ್ ತಂಡವನ್ನು 8 ವಿಕೆಟ್ ಅಂತರದಿಂದ ಮಣಿಸಿ ಟಿ20 ಮಹಿಳಾ ವಿಶ್ವಕಪ್‌ನ ಫೈನಲ್ ಪ್ರವೇಶಿಸಿತು. ಗುರುವಾರದಂದು ನಡೆಯುವ ಇಂಗ್ಲೆಂಡ್-ದಕ್ಷಿಣ ಆಫ್ರಿಕಾ ನಡುವಿನ ಸೆಮಿಫೈನಲ್ ವಿಜೇತ ತಂಡವನ್ನು ಭಾನುವಾರ ಲಾರ್ಡ್ಸ್‌ನಲ್ಲಿ ಎದುರಿಸಲಿದೆ.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ನಡೆಸಿದ ವೆಸ್ಟ್ ಇಂಡೀಸ್ ತಂಡ ನಾಯಕಿ ಹೀಲಿ ಮ್ಯಾಥ್ಯೂಸ್(30) ಮತ್ತು ಡಿಯಾಂಡ್ರಾ ಡಾಟಿನ್(26 ಅಜೇಯ) ಸಣ್ಣ ಬ್ಯಾಟಿಂಗ್ ಹೋರಾಟದ ನೆರವಿನಿಂದ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 125 ರನ್ ಗಳಿಸಿತು. ಆಸೀಸ್ ಪರ ಉತ್ತಮ ಬೌಲಿಂಗ್ ದಾಳಿ ಸಂಘಟಿಸಿದ ನಾಯಕಿ ಸೋಫಿ ಮೊಲಿನೆಕ್ಸ್ ಮತ್ತು ಆಶ್ಲೀ ಗಾರ್ಡ್ನರ್ ತಲಾ 2 ವಿಕೆಟ್ ಕಿತ್ತರು.

ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡವು ಬೆತ್ ಮೂನಿ ಅವರ ಅಜೇಯ ಅರ್ಧಶತಕದ ನೆರವಿನಿಂದ 13 ಓವರ್‌ಗಳಲ್ಲಿ 2 ವಿಕೆಟ್‌ಗೆ 127 ರನ್ ಗಳಿಸಿ ಸುಲಭ ಗೆಲುವನ್ನು ತನ್ನದಾಗಿಸಿಕೊಂಡಿತು. ಬೆತ್ ಮೂನಿ 36 ಎಸೆತಗಳಿಂದ ಅಜೇಯ 61 ರನ್ ಬಾರಿಸಿದರು. ಅವರಿಗೆ ಉತ್ತಮ ಸಾಥ್ ನೀಡಿದ ಆಶ್ಲೀ ಗಾರ್ಡ್ನರ್ 35 ರನ್ ಬಾರಿಸಿ ಅಜೇಯರಾಗುಳಿದರು. ಅನುಭವಿ ಆಟಗಾರ್ತಿ ಎಲ್ಲಿಸ್ ಪೆರ್ರಿ 2 ರನ್ ಗಳಿಸಿದ್ದ ಗಾಯಗೊಂಡು ನಿವೃತ್ತಿ ಪಡೆದು ಪೆವಿಲಿಯನ್ ಸೇರಿದರು.

ಐದು ಪಂದ್ಯಗಳ ಏಕದಿನ ಸರಣಿಗೆ ಪೂರ್ಣ ಪ್ರಮಾಣದ ತಂಡ ಪ್ರಕಟಿಸಿದ ನ್ಯೂಜಿಲೆಂಡ್

ವಿಂಡೀಸ್ ಏಕದಿನ ಸರಣಿ: ಕಿವೀಸ್ ತಂಡ ಪ್ರಕಟ

ಆಕ್ಲೆಂಡ್: ನ್ಯೂಜಿಲೆಂಡ್ ತನ್ನ 16 ಸದಸ್ಯರ ತಂಡವನ್ನು ಪ್ರಕಟಿಸಿದ್ದು, ವೆಸ್ಟ್ ಇಂಡೀಸ್ ವಿರುದ್ಧದ ಐದು ಪಂದ್ಯಗಳ ಏಕದಿನ ಅಂತಾರಾಷ್ಟ್ರೀಯ ಸರಣಿಗಾಗಿ ಅದು ಕೆರಿಬಿಯನ್‌ಗೆ ಪ್ರಯಾಣಿಸಲಿದೆ. ಸರಣಿಯು ಜುಲೈ 12ರಂದು ಗಯಾನಾದ ಪ್ರಾವಿಡೆನ್ಸ್‌ನಲ್ಲಿ ಪ್ರಾರಂಭವಾಗಲಿದೆ.

ತಂಡವನ್ನು ಆಲ್‌ರೌಂಡರ್ ಮಿಚೆಲ್ ಸ್ಯಾಂಟ್ನರ್ ಮುನ್ನಡೆಸಲಿದ್ದು, ಅವರು ಇತ್ತೀಚೆಗೆ ಇಂಗ್ಲೆಂಡ್ ವಿರುದ್ಧ 2-1 ಸರಣಿ ಗೆಲುವು ಸಾಧಿಸಿದ ಟೆಸ್ಟ್ ತಂಡದಲ್ಲಿದ್ದರು. ಏಕದಿನ ತಂಡದ ಇತರ ಆಟಗಾರರಾದ ಟಾಮ್ ಲ್ಯಾಥಮ್, ಡ್ಯಾರಿಲ್ ಮಿಚೆಲ್, ಹೆನ್ರಿ ನಿಕೋಲ್ಸ್, ಬೆನ್ ಸಿಯರ್ಸ್, ನಾಥನ್ ಸ್ಮಿತ್ ಮತ್ತು ವಿಲ್ ಯಂಗ್ ಅವರನ್ನೂ ಸೇರಿಕೊಳ್ಳಲಾಗಿದೆ. ಮ್ಯಾಥ್ಯೂ ಫಿಶರ್ ಅವರನ್ನು ತಂಡದಲ್ಲಿ ಹೆಸರಿಸಲಾಗಿದ್ದು, ಏಕದಿನ ಪಂದ್ಯಕ್ಕೆ ಅವರು ಈ ಸರಣಿಯ ಮೂಲಕ ಪದಾರ್ಪಣೆ ಮಾಡುವ ಸಾಧ್ಯತೆ ಇದೆ.

ಬ್ಯಾಟಿಂಗ್ ವಿಭಾಗದಲ್ಲಿ ನ್ಯೂಜಿಲೆಂಡ್ ಆರಂಭಿಕ ಬ್ಯಾಟ್ಸ್‌ಮನ್‌ಗಳಾದ ಡೆವೊನ್ ಕಾನ್ವೇ ಮತ್ತು ರಚಿನ್ ರವೀಂದ್ರ ಅವರನ್ನು ಕೈಬಿಡಲಾಗಿದೆ. ರವೀಂದ್ರ, ಅವರು ಮೇಜರ್ ಲೀಗ್ ಕ್ರಿಕೆಟ್ ಒಪ್ಪಂದದಿಂದಾಗಿ ವೆಸ್ಟ್ ಇಂಡೀಸ್ ಪ್ರವಾಸವನ್ನು ತಪ್ಪಿಸಿಕೊಂಡಿದ್ದಾರೆ. 10 ಏಕದಿನ ಪಂದ್ಯಗಳನ್ನು ಆಡಿರುವ ಮಿಚೆಲ್ ಹೇ ಅವರನ್ನು ಟೆಸ್ಟ್ ನಾಯಕ ಟಾಮ್ ಲ್ಯಾಥಮ್ ನಂತರ 2ನೇ ವಿಕೆಟ್ ಕೀಪರ್ ಆಗಿ ಹೆಸರಿಸಲಾಗಿದೆ.

ನ್ಯೂಜಿಲೆಂಡ್ ತಂಡ: ಮಿಚೆಲ್ ಸ್ಯಾಂಟ್ನರ್ (ನಾಯಕ), ಮೈಕೆಲ್ ಬ್ರೇಸ್‌ವೆಲ್, ಮಾರ್ಕ್ ಚಾಪ್‌ಮನ್, ಕ್ರಿಸ್ಟಿಯನ್ ಕ್ಲಾರ್ಕ್, ಜಾಕೋಬ್ ಡಫಿ, ಮ್ಯಾಥ್ಯೂ ಫಿಶರ್, ಡೀನ್ ಫಾಕ್ಸ್‌ಕ್ರಾಫ್ಟ್, ಮಿಚೆಲ್ ಹೇ (ಕೀಪರ್), ನಿಕ್ ಕೆಲ್ಲಿ, ಟಾಮ್ ಲ್ಯಾಥಮ್ (ಕೀಪರ್), ಜೇಡನ್ ಲೆನಾಕ್ಸ್, ಡೇರಿಲ್ ಮಿಚೆಲ್, ಹೆನ್ರಿ ನಿಕೋಲ್ಸ್, ನ್ಯಾಥನ್ ವಿಲ್ಸ್, ಯೂಥನ್, ಯೂಥಾನ್.

ಒಂದು ವರ್ಷದ ಬಳಿಕ ಬ್ಯಾಟಿಂಗ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಕಳೆದುಕೊಂಡ ಅಭಿಷೇಕ್ ಶರ್ಮಾ

ಟಿ20 ಶ್ರೇಯಾಂಕ: ಇಶಾನ್ ಕಿಶನ್ ನಂ.1

ದುಬೈ: ಭಾರತದ ವಿಕೆಟ್ ಕೀಪರ್ ಬ್ಯಾಟರ್ ಇಶಾನ್ ಕಿಶನ್ ಮೊದಲ ಬಾರಿಗೆ ಐಸಿಸಿ ಪುರುಷರ ಟಿ20 ಬ್ಯಾಟಿಂಗ್ ಶ್ರೇಯಾಂಕದಲ್ಲಿ ಅಗ್ರಸ್ಥಾನಕ್ಕೆ ಏರಿದ್ದಾರೆ. ಈ ಪ್ರಗತಿಯೊಂದಿಗೆ ತಂಡದ ಸಹ ಆಟಗಾರ ಅಭಿಷೇಕ್ ಶರ್ಮಾ ಅವರ ವಿಶ್ವದ ನಂ.1 ಬ್ಯಾಟ್ಸ್‌ಮನ್ ಪಟ್ಟವನ್ನು ಕೈಚೆಲ್ಲಿದ್ದಾರೆ.

ಐಸಿಸಿ ಪುರುಷರ ಟಿ20 ವಿಶ್ವಕಪ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ನಂತರ ವೃತ್ತಿಜೀವನದ ಅತ್ಯುತ್ತಮ ಶ್ರೇಯಾಂಕಕ್ಕೆ ಏರಿರುವ ಕಿಶನ್, ಅಭಿಷೇಕ್‌ರನ್ನು ಕೇವಲ ಏಳು ರೇಟಿಂಗ್ ಪಾಯಿಂಟ್‌ಗಳಿಂದ ಹಿಂದಿಕ್ಕಿದ್ದಾರೆ. ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್ ಮತ್ತು ಅಭಿಷೇಕ್ ಶರ್ಮಾ ಅವರ ನಂತರ ಕಿಶನ್ ಟಿ20ಗಳಲ್ಲಿ ನಂ. 1 ಸ್ಥಾನ ಪಡೆದ ನಾಲ್ಕನೇ ಭಾರತೀಯ ಬ್ಯಾಟ್ಸ್‌ಮನ್ ಎನಿಸಿದರು.

ಭಾರತದ ವಿರುದ್ಧದ ಐತಿಹಾಸಿಕ ಟಿ20 ಸರಣಿ ಗೆಲುವಿನ ಸಂದರ್ಭದಲ್ಲಿ ಉತ್ತಮ ಪ್ರದರ್ಶನ ನೀಡಿದ ಐರ್ಲೆಂಡ್‌ನ ಲೋರ್ಕನ್ ಟಕರ್ ಬ್ಯಾಟಿಂಗ್ ಶ್ರೇಯಾಂಕದಲ್ಲಿ ನಾಲ್ಕು ಸ್ಥಾನಗಳ ಏರಿಕೆ ಕಂಡು 77ನೇ ಸ್ಥಾನದೊಂದಿಗೆ ಜಂಟಿಯಾಗಿ ಸ್ಥಾನ ಪಡೆದರೆ, ಬ್ಯಾಟಿಂಗ್‌ನಲ್ಲಿ ಅಮೂಲ್ಯ ಕೊಡುಗೆಗಳನ್ನು ನೀಡಿದ ನಂತರ ರಾಸ್ ಅಡೈರ್ ಆರು ಸ್ಥಾನಗಳ ಏರಿಕೆ ಕಂಡು 84ನೇ ಸ್ಥಾನಕ್ಕೆ ತಲುಪಿದ್ದಾರೆ.

ಐರ್ಲೆಂಡ್ ಪರ ಎಡಗೈ ಸೀಮರ್ ಮ್ಯಾಥ್ಯೂ ಹಂಫ್ರೀಸ್ ದೊಡ್ಡ ಮಟ್ಟದ ಏರಿಕೆ ಕಂಡಿದ್ದು, ಎರಡು ಪಂದ್ಯಗಳ ಸರಣಿಯಲ್ಲಿ ನಾಲ್ಕು ವಿಕೆಟ್‌ಗಳನ್ನು ಕಬಳಿಸುವ ಮೂಲಕ ಟಿ20 ಬೌಲಿಂಗ್ ಶ್ರೇಯಾಂಕದಲ್ಲಿ ವೃತ್ತಿಜೀವನದ ಅತ್ಯುತ್ತಮ 25ನೇ ಸ್ಥಾನ ತಲುಪಿದ್ದಾರೆ. ಭಾರತದ ಆಲ್‌ರೌಂಡರ್ ಶಿವಂ ದುಬೆ ಕೂಡ ಟಿ20 ಆಲ್‌ರೌಂಡರ್‌ಗಳಲ್ಲಿ ಮೂರು ಸ್ಥಾನಗಳ ಏರಿಕೆ ಕಂಡು ಏಳನೇ ಸ್ಥಾನಕ್ಕೆ ತಲುಪಿದ್ದಾರೆ. ಐರ್ಲೆಂಡ್ ಜೋಡಿ ಗ್ಯಾರೆತ್ ಡೆಲಾನಿ ಮತ್ತು ಹ್ಯಾರಿ ಟೆಕ್ಟರ್ ಕ್ರಮವಾಗಿ 24 ಮತ್ತು 38ನೇ ಸ್ಥಾನಕ್ಕೆ ಏರಿದ್ದಾರೆ.

ಕೌಟುಂಬಿಕ ಕಥೆಯ ಪಿಚ್ಚರ್

ನಟ ಗಣೇಶ್ ಪತ್ನಿ ಶಿಲ್ಪಾ ಗಣೇಶ್ ತಮ್ಮದೇ ಶಿಲ್ಪಾ ಗೋಲ್ಡನ್ ಮೂವೀಸ್ ಲಾಂಛನದಲ್ಲಿ ಸದಭಿರುಚಿಯ ಚಿತ್ರಗಳನ್ನು ನಿರ್ಮಿಸಿದ್ದಾರೆ. ಈಗ ಪಿಚ್ಚರ್ ಶೀರ್ಷಿಕೆಯ ಮತ್ತೊಂದು ಸಿನಿಮಾ ನಿರ್ಮಾಣ ಮಾಡಿದ್ದಾರೆ. ಪಿಚ್ಚರ್ ಕನ್ನಡದ ಜತೆಗೆ ತುಳು ಭಾಷೆಯಲ್ಲಿಯೂ ನಿರ್ಮಾಣವಾಗಿದೆ. ಸಂದೀಪ ಬೆದ್ರ ನಿರ್ದೇಶನದಲ್ಲಿ ಈ ಚಿತ್ರ ಮೂಡಿಬಂದಿದ್ದು, ನಿತ್ಯಪ್ರಕಾಶ್ ಬಂಟ್ವಾಳ್ ನಾಯಕ ನಟನಾಗಿ ಅಭಿನಯಿಸಿದ್ದಾರೆ. ಅಮೃತಾ ಸುದು ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ದೇವದಾಸ್ ಕಾಪಿಕಾಡ್, ಅರವಿಂದ್ ಬೋಳಾರ್, ಭೋಜರಾಜ್ ವಾಮಂಜೂರ್, ನವೀನ್ ಪಡೀಲ್ ಮುಂತಾದವರು ಈ ಚಿತ್ರದ ತಾರಾಗಣದಲ್ಲಿದ್ದಾರೆ.

ನೀವು ಮಂಗಳೂರಿನವರು, ತುಳು ಸಿನಿಮಾವೊಂದನ್ನು ನಿರ್ಮಾಣ ಮಾಡಿ ಎಂದು ಸ್ನೇಹಿತರು ಹೇಳುತ್ತಿದ್ದರು. ಒಳ್ಳೆಯ ಕಥೆ ಸಿಕ್ಕರೆ ಮಾಡೋಣ ಅಂತ ಹೇಳಿದ್ದೆ. ಅದೇ ಸಮಯಕ್ಕೆ ನಿರ್ದೇಶಕ ಸಂದೀಪ್ ಬೆದ್ರ ಪರಿಚಯವಾಯಿತು. ಸಂದೀಪ್ ಈ ಚಿತ್ರದ ಕಥೆ ಹೇಳಿದಾಗ, ಕೇಳಿ ಇಷ್ಟವಾಯಿತು. ಗಣೇಶ್ ಅವರಿಗೂ ಈ ವಿಷಯ ಹೇಳಿದೆ. ಅವರು ಕೂಡ ನಿರ್ಮಾಣ ಮಾಡೋಣ ಅಂತ ಹೇಳಿದರು. ಕಡಿಮೆ ಬಜೆಟ್‌ನಲ್ಲಿ ನಿರ್ಮಾಣ ಮಾಡಲು ಹೊರಟ ಚಿತ್ರವಿದು. ಆದರೆ ಮುಗಿಯುವ ವೇಳೆಗೆ ಬಿಗ್ ಬಜೆಟ್‌ನ ಚಿತ್ರವಾಗಿದೆ. ಇದೇ ಮೊದಲ ಬಾರಿಗೆ ನಮ್ಮ ಚಿತ್ರದ ಹಾಡೊಂದರ ಚಿತ್ರೀಕರಣ ಕಾಶ್ಮೀರದಲ್ಲಿ ನಡೆದಿದೆ. ವಿಶೇಷ ನಾನು ಈ ಚಿತ್ರದ ಗೋಕುಲದ ರಾಧೆ... ಎಂಬ ಹಾಡನ್ನು ಹಾಡಿದ್ದೇನೆ. ಒಂದೊಳ್ಳೆಯ ಕೌಟುಂಬಿಕ ಚಿತ್ರವನ್ನು ನಿರ್ಮಾಣ ಮಾಡಿರುವುದು ಖುಷಿಕೊಟ್ಟಿದೆ ಎಂದು ಶಿಲ್ಪಾ ಗಣೇಶ್ ಸಂತಸದಿಂದ ನುಡಿದರು.

ಇದೊಂದು ಅವಿಭಕ್ತ ಕುಟುಂಬದ ಕಥೆ. ಎಮೋಷನ್, ಸೆಂಟಿಮೆಂಟ್, ಕಾಮಿಡಿ ಹೀಗೆ ಎಲ್ಲವೂ ಚಿತ್ರದಲ್ಲಿ ಬೆರೆತಿದೆ. ನನಗೆ ಫ್ಯಾಮಿಲಿ ಆಡಿಯನ್ಸ್ ಹೆಚ್ಚಾಗಿರುವುದರಿಂದ ನಾನು ಕೌಟುಂಬಿಕ ಚಿತ್ರಗಳಿಗೆ ಹೆಚ್ಚು ಒತ್ತು ಕೊಡುತ್ತೇನೆ. ಎಲ್ಲಾ ಕಲಾವಿದರು ಹಾಗೂ ತಂತ್ರಜ್ಞರ ಸಹಕಾರದಿಂದ ಚಿತ್ರ ಅದ್ಭುತವಾಗಿ ಮೂಡಿಬಂದಿದೆ ಎಂದು ನಟ ಗಣೇಶ್ ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ಯಾಮುಯೆಲ್ ಅಭಿ ಸಂಗೀತ ನಿರ್ದೇಶನ, ಸಂತೋಷ್ ರೈ ಪಾತಾಜೆ, ಚಂದ್ರಶೇಖರ್ ಛಾಯಾಗ್ರಹಣ, ಸಿಂಪಲ್ ಸುನಿ, ಅನೂಪ್ ಭಂಡಾರಿ, ಅರಸು ಅಂತಾರೆ, ಚೇತನ್ ಕುಮಾರ್ ಸಾಹಿತ್ಯ ರಚಿಸಿದ್ದು, ಜಸ್ಕರಣ್ ಸಿಂಗ್, ಶಿಲ್ಪಾ ಗಣೇಶ್, ಹರಿಕೃಷ್ಣ, ಜೆಸ್ಸಿಗಿಫ್ಟ್ ಮುಂತಾದವರು ಹಾಡುಗಳಿಗೆ ದನಿಯಾಗಿದ್ದಾರೆ. ಪಿಚ್ಚರ್ ಇದೇ ತಿಂಗಳ 24ರಂದು ತೆರೆಗೆ ಬರಲಿದೆ.

ಹುಟ್ಟಿದ ಮನೆ ಬೆಳಗಿದ ಭಾಗ್ಯವಂತರು

ಈಗಾಗಲೇ ಕಿರುತೆರೆಯಲ್ಲಿ ಹಲವು ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಆ ಸಾಲಿಗೆ ಈಗ ಭಾಗ್ಯವಂತರು ಧಾರಾವಾಹಿ ಕೂಡ ಸೇರ್ಪಡೆಯಾಗಿದೆ. ಈ ಕಥೆಯ ಕೇಂದ್ರಬಿಂದುವಾಗಿರುವ ಜನನಿ, ಅಪ್ಪನ ಮುದ್ದಿನ ಮಗಳು. ತನ್ನ ತಂದೆಯ ಕನಸನ್ನು ನನಸಾಗಿಸಲು ಶಿಕ್ಷಣವನ್ನೇ ಜೀವನದ ಧ್ಯೇಯವನ್ನಾಗಿಸಿಕೊಂಡಿರುವ ಜನನಿ, ಭವಿಷ್ಯದಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಆಗುವ ಕನಸು ಕಾಣುತ್ತಾಳೆ. ತಂದೆಯ ಆಶಯದಂತೆ ವಿದ್ಯಾಭ್ಯಾಸಕ್ಕೆ ಸಂಪೂರ್ಣ ಒತ್ತು ನೀಡಿದ ಜನನಿಯನ್ನು, ಅವರ ತಂದೆ ಮಂಡ್ಯದ ಶ್ರೀಮಂತ ಕುಟುಂಬದ ಶಕ್ತಿ ನಾಯಕ್ ಅವರೊಂದಿಗೆ ವಿವಾಹ ಮಾಡುತ್ತಾರೆ. ಮದುವೆಯಾಗಿ ಸೇರಿದ ಮನೆಯಲ್ಲಿ ಈಗಾಗಲೇ ಮೂರು ಡಬಲ್ ಡಿಗ್ರಿ ಸೊಸೆಯಂದಿರಿದ್ದು ಅಚ್ಚುಕಟ್ಟಾಗಿ ನಿಭಾಯಿಸಿಕೊಂಡು ಹೋಗುತ್ತಿರುತ್ತಾರೆ. ಇವರ ಜತೆಗೆ ನಾಲ್ಕನೇ ಸೊಸೆಯಾಗಿ ಜನನಿ ಕಾಲಿಡುತ್ತಾಳೆ. ಆದರೆ ಗಂಡನ ಮನೆ ಮತ್ತು ತಾನು ಮಾಡುವ ಕೆಲಸವನ್ನು ಸರಿಯಾಗಿ ಮುನ್ನಡೆಸುವುದು ಜನನಿಗೆ ಒಂದು ಸವಾಲ್. ಈ ಸವಾಲಿನಲ್ಲಿ ಜನನಿ ಹೇಗೆ ಯಶಸ್ವಿಯಾಗುತ್ತಾಳೆ ಎಂಬುದು ಈ ಧಾರಾವಾಹಿಯ ಕಥಾಹಂದರ.

ಜನನಿಯಾಗಿ ತನ್ವಿ ರಾವ್ ಮತ್ತು ವಿಕಾಸ್ ನಾಯಕನಾಗಿ ಅಭಿನಯಿಸುತ್ತಿದ್ದಾರೆ. ಸುಚೇಂದ್ರ ಪ್ರಸಾದ್, ಆರ್.ಕೆ.ಚಂದನ್ ಮತ್ತು ಶೋಭರಾಜ್ ಮುಖ್ಯಪಾತ್ರದಲ್ಲಿ ನಟಿಸುತ್ತಿದ್ದಾರೆ. ಸುರೇಶ್ ರೈ, ಶಾಲಿನಿ, ಸಮೀಕ್ಷಾ, ಧನ್ಯಾ, ವರ್ಷಾ, ಶೋಭರಾಜ್, ಮಧುಸಾಗರ, ಲಕ್ಷ್ಮೀ ಹೆಗ್ಡೆ, ರಿಷಾ, ವಿಠಲ್ ಕಾಮತ್, ಪ್ರಕೃತಿ ಪಾಟೀಲ್ ಮುಂತಾದವರು ಧಾರಾವಾಹಿಯ ತಾರಾಬಳಗದಲ್ಲಿದ್ದಾರೆ.

ಎ.ಎಸ್.ಎಂ ಪ್ರೊಡಕ್ಷನ್ಸ್‌ನಲ್ಲಿ ನಿರ್ಮಾಣವಾಗುತ್ತಿರುವ ಈ ಧಾರಾವಾಹಿಯನ್ನು ಸಂಪೃಥ್ವಿ ನಿರ್ದೇಶನ ಮಾಡುತ್ತಿದ್ದಾರೆ. ಭಾಗ್ಯವಂತರು ಪ್ರತಿಯೊಂದು ಕುಟುಂಬಕ್ಕೆ ಹತ್ತಿರವಾದ ಕಥೆಯಾಗಿದ್ದು, ತಂದೆ ಮತ್ತು ಮಗಳ ಅನ್ಯೋನ್ಯ ಬಾಂಧವ್ಯವನ್ನು ಒಳಗೊಂಡಿದೆ. ಭಾಗ್ಯವಂತರು ಸನ್ ಉದಯ ವಾಹಿನಿಯಲ್ಲಿ ಸೋಮವಾರದಿಂದ ಪ್ರಸಾರವಾಗಲಿದೆ.

ಟಾಕ್ಸಿಕ್‌ನಲ್ಲಿ ನಟಿಯರ ದರ್ಬಾರ್

ಯಶ್ ಅಭಿನಯದ ಟಾಕ್ಸಿಕ್ ಆರಂಭದಿಂದಲೂ ಸದ್ದು ಮಾಡುತ್ತಿದೆ. ಇದೇ ಆಗಸ್ಟ್ 26ರಂದು ವಿಶ್ವಾದ್ಯಂತ ಟಾಕ್ಸಿಕ್ ಅಬ್ಬರ ಆರಂಭವಾಗಲಿದೆ. ಅದಕ್ಕೂ ಮೊದಲೇ ಟಾಕ್ಸಿಕ್ ಚಿತ್ರದ ಮತ್ತೊಂದು ಟೀಸರ್ ರಿಲೀಸ್ ಆಗಿದೆ. ಈ ಟೀಸರ್‌ನಲ್ಲಿ ನಟಿಮಣಿಯರ ದರ್ಬಾರ್ ಜೋರಾಗಿದೆ. ಟಾಕ್ಸಿಕ್‌ನಲ್ಲಿ ಯಶ್ ಪಾತ್ರದಂತೆ ನಾಯಕಿಯರ ಪಾತ್ರಕ್ಕೂ ಹೆಚ್ಚಿನ ಪ್ರಾಮುಖ್ಯತೆ ಇದೆ ಎಂಬುದು ಟೀಸರ್‌ನಲ್ಲಿ ತಿಳಿಯುತ್ತದೆ. ಎಲ್ಲರೂ ಆ್ಯಕ್ಷನ್‌ನಲ್ಲಿ ಅಬ್ಬರಿಸಿದ್ದಾರೆ. ಕಿಯಾರಾ ಅಡ್ವಾಣಿ ಗ್ಲಾಮರ್ ಆಗಿ ಕಂಗೊಳಿಸಿದ್ದು, ನಯನತಾರಾ ಬೈಕ್‌ನಲ್ಲಿ ಸಾಗುತ್ತಾ ಭರ್ಜರಿ ಸಾಹಸ ಪ್ರದರ್ಶಿಸಿದ್ದಾರೆ. ರುಕ್ಮಿಣಿ ವಸಂತ್ ಗನ್ ಹಿಡಿದು ಗಮನಸೆಳೆಯುತ್ತಾರೆ. ತಾರಾ ಸುತಾರಿಯ ಹಾಗೂ ಹುಮಾ ಖುರೇಷಿ ಕೂಡ ಸಾಹಸ ದೃಶ್ಯದಲ್ಲಿ ಕಂಗೊಳಿಸಿದ್ದಾರೆ. ಟೀಸರ್ ಕೊನೆಯಲ್ಲಿ ಮಹಿಳೆಯರ ಗ್ಯಾಂಗ್, ರಾಯನ ವಿರುದ್ಧ ಸಮರ ಸಾರುತ್ತದೆ. ಆಗ ರಾಯ ಗನ್ ಹಿಡಿದು ಎಲ್ಲರನ್ನೂ ಎದಿರಿಸುತ್ತಾನೆ. ಟೀಸರ್‌ನಲ್ಲಿ ಹಸಿಬಿಸಿ ದೃಶ್ಯಗಳೂ ಇವೆ. ಮಕ್ಕಳು ಈ ಟೀಸರ್ ನೋಡಬೇಡಿ, ಮಕ್ಕಳಿಗೆ ಈ ಟೀಸರ್ ತೋರಿಸಬೇಡಿ ಎಂದು ಪೋಷಕರಿಗೆ, ವಯಸ್ಸಾದವರು ನಿಮ್ಮ ರಿಸ್ಕ್‌ನಲ್ಲಿ ನೋಡಿ ಎಂದು ಚಿತ್ರತಂಡ ಟೀಸರ್‌ನ ಆರಂಭದಲ್ಲಿಯೇ ಎಚ್ಚರಿಕೆ ನೀಡಿದೆ. ಟಾಕ್ಸಿಕ್ ಭೂಗತ ಲೋಕದ ಕಥೆಯನ್ನು ಒಳಗೊಂಡಿದ್ದು, ಯಶ್ ಡಬ್ಬಲ್ ಶೇಡ್‌ನಲ್ಲಿ ಮಿಂಚಿದ್ದಾರೆ. ಮಲೆಯಾಳಂ ಖ್ಯಾತ ನಿರ್ದೇಶಕಿ ಗೀತುಮೋಹನ್ ದಾಸ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಟಾಕ್ಸಿಕ್ ಪ್ಯಾನ್ ವರ್ಲ್ಡ್ ಸಿನಿಮಾವಾಗಿದ್ದು, ಕೆವಿಎನ್ ಪ್ರೊಡಕ್ಷನ್‌ನಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಿದೆ. ಕನ್ನಡ, ಇಂಗ್ಲೀಷ್ ಸೇರಿದಂತೆ ಹಲವು ಭಾಷೆಗಳಲ್ಲಿ ವಿಶ್ವಾದ್ಯಂತ ತೆರೆಗೆ ಬರಲಿದೆ.

ಗುರುತ್ವಾಕರ್ಷಣೆಗೆ ಸೆನ್ಸಾರ್ ಅಸ್ತು

ಮಹೇಂದರ್.ಸಿ.ಗುಂಡೇಗಾಲ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿರುವ ಗುರುತ್ವಾಕರ್ಷಣೆ ಚಿತ್ರಕ್ಕೆ ಸೆನ್ಸಾರ್ ಮಂಡಳಿ ಅಸ್ತು ಎಂದಿದ್ದು, ಯು/ಎ ಪ್ರಮಾಣಪತ್ರ ನೀಡಿದೆ. ಗುರುತ್ವಾಕರ್ಷಣೆ ಶೀರ್ಷಿಕೆ ಕೇಳಿದಾಕ್ಷಣ ಇದು ಸೈಂಟಿಫಿಕ್ ಥ್ರಿಲ್ಲರ್ ಸಿನಿಮಾ ಅನ್ನಿಸಬಹುದು. ಆದರೆ ಇದು ಭಾವನಾತ್ಮಕ ನೆಲೆಗಟ್ಟಿನಲ್ಲಿ ಸಾಗುತ್ತದೆ. ಜೀವನದಲ್ಲಿ ಭಾವನೆಗಳು ಮಿಳಿತವಾದಾಗ ಬದುಕು ಎಷ್ಟು ಸುಂದರವಾಗಿರುತ್ತದೆ ಎಂಬುದನ್ನು ಹೇಳುವ ಪ್ರಯತ್ನ ಈ ಚಿತ್ರದಲ್ಲಿದೆಯಂತೆ. ಇದು ಕೊಳ್ಳೇಗಾಲ ಮತ್ತು ಚಾಮರಾಜನಗರದಲ್ಲಿ ನಡೆಯುವ ಕಥೆಯಾಗಿದ್ದು ಅಲ್ಲಿಯೇ ಚಿತ್ರೀಕರಣ ನಡೆಸಲಾಗಿದೆ. ಮದರ್ ಪ್ರಾಮೀಸ್ ಟಾಕೀಸ್‌ನಲ್ಲಿ ಬ್ಯಾನರ್‌ನಲ್ಲಿ ಮಹೇಂದರ್.ಸಿ.ಗುಂಡೇಗಾಲ ಚಿತ್ರ ನಿರ್ಮಾಣ ಮಾಡಿದ್ದಾರೆ. ಜಯಂತ್ ದೊರೆ ಈ ಚಿತ್ರದ ನಾಯಕನಾಗಿ ನಟಿಸಿದ್ದು, ಸುಕೃತಿ ಪ್ರಭಾಕರ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ದಿವ್ಯಾ ಕುಮಾರ್ ಸತ್ತೇಗಾಲ, ಮಂಡ್ಯ ಸಿದ್ದು, ವಿಜಯ್ ಕಿರಣ್, ಮಾಸ್ಟರ್ ಶೌರ್ಯ ಮತ್ತು ಡಾ.ಭಾನುಪ್ರಕಾಶ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಪವಿತ್ರನ್, ವಿಘ್ನೇಶ್ ವಿಕ್ಕಿ ಛಾಯಾಗ್ರಹಣ ಹಾಗೂ ರಕ್ಷಿತ್ ರಾಜ್ ಸಂಕಲನ ಗುರುತ್ವಾಕರ್ಷಣೆ ಚಿತ್ರಕ್ಕಿದೆ. ಈ ಸಿನಿಮಾದ ಹಾಡುಗಳು ಈಗಾಗಲೇ ಬಿಡುಗಡೆಯಾಗಿ ಮನಗೆದ್ದಿದ್ದು, ಶೀಘ್ರದಲ್ಲಿಯೇ ಚಿತ್ರ ಕೂಡ ತೆರೆಗೆ ಬರಲಿದೆ.